# ಪರಿಷ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್)

# Revised Integrated Child Protection Scheme (ICPS)

# ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್)

## ಕೇಂದ್ರ ಸರಕಾರ ಪ್ರಾಯೋಜಿತ ಯೋಜನೆ

## ನಾಗರಿಕ ಸಮಾಜದ ಪಾಲುದಾರಿಕೆಯಲ್ಲಿ

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ

## ಭಾರತ ಸರ್ಕಾರ.

***ದಯವಿಟ್ಟು ಗಮನಿಸಿ;*** **ಕನ್ನಡ ಅನುವಾದವು ಕೇವಲ ಅರ್ಥ ಮಾಡಿಕೊಳ್ಳಲು ಮಾತ್ರ..**
**ಹೆಚ್ಚಿನ ಮಾಹಿತಿಗೆ ಮತ್ತು ಸ್ಪಷ್ಟತೆಗಾಗಿ ಮೂಲ ಇಂಗ್ಲೀಷ್ (ಆಂಗ್ಲ) ಪ್ರತಿಯನ್ನು ಬಳಸುವುದು.**


***ಮೂಲ ಕನ್ನಡ ಅನುವಾದ:*** **ಬಿ.ವಿ.ಕಿಶೋರ್ ಕುಮಾರ್, ಬೆಂಗಳೂರು. (9880415328)**
***ತಿದ್ದುಪಡಿ ಮತ್ತು ಸಂಯೋಜನೆ:*** **ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ, ಜಿಲ್ಲಾಡಳಿತ ಭವನ, ಕೊಪ್ಪಳ. (08539–225006)**
***ತಿದ್ದುಪಡಿ ಸಹಾಯ:*** **ರವಿಕುಮಾರ್ ಪವಾರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, (ಡಿಸಿಪಿಯು) ಕೊಪ್ಪಳ.**


***ಈ ಪರಿಷ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು 2014 ರಲ್ಲಿ ಸಿದ್ಧಪಡಿಸಿದ ಕಾರಣ, ಈ ಯೋಜನೆಯಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2000 ಮತ್ತು ತಿದ್ದುಪಡಿ 2006 ಎಂದು ನಮೂದಿಸಲಾಗಿದೆ. ಪ್ರಸ್ತುತ ಅನುಷ್ಠಾನದ ಹಿನ್ನೆಯಲ್ಲಿ ಈ ಆಂಶಗಳನ್ನು 2015ರ ಹೂಸ ಕಾಯ್ದೆ ಹಾಗೂ 2016ರ ಮಾದರಿ ನಿಯಮಗಳಂತೆ ಅರ್ಥೈಸಿಕೊಂಡು ಓದಿ ಅನುಷ್ಠಾನಕ್ಕೆ ತರುವುದು.***

**ಪರಿವಿಡಿ**


| ವಿಭಾಗ ಸಂಖ್ಯೆ | ಹೆಸರು | ಅಧ್ಯಾಯಗಳು | | ಪುಟ ಸಂಖ್ಯೆ |
|---|---|---|---|---|
| I | ಪರಿಚಯ ಮತ್ತು ಪರಿಕಲ್ಪನೆ | 1. ಪರಿಚಯ | | 5-7 |
| | | 2. ಪರಿಕಲ್ಪನೆ | ಉದ್ದೇಶಗಳು | 8 |
| | | | ಮಾರ್ಗದರ್ಶಕ ತತ್ವಗಳು **Guiding Principles** | 8-9 |
| | | | ದೃಷ್ಟಿಕೋನಗಳು–Approaches | 10-12 |
| | | | ಉದ್ದೇಶಿತ ಸಮೂಹ (Target Groups) ತಲುಪಬೇಕಾದ ಗುಂಪುಗಳು (ಸಮುದಾಯ) | 12 |
| | | | ನಾಗರಿಕ ಸಮಾಜ ಪಾಲುದಾರಿಕೆ | 12-13 |
| II | ಸೇವಾ ಸೌಲಭ್ಯ ಒದಗಿಸುವ ವ್ಯವಸ್ಥೆಗಳು. | 3. ಜಿಲ್ಲೆ : (ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಡಿಸಿಪಿಯು) | | 14-17 |
| | | 4. ರಾಜ್ಯ: ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್), ರಾಜ್ಯ ದತ್ತು ಸ್ವೀಕಾರ ಸಂಪನ್ಮೂಲ ಏಜೆನ್ಸಿ (ಸಾರಾ) ಮತ್ತು ರಾಜ್ಯ ಯೋಜನೆ ಬೆಂಬಲ ಘಟಕ (ಎಸ್‌ಪಿಎಸ್‌ಯು) | | 18-22 |
| | | 5. ಕೇಂದ್ರ ಮಟ್ಟ: ಕೇಂದ್ರೀಯ ಯೋಜನೆ ಬೆಂಬಲ ಘಟಕ (ಸಿಪಿಎಸ್‌ಯು), ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಕಾರಾ) ಮತ್ತು ರಾಷ್ಟ್ರೀಯ ಸಾರ್ವಜನಿಕ ಸಹಕಾರ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಐಪಿಸಿಸಿಡಿ) | | 23-24 |
| III | ಯೋಜನೆಯ ಅನುಷ್ಠಾನ, ಧನಸಹಾಯ ಮಾದರಿ, ಫಲಿತಾಂಶ ಮತ್ತು ಪರಿಣಾಮ ಸೂಚಕಗಳು | 6. ಅನುಷ್ಠಾನ ಯೋಜನೆ ಮತ್ತು ಸಹಭಾಗಿತ್ವ | | 25-27 |
| | | 7. ಧನಸಹಾಯ ಮಾದರಿ ಮತ್ತು ನಿಧಿಯ ಹರಿವು | | 28-30 |
| | | 8. ಫಲಿತಾಂಶ ಸೂಚಕಗಳು ಮತ್ತು ಪರಿಣಾಮ ಸೂಚಕಗಳು | | 31-32 |
| IV | ಸೇವೆಗಳು ಮತ್ತು ಇತರೆ ಚಟುವಟಿಕೆಗಳು | 9. ಕಾರ್ಯಕ್ರಮ ಮತ್ತು ಚಟುವಟಿಕೆಗಳು | | 33-34 |
| | | 10. ಪೋಷಣಾ ಬೆಂಬಲ ಮತ್ತು ಪುನರ್ವಸತಿ ಸೇವೆಗಳು | a) ತುರ್ತು ಔಟ್‌ರೀಚ್ ಸೇವೆಗಳು | 35-42 |
| | | | b) ತೆರೆದ ತಂಗುದಾಣಗಳು | 43--46 |
| | | | C) ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣಾ ಕಾರ್ಯಕ್ರಮಗಳು, ಪ್ರಾಯೋಜಕತ್ವ, ಫಾಸ್ಟರ್ ಕೇರ್, ದತ್ತು ಸ್ವೀಕಾರ | 47-56 |

| | | | | |
|---|---|---|---|---|
| | | | ಹಾಗೂ ಅನುಪಾಲನಾ ಸೇವೆಗಳು (ನಂತರದ ಸೇವೆಗಳು) | |
| | | | d) ಸಾಂಸ್ಥಿಕ ಸೇವೆಗಳು | **57-63** |
| | | | e) ಸಾಮಾನ್ಯ ಧನಸಹಾಯ ಯೋಜನೆ | **63** |
| | | 11. ಶಾಸನಬದ್ಧ ಬೆಂಬಲ ಸೇವೆಗಳು | a) ಮಕ್ಕಳ ಕಲ್ಯಾಣ ಸಮಿತಿ | **64** |
| | | | b) ಮಕ್ಕಳ ನ್ಯಾಯ ಮಂಡಳಿ | **65** |
| | | | c) ಮಕ್ಕಳ ವಿಶೇಷ ಪೊಲೀಸ್ ಘಟಕಗಳು | **65-66** |
| | | 12. ಇತರೆ ಚಟುವಟಿಕೆಗಳು | 1. ಮಾನವ ಸಂಪನ್ಮೂಲ ಅಭಿವೃದ್ಧಿ | **67** |
| | | | 2. ತರಬೇತಿ ಮತ್ತು ಸಾಮರ್ಥ್ಯಾಭಿವೃದ್ಧಿ | **67-68** |
| | | | 3. ಜ್ಞಾನ ಸಂಪನ್ಮೂಲವನ್ನು ಬಲಪಡಿಸುವುದು. | **69** |
| | | | 4. ಮಕ್ಕಳ ನಿಗಾ ಮತ್ತು ತಂತ್ರಾಂಶ ಸುಧಾರಿತ ಟ್ರ್ಯಾಕ್ ವ್ಯವಸ್ಥೆ. | **69-70** |
| | | | 5. ವಕಾಲತ್ತು, ಸಾರ್ವಜನಿಕ ಶಿಕ್ಷಣ ಮತ್ತು ಸಂವಹನಾ | **71-72** |
| | | | 6. ಉಸ್ತುವಾರಿ | **72-76** |
| | | | 7. ಲೆಕ್ಕಪರಿಶೋಧನೆ | **76** |
| | | | 8. ಮೌಲ್ಯಮಾಪನ | **76** |
| V. | ಅನುಬಂಧಗಳು | **I.** ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು) ಮತ್ತು ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) | | **78-90** |
| | | **II.** ರಾಜ್ಯ ದತ್ತು ಸ್ವೀಕಾರ ಸಂಪನ್ಮೂಲ ಏಜೆನ್ಸಿ (ಸಾರಾ) | | **91-93** |
| | | **III.** ಕೇಂದ್ರ ದತ್ತು ಸ್ವೀಕಾರ ಸಂಪನ್ಮೂಲ ಪ್ರಾಧಿಕಾರ (ಕಾರಾ) | | **94-96** |
| | | **IV.** ಕೇಂದ್ರ ಯೋಜನಾ ಬೆಂಬಲ ಘಟಕ (ಸಿಪಿಎಸ್‌ಯು) ಮತ್ತು ರಾಜ್ಯ ಯೋಜನೆ ಬೆಂಬಲ ಘಟಕ (ಎಸ್‌ಪಿಎಸ್‌ಯು) | | **97-99** |
| | | **V.** ಸಹಭಾಗಿತ್ವ (ಸಹಭಾಗಿತ್ವ) | | **100-103** |
| | | **VI A.** ಮಕ್ಕಳ ಸಹಾಯವಾಣಿ ಸೇವೆಗಳನ್ನು ಒದಗಿಸುತ್ತಿರುವ 'ಪ್ರಧಾನ ಎನ್‌ಜಿಒ'. | | **104-108** |
| | | **VI B** ಪ್ರಧಾನ ಎನ್‌ಜಿಒದ ಪ್ರಾದೇಶಿಕ ಕೇಂದ್ರಗಳಿಗೆ | | **109-112** |

| | | | |
|---|---|---|---|
| | | ಹಣಕಾಸಿನ ಬೆಂಬಲ | |
| | | **VII.** ನೋಡಲ್, ಸಂಯೋಜಕ, ಬೆಂಬಲ ಸಂಸ್ಥೆಗಳು ಮತ್ತು ಪ್ರಧಾನ ಎನ್‌ಜಿಓನ. ಜಿಲ್ಲಾ ಉಪ ಕೇಂದ್ರಗಳಿಗೆ ಹಣಕಾಸಿನ ಬೆಂಬಲ | **113-115** |
| | | **VIII.** ನಗರ ಹಾಗೂ ಭಾಗಶಃ ನಗರ ಪ್ರದೇಶಗಳಲ್ಲಿ ಅಗತ್ಯವಿರುವ ಮಕ್ಕಳಿಗೆ ತೆರೆದ ತಂಗುದಾಣಗಳ ಆಶ್ರಯ | **117-118** |
| | | **IX.** ದತ್ತು ಸ್ವೀಕಾರದ ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆ. | **119-120** |
| | | **X.** ವಿವಿಧ ವಸತಿಗೃಹಗಳ ಮೂಲಕ ಸಾಂಸ್ಥಿಕ ಪೋಷಣೆ | **121-125** |
| | | **XI.** ಮಕ್ಕಳ ಕಲ್ಯಾಣ ಸಮಿತಿಗಳು (ಸಿಡಬ್ಲ್ಯೂಸಿ) | **126-128** |
| | | **XII.** ಮಕ್ಕಳ ನ್ಯಾಯ ಮಂಡಳಿ (ಜೆಜೆಬಿ) | **129-130** |
| | | **XIII.** ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿ ಸಂಸ್ಥೆಯಲ್ಲಿ (ಎನ್‌ಐಪಿಸಿಸಿಡಿ) ಮತ್ತು ಪ್ರಾದೇಶಿಕ ಕೇಂದ್ರಗಳಲ್ಲಿ ಮಕ್ಕಳ ಸಂರಕ್ಷಣಾ ವಿಭಾಗ | **131-135** |
| | | **XIV.** ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2000 ಮತ್ತು ಐಸಿಪಿಎಸ್ ಅಡಿ ಸ್ಥಾಪಿತವಾಗಿರುವ ಸಂಸ್ಥೆಗಳಿಗೆ ಪೋಷಣೆಯ ಕನಿಷ್ಠ ಗುಣಮಟ್ಟದ ಮಾಪಕಗಳು. | **136-141** |

# ಭಾಗ 1 – ಪರಿಚಯ ಮತ್ತು ಪರಿಕಲ್ಪನೆ

# ಅಧ್ಯಾಯ 1 – ಪರಿಚಯ

1. **'ಮಕ್ಕಳ ಸಂರಕ್ಷಣೆ'** ಎಂದರೆ ಮಕ್ಕಳ ವ್ಯಕ್ತಿತ್ವ ಹಾಗೂ ಬಾಲ್ಯ ಒಳಗೊಂಡಂತೆ ಅವರ ಜೀವಕ್ಕೆ ಅಪಾಯ ತರುವ ಅಥವಾ ಅಪಾಯಕ್ಕೆ ಒಳಗಾಗಬಹುದಾದ ಸಾಧ್ಯತೆಯಿರುವ ಅಥವಾ ಅವರನ್ನು ಯಾವುದೇ ಗ್ರಹಿಸಿದ ಅಪಾಯಗಳಿಂದ ರಕ್ಷಿಸುವುದು. ಮಕ್ಕಳು ಯಾವುದೇ ರೀತಿಯ ಅಪಾಯಕ್ಕೆ ಸಿಲುಕುವ ಸಂದರ್ಭಗಳನ್ನು ಕಡಿಮೆಗೊಳಿಸುವುದು ಹಾಗೂ ಯಾವುದೇ ಮಗುವು ಸಾಮಾಜಿಕ ಸುರಕ್ಷತೆಯಿಂದ ವಂಚಿತವಾಗದಿರುವಂತೆ ಖಾತ್ರಿಪಡಿಸುವುದು ಹಾಗೂ ವಂಚಿತ ಮಕ್ಕಳಿಗೆ ಅಗತ್ಯ ಪೋಷಣೆ ರಕ್ಷಣೆ ಹಾಗೂ ಬೆಂಬಲ ದೊರೆಯುವುದನ್ನು ಖಾತ್ರಿಪಡಿಸುವುದು ಹಾಗೂ ಅವರನ್ನು ಸುರಕ್ಷತಾ ಜಾಲದೊಳಗೆ ಪುನಃ ಸೇರ್ಪಡೆಗೊಳಿಸುವುದು. ರಕ್ಷಣೆ ಪ್ರತಿಯೊಂದು ಮಗುವಿನ ಹಕ್ಕು, ಆದರೆ ಕೆಲವು ಮಕ್ಕಳು ಇತರೆ ಮಕ್ಕಳಿಗೆ ಹೋಲಿಸಿದಾಗ ಸಂಕಷ್ಟಕ್ಕೀಡಾಗುವ ಸಂಭವ ಹೆಚ್ಚು ಇದೆ ಹಾಗೂ ಇಂತಹ ಮಕ್ಕಳ ಕಡೆ ವಿಶೇಷ ಗಮನ ನೀಡುವ ಅಗತ್ಯ ಹೆಚ್ಚಾಗಿರುತ್ತದೆ. ಸರ್ಕಾರ ನಿರ್ಧಿಷ್ಟ ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ–ರಾಜಕೀಯ ಸನ್ನಿವೇಶಗಳ ಆಧಾರದ ಮೇಲೆ ಇಂತಹ ಮಕ್ಕಳನ್ನು **'ಸಂಕಷ್ಟದ ಸನ್ನಿವೇಶದಲ್ಲಿರುವ ಮಕ್ಕಳು'** ಎಂದು ಗುರುತಿಸುತ್ತದೆ. ಇಂತಹ ಮಕ್ಕಳಿಗೆ ಸುರಕ್ಷಿತ ಪರಿಸರವನ್ನು ಕಲ್ಪಿಸುವುದರ ಜೊತೆಗೆ, ಎಲ್ಲಾ ಮಕ್ಕಳಿಗೂ ರಕ್ಷಣೆ ದೊರೆಯುವುದನ್ನು ಖಾತ್ರಿಪಡಿಸುವುದು ಕಡ್ಡಾಯ. ಏಕೆಂದರೆ **'ಮಕ್ಕಳ ಸಂರಕ್ಷಣೆ' ಪ್ರತಿಯೊಂದು ಮಗುವಿನ ಹಕ್ಕಿನ ಅವಿಭಾಜ್ಯ ಅಂಗವಾಗಿದೆ.**

2. ಮಕ್ಕಳ ಸಂರಕ್ಷಣೆಯ ಹಕ್ಕನ್ನು ಖಾತ್ರಿಪಡಿಸುವಲ್ಲಿ ವಿಫಲವಾದರೆ ಅದು ಮಕ್ಕಳ ಇತರೆ ಎಲ್ಲಾ ಹಕ್ಕುಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ಪ್ರಕಾರವಾಗಿ, ಮಕ್ಕಳ ಸಂರಕ್ಷಣೆ ಕಾರ್ಯಕ್ರಮಗಳು, ಕಾರ್ಯತಂತ್ರಗಳು ಹಾಗೂ ಅವರ ಸಾಧನೆಗಳು ಯೋಜನೆಗಳ ಸಮಗ್ರ ಭಾಗವಾಗದ ಹೊರತು ಸಹಸ್ರಮಾನದ ಅಭಿವೃದ್ಧಿಯ ಗುರಿಗಳನ್ನು (ಎಂಡಿಜಿಯ ಗುರಿಗಳನ್ನು) ಸಾಧಿಸುವುದು ಸಾಧ್ಯವಾಗುವುದಿಲ್ಲ. ಶಾಲೆಗಳಲ್ಲಿ ಹಿಂಸೆ, ಬಾಲಕಾರ್ಮಿಕತೆ, ಹಾನಿಕಾರಕ ಸಾಂಪ್ರದಾಯಿಕ ಅಭ್ಯಾಸಗಳು, ಬಾಲ್ಯವಿವಾಹ, ಮಕ್ಕಳ ನಿಂದನೆ, ಪೋಷಕರ ಪೋಷಣೆಯ ಅನುಪಸ್ಥಿತಿ ಹಾಗೂ ವಾಣಿಜ್ಯ ಕಾರಣಗಳಿಗಾಗಿ ಮಕ್ಕಳ ಲೈಂಗಿಕ ಶೋಷಣೆ, ಇತ್ಯಾದಿಯಂತಹ ಹಿಂಸೆಗಳಿಂದ ಮಕ್ಕಳನ್ನು ರಕ್ಷಿಸುವಲ್ಲಿ ವೈಫಲ್ಯ ಎಂದಾದರೆ ಮಕ್ಕಳಿಗೆ ಸಂಬಂಧಪಟ್ಟಂತೆ ಸಾಂವಿಧಾನಿಕ ಹಾಗೂ ಅಂತರರಾಷ್ಟ್ರೀಯ ಬದ್ಧತೆಗಳು ಎರಡನ್ನೂ ಪೂರೈಸುವಲ್ಲಿ ವಿಫಲವಾಗಿದ್ದೇವೆ ಎಂದೇ ಅರ್ಥ.

3. 9ನೇ ಫೆಬ್ರವರಿ 2004ರಂದು ಅಳವಡಿಸಿಕೊಳ್ಳಲಾದ ಮಕ್ಕಳ ರಾಷ್ಟ್ರೀಯ ಸನ್ನದು– 2003, ಪ್ರತಿಯೊಂದು ಮಗುವಿಗೂ, ಮಗುವಾಗಿರುವ ಅಂತರ್ಗತ ಹಕ್ಕನ್ನು ಮತ್ತು ಆರೋಗ್ಯಕರ ಹಾಗೂ ಸಂತೋಷಕರವಾದ ಬಾಲ್ಯವನ್ನು ಆನಂದಿಸುವ ಹಕ್ಕನ್ನು ಖಾತ್ರಿಪಡಿಸುತ್ತದೆ; ಜೊತೆಗೆ ಮಕ್ಕಳ ಆರೋಗ್ಯಕರ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ತೊಡಕಾಗುವ ಬೇರುಮಟ್ಟದ ಕಾರಣಗಳನ್ನು ಬಗೆಹರಿಸುವುದು; ಹಾಗೂ ಮಕ್ಕಳನ್ನು ಎಲ್ಲಾ ರೀತಿಯ ನಿಂದನೆಗಳಿಂದ ಸಂರಕ್ಷಿಸುವ ಕುರಿತು ಸಮುದಾಯದಲ್ಲಿ ಅರಿವನ್ನು ಮೂಡಿಸುವುದು, ಕುಟುಂಬ, ಸಮಾಜ ಹಾಗೂ ರಾಷ್ಟ್ರವನ್ನು ಬಲಪಡಿಸುವ ಆಶಯವನ್ನು ಹೊಂದಿದೆ.

4. ಮಕ್ಕಳ ಹಕ್ಕುಗಳ ಸಂರಕ್ಷಣೆಯಲ್ಲಿ ಸವಾಲುಗಳು ಮತ್ತು ಮುಂದೆ ಸಂಭವಿಸಬಹುದಾದ ಸವಾಲುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹಕ್ಕುಗಳ ಆಧಾರಿತ ದೃಷ್ಟಿಕೋನವನ್ನು ಅಳವಡಿಸಿಕೊಂಡು ಆ

ಕುರಿತು ಸರ್ಕಾರದ ಬದ್ಧತೆಯನ್ನು ದೃಢಪಡಿಸಲು ಭಾರತ ಸರ್ಕಾರವು ರಾಷ್ಟ್ರೀಯ ಮಕ್ಕಳ ನೀತಿ–2013ನ್ನು ಸಿದ್ಧಪಡಿಸಿದೆ. ಈ ನೀತಿಯು ಆಯಾ ಪ್ರದೇಶ ಹಾಗೂ ವ್ಯಾಪ್ತಿಯೊಳಗಿನ ಎಲ್ಲಾ ಮಕ್ಕಳಿಗೂ ಅನ್ವಯಿಸುವಂತೆ, ಅವರ ವೈಯಕ್ತಿಕ ಸನ್ನಿವೇಶಕ್ಕೆ ಹಾಗೂ ಮಕ್ಕಳನ್ನು ಈ ದೇಶದ ರಾಷ್ಟ್ರೀಯ ಆಸ್ತಿಯಾಗಿ, ಎರಡೂ ರೀತಿಯಲ್ಲಿ ಅವರನ್ನು ಸಂರಕ್ಷಿಸುವುದು, ಮಾಹಿತಿ ಒದಗಿಸುವುದು, ಸೇರ್ಪಡೆಗೊಳಿಸುವುದು, ಬೆಂಬಲ ಒದಗಿಸುವುದು ಮತ್ತು ಸಬಲರನ್ನಾಗಿಸುವ ಬದ್ಧತೆಯನ್ನು ಸೂಚಿಸುತ್ತದೆ. ರಾಜ್ಯವು ಶಾಸಕಾಂಗ, ಕಾರ್ಯನೀತಿಯಂತಹ ದೃಢ ಕ್ರಮಗಳನ್ನು ಕೈಗೊಳ್ಳಲು ಅಥವಾ ಎಲ್ಲಾ ಮಕ್ಕಳ ಜೀವಿಸುವ ಹಾಗೂ ಬೆಳೆಯುವ ಸಮಾನತೆ, ಘನತೆ, ಸುರಕ್ಷತೆ ಹಾಗೂ ಸ್ವಾತಂತ್ರ್ಯದ ಹಕ್ಕನ್ನು ಪ್ರೋತ್ಸಾಹಿಸುವ ಹಾಗೂ ಸಂರಕ್ಷಿಸುವ, ಅದರಲ್ಲಿಯೂ ಸಂಕಷ್ಟದ ಅಂಚಿನಲ್ಲಿರುವ ಅಥವಾ ಅನುಕೂಲವಂಚಿತ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವ ಬದ್ಧತೆಯನ್ನು ಹೊಂದಿದೆ; ಎಲ್ಲಾ ಮಕ್ಕಳಿಗೂ ಸಮಾನ ಅವಕಾಶಗಳನ್ನು ಖಾತ್ರಿಪಡಿಸುತ್ತದೆ; ಯಾವುದೇ ಸಂಪ್ರದಾಯ, ಪರಂಪರೆ, ಸಂಸ್ಕೃತಿ ಅಥವಾ ಧಾರ್ಮಿಕ ಅಭ್ಯಾಸಗಳಾದರೂ ಸಹ ಮಕ್ಕಳಿಗೆ ಅವರ ಹಕ್ಕುಗಳಿಂದ ವಂಚಿತರಾಗುವುದನ್ನು, ಹಕ್ಕುಗಳನ್ನು ಉಲ್ಲಂಘಿಸುವ ಅಥವಾ ನಿರ್ಬಂಧಿಸುವ ಅಥವಾ ತಡೆಗಟ್ಟುವುದನ್ನು ಅನುಮತಿಸುವುದಿಲ್ಲ.

5. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು (ಎಂಡಬ್ಲ್ಯೂಸಿಡಿ), ಸಂಕಷ್ಟದ ಸನ್ನಿವೇಶಗಳನ್ನು ಎದುರಿಸುತ್ತಿರುವ ಸಂಕಷ್ಟದಲ್ಲಿರುವ ಭಾರತದ ಶೇ.40ರಷ್ಟು ಮಕ್ಕಳಿಗೆ ಸಂರಕ್ಷಣಾತ್ಮಕ ಪರಿಸರವನ್ನು ಸೃಷ್ಟಿಸಲು XI ಯೋಜನೆಯ ಬದ್ಧತೆಯನ್ನು, XII ಯೋಜನೆಯಲ್ಲಿ, ಕೇಂದ್ರ ಪ್ರಾಯೋಜಿತ ಯೋಜನೆ – ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆ (ಐಸಿಪಿಎಸ್) ಯನ್ನು ಮುಂದುವರೆಸುವ ಮೂಲಕ ತನ್ನ ಬದ್ಧತೆಯನ್ನು ಮುಂದುವರೆಸಿದೆ. 2009ರಲ್ಲಿ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳ ಪಾಲುದಾರಿಕೆಯೊಂದಿಗೆ ಚಾಲನೆ ದೊರೆತ ಈ ಯೋಜನೆಯು, ಮಕ್ಕಳ ಹಕ್ಕುಗಳ ಉಲ್ಲಂಘನೆಯ ತಡೆಗಟ್ಟುವಿಕೆಯನ್ನು ಬಲಪಡಿಸಿದೆ; ರಕ್ಷಣಾ ಸೇವೆಗಳ ಮೂಲಭೂತ ಸೌಕರ್ಯವನ್ನು ವೃದ್ಧಿಸಿದೆ; ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000ರ ಅನುಷ್ಠಾನಕ್ಕಾಗಿ ಹಣಕಾಸಿನ ಬೆಂಬಲವನ್ನು ಒದಗಿಸಿದೆ; ವಿಸ್ತೃತವಾದ ಹಾಗೂ ಉತ್ತಮ ಗುಣಮಟ್ಟದ ರಕ್ಷಣಾ ಸೇವೆಗಳ ದೊರೆಯುವಿಕೆಯನ್ನು ಹೆಚ್ಚಿಸಿದೆ; ಮಕ್ಕಳ ರಕ್ಷಣೆಯಲ್ಲಿ ಹೂಡಿಕೆಯನ್ನು ಹೆಚ್ಚಿಸಿದೆ ಹಾಗೂ ಎಲ್ಲಾ ಮಕ್ಕಳಿಗೂ ಸುರಕ್ಷತೆಯ ಹಕ್ಕನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ನಿರಂತರವಾಗಿ ಹೆಚ್ಚಿನ ಗಮನವನ್ನು ಸೆಳೆಯುವಂತೆ ಮಾಡಿದೆ.

6. ಮಕ್ಕಳ ಸಮಗ್ರ ರಕ್ಷಣಾ ಯೋಜನೆಯು (ಐಸಿಪಿಎಸ್–ICPS), ಮಕ್ಕಳ ಸಮರ್ಥ ಹಾಗೂ ಪರಿಣಾಮಕಾರಿಯಾದ ರಕ್ಷಣೆಯ ವ್ಯವಸ್ಥೆಯನ್ನು ಸೃಷ್ಟಿಸುವಲ್ಲಿ ಸರ್ಕಾರ/ರಾಜ್ಯದ ಜವಾಬ್ದಾರಿಯ ಅನುಷ್ಠಾನದಲ್ಲಿ ಮಹತ್ತರವಾದ ಕೊಡುಗೆಯನ್ನು ನೀಡಿದೆ. "**ಮಕ್ಕಳ ಹಕ್ಕುಗಳ ರಕ್ಷಣೆ**" ಹಾಗೂ "**ಮಕ್ಕಳ ಅತ್ಯುತ್ತಮ ಹಿತಾಸಕ್ತಿ**" ಯ ಪ್ರಧಾನ ತತ್ವಗಳ ಆಧಾರದ ಮೇಲೆ, ಸಂಕಷ್ಟದ ಸನ್ನಿವೇಶಗಳಲ್ಲಿರುವ ಮಕ್ಕಳ ಯೋಗಕ್ಷೇಮದ ಸುಧಾರಣೆಗಳ ಜೊತೆಗೆ, ನಿಂದನೆ, ನಿರ್ಲಕ್ಷ್ಯ, ಶೋಷಣೆ, ಪರಿತ್ಯಾಗ ಹಾಗೂ ಕುಟುಂಬಗಳಿಂದ ಮಕ್ಕಳು ಪ್ರತ್ಯೇಕಗೊಳ್ಳುವಂತಹ ಸನ್ನಿವೇಶಗಳು ಹಾಗೂ ಸಂದರ್ಭಗಳಂತಹ ಸಂಕಷ್ಟಗಳನ್ನು ಕಡಿಮೆಗೊಳಿಸುವ ಅಂಶಗಳಿಗೆ ಕೊಡುಗೆ ನೀಡುವ ಉದ್ದೇಶಗಳನ್ನು ಐಸಿಪಿಎಸ್ ಸಾಧಿಸುತ್ತಿದೆ.

# ಅಧ್ಯಾಯ 2 – ಪರಿಕಲ್ಪನೆ

## 1. ಉದ್ದೇಶಗಳು

i) ಅಗತ್ಯ ಸೇವೆಗಳನ್ನು ಸಾಂಸ್ಥೀಕರಣಗೊಳಿಸಲು ಹಾಗೂ ತುರ್ತು ಔಟ್‌ರೀಚ್ ಸೇವೆ, ಸಾಂಸ್ಥಿಕ ಪೋಷಣೆ, ಕುಟುಂಬ ಹಾಗೂ ಸಮುದಾಯ ಆಧಾರಿತ ಪೋಷಣೆ, ಆಪ್ತಸಮಾಲೋಚನಾ ಸೇವೆಗಳನ್ನು ಹಾಗೂ ರಾಷ್ಟ್ರ, ಪ್ರಾದೇಶಿಕ, ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಬೆಂಬಲ ಸೇವಾ ವ್ಯವಸ್ಥೆಗಳ ರಚನೆಗಳನ್ನು ಬಲಪಡಿಸುವುದು;

ii) ಐಸಿಪಿಎಸ್ ನಡಿ ಜವಾಬ್ದಾರಿಗಳನ್ನು ಕೈಗೊಳ್ಳಲು, ಎಲ್ಲಾ ಹಂತಗಳಲ್ಲಿಯೂ, ಆಡಳಿತಗಾರರು ಹಾಗೂ ಸೇವೆ ಒದಗಿಸುವವರು, ಲೋಕಲ್ ಬಾಡಿಗಳು, (ಸ್ಥಳೀಯ ಸ್ವಯಂ ಸರಕಾರ) ಪೊಲೀಸ್, ನ್ಯಾಯಾಂಗ ಹಾಗೂ ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಒಳಗೊಂಡಂತೆ ಎಲ್ಲಾ ಸಂಯೋಜಿತ ವ್ಯವಸ್ಥೆಗಳ ಕಾರ್ಯನಿರ್ವಹಣಾ ವ್ಯವಸ್ಥೆಗಳ ಸಾಮರ್ಥ್ಯಗಳನ್ನು ವೃದ್ಧಿಸುವುದು;

iii) ಮಕ್ಕಳ ಸಂರಕ್ಷಣಾ ಸೇವೆಗಳ ಪರಿಣಾಮಕಾರಿಯಾದ ಉಸ್ತುವಾರಿ ಹಾಗೂ ಅನುಷ್ಠಾನಕ್ಕಾಗಿ ದೇಶದ ಮಕ್ಕಳ ಉಸ್ತುವಾರಿ ವ್ಯವಸ್ಥೆ ಹಾಗೂ ಎಂಐಎಸ್ (MIS) ಒಳಗೊಂಡಂತೆ ಮಕ್ಕಳ ಸಂರಕ್ಷಣಾ ಸೇವೆಗಳಿಗೆ ಡಾಟಾಬೇಸ್ ಹಾಗೂ ಜ್ಞಾನ ಭಂಡಾರವನ್ನು ಸೃಷ್ಟಿಸುವುದು;

iv) ಸಂಶೋಧನೆ ಹಾಗೂ ದಾಖಲೆ ನಿರ್ವಹಣೆಯನ್ನು ಕೈಗೊಳ್ಳುವುದು;

v) ಕುಟುಂಬ ಹಾಗೂ ಸಮುದಾಯ ಹಂತದಲ್ಲಿ ಮಕ್ಕಳ ಸಂರಕ್ಷಣೆಯನ್ನು ಬಲಪಡಿಸುವುದು, ದುರ್ಬಲತೆಗೆ ಒಳಗಾಗಿರುವ, ಸಂಕಷ್ಟದಲ್ಲಿರುವ, ಅಪಾಯ ಹಾಗೂ ನಿಂದನಾತ್ಮಕ ಸನ್ನಿವೇಶಗಳನ್ನು ಎದುರಿಸುತ್ತಿರುವ ಮಕ್ಕಳ ಸಂರಕ್ಷಣೆಗಾಗಿ ತಡೆಗಟ್ಟುವ ಕ್ರಮಗಳನ್ನು ಸೃಷ್ಟಿಸುವುದು ಹಾಗೂ ಪ್ರೋತ್ಸಾಹಿಸುವುದು;

vi) ಎಲ್ಲಾ ಹಂತಗಳಲ್ಲಿಯೂ ಸೂಕ್ತ ಅಂತರ್–ಕ್ಷೇತ್ರಗಳ ಪ್ರತಿಕ್ರಿಯೆಯನ್ನು ಖಾತ್ರಿಪಡಿಸುವುದು ಹಾಗೂ ಎಲ್ಲಾ ಪೂರಕ ವ್ಯವಸ್ಥೆಗಳೊಂದಿಗೆ ಸಂಯೋಜನೆ ಹಾಗೂ ಸಂಪರ್ಕಜಾಲವನ್ನು ಹೊಂದುವುದು;

vii) ಮಕ್ಕಳು ಹಾಗೂ ಕುಟುಂಬಗಳ ಸನ್ನಿವೇಶ ಹಾಗೂ ಸಂಕಷ್ಟಗಳ ಬಗ್ಗೆ ಸಾರ್ವಜನಿಕ ಅರಿವನ್ನು ಹೆಚ್ಚಿಸುವುದು, ಸಾರ್ವಜನಿಕರನ್ನು ಮಕ್ಕಳ ಹಕ್ಕುಗಳು ಹಾಗೂ ಸಂರಕ್ಷಣೆಯ ಕುರಿತು, ಎಲ್ಲಾ ಹಂತಗಳಲ್ಲಿಯೂ ಮಕ್ಕಳ ಸಂಕ್ಷಣೆಯ ಸೇವೆಗಳು, ಯೋಜನೆಗಳು ಹಾಗೂ ರಚನೆಗಳ (ವ್ಯವಸ್ಥೆಗಳ) ಕುರಿತು ಶಿಕ್ಷಿತರನ್ನಾಗಿಸುವುದು;

## 2. ಮಾರ್ಗದರ್ಶಕ ತತ್ವಗಳು

**i) <u>ಸಮುದಾಯ, ಸರಕಾರ, ನಾಗರಿಕ ಸಮಾಜದ ಬೆಂಬಲದೊಂದಿಗೆ ಮಕ್ಕಳ ಸಂರಕ್ಷಣೆಯು ಕುಟುಂಬದ ಪ್ರಾಥಮಿಕ ಜವಾಬ್ದಾರಿಯಾಗಿದೆ:</u>** ಮಕ್ಕಳನ್ನು ಸಂರಕ್ಷಿಸುವ ಪ್ರಯತ್ನದಲ್ಲಿ ಸಂಬಂಧಪಟ್ಟ ಎಲ್ಲರಿಗೂ ತಮ್ಮ ತಮ್ಮ ಪಾತ್ರಗಳನ್ನು ಸ್ಪಷ್ಟವಾಗಿ ರೂಪಿಸುವುದು ಹಾಗೂ ಎಲ್ಲರೂ ಅದನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಕೇಂದ್ರ ಹಾಗೂ ರಾಜ್ಯ ಎರಡೂ ಸರ್ಕಾರಗಳೂ ಎಲ್ಲಾ ಹಂತಗಳಲ್ಲಿಯೂ ವಿಸ್ತಾರವಾದ ಹಾಗೂ ಮುಂದುವರೆಯುವ ಸೇವೆಗಳನ್ನು ಖಾತ್ರಿಪಡಿಸುವುದು ಒಂದು ಬಾಧ್ಯತೆಯಾಗಿದೆ.

**ii) ಮಗುವಿನ ಪೋಷಣೆಯನ್ನು ಒದಗಿಸಲು ಕುಟುಂಬವು ಅತ್ಯುತ್ತಮ ಸ್ಥಳವಾಗಿದೆ:** ಇತರರಿಗಿಂತ ಮಕ್ಕಳನ್ನು ತಮ್ಮ ಕುಟುಂಬದವರು ಹೆಚ್ಚು ಪ್ರೀತಿಸುತ್ತಾರೆ ಹಾಗೂ ಅವರಿಗೆ ಇಬ್ಬರೂ ಪೋಷಕರಿಂದ ಕುಟುಂಬದ ಪೋಷಣೆಯ ಹಾಗೂ ಪೋಷಕತ್ವದ ಹಕ್ಕಿದೆ.

**iii) ಖಾಸಗಿತನ ಹಾಗೂ ಗೌಪ್ಯತೆ:** ಮಕ್ಕಳ ಖಾಸಗಿತನ ಹಾಗೂ ಗೌಪ್ಯತೆಯ ಹಕ್ಕನ್ನು, ಸೇವೆ ಒದಗಿಸುವ ಎಲ್ಲಾ ಹಂತಗಳಲ್ಲಿಯೂ ಸಂರಕ್ಷಿಸಬೇಕು.

**iv) ಕಳಂಕರಹಿತ ಹಾಗೂ ತಾರತಮ್ಯರಹಿತ ತತ್ವ :** ಸಾಮಾಜಿಕ–ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಜನಾಂಗೀಯ ಹಿನ್ನೆಲೆಗಳೆನ್ನದೆ ಯಾವುದೇ ಸಂದರ್ಭಗಳಲ್ಲಾದರೂ ಸಹ ಪ್ರತಿ ಮಗುವನ್ನೂ ಸಮಾನವಾಗಿ ಹಾಗೂ ಘನತೆಯಿಂದ ಕಾಣಬೇಕು.

**v) ಮಗುವನ್ನು ಸಂಕಷ್ಟಕರ ಪರಿಸ್ಥಿತಿಗೆ ಸಿಲುಕದಂತೆ ಮತ್ತು ಸಮಸ್ಯೆಯಿಂದ ಹೊರತರುವುದೇ, ಕೇಂದ್ರ ಮಕ್ಕಳ ಸಂರಕ್ಷಣೆಯ ಫಲಿತಾಂಶಗಳಿಗೆ ಮುಖ್ಯವಾಗಿದೆ:** ಐಸಿಪಿಎಸ್‌ನ ಒಂದು ಪ್ರಮುಖ ಉದ್ದೇಶವೇನೆಂದರೆ ಮಗುವಿನ ಸಂರಕ್ಷಣೆ ಹಾಗೂ ಅವರ ಪೋಷಣೆಗಾಗಿ ಅವರ ಕುಟುಂಬದ ಸಾಮರ್ಥ್ಯಗಳನ್ನು ಬಲಪಡಿಸುವುದು.

**vi) ಮಕ್ಕಳ ಸಾಂಸ್ಥೀಕರಣ, ಕೊನೆಯ ಕ್ರಮ:** ಮಕ್ಕಳ ಪೋಷಣೆಗಾಗಿ, ಮಕ್ಕಳ ಸಾಂಸ್ಥೀಕರಣದ ಅತಿಯಾದ ಅವಲಂಬನೆಗಿಂತ ಹೆಚ್ಚು ಕುಟುಂಬ ಹಾಗೂ ಸಮುದಾಯ ಆಧಾರಿತ ಪರ್ಯಾಯಗಳಂತಹ ಮಧ್ಯಸ್ಥಿಕೆಗಳ ಕಡೆ ಗಮನವನ್ನು ಹೊರಳಿಸುವ ಅಗತ್ಯವಿದೆ. ಸಾಂಸ್ಥೀಕರಣವನ್ನು, ಇತರೆ ಎಲ್ಲಾ ಆಯ್ಕೆಗಳನ್ನು ಪರಿಶೋಧಿಸಿದ ನಂತರ ಕೊನೆಯ ಕ್ರಮವಾಗಿ ಬಳಸಿಕೊಳ್ಳಬೇಕು.

**vii) ಮಗು ಕೇಂದ್ರಿತ ಯೋಜನೆ ರೂಪಿಸುವಿಕೆ ಹಾಗೂ ಅನುಷ್ಠಾನ:** ಮಕ್ಕಳ ಉತ್ತಮ ಹಿತಾಸಕ್ತಿ ರಕ್ಷಣೆಯನ್ನು ಖಾತ್ರಿಪಡಿಸುವ ಸಲುವಾಗಿ, **ಮಕ್ಕಳ ರಕ್ಷಣಾ ನೀತಿಗಳ ಯೋಜನೆ** ರೂಪಿಸುವುದು, ಅನುಷ್ಠಾನವನ್ನು ಹಾಗೂ ಸೇವೆ ಒದಗಿಸುವಿಕೆಯ ಎಲ್ಲಾ ಹಂತಗಳು ಮಕ್ಕಳ ಕೇಂದ್ರೀಕತವಾಗಿರಬೇಕು.

**viii) ತಾಂತ್ರಿಕ ಉತ್ಕೃಷ್ಟತೆ, ನೀತಿ ಸಂಹಿತೆ:** ಎಲ್ಲಾ ಹಂತಗಳ ಮಕ್ಕಳ ಸೇವೆಗಳು ಹಾಗೂ ಎಲ್ಲಾ ಸೇವೆ ಒದಗಿಸುವವರಿಂದ ಒದಗಿಸುವ ಸೇವೆಗಳನ್ನು, ಸಾಮಾಜಿಕ ಕಾರ್ಯಕರ್ತರು, ಮನಃಶಾಸ್ತ್ರಜ್ಞರು, ಪಾಲಕರು, ಶಾಸನಬದ್ಧ ಅಂಗಗಳ ಸದಸ್ಯರು ಹಾಗೂ ವಕೀಲರು ಒಳಗೊಂಡಂತೆ ಕೌಶಲ್ಯವುಳ್ಳ ಹಾಗೂ ವೃತ್ತಿಪರ ಸಿಬ್ಬಂದಿಗಳಿಂದ ಒದಗಿಸಬೇಕು, ತಾತ್ವಿಕ ಹಾಗೂ ವೃತ್ತಿಪರ ನೀತಿ ಸಂಹಿತೆಯನ್ನು ಪಾಲಿಸುವಂತಿರಬೇಕು.

**ix) ಸ್ಥಳೀಯ ಸಮಸ್ಯೆಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳ ರೂಪಿಸುವಿಕೆ :** ಸ್ಥಳೀಯ ಸಮಸ್ಯೆ ಮತ್ತು ಅಗತ್ಯಗಳಿಗೆ ಪ್ರತಿಕ್ರಿಯಿಸಲು ಅನುಕೂಲಕರ ಸೇವೆಗಳನ್ನು ತಲುಪಿಸುವ ದೃಷ್ಟಿಕೋನದ ಅಗತ್ಯವಿದೆ.

**x) ಉತ್ತಮ ಆಡಳಿತ, ಬದ್ಧತೆ ಹಾಗೂ ಜವಾಬ್ದಾರಿ:** ಸಮರ್ಥ ಹಾಗೂ ಪರಿಣಾಮಕಾರಿಯಾದ ಮಕ್ಕಳ ರಕ್ಷಣಾ ವ್ಯವಸ್ಥೆಗೆ, ಪಾರದರ್ಶಕ ನಿರ್ವಹಣೆ ಹಾಗೂ ನಿರ್ಧಾರ ಕೈಗೊಳ್ಳುವಲ್ಲಿ ಸ್ಥಳೀಯ ಆಡಳಿತ, ವಿವಿಧ ಸಂಸ್ಥೆಗಳ, ಸಾರ್ವಜನಿಕರ ಮತ್ತು ಮಕ್ಕಳ ಒಳಗೊಳ್ಳುವಿಕೆಯು ಅತ್ಯವಶ್ಯ ಅಂಶಗಳ ಅಗತ್ಯವಿದೆ. ಹೊಣೆಗಾರಿಕೆ ಹಾಗೂ ಜವಾಬ್ದಾರಿಯುಳ್ಳ ವ್ಯಕ್ತಿಗಳು ಹಾಗೂ ಸಂಸ್ಥೆಗಳು, ಎಲ್ಲಾ ಸೇವಾ ಹಂತಗಳಲ್ಲಿಯೂ ಮಕ್ಕಳ–ಸ್ನೇಹಿ ವರದಿಗಳ ಮೂಲಕ ಮಕ್ಕಳೂ ಸ್ವತಃ ಒಳಗೊಂಡಂತೆ, ಸಾರ್ವಜನಿಕರಿಗೆ ತಲುಪುವ ಕಾರ್ಯಪ್ರದರ್ಶನದ ವರದಿಗಳ ಅಗತ್ಯವಿದೆ.

## 3. ದೃಷ್ಟಿಕೋನಗಳು

**i) ತಡೆಗಟ್ಟುವಿಕೆ:–** ಔಟ್‌ರೀಚ್‌ಸೇವೆ ಕಾರ್ಯಕ್ರಮದ ಮೂಲಕ, ಯೋಜನೆಯು ಸಂಕಷ್ಟದಲ್ಲಿರುವ ಕುಟುಂಬಗಳನ್ನು ಗುರುತಿಸಿ, ಬೆಂಬಲ ಒದಗಿಸುತ್ತದೆ. ಸಂಕಷ್ಠದಲ್ಲಿರುವ ಕುಟುಂಬಗಳನ್ನು ಔಟರೀಚ್‌ಸೇವೆ ಕಾರ್ಯಕ್ರಮದ ಮೂಲಕ ಗುರುತಿಸಿ, ಅಗತ್ಯ ಬೆಂಬಲ ಸೇವೆಗಳನ್ನು ಒದಗಿಸುವುದು. **ತಾಲೂಕು, ಗ್ರಾಮ ಪಂಚಾಯತ್, ಗ್ರಾಮ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ,** ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಅನುಷ್ಠಾನದ ಅಧಿಕಾರಿಗಳು, ಸ್ಥಳೀಯ ಸ್ವಯಂ ಆಡಳಿತ ಮತ್ತು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಉತ್ತಮ ಸಮನ್ವಯತೆಯನ್ನು ಸಾಧಿಸುವುದು. ಮಕ್ಕಳ ಹಕ್ಕುಗಳ ಸಂರಕ್ಷಣೆಯಲ್ಲಿ ಸಮುದಾಯದ ಸಾಮರ್ಥ್ಯವನ್ನು ವೃದ್ಧಿಸುವುದು, ಮಕ್ಕಳ ಸಂರಕ್ಷಣೆಯಲ್ಲಿರುವ ಎಲ್ಲಾ ವ್ಯವಸ್ಥೆಗಳನ್ನು ಒಗ್ಗೂಡಿಸುವುದು ಎಲ್ಲಾ ಗ್ರಾಮ ಹಾಗೂ ತಾಲ್ಲೂಕು ಮಟ್ಟದ ಮಕ್ಕಳ ರಕ್ಷಣಾ ಸಮಿತಿಗಳು, ಐಸಿಡಿಎಸ್ ಕಾರ್ಯಕರ್ತರು, ಎನ್‌ಜಿಓಗಳು ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ಪರಿಣಾಮಕಾರಿಯಾದ ನೆಟ್‌ವರ್ಕಿಂಗ್ ಹಾಗೂ ಸಂಪರ್ಕಗಳ ಮೂಲಕ ಸೇವೆಗಳನ್ನು ಒಮ್ಮುಖಗೊಳಿಸುವುದನ್ನು (Convergence) ಖಾತ್ರಿಪಡಿಸುತ್ತವೆ. ಎಲ್ಲಾ ಕ್ಷೇತ್ರಗಳಲ್ಲಿಯೂ ರಕ್ಷಣೆ ಹಾಗೂ ಉಸ್ತುವಾರಿಗಾಗಿ ಸಮುದಾಯದ ಸಾಮರ್ಥ್ಯಗಳನ್ನು ಬಲಪಡಿಸಲಾಗುವುದು ಹಾಗೂ ಮಕ್ಕಳ ರಕ್ಷಣಾ ಕಾಳಜಿಗಳು ಹಾಗೂ ರಕ್ಷಣೆಗಳನ್ನು ಏಕೀಕರಣಗೊಳಿಸಲಾಗುವುದು. (Integrated)

**ii) ಕುಟುಂಬ ಆಧಾರಿತ ಪೋಷಣೆಯ ಉತ್ತೇಜನ:–** ಯೋಜನೆಯು ಪ್ರಜ್ಞಾ ಪೂರ್ವಕವಾಗಿಯೇ ಪ್ರಾಯೋಜಕತ್ವ, ರಕ್ತಸಂಬಂಧಿ ಪೋಷಣೆ, ಫಾಸ್ಟರ್ ಕೇರ್ ಹಾಗೂ ದತ್ತು ಒಳಗೊಂಡಂತೆ ಕುಟುಂಬ ಆಧಾರಿತ ಪೋಷಣೆಯೆಡೆಗೆ ಪ್ರಜ್ಞಾವಂತ ಬದಲಾವಣೆಯನ್ನು ಮಾಡುತ್ತದೆ. ಮಕ್ಕಳನ್ನು ಅವರ ಕುಟುಂಬಗಳ ಜೊತೆ ಪುನರ್‌ಸ್ಥಾಪನೆಗಾಗಿ ಸಾಂಸ್ಥಿಕ ಪೋಷಣೆಯಲ್ಲಿರುವ ಮಕ್ಕಳನ್ನು ಕುಟುಂಬದ ಪೋಷಣೆಗಾಗಿ ನಿಯಮಿತವಾಗಿ ಮೇಲ್ವಿಚಾರಣೆಯನ್ನು ನಡೆಸುವುದು ಮಕ್ಕಳ ಆವರ್ತಕ ಪುನರ್‌ವಿಮರ್ಶೆಯನ್ನೂ ಕೈಗೊಳ್ಳಲಾಗುತ್ತದೆ.

**iii) ಹಣಕಾಸು:–** ಈ ಯೋಜನೆಯು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಒಟ್ಟು ಯೋಜನೆಯ ವೆಚ್ಚವನ್ನು ಮುಂಚಿತವಾಗಿ ನಿರ್ಧಾರಿತವಾದಂತೆ ಶೇಕಡವಾರು ಹಣಕಾಸಿನ ನೆರವನ್ನು ನೀಡುತ್ತದೆ. ಇನ್ನುಳಿದ ಅನುದಾನವನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಯೋಜನೆಯ ವಿವಿಧ ಶೀರ್ಷಿಕೆಗಳಡಿ ಸ್ವಯಂಸೇವಾ ಸಂಸ್ಥೆಗಳಿಗೆ ಅನುದಾನವನ್ನು ಒದಗಿಸುತ್ತವೆ. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಯೋಜನೆಯ ವಿವಿಧ ಶೀರ್ಷಿಕೆಗಳಡಿ ಸ್ವಯಂಸೇವಾ ಸಂಸ್ಥೆಗಳಿಗೆ ಅನುದಾನವನ್ನು ಒದಗಿಸುತ್ತವೆ.

**iv) ಸಮಗ್ರ ಸೇವಾ ಉಪಬಂಧ:– ಸೇವೆಗಳ ಶ್ರೇಣಿ:** ಆರೋಗ್ಯ, ಶಿಕ್ಷಣ, ನ್ಯಾಯಾಂಗ, ಪೊಲೀಸ್, ಹಾಗೂ ಕಾರ್ಮಿಕ ಇಲಾಖೆ, ಇತ್ಯಾದಿಗಳು ಒಳಗೊಂಡಂತೆ ವಿವಿಧ ಕ್ಷೇತ್ರಗಳೊಂದಿಗೆ ಅಂತರ್ ಸಂಪರ್ಕ ಸಾಧನದ ಮೂಲಕ, ಸಂಕಷ್ಠದ ಸನ್ನಿವೇಶಗಳಲ್ಲಿರುವ ಮಕ್ಕಳ ಬಹು ಅಗತ್ಯಗಳನ್ನು ಪೂರೈಸುವ ಸಲುವಾಗಿ, ಹಾಲಿ ಇರುವಂತಹ ಸೇವೆಗಳ ಶ್ರೇಣಿಗೆ, ಈ ಯೋಜನೆಯು ಸೇವಾ ಉಪಬಂಧವನ್ನು ಏಕೀಕರಣಗೊಳಿಸಲು (ಸಹಭಾಗಿತ್ವಗೊಳಿಸಲು) ಶ್ರಮಿಸುತ್ತದೆ.

**v) ಸೇವೆಗಳ ಮುಂದುವರಿಕೆ, ಪ್ರತಿ ಮಗುವಿಗೂ ಕಾರ್ಯಸಾಧ್ಯವಿರುವಂತಹ (ಅನುಕೂಲವಾದ) 'ಪೋಷಣಾ ಯೋಜನೆ':–** ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಪ್ರತಿ ಮಗುವಿನ ಅವಶ್ಯಕತೆಗಳನ್ನು ನೀಡಲು ಅಧ್ಯಯನ ನಡೆಸಿ ಮಗುವಿನ ವೈಯಕ್ತಿಕ 'ಪೋಷಣಾ ಯೋಜನೆ' ಯ ಜೊತೆಗೆ ಅನುಪಾಲನಾ ಸೇವಾ ಯೋಜನೆಯ ಮೂಲಕ ಸೇವೆಗಳನ್ನು ಒದಗಿಸುತ್ತದೆ. ಈ ಸೇವೆಗಳು ನಿಗದಿತ ಕಾಲಮಿತಿಯಲ್ಲಿ ಪರಿಶೀಲಿಸಬೇಕು ಮತ್ತು ಸಾಕಷ್ಟು ಸೇವೆಗಳು ಮಕ್ಕಳಿಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು.

**vi) ಸಮುದಾಯ ಆಧಾರಿತ ಸೇವಾ ವಿತರಣೆ:–** ಈ ಯೋಜನೆಯು ಸಂಕಷ್ಟದಲ್ಲಿರುವಂತಹ ಮಕ್ಕಳು ಹಾಗೂ ಅವರ ಕುಟುಂಬಗಳಿಗೆ ಅವಶ್ಯವಿರುವ ಸೇವೆಗಳನ್ನು ಅವರ ಬಳಿಗೆ ಕೊಂಡೊಯ್ಯುವ ಆಶಯವನ್ನು ಹೊಂದಿದೆ. ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳಿಗೆ ಸೇವೆಗಳು ಗ್ರಾಮ ಪಂಚಾಯತ ಮಟ್ಟದಲ್ಲಿ/ ಸ್ಥಳೀಯ ಸ್ವಯಂ ಸರಕಾರಗಳ ಮಟ್ಟದಲ್ಲಿ ಉತ್ತಮ ಸಂಪರ್ಕಗಳೊಂದಿಗೆ ಲಭ್ಯವಿರಬೇಕು.

**vii) ಸ್ಥಳೀಯ ಅಗತ್ಯಗಳ ಕಡೆ ಹೆಚ್ಚು ಗಮನ ಕೇಂದ್ರೀಕರಿಸಲು ವಿಕೇಂದ್ರೀಕರಣ ಹಾಗೂ ನಮ್ಯತೆ:–** ಈ ಯೋಜನೆಯು ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಮಕ್ಕಳ ರಕ್ಷಣಾ ಸೇವೆಗಳ ಅಗತ್ಯಗಳನ್ನು ಆಧರಿಸಿ ಯೋಜನೆ ರೂಪಿಸುವಿಕೆ ಹಾಗೂ ಅನುಷ್ಠಾನವನ್ನು ವಿಕೇಂದ್ರೀಕರಣಗೊಳಿಸುತ್ತದೆ. ಮಾನವ ಸಂಪನ್ಮೂಲದ ಹಂಚಿಕೆಯು, ಗುಣಮಟ್ಟದ ಮಕ್ಕಳ ರಕ್ಷಣಾ ಸೇವೆಗಳ ಅಗತ್ಯವನ್ನು ಆಧರಿಸಿರಬೇಕು.

**viii) ಪಾಲುದಾರಿಕೆ ನಿರ್ಮಾಣ ಹಾಗೂ ಸಮುದಾಯ ಸಬಲೀಕರಣ:–** ಕಾರ್ಪೊರೇಟ್ ಹಾಗೂ ಸಮುದಾಯಗಳೂ ಒಳಗೊಡಂತೆ ಸರ್ಕಾರಿ ಇಲಾಖೆಗಳು ಹಾಗೂ ನಾಗರಿಕ ಸಂಘ ಸಂಸ್ಥೆಗಳ ನಡುವೆ ಮಾಹಿತಿ ಹಂಚಿಕೆ, ಕಾರ್ಯತಂತ್ರ ನಿರ್ಮಾಣ, ನಿಕಟ ಕಾರ್ಯನಿರ್ವಹಣಾ ಸಂಬಂಧಗಳನ್ನು ಅಭಿವೃದ್ಧಿಪಡಿಸಿ ಹಾಗೂ ಕಾರ್ಯಕ್ರಮ ಅಭಿವೃದ್ಧಿ ಮತ್ತು ಅನುಷ್ಠಾನ ಮಾಡುವುದು, ಒಂದು ಮುಖ್ಯ ಕಾರ್ಯತಂತ್ರ.

**ix) ಗುಣಮಟ್ಟದ ಪೋಷಣೆ, ಹಾಗೂ ಗುಣಮಟ್ಟದ ಪೋಷಣೆ ಹಾಗೂ ರಕ್ಷಣೆಗಾಗಿ, ಮಾನದಂಡಗಳು (ಮಾಪಕಗಳು) :–** ಸಾರ್ವಜನಿಕ ಅಥವಾ ಖಾಸಗಿ ಯಾವುದೇ ರೀತಿಯ ಎಲ್ಲಾ ರಕ್ಷಣಾ ಸೇವೆಗಳೂ ಸಹ, ಭೌತಿಕ ಮೂಲಭೂತಸೌಕರ್ಯ ಹಾಗೂ ಮಾನವ ಸಂಪನ್ಮೂಲ ಅಗತ್ಯಗಳು, ಜೊತೆಗೆ ಶಿಷ್ಟಾಚಾರಗಳು, ಶಾಸನಬದ್ಧ ವಿಭಾಗಗಳ ಕಾರ್ಯನಿರ್ವಹಣೆಗೆ ಸೇವೆಗಳ ಮಾರ್ಗಸೂಚಿಗಳು ಹಾಗೂ ಕಾರ್ಯಾಚರಣೆಯ ಕಾರ್ಯವಿಧಾನ ಕೈಪಿಡಿಗಳು ನಿಗಧಿತ ಗುಣಮಟ್ಟದ ಮಾನದಂಡಗಳಿಗೆ (ಮಾಪಕಗಳಿಗೆ) ಬದ್ಧವಾಗಿರಬೇಕು.

**x) ಸಾಮರ್ಥ್ಯಾಭಿವೃದ್ಧಿ ನಿರ್ಮಾಣ:–** ಎಲ್ಲಾ ಹಂತಗಳಲ್ಲಿಯೂ ವೃತ್ತಿಪರ ಮಕ್ಕಳ ರಕ್ಷಣಾ ಸೇವೆಗಳನ್ನು ಖಾತ್ರಿಪಡಿಸುವ ಸಲುವಾಗಿ ಯೋಜನೆಯು, ಎಲ್ಲಾ ಸೇವೆ ಒದಗಿಸುವವರು, ಕಾರ್ಯನಿರ್ವಾಹಕರನ್ನು ಸಜ್ಜುಗೊಳಿಸಲು, ಮಕ್ಕಳ ಹಕ್ಕುಗಳು, ಪೋಷಣೆ ಹಾಗೂ ರಕ್ಷಣೆಯ ಗುಣಮಟ್ಟದ ಮಾಪಕಗಳ ಕುರಿತು ಅವರ ಕೌಶಲ್ಯಗಳನ್ನು ವೃದ್ಧಿಸಲು, ಸೂಕ್ಷ್ಮವಾಗಿಸಲು ಹಾಗೂ ಜ್ಞಾನವನ್ನು ವೃದ್ಧಿಸಲು ಕ್ರಮಬದ್ಧವಾಗಿ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿಯನ್ನು ಕೈಗೊಳ್ಳುವುದು.

**xi) ಉಸ್ತುವಾರಿ ಹಾಗೂ ಮೌಲ್ಯಮಾಪನ:–** ಪರಿಣಾಮಕಾರಿಯಾದ ಮಧ್ಯಸ್ಥಿಕೆ ವಹಿಸುವ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಲು ಹಾಗೂ ಅದರ ಪರಿಣಾಮಗಳ ಉಸ್ತುವಾರಿಯನ್ನು ರೂಪಿಸಲು ಈ ಯೋಜನೆಯು ಮಕ್ಕಳ ರಕ್ಷಣಾ ದತ್ತಾಂಶ ನಿರ್ವಹಣಾ ವ್ಯವಸ್ಥೆಯನ್ನು ರಚಿಸುವುದು. ಕ್ರಮಬದ್ಧವಾಗಿ ಕಾರ್ಯಕ್ರಮಗಳು ಹಾಗೂ ರಚನೆಗಳ (ವ್ಯವಸ್ಥೆಗಳ) ಮೌಲ್ಯಮಾಪನವನ್ನು ನಡೆಸುವುದು ಹಾಗೂ ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳುವುದು.

## 4. ಉದ್ದೇಶಿತ ಸಮೂಹಗಳು.

i) ಜೆಜೆ ಕಾಯ್ದೆಯಡಿ ವ್ಯಾಖ್ಯಾನಿಸಿರುವಂತೆ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳ ಅಗತ್ಯಗಳ ಕಡೆ ಹಾಗೂ ಓರ್ವ ಸಂತ್ರಸ್ತನಾಗಿ ಅಥವಾ ಸಾಕ್ಷಿಯಾಗಿ ಅಥವಾ ಇನ್ನಿತರ ಯಾವುದೇ ಸಂದರ್ಭದಿಂದಾಗಿ ಕಾನೂನಿನ ಸಂಪರ್ಕಕ್ಕೆ ಬರುವಂತಹ ಮಕ್ಕಳ ಅಗತ್ಯಗಳ ಕಡೆ ಐಸಿಪಿಎಸ್ ತನ್ನ ಗಮನ ಹಾಗೂ ಚಟುವಟಿಕೆಗಳನ್ನು ಕೇಂದ್ರೀಕರಿಸುತ್ತದೆ.

ii) ಐಸಿಪಿಎಸ್, ಇತರೆ ಯಾವುದೇ ಸಂಕಷ್ಟದಲ್ಲಿರುವಂತಹ ಮಕ್ಕಳಿಗೆ, ಆ ಮಕ್ಕಳನ್ನೂ ಒಳಗೊಂಡಂತೆ, ಆದರ ಮಿತಿ ಇಲ್ಲದಿರುವಂತೆ, ಸಂಕಷ್ಟದಲ್ಲಿರುವ (ದುರ್ಬಲತೆಗೆ) ಮಕ್ಕಳು, ಸಂಭವನೀಯ ದುರ್ಬಲತೆಗೆ ಒಳಗಾಗಬಹುದಾದ ಕುಟುಂಬಗಳ, ಅಪಾಯದಲ್ಲಿರುವ ಮತ್ತು ಅಪಾಯದ ಅಂಚಿನಲ್ಲಿರುವ ಕುಟುಂಬಗಳ ಮಕ್ಕಳು, ವಲಸೆ ಬಂದ ಕುಟುಂಬಗಳು, ಕಡು ಬಡ ಕುಟುಂಬಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳು, ತಾರತಮ್ಯತೆಗೆ ಈಡಾಗಿರುವ ಅಥವಾ ಅದರಿಂದ ಪರಿಣಾಮ ಎದುರಿಸುತ್ತಿರುವ ಕುಟುಂಬಗಳು, ಅಲ್ಪಸಂಖ್ಯಾತರು, ಹೆಚ್‌ಐವಿ/ಏಡ್ಸ್‌ಗೆ ಈಡಾಗಿರುವ ಅಥವಾ ಸೋಂಕಿತ ಮಕ್ಕಳು, ಅನಾಥರು, ಮಾದಕವಸ್ತುಗಳ ವ್ಯಸನಕ್ಕೆ ಈಡಾಗಿರುವ ಮಕ್ಕಳು, ಭಿಕ್ಷುಕರು, ಕಳ್ಳ ಸಾಗಣೆಗೆ ಒಳಗಾದವರು ಅಥವಾ ಲೈಂಗಿಕವಾಗಿ ಶೋಷಿತ ಮಕ್ಕಳು, ಖೈದಿಗಳ ಮಕ್ಕಳು ಹಾಗೂ ಬೀದಿ ಬದಿ ಹಾಗೂ ಬಾಲಕಾರ್ಮಿಕರಂತಹ ಸಾಮಾಜಿಕವಾಗಿ ಹೊರಗುಳಿದಿರುವಂತಹ ಮಕ್ಕಳನ್ನು ಆ ಸ್ಥಿತಿಗೆ ಹೋಗದಂತೆ ತಡೆಗಟ್ಟುವ ಹಾಗೂ ಶಾಸನಬದ್ಧ, ಪೋಷಣೆ ಮತ್ತು ಪುನರ್ವಸತಿ ಸೇವೆಗಳನ್ನು ಒದಗಿಸುತ್ತದೆ.

## 5. ಸರ್ಕಾರ – ನಾಗರಿಕ ಸಮಾಜದ ಪಾಲುದಾರಿಕೆ.

ಎಲ್ಲಾ ಮಕ್ಕಳನ್ನು ತಲುಪಲು, ಅದರಲ್ಲಿಯೂ ಸಂಕಷ್ಟದಲ್ಲಿರುವ ಮಕ್ಕಳನ್ನು ತಲುಪಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮಕ್ಕಳ ಸಂರಕ್ಷಣೆಯ ಜವಾಬ್ದಾರಿ ಮಾತ್ರ ಎಂದು ಪರಿಗಣಿಸದೇ, ಬದಲಿಗೆ ಇತರೆ ಕ್ಷೇತ್ರಗಳೂ ಸಹ ಪ್ರಮುಖ ಪಾತ್ರಗಳನ್ನು ನಿರ್ವಹಿಸಬೇಕಿದೆ ಎಂದು ಒತ್ತಿ ಹೇಳುತ್ತದೆ. ಆದ್ದರಿಂದ ಐಸಿಪಿಎಸ್‌ನ್ನು ಸರ್ಕಾರಿ–ನಾಗರಿಕ ಸಮಾಜದ ಪಾಲುದಾರಿಕೆಯಡಿ, ಕೇಂದ್ರ, ರಾಜ್ಯ ಸರ್ಕಾರಗಳ ಜವಾಬ್ದಾರಿ ಹಾಗೂ ನಿರ್ದೇಶನಗಳಡಿ ಅನುಷ್ಠಾನಗೊಳಿಸಬೇಕು. ಈ ರಾಷ್ಟ್ರದಲ್ಲಿ ಮಕ್ಕಳಿಗೆ ಸುರಕ್ಷಿತ ವಾತಾವರಣವನ್ನು ನಿರ್ಮಾಣ ಮಾಡುವ ಸಲುವಾಗಿ ಈ ಯೋಜನೆಯು ಸರ್ಕಾರಿ ಇಲಾಖೆಗಳು ಒಳಗೊಂಡಂತೆ, ಸ್ವಯಂಸೇವಕ ಕ್ಷೇತ್ರ, ಸಮುದಾಯ ಗುಂಪುಗಳು, ಶಿಕ್ಷಣ ಹಾಗೂ ಬಹು ಮುಖ್ಯವಾಗಿ ಕುಟುಂಬಗಳು ಹಾಗೂ ಮಕ್ಕಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದೆ. ಇದು ಒಂದು ಮಕ್ಕಳ ಸಂರಕ್ಷಣೆ ಸೇವೆಗಳ ಸಮಗ್ರ ದೃಷ್ಟಿಕೋನವಾಗಿದ್ದು, ಕಣ್ಗಾವಲು, ಪತ್ತೆಹಚ್ಚುವಿಕೆ ಹಾಗೂ ಪ್ರತಿಕ್ರಿಯೆಗಾಗಿ ಬಲಿಷ್ಠವಾದ ದ್ವಿಪಕ್ಷೀಯ ಸಂಪರ್ಕಗಳಲ್ಲಿ ಯೋಜನೆಯ, ಮಕ್ಕಳ ಸಂರಕ್ಷಣಾ ಸೇವೆಗಳು ಹಾಗೂ ಕಾರ್ಯವಿಧಾನಗಳು ಪ್ರತಿಬಿಂಬವಾಗುತ್ತವೆ. ಈ ಯೋಜನೆಯು ಮಕ್ಕಳ ಸಂರಕ್ಷಣಾ ವ್ಯವಸ್ಥೆಯ ಪರಿಣಾಮಕಾರಿ ಕಾರ್ಯನಿರ್ವಹಣೆಯ ಉಸ್ತುವಾರಿ ಹಾಗೂ ಮೇಲ್ವಿಚಾರಣೆಯ ಜೊತೆಗೆ ಸೇವೆಗಳನ್ನು ಒದಗಿಸುವುದಕ್ಕಾಗಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಂತಹ ಒಂದು ಸೂಕ್ತ ರಚನೆಯನ್ನು(ವ್ಯವಸ್ಥೆಗಳನ್ನು) ಸೂಚಿಸುತ್ತದೆ:

**(i) ಸರ್ಕಾರ:** ಭಾರತ ಸರ್ಕಾರವು ಈ ಯೋಜನೆಯ ಅಭಿವೃದ್ಧಿ ಹಾಗೂ ಹಣಕಾಸಿನ ಪ್ರಾಥಮಿಕ ಜವಾಬ್ದಾರಿಯನ್ನು ವಹಿಸಿಕೊಂಡಿದೆ, ಜೊತೆಗೆ ಕಟ್ಟುನಿಟ್ಟಿನ ಕ್ರಮಗಳು ಹಾಗೂ ನಿಯಮಗಳನ್ನು ಕಡಿಮೆಗೊಳಿಸಿ ಅನುಕೂಲಕರವಾಗುವಂತೆ ಖಾತ್ರಿಪಡಿಸಿದೆ. ತಪ್ಪಿಸಿಕೊಂಡಿರುವ ಮಕ್ಕಳಿಗಾಗಿ ಒಂದು ವೆಬ್ ಪೋರ್ಟಲ್ ಒಳಗೊಂಡಂತೆ ಸಂರಕ್ಷಣಾ ಸೇವೆಗಳು ದೊರಕುವಂತಹ ಸಮಗ್ರ, ನೇರ (ಲೈವ್), ಮಕ್ಕಳ ವೆಬ್ ಆಧಾರಿತ ಡಾಟಾಬೇಸ್ ಅನ್ನು ಸೃಷ್ಟಿಸಿದೆ. ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳು, ಅನುದಾನದ ಶೀಘ್ರ ವಹಿಸುವಿಕೆ, ಬಳಸುವಿಕೆ ಹಾಗೂ ಮಕ್ಕಳ ಡಾಟಾಬೇಸ್ ನಿರ್ವಹಣೆ, ಗುತ್ತಿಗೆ ಆಧಾರದ ಮೇಲೆ ಅತ್ಯುತ್ತಮ ವೃತ್ತಿಪರ ಪ್ರತಿಭಾನ್ವಿತರನ್ನು ಗುರುತಿಸುವುದು, ಸಾರ್ವಜನಿಕ–ಖಾಸಗಿ ಪಾಲುದಾರಿಕೆಗಳನ್ನು ಗುರುತಿಸುವ ಮೂಲಕ ಯೋಜನೆಯ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಪಡಿಸುತ್ತಿವೆ.

**(ii) ನಾಗರಿಕ ಸಂಘ– ಸಂಸ್ಥೆಗಳು ಮತ್ತು ವ್ಯಕ್ತಿಗಳು:**

a) **ಸ್ವಯಂ ಸೇವಾ ಕ್ಷೇತ್ರ:** ಪೋಷಣೆ ಮತ್ತು ಪುನರ್ವಸತಿ ಅಗತ್ಯವುಳ್ಳ ಮಕ್ಕಳನ್ನು ಪತ್ತೆಹಚ್ಚುವ, ಆಪ್ತಸಮಾಲೋಚನೆ, ಪೋಷಣೆ ಹಾಗೂ ಪುನರ್ವಸತಿಗಾಗಿ ಹೊಣೆಗಾರಿಕೆಯ, ಪ್ರತಿಕ್ರಿಯಾತ್ಮಕ ಹಾಗೂ ಮಕ್ಕಳ–ಸ್ನೇಹಿ ಸೇವೆಗಳನ್ನು ಒದಗಿಸುವುದು; ಜೊತೆಗೆ ಅರಿವು ಮೂಡಿಸುವುದು, ಸಾಮರ್ಥ್ಯ ಅಭಿವೃದ್ಧಿ, ಹೊಸ ಆವಿಷ್ಕಾರಗಳು ಹಾಗೂ ಉಸ್ತುವಾರಿ ಕ್ರಮಗಳನ್ನು ಒದಗಿಸುವುದು. ರಾಜ್ಯ ಸರ್ಕಾರದಿಂದ ಹಣಕಾಸಿನ ಬೆಂಬಲವಿರುತ್ತದೆ.

**b) ಸಂಶೋದನೆ ಹಾಗೂ ತರಬೇತಿ ಸಂಸ್ಥೆಗಳು:** ಭಾರತದಲ್ಲಿ ಮಕ್ಕಳ ಸ್ಥಿತಿಗತಿ ಹಾಗೂ ಹಾಲಿ ಇರುವ ಮಾನವ ಸಂಪನ್ಮೂಲದ ಸಾಮರ್ಥ್ಯಾಭಿವೃದ್ಧಿಯ ಜೊತೆಗೆ ವೃತ್ತಿಪರರ ತಂಡದ ಸೃಷ್ಟಿಗೆ ಸಂಬಂಧಪಟ್ಟ ಸಂಶೋಧನೆಯನ್ನು ಕೈಗೊಳ್ಳುವುದು.

c) **ಮಾಧ್ಯಮ ಹಾಗೂ ವಕಾಲತ್ತು ಗುಂಪುಗಳು:** ಮಕ್ಕಳ ಹಕ್ಕುಗಳನ್ನು ಪ್ರೋತ್ಸಾಹಿಸುವುದು ಮತ್ತು ಮಕ್ಕಳ ಸಂರಕ್ಷಣೆಗೆ ಸಂಬಂಧಪಟ್ಟ ವಿಷಯಗಳನ್ನು ಸೂಕ್ಷ್ಮತೆಯೊಂದಿಗೆ ನಿರ್ವಹಿಸುವುದು ಹಾಗೂ ಸಂರಕ್ಷಣೆಯ ವಿಷಯಗಳ ಮೇಲಿನ ಮಾಧ್ಯಮ ಸಂವಾದವನ್ನು ಉತ್ತೇಜಿಸುವುದು ಹಾಗೂ ಸುಸ್ಥಿರತೆಯನ್ನು ಕಾಪಾಡುವುದು.

d) **ಕಾರ್ಪೊರೇಟ್ ವಲಯ:** ಯೋಜನೆಯಡಿ ಸರ್ಕಾರ ಹಾಗೂ ನಾಗರಿಕ ಸಮಾಜ ಸಂಘಗಳ ಉಪಕ್ರಮಗಳೊಂದಿಗೆ ಪಾಲುದಾರಿಕೆ; ಮಕ್ಕಳ ಸಂರಕ್ಷಣೆಯ ಉಪಕ್ರಮಗಳಿಗೆ ಹಣಕಾಸಿನ ಬೆಂಬಲ; ಹಾಗೂ ಭಾರತದಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಕಾನೂನುಗಳ ಪ್ರಕಾರ ಮಕ್ಕಳ ಪರಿಸ್ಥಿತಿಯನ್ನು ಸುಧಾರಿಸುವ ಸರ್ಕಾರದ ಪ್ರಯತ್ನಗಳಿಗೆ ಕೊಡುಗೆ ನೀಡುವುದು.

e) **ಸಮುದಾಯ ಗುಂಪುಗಳು ಹಾಗೂ ಸ್ಥಳೀಯ ನಾಯಕರು, ಸ್ವಯಂಸೇವಕರು, ಯುವಕ–ಯುವತಿಯರ ಗುಂಪುಗಳು, ಕುಟುಂಬಗಳು ಹಾಗೂ ಮಕ್ಕಳು:** ಗ್ರಾಮ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿಗಳಲ್ಲಿ ಇತರೆ ವಿಷಯಗಳ ನಡುವೆ ಭಾಗವಹಿಸುವ ಮೂಲಕ ಮಕ್ಕಳ ರಕ್ಷಣಾ ಸೇವೆಗಳನ್ನು ಉಸ್ತುವಾರಿವಹಿಸುವ, ಕಾರ್ಯನಿರ್ವಹಣೆಗಾಗಿ, ಮಕ್ಕಳಿಗೆ ಸಂರಕ್ಷಣಾತ್ಮಕ ಹಾಗೂ ಪೂರಕ ಪರಿಸರವನ್ನು ಒದಗಿಸುವುದು.

# ಭಾಗ 2 – ಸೇವಾ ವಿತರಣಾ ರಚನೆಗಳು

## ಅಧ್ಯಾಯ 3 – ಜಿಲ್ಲಾ ಹಂತದ ಸೇವಾ ವಿತರಣಾ ರಚನೆ

**1. ಪರಿಣಾಮಕಾರಿಯಾದ ಸೇವಾ ವಿತರಣೆಯನ್ನು** ಖಾತ್ರಿಪಡಿಸುವ ಸಲುವಾಗಿ, ಕ್ರಮವಾಗಿ ರಾಜ್ಯ ಹಾಗೂ ಜಿಲ್ಲಾ ಹಂತಗಳಲ್ಲಿ ಐಸಿಪಿಎಸ್‌ನ್ನು ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು (ಡಿಸಿಪಿಯು ಗಳು) ಸ್ಥಾಪಿಸುವ ಮೂಲಕ ಅನುಷ್ಠಾನಗೊಳಿಸಲಾಗುವುದು. ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ (ಎಸ್‌ಎಆರ್‌ಎ)ಯು ಎಸ್‌ಸಿಪಿಎಸ್ ಅಡಿ ಒಂದು ಘಟಕವಾಗಿ ಕಾರ್ಯನಿರ್ವಹಿಸುತ್ತದೆ. ಎಸ್‌ಸಿಪಿಎಸ್ ನ್ನು ಸೊಸೈಟಿಗಳ ನೊಂದಣಿ ಕಾಯ್ದೆ, 1860ರಡಿ ನೋಂದಾಯಿಸಲಾಗುವುದು ಹಾಗೂ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಕ್ಕಳ ಕಲ್ಯಾಣ/ ರಕ್ಷಣೆಯ ಕೆಲಸಗಳನ್ನು ನೋಡಿಕೊಳ್ಳುತ್ತಿರುವ ಇಲಾಖೆಯ ಒಟ್ಟಾರೆ ಮೇಲ್ವಿಚಾರಣೆ ಎಸ್.ಸಿ.ಪಿ.ಎಸ್.ನ ನಿಯಂತ್ರಣದಡಿ ಕಾರ್ಯನಿರ್ವಹಿಸುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ರಾಜ್ಯಮಟ್ಟದಲ್ಲಿ ಈ ಸೊಸೈಟಿಗಳನ್ನು ಸ್ಥಾಪಿಸಲು ಈಗಾಗಲೇ ಬೈಲಾಗಳೊಂದಿಗೆ ವಿವರವಾದ ಮಾರ್ಗಸೂಚಿಗಳನ್ನು ರೂಪಿಸಿ ಕಳುಹಿಸಿದೆ.

### 2. ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (ಡಿಸಿಪಿಯು)

ಐಸಿಪಿಎಸ್, ಪ್ರತಿ ಜಿಲ್ಲೆಯಲ್ಲೂ ಯೋಜನೆಯ ಅನುಷ್ಠಾನಕ್ಕಾಗಿ ಮೂಲಭೂತ ಘಟಕವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು (ಡಿಸಿಪಿಯು) ಸ್ಥಾಪಿಸಲು ಸೂಚಿಸುತ್ತದೆ.

### 2.1 ಜಿಲ್ಲಾ ಮಕ್ಕಳ ರಕ್ಷಣಾ ಘಟಕದ (ಡಿಸಿಪಿಯು) ಕಾರ್ಯನಿರ್ವಹಣಾ ಜವಾಬ್ದಾರಿಗಳು:

ಡಿಸಿಪಿಯು ಜಿಲ್ಲಾ ಮಟ್ಟದಲ್ಲಿ ಎಲ್ಲಾ ಮಕ್ಕಳ ಹಕ್ಕುಗಳು ಹಾಗೂ ರಕ್ಷಣಾ ಚಟುವಟಿಕೆಗಳನ್ನು ಸಂಯೋಜನೆ ಹೊಂದುತ್ತದೆ ಹಾಗೂ ಅನುಷ್ಠಾನಗೊಳಿಸುತ್ತದೆ. ಡಿಸಿಪಿಯುನ ನಿರ್ಧಿಷ್ಟ ಕೆಲಸಗಳು ಈ ಕೆಳಗಿನಂತಿರುತ್ತವೆ:

(i) ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆಯಲ್ಲಿ ನಮೂದಿಸಿರುವ ಮಕ್ಕಳ ರಕ್ಷಣಾ ಗುರಿಗಳ ಸಾಧನೆಗಾಗಿ ಹಾಗೂ ಮಕ್ಕಳ ರಕ್ಷಣಾ ಕಾನೂನುಗಳು, ಯೋಜನೆಗಳ ಪರಿಣಾಮಕಾರಿಯಾದ ಅನುಷ್ಠಾನಕ್ಕೆ ಕೊಡುಗೆ ನೀಡುವುದು. ಹೀಗೆ ಮಾಡುವುದರಿಂದ ಡಿಸಿಪಿಯು ರಾಷ್ಟ್ರೀಯ ಹಾಗೂ ರಾಜ್ಯದ ಆದ್ಯತೆಗಳು, ನಿಯಮಗಳು ಹಾಗೂ ಮಾರ್ಗಸೂಚಿಗಳನ್ನು ಅನುಸರಿಸುತ್ತದೆ;

(ii) ಪೋಷಣೆಯ ಅಗತ್ಯವಿರುವ ಪ್ರತಿಯೊಂದು ಮಗುವಿಗೂ **ವೈಯಕ್ತಿಕ ಪೋಷಣಾ ಯೋಜನೆ**ಯಿದೆ ಎಂಬುದನ್ನು ಖಾತ್ರಿಪಡಿಸುವುದು ಹಾಗೂ ಈ ಯೋಜನೆಯನ್ನು ಕ್ರಮಬದ್ಧವಾಗಿ ಪುನರ್‌ಪರಿಶೀಲಿಸುವುದು. ಯೋಜನೆಯ ಅನುಷ್ಠಾನದ ಉಸ್ತುವಾರಿ ವಹಿಸುವುದು;

(iii) ಐಸಿಡಿಎಸ್ ಅಧಿಕಾರಿಗಳು, ಕಾರ್ಯಕರ್ತರು, ವಿಶೇಷ ದತ್ತು ಏಜೆನ್ಸಿಗಳು (ಎಸ್‌ಎಎ), **ಪಂಚಾಯತ್ ರಾಜ್ ಸಂಸ್ಥೆಗಳು** ಹಾಗೂ ನಗರ ಸ್ಥಳೀಯ ಸಂಸ್ಥೆಗಳು, ಇತ್ಯಾದಿಯಂತಹ ಮಕ್ಕಳ ರಕ್ಷಣೆಯ ವಿಷಯಗಳೊಂದಿಗೆ ಕೆಲಸ ಮಾಡುತ್ತಿರುವ ಎನ್‌ಜಿಒಗಳು ಹಾಗೂ ಸ್ಥಳೀಯ

ಏಜೆನ್ಸಿಗಳೊಂದಿಗೆ ಪರಿಣಾಮಕಾರಿಯಾದ ಸಂಪರ್ಕಜಾಲವನ್ನು ಹೊಂದುವ ಮೂಲಕ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳು ಹಾಗೂ ಅಪಾಯದಲ್ಲಿರುವ ಕುಟುಂಬಗಳನ್ನು ಗುರುತಿಸುವುದು;

(iv) ಸಂಕಷ್ಟದಲ್ಲಿರುವ ಮಕ್ಕಳ ಅಂಕಿ ಸಂಖ್ಯೆಯನ್ನು ಅಂದಾಜಿಸುವುದು ಹಾಗೂ ಇಂತಹ ಮಕ್ಕಳ ಪ್ರವೃತ್ತಿಗಳು ಹಾಗೂ ಮಾದರಿಗಳ ಮೇಲೆ ನಿಗಾವಹಿಸಲು ಜಿಲ್ಲಾ ನಿರ್ಧಿಷ್ಟ ಡಾಟಾಬೇಸ್‌ಗಳನ್ನು ಸೃಷ್ಟಿಸುವುದು;

(v) ಸಂಪನ್ಮೂಲ ಕೈಪಿಡಿಯನ್ನು ಸಿದ್ಧಪಡಿಸುವ (ಸೃಷ್ಟಿಸುವ) ಸಲುವಾಗಿ ಜಿಲ್ಲೆಯಲ್ಲಿ ಇರುವಂತಹ ಎಲ್ಲಾ ಮಕ್ಕಳ ಸಂಬಂಧಿತ ಸೇವೆ ಒದಗಿಸುವವರು ಹಾಗೂ ಅವರು ನೀಡುತ್ತಿರುವ ಸೇವೆಗಳನ್ನು ಗುರುತಿಸಿ ಪಟ್ಟಿ ಮಾಡುವುದು;

(vi) ಐಸಿಪಿಎಸ್‌ನ ಕಾರ್ಯಕ್ರಮ ಅಂಶಗಳ ಅನುಷ್ಠಾನಕ್ಕಾಗಿ ವಿಶ್ವಾಸಾರ್ಹ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸುವುದು ಹಾಗೂ ಬೆಂಬಲಿಸುವುದು;

(vii) ಪ್ರಾಯೋಜಕತ್ವ, ಫಾಸ್ಟರ್ ಕೇರ್, ದತ್ತು ಹಾಗೂ ನಂತರದ ಪೋಷಣೆ (ಅನುಪಾಲನಾ ಸೇವೆ) ಒಳಗೊಂಡಂತೆ ಕುಟುಂಬ ಆಧಾರಿತ ಸಾಂಸ್ಥಿಕೇತರ ಸೇವೆಗಳ ಆಧಾರಿತ ಸೇವೆಗಳ ಅನುಷ್ಠಾನವನ್ನು ಬೆಂಬಲಿಸುವುದು;

(viii) ಜಿಲ್ಲೆ/ನಗರ ಹಂತಗಳಲ್ಲಿ, ಪ್ರತಿ ಜಿಲ್ಲೆಯಲ್ಲಿ ಜೆಜೆಬಿ ಗಳು, ಸಿಡಬ್ಲ್ಯೂಸಿ ಗಳು, ಎಸ್‌ಜೆಪಿಯು ಗಳ ಸ್ಥಾಪನೆ ಹಾಗೂ ಗುಚ್ಛ (ಕ್ಲಸ್ಟರ್) ಜಿಲ್ಲೆಗಳಲ್ಲಿ ಅಗತ್ಯದ ಪ್ರಕಾರ ಸಾಂಸ್ಥಿಕ ವ್ಯವಸ್ಥೆಗಳ ಸ್ಥಾಪನೆಯಂತಹ ಸಮರ್ಪಕವಾದ ಮೂಲಭೂತ ಸೌಕರ್ಯವನ್ನು ಸೃಷ್ಟಿಸಲು ಅಗತ್ಯ ಬೆಂಬಲವನ್ನು ಒದಗಿಸುವ ಮೂಲಕ, ಜಿಲ್ಲೆ/ನಗರ ಹಂತಗಳಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಮತ್ತು 2006ರ ತಿದ್ದುಪಡಿಯನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಅನುಷ್ಠಾನವನ್ನು ಖಾತ್ರಿಪಡಿಸುವುದು;

(ix) ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಹಂತದ ಮಕ್ಕಳ ರಕ್ಷಣಾ ಸಮಿತಿಗಳ ಸ್ಥಾಪನೆಯ ಮೂಲಕ ಹಾಗೂ ಅವುಗಳ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸುವುದು;

(x) ಎಲ್ಲಾ ಹಂತಗಳಲ್ಲಿಯೂ ಮಕ್ಕಳನ್ನು ಅವರ ಕುಟುಂಬಗಳೊಂದಿಗೆ ಮರುಸೇರ್ಪಡೆಗೊಳಿಸಲು ವರ್ಗಾವಣೆಗೆ ಅನುಕೂಲ ಒದಗಿಸುವುದು ಅಥವಾ ಪ್ರಾಯೋಜಕತ್ವ, ರಕ್ತ–ಸಂಬಂಧಿಕರ ಪೋಷಣೆ, ದೇಶದೊಳಗಿನ ದತ್ತು, ಫಾಸ್ಟರ್ ಕೇರ್ ಪೋಷಣಾ ಸೇವೆ, ಸಂಸ್ಥೆಗಳಲ್ಲಿ ಅಂತರ್–ರಾಷ್ಟ್ರೀಯ ದತ್ತು ಹಾಗೂ ಪ್ಲೇಸ್‌ಮೆಂಟ್ ಮೂಲಕ ಮಗುವನ್ನು ದೀರ್ಘಾವಧಿ ಅಥವಾ ಅಲ್ಪಾವಧಿಗೆ ನೀಡುವುದು;

(xi) ಜಿಲ್ಲೆಯಲ್ಲಿ ಮಕ್ಕಳ ರಕ್ಷಣೆಗಾಗಿ ಇತರೆ ಕಾನೂನುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅನುಕೂಲ ಒದಗಿಸುವುದು, ಅವುಗಳೆಂದರೆ; ಹಿಂದೂ ದತ್ತು ಹಾಗೂ ನಿರ್ವಹಣಾ ಕಾಯ್ದೆ (ಹೆಚ್‌ಎಎಂಎ) 1956; ಗಾರ್ಡಿಯನ್ಸ್ ಅಂಡ್ ವಾರ್ಡ್ಸ್ ಆಕ್ಟ್ (ಜಿಎಡಬ್ಲ್ಯೂಎ) 1890; ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986; ಬಾಲ್ಯವಿವಾಹ ಹಾಗೂ ತಡೆ ಕಾಯ್ದೆ, 1979; ಹಾಗೂ ಅನೈತಿಕ ಕಳ್ಳ

ಸಾಗಣೆ ತಡೆಗಟ್ಟುವ ಕಾಯ್ದೆ, 1986, ಪ್ರೀ–ಕಾನ್ಸೆಪ್ಷನ್ ಅಂಡ್ ಪ್ರೀ–ನೇಟಲ್ ಡಯಾಗ್ನೊಸ್ಟಿಕ್ ಟೆಕ್ನಿಕ್ಸ್ (ಪ್ರಾಹಿಬಿಷನ್ ಆಫ್ ಸೆಕ್ಸ್ ಸೆಲೆಕ್ಷನ್) ಆಕ್ಟ್, 1994; ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣೆ ಕಾಯ್ದೆ, 2012, ಸಿಪಿಸಿಆರ್‌ಸಿ ಕಾಯ್ದೆ, 2005, ಇತ್ಯಾದಿ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಜಾರಿಗೆ ಬರುವಂತಹ ಮತ್ಯಾವುದೇ ಇತರೆ ಕಾಯ್ದೆಗಳು; ***(ಮೇಲೆ ತಿಳಿಸಿದ ಕೆಲವು ಕಾಯ್ದೆಗಳನ್ನು ಈಗಿನ ಹೊಸ ಕಾಯ್ದೆಗಳಿಗನುಗುಣವಾಗಿ ಅರ್ಥೈಸಿಕೊಂಡು ಅನುಷ್ಠಾನಕ್ಕೆ ತರುವುದು.)***

(xii) ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ನಗರ ಮೂಲಭೂತ ಸೇವೆಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು, ಯುವಜನ ಸೇವೆಗಳು, ಪೊಲೀಸ್, ನ್ಯಾಯಾಂಗ, ಕಾರ್ಮಿಕ, ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ಒಳಗೊಂಡಂತೆ ಮಕ್ಕಳ ರಕ್ಷಣಾ ವಿಷಯಗಳ ಬಗ್ಗೆ ಅಂತರ್–ಕ್ಷೇತ್ರೀಯ ಸಂಪರ್ಕಜಾಲಗಳನ್ನು ನಿರ್ಮಿಸಲು ಎಲ್ಲಾ ಸರ್ಕಾರಿ ಇಲಾಖೆಗಳೊಂದಿಗೆ ನೆಟ್‌ವರ್ಕ್ ಹಾಗೂ ಸಂಯೋಜನೆ ಹೊಂದುವುದು;

(xiii) ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ಸಂರಕ್ಷಣೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಹಾಗೂ ನಾಗರಿಕ ಸಮಾಜ ಸಂಸ್ಥೆಗಳೊಂದಿಗೆ ನೆಟ್‌ವರ್ಕ್ ಮತ್ತು ಸಂಯೋಜನೆ ಹೊಂದುವುದು;

(xiv) ಜಿಲ್ಲೆಯಲ್ಲಿ ಐಸಿಪಿಎಸ್‌ನ ಪರಿಣಾಮಕಾರಿ ಉಸ್ತುವಾರಿ ಹಾಗೂ ಮೇಲ್ವಿಚಾರಣೆಗಾಗಿ ಸೂಚಕ ಹಾಗೂ ಸಾಧನಗಳನ್ನು ಸಿದ್ಧಪಡಿಸುವುದು.

(xv) ಜಿಲ್ಲೆಯಲ್ಲಿ ಮಕ್ಕಳಿಗೆ ವಸತಿ ಸೌಲಭ್ಯಗಳನ್ನು ಒದಗಿಸುವ ಎಲ್ಲಾ ಸಂಸ್ಥೆಗಳು/ಏಜೆನ್ಸಿಗಳ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ;

(xvi) ಮಕ್ಕಳಿಗೆ ಪರಿಣಾಮಕಾರಿಯಾದ ಸೇವೆಗಳನ್ನು ಕಲ್ಪಿಸಲು ಮಕ್ಕಳ ರಕ್ಷಣಾ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳನ್ನು (ಸರ್ಕಾರಿ ಹಾಗೂ ಸರ್ಕಾರೇತರ) ತರಬೇತಿಗೊಳಿಸುವುದು ಹಾಗೂ ಸಾಮರ್ಥ್ಯಾಭಿವೃದ್ಧಿಗೊಳಿಸುವುದು;

(xvii) ಜಿಲ್ಲೆ, ತಾಲ್ಲೂಕು ಹಾಗೂ ಸಮುದಾಯ ಹಂತಗಳಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ರಮಗಳಲ್ಲಿ ಯುವಜನರ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು;


(xviii) ಮಕ್ಕಳ ರಕ್ಷಣಾ ಚಟುವಟಿಕೆಗಳ ಪ್ರಗತಿ ಹಾಗೂ ಸಾಧನೆಯನ್ನು ಮರುಪರಿಶೀಲಿಸಲು ಚೈಲ್ಡ್‌ಲೈನ್ ಸೇವೆಗಳು, ಎಸ್‌ಎಎ, ಮಕ್ಕಳ ಪಾಲನಾ ಸಂಸ್ಥೆಗಳು ಮೇಲ್ವಿಚಾರಕರು, ಎನ್‌ಜಿಒಗಳು ಹಾಗೂ ಸಾರ್ವಜನಿಕರು ಒಳಗೊಂಡಂತೆ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಭಾಗೀದಾರರೊಂದಿಗೆ ತ್ರೈಮಾಸಿಕ ಸಭೆಯನ್ನು ಆಯೋಜಿಸುವುದು;

(xix) ಇತರೆ ಜಿಲ್ಲೆಗಳ ಎಸ್‌ಸಿಪಿಎಸ್, ಎಸ್‌ಎಆರ್‌ಎ ಹಾಗೂ ಡಿಸಿಪಿಯುಗಳೊಂದಿಗೆ ಸಂಪರ್ಕ ಸ್ಥಾಪಿಸುವುದು;

(xx) ಡಿಸಿಪಿಸಿಗೆ ಸೆಕ್ರೆಟೇರಿಯಲ್ ಬೆಂಬಲವನ್ನು ಒದಗಿಸುವುದು;

(xxi) ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕ ಪೋಷಣೆ ಹಾಗೂ ಸಾಂಸ್ಥಿಕೇತರ ಪೋಷಣೆಯಡಿ ಇರುವಂತಹ ಎಲ್ಲಾ ಮಕ್ಕಳ ಡಾಟಾಬೇಸ್ ಅನ್ನು ನಿರ್ವಹಿಸುವುದು. ಈ ದತ್ತಾಂಶ ನಿರ್ವಹಣಾ ವ್ಯವಸ್ಥೆಯನ್ನು ಅಂತಿಮವಾಗಿ, ರಾಷ್ಟ್ರದಲ್ಲಿ **'ಟ್ರ್ಯಾಕ್‌ಚೈಲ್ಡ್'** ಎಂಬ ಹೆಸರಿನ, ಪೋಷಣೆಯಡಿ ಇರುವ ಹಾಗೂ ಪೋಷಣೆಯ ಅಗತ್ಯವಿರುವಂತಹ ವಿಸ್ತೃತ ಹಾಗೂ ಸಮಗ್ರವಾದ ಮಕ್ಕಳ ಲೈವ್ ಡಾಟಾಬೇಸ್‌ನಲ್ಲಿ ಅಪ್‌ಲೋಡ್ ಮಾಡುವುದು.

## 2.2 ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು) ರಚನೆ




***ಗಮನಿಸಿ:***

*(i)* ಸಂಸ್ಥೆಗಳಲ್ಲಿರುವ ಕೌನ್ಸಿಲರ್‌ಗಳ ಮೇಲ್ವಿಚಾರಣೆಗೆ ಡಿಸಿಪಿಯುದಲ್ಲಿರುವ ಕೌನ್ಸಿಲರ್ ಜವಾಬ್ದಾರರಾಗಿರುತ್ತಾರೆ, ಜೊತೆಗೆ ಡಿಸಿಪಿಯುದೊಂದಿಗೆ ಸಂಪರ್ಕಕ್ಕೆ ಬರುವ ಮಕ್ಕಳು ಹಾಗೂ ಕುಟುಂಬಗಳಿಗೆ ಕೌನ್ಸಿಲಿಂಗ್ ಬೆಂಬಲವನ್ನೂ ಒದಗಿಸುವುದು ಅವರ ಜವಾಬ್ದಾರಿಯಾಗಿರುತ್ತದೆ.

*(ii)* ಎಲ್ಲಾ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುವುದು.

*(iii)* ಪಿಎಬಿ ಅನುಮೋದನೆಯೊಂದಿಗೆ, ರಾಜ್ಯದ ಜನಸಂಖ್ಯೆ ಹಾಗೂ ಭೌಗೋಳಿಕ ವ್ಯಾಪ್ತಿಯನ್ನು ಆಧರಿಸಿ ಸಿಬ್ಬಂದಿಗಳಿಗೆ ಅನುಕೂಲವನ್ನು ಒದಗಿಸಲು ಯೋಜನೆಯಲ್ಲಿ ಅವಕಾಶವಿದೆ.

*(iv)* ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪಾತ್ರಗಳು ಹಾಗೂ ಜವಾಬ್ದಾರಿಗಳೊಂದಿಗೆ ಡಿಸಿಪಿಯು ಸ್ಥಾಪಿಸಲು ಅಗತ್ಯವುಳ್ಳ ಹಣಕಾಸಿನ ಬೆಂಬಲವನ್ನು ಒದಗಿಸುವ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

# ಅಧ್ಯಾಯ 4: ರಾಜ್ಯ–ಮಟ್ಟದ ಸೇವಾ ವಿತರಣಾ ರಚನೆಗಳು (ವ್ಯವಸ್ಥೆಗಳು)

## 1. ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್)

ಯೋಜನೆಯ ಅನುಷ್ಠಾನಕ್ಕಾಗಿ ಐಸಿಪಿಎಸ್ ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿಯೂ ಮೂಲಭೂತ ಘಟಕವಾಗಿ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯನ್ನು ಸ್ಥಾಪಿಸಿ ತನ್ಮೂಲಕ ಅನುಷ್ಠಾನಕ್ಕೆ ತರುವುದು.

### 1.1 ರಾಜ್ಯ ಮಕ್ಕಳ ರಕ್ಷಣಾ ಸೂಸೈಟಿ(ಎಸ್‌ಸಿಪಿಎಸ್)ಯ ಕಾರ್ಯನಿರ್ವಹಣೆಗಳು:

ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ ನಿರ್ಧಿಷ್ಟ ಕಾರ್ಯನಿರ್ವಹಣೆಗಳಲ್ಲಿ ಈ ಕೆಳಗಿನವು ಒಳಗೊಂಡಿವೆ:

(i) ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿರುವ ಮಕ್ಕಳ ರಕ್ಷಣೆಯ ಗುರಿಗಳನ್ನು ಸಾಧಿಸಲು ಹಾಗೂ ಮಕ್ಕಳ ರಕ್ಷಣೆಯ ಕಾನೂನು, ಯೋಜನೆಗಳ ಪರಿಣಾಮಕಾರಿಯಾದ ಅನುಷ್ಠಾನಕ್ಕೆ ಕೊಡುಗೆ ನೀಡುವುದು. ಈ ನಿಟ್ಟಿನಲ್ಲಿ ಎಸ್‌ಸಿಪಿಎಸ್ ರಾಷ್ಟ್ರ ಹಾಗೂ ರಾಜ್ಯದ ಆದ್ಯತೆಗಳು, ನಿಯಮಗಳು ಹಾಗೂ ಮಾರ್ಗಸೂಚಿಗಳನ್ನು ಅನುಸರಿಸುತ್ತದೆ;

(ii) ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮಟ್ಟದಲ್ಲಿ ಐಸಿಪಿಎಸ್ ಅನುಷ್ಠಾನ, ಮೇಲ್ವಿಚಾರಣೆ, ಉಸ್ತುವಾರಿ ಮತ್ತು ಇತರೆ ಎಲ್ಲಾ ಮಕ್ಕಳ ರಕ್ಷಣಾ ಯೋಜನೆ/ಕಾರ್ಯಕ್ರಮಗಳು ಹಾಗೂ ಏಜೆನ್ಸಿಗಳು/ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿ ;

(iii) ಡಿಸಿಪಿಯು ಸ್ಥಾಪನೆ, ಕಾರ್ಯಪ್ರದರ್ಶನಕ್ಕೆ ಬೆಂಬಲ ಒದಗಿಸುವುದು ಹಾಗೂ ಉಸ್ತುವಾರಿ ವಹಿಸುವುದು ಮತ್ತು ಐಸಿಪಿಎಸ್ ಮೂಲಕ ಜಿಲ್ಲೆಗಳಿಗೆ ಹಣದ ಸರಿಯಾದ ಹರಿವು ಹಾಗೂ ಬಳಕೆಯನ್ನು ಖಾತ್ರಿಪಡಿಸುವುದು;

(iv) ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000ರ ಪರಿಣಾಮಕಾರಿ ಅನುಷ್ಠಾನ, ಕಾಯ್ದೆಯಡಿ ಇರುವ ಕರಡು ನಿಯಮಗಳ ಅನುಷ್ಠಾನವನ್ನು ಖಾತ್ರಿಪಡಿಸುವುದು (ಈಗಾಗಲೇ ಮಾಡಿಲ್ಲದಿದ್ದರೆ), ಅಥವಾ ಕೇಂದ್ರದ ಮಾದರಿ ನಿಯಮಗಳನ್ನು ಅಳವಡಿಸಿಕೊಳ್ಳುವುದು;

(v) ಹಿಂದೂ ದತ್ತು ಹಾಗೂ ನಿರ್ವಹಣಾ ಕಾಯ್ದೆ (ಹೆಚ್‌ಎಎಂಎ) 1956; ಗಾರ್ಡಿಯನ್ಸ್ ಅಂಡ್ ವಾರ್ಡ್ಸ್ ಆಕ್ಟ್ (ಜಿಎಡಬ್ಲ್ಯೂಎ), 1890; ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986; ಬಾಲ್ಯವಿವಾಹ ನಿಷೇಧ ಕಾಯ್ದೆ, 2006 ಹಾಗೂ ಅನೈತಿಕ ಕಳ್ಳ ಸಾಗಣೆ ತಡೆಗಟ್ಟುವ ಕಾಯ್ದೆ, 1986; ಪ್ರೀ–ಕನ್ಸೆಪ್ಷನ್ ಅಂಡ್ ಪ್ರೀ–ನೇಟಲ್ ಡಯಾಗ್ನೊಸ್ಟಿಕ್ ಟೆಕ್ನಿಕ್ಸ್ (ಪ್ರಾಹಿಬಿಷನ್ ಆಫ್ ಸೆಕ್ಸ್ ಸೆಲೆಕ್ಷನ್) ಕಾಯ್ದೆ, 1994; ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆಯ ಆಯೋಗಗಳು, 2005 (ಸಿಪಿಸಿಆರ್ ಕಾಯ್ದೆ), ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ, 2012, ಇತ್ಯಾದಿ, ಹಾಗೂ ಕಾಲಕಾಲಕ್ಕೆ ಜಾರಿಗೆ ಬರುವ ಮಕ್ಕಳ ಹಕ್ಕುಗಳ ರಕ್ಷಣೆಯ ಮತ್ಯಾವುದೇ ಇತರೆ ಕಾಯ್ದೆಗಳನ್ನು ರಾಜ್ಯದಲ್ಲಿ ಜಾರಿಯಾಗುವ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಎಲ್ಲಾ ಕಾನೂನು ಹಾಗೂ ನೀತಿಗಳ ಪರಿಣಾಮಕಾರಿಯಾದ ಅನುಷ್ಠಾನವನ್ನು ಖಾತ್ರಿಪಡಿಸುವುದು;

(vi) ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ನಗರ ಮೂಲಭೂತ ಸೇವೆಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು, ಯುವಜನ ಸೇವೆಗಳು, ಪೊಲೀಸ್, ನ್ಯಾಯಾಂಗ, ಕಾರ್ಮಿಕ, ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ಒಳಗೊಂಡಂತೆ ಮಕ್ಕಳ ರಕ್ಷಣಾ ವಿಷಯಗಳ ಬಗ್ಗೆ ಅಂತರ್–ಕ್ಷೇತ್ರೀಯ ಸಂಪರ್ಕಜಾಲಗಳನ್ನು ನಿರ್ಮಿಸಲು ಎಲ್ಲಾ ಸರ್ಕಾರಿ ಇಲಾಖೆಗಳೊಂದಿಗೆ ನೆಟ್‌ವರ್ಕ್ ಹಾಗೂ ಸಂಯೋಜನೆ ಹೊಂದುವುದು;

(vii) ಮಕ್ಕಳ ಹಕ್ಕುಗಳು ಹಾಗೂ ರಕ್ಷಣೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಹಾಗೂ ನಾಗರಿಕ ಸಂಘ ಸಂಸ್ಥೆಗಳೊಂದಿಗೆ ನೆಟ್‌ವರ್ಕ್ ಹಾಗೂ ಸಂಯೋಜನೆ ಹೊಂದುವುದು;

(viii) ಸಂಕಷ್ಟದ ಸನ್ನಿವೇಶದಲ್ಲಿರುವ ಮಕ್ಕಳ ಸಂಖ್ಯೆಯನ್ನು ಅಂದಾಜಿಸುವ ಸಲುವಾಗಿ ರಾಜ್ಯಮಟ್ಟದಲ್ಲಿ ಅಗತ್ಯ ಆಧಾರಿತ ಸಂಶೋಧನೆ ಹಾಗೂ ದಾಖಲೆಗಳನ್ನು ಸಿದ್ಧಪಡಿಸುವ ಚಟುವಟಿಕೆಗಳನ್ನು ಕೈಗೊಳ್ಳುವುದು ಹಾಗೂ ಪ್ರವೃತ್ತಿಗಳು ಹಾಗೂ ಮಾದರಿಗಳ ಉಸ್ತುವಾರಿವಹಿಸಲು ರಾಜ್ಯ ನಿರ್ಧಿಷ್ಟ ಡಾಟಾಬೇಸ್‌ಗಳನ್ನು ಸೃಷ್ಟಿಸುವುದು;

(ix) ಮಕ್ಕಳ ರಕ್ಷಣಾ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ (ಸರ್ಕಾರಿ ಹಾಗೂ ಸರ್ಕಾರೇತರ) ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ;

(x) ಎಂಡಬ್ಲ್ಯೂಸಿಡಿಗೆ ಕಾರ್ಯಕ್ರಮ ಅನುಷ್ಠಾನ ಹಾಗೂ ಹಣ ಬಳಕೆಗೆ ಸಂಬಂಧಿಸಿದ ತ್ರೈಮಾಸಿಕ ಪ್ರಗತಿ ವರದಿಯನ್ನು ಒದಗಿಸುವುದು;

(xi) ಇತರೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಎಂಡಬ್ಲ್ಯೂಸಿಡಿ ಹಾಗೂ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗಳೊಂದಿಗೆ ಸಂಪರ್ಕವನ್ನು ಸ್ಥಾಪಿಸುವುದು;

(xii) ರಾಜ್ಯ ಮಕ್ಕಳ ರಕ್ಷಣಾ ಸಮಿತಿ (ಎಸ್‌ಸಿಪಿಸಿ)ಗೆ ಸೆಕ್ರೆಟ್ರಿಯೇಟ್ ಬೆಂಬಲ ಒದಗಿಸುವುದು (ಎಸ್‌ಸಿಪಿಸಿ);

(xiii) ಸಾಂಸ್ಥಿಕ ಪೋಷಣೆ ಹಾಗೂ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಯಡಿ ಇರುವ ಎಲ್ಲಾ ಮಕ್ಕಳ ರಾಜ್ಯಮಟ್ಟದ ಡಾಟಾಬೇಸ್ ಅನ್ನು ನಿರ್ವಹಿಸುವುದು ಹಾಗೂ ಅದನ್ನು ತ್ರೈಮಾಸಿಕ ಅವಧಿಯ ಆಧಾರದ ಮೇಲೆ ಉನ್ನತೀಕರಿಸುವುದು;

ಈ ಯೋಜನೆಯಡಿ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗಳನ್ನು ಅವುಗಳ ಪಾತ್ರಗಳು ಹಾಗೂ ಜವಾಬ್ದಾರಿಗಳೊಂದಿಗೆ ಸ್ಥಾಪಿಸಲು ಹಣಕಾಸಿನ ನೆರವನ್ನು ಒದಗಿಸುವುದಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

## 2. ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ (ಎಸ್‌ಎಆರ್‌ಎ (SARA))

2.1 ಸಿಎಆರ್‌ಎಗೆ ರಾಷ್ಟ್ರದೊಳಗೆ ದತ್ತು ಸ್ವೀಕರಿಸುವ ಹಾಗೂ ಅಂತರ್–ರಾಷ್ಟ್ರ ದತ್ತು ಪ್ರಕ್ರಿಯೆಗೆ ಪ್ರೋತ್ಸಾಹ ನೀಡುವ ಸಲುವಾಗಿ ಐಸಿಪಿಎಸ್, ಎಸ್‌ಸಿಪಿಎಸ್‌ನಡಿ ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿಯೂ, ದತ್ತುಗೆ ಸಂಬಂಧಪಟ್ಟ ಕೆಲಸಗಳ ಸಂಯೋಜನೆ, ಉಸ್ತುವಾರಿ ಹಾಗೂ ಅಭಿವೃದ್ಧಿಗಾಗಿ ಮತ್ತು ರಾಜ್ಯ ದತ್ತು ಸ್ವೀಕಾರ ಸಲಹಾ ಸಮಿತಿಯ (ಎಸ್‌ಎಎಸಿ) ಆಡಳಿತಾತ್ಮಕ ಹಾಗೂ ಸೆಕ್ರೆಟೇರಿಯಲ್ ಸಹಾಯಕ್ಕಾಗಿ ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ (ಎಸ್‌ಎಆರ್‌ಎ) ಯನ್ನು ಸ್ಥಾಪಿಸುವುದು. (**SARA-State Adoption Resource Agency**))

2.2 ರಾಷ್ಟ್ರದೊಳಗೆ ಹಾಗೂ ಅಂತರ್–ರಾಷ್ಟ್ರೀಯ ದತ್ತು ಪ್ರಕ್ರಿಯೆ, ಫಾಸ್ಟರ್ ಕೇರ್, ಪ್ರಾಯೋಜಕತ್ವದ ಮೂಲಕ ಎಲ್ಲಾ ಮಕ್ಕಳ ಪುನರ್ವಸತಿ ಹಾಗೂ ಸಾಮಾಜಿಕ ಮರುಏಕೀಕರಣದ (ಪುನರ್‌ಸಂಯೋಜನೆ) ಪ್ರಕ್ರಿಯೆಗಳನ್ನು ಕೈಗೊಳ್ಳಲು ಮಕ್ಕಳ ಕಲ್ಯಾಣ ಸಮಿತಿಗಳಿಗೆ ತಾಂತ್ರಿಕ ಬೆಂಬಲ ಒದಗಿಸುವುದು ಹಾಗೂ ಜಿಲ್ಲಾ ಹಂತಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು) ದೊಂದಿಗೆ ಎಸ್‌ಎಆರ್‌ಎ ಸಂಪರ್ಕ ಹೊಂದಿರುತ್ತದೆ. ಎಸ್‌ಎಆರ್‌ಎ ಯ ನಿರ್ಧಿಷ್ಟವಾದ ಪಾತ್ರ ಹಾಗೂ ಜವಾಬ್ದಾರಿಗಳು ಈ ಕೆಳಗಿನಂತಿವೆ:

(i) ರಾಜ್ಯದಲ್ಲಿ ದತ್ತು ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಸಂಯೋಜನೆ, ಉಸ್ತುವಾರಿ ಹಾಗೂ ಅಭಿವೃದ್ಧಿಪಡಿಸುವಲ್ಲಿ ರಾಜ್ಯ ಮಟ್ಟದ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುವುದು;

(ii) ವಿಶೇಷ ದತ್ತು ಏಜೆನ್ಸಿ (ಎಸ್‌ಎಎ (SAA)) ಗಳನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡುವುದು, ಎಸ್‌ಎಎ ಗಳಿಗೆ ಕಾನೂನಿನ ಮಾನ್ಯತೆಯನ್ನು ಲಭ್ಯತೆಯನ್ನು ಒದಗಿಸುವುದು ಹಾಗೂ ಇಂತಹ ಏಜೆನ್ಸಿಗಳ ವಿಸ್ತಾರವಾದ ಪಟ್ಟಿಯನ್ನು ನಿರ್ವಹಿಸುವುದು;

(iii) ಮಕ್ಕಳ ಎಲ್ಲಾ ದತ್ತು/ಖಾಯಂ ವರ್ಗಾವಣೆಗಳನ್ನು ಭಾರತ ಸರ್ಕಾರದ ಕಾನೂನುಗಳು ಮತ್ತು ಸರ್ವೋಚ್ಛ ನ್ಯಾಯಾಲಯದ ಮಾರ್ಗಸೂಚಿಗಳ ಪ್ರಕಾರ ಆಗುವುದನ್ನು ಖಾತ್ರಿಪಡಿಸುವುದು;

(iv) ಸಿಎಆರ್‌ಎ (CARA) ಸಂಯೋಜನೆಯೊಂದಿಗೆ ರಾಷ್ಟ್ರದೊಳಗಿನ ದತ್ತುಗಳನ್ನು ಪ್ರೋತ್ಸಾಹಿಸುವುದು ಹಾಗೂ ಅಂತರ್–ರಾಷ್ಟ್ರ ದತ್ತುಗಳನ್ನು ನಿಯಂತ್ರಿಸುವುದು;

(v) ಮಕ್ಕಳ ನಿಗಾ ವ್ಯವಸ್ಥೆಯ ಭಾಗವಾಗಿ ಡಿಸಿಪಿಯು ನೆರವಿನೊಂದಿಗೆ ದತ್ತು ಸ್ವೀಕರಿಸಬಹುದಾದ ಮಕ್ಕಳ ಕೇಂದ್ರೀಕೃತ ಅಂತರ್ಜಾಲ ಆಧಾರಿತ ಡಾಟಾಬೇಸ್ ನಿರ್ವಹಣೆ;

(vi) ಡಿಸಿಪಿಯು ನೆರವಿನೊಂದಿಗೆ ದತ್ತು ಪಡೆಯುವ ನಿರೀಕ್ಷಿತ ಪೋಷಕರ ಕೇಂದ್ರೀಕೃತ ಅಂತರ್ಜಾಲ ಆಧಾರಿತ ಡಾಟಾಬೇಸ್ ನಿರ್ವಹಣೆ;

(vii) ರಾಜ್ಯದೊಳಗೆ ಎಸ್‌ಎಎಗಳ ಕೆಲಸದ ಮೇಲ್ವಿಚಾರಣೆ ಹಾಗೂ ಅವುಗಳ ನಡುವೆ ಸಂಯೋಜನೆಯನ್ನು ಖಾತ್ರಿಪಡಿಸುವುದು;

(viii) ಎಲ್ಲಾ ನಿರೀಕ್ಷಿತ ದತ್ತು ಪೋಷಕರು (ಪಿಎಪಿ (PAPs)) ಗಳು ಎಸ್‌ಎಎ/ಎಸ್‌ಎಆರ್‌ಎದಲ್ಲಿ ನೊಂದಣಿ ಯಾಗುವುದನ್ನು ಖಾತ್ರಿಪಡಿಸುವುದು; (PAPs- **Prospective Adoptive Parents)**

(ix) ಸಿಆರ್‌ಎಗೆ ಪ್ರತಿ ತಿಂಗಳು ಸಮಗ್ರ ದತ್ತು ದತ್ತಾಂಶವನ್ನು ಒದಗಿಸುವುದು;

(x) ಎಲ್ಲಾ ಏಜೆನ್ಸಿಗಳು ಹಾಗೂ ಒಕ್ಕೂಟ ವ್ಯವಸ್ಥೆಗಳಿಗೆ ಅರಿವು ಮೂಡಿಸುವುದನ್ನು ಖಾತ್ರಿಪಡಿಸುವುದು;

(xi) ದತ್ತು ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿರುವವರ ಸಾಮರ್ಥ್ಯವನ್ನು ವೃದ್ಧಿಸುವುದು;


(xii) ಪರವಾನಗಿ ಇಲ್ಲದಿರುವಂತಹ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅಥವಾ ಪರವಾನಗಿ ಇರುವಂತಹ/ ಗುರುತಿಸಿಕೊಂಡಿರುವಂತಹ ದತ್ತು ಏಜೆನ್ಸಿಗಳಲ್ಲಿ ಯಾವುದಾದರೂ ದುಷ್ಕೃತ್ಯಗಳುಂಟಾದಾಗ ಅಗತ್ಯ ಶಿಕ್ಷಾರ್ಹ ಕ್ರಮವನ್ನು ಕೈಗೊಳ್ಳುವುದು;

(xiii) ರಾಜ್ಯದಲ್ಲಿ ದತ್ತು ಪ್ರಕ್ರಿಯೆಗಳಿಗೆ ಸಂಬಂಧಪಟ್ಟಂತೆ ವಕಾಲತ್ತು ವಹಿಸುವುದು ಹಾಗೂ ಅರಿವು ಮೂಡಿಸುವುದು;

(xiv) ಐಇಸಿ (ಮಾಹಿತಿ, ಶಿಕ್ಷಣ ಮತ್ತು ಸಂವಹನ) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಹಂಚುವುದು.

ಸಿಬ್ಬಂದಿಗಳ ಪಾತ್ರಗಳ ವಿವರಗಳೊಂದಿಗೆ ಎಸ್‌ಎಆರ್‌ಎ ಸ್ಥಾಪಿಸಲು ಹಣಕಾಸು ಬೆಂಬಲದ ವಿವರಗಳನ್ನು ಅನುಬಂಧ-**II** ರಲ್ಲಿ ನೀಡಿದೆ.

## 3. ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ಮತ್ತು ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಯ (ಎಸ್‌ಎಆರ್‌ಎ) ಮತ್ತು ರಚನೆ




**ಗಮನಿಸಿ:**

*(i)* ಮಕ್ಕಳ ಸಂಬಂಧಿತ ಸೇವೆಗಳೊಂದಿಗೆ ವ್ಯವಹರಿಸುತ್ತಿರುವ ರಾಜ್ಯ ಕಾರ್ಯದರ್ಶಿ ಹಾಗೂ ನಿರ್ದೇಶಕರನ್ನು ಹೊರತುಪಡಿಸಿ, ಸೊಸೈಟಿಯ ಇತರೆ ಎಲ್ಲಾ ಸಿಬ್ಬಂದಿ ಸದಸ್ಯರನ್ನೂ ಸಹ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತದೆ. ಈ ಯೋಜನೆಯು ಸಿಬ್ಬಂದಿಗಳ ಸಂಖ್ಯೆಗೆ ಸಂಬಂಧಪಟ್ಟಂತೆ, ರಾಜ್ಯದ ಭೌಗೋಳಿಕ ವ್ಯಾಪ್ತಿ ಹಾಗೂ ಜನಸಂಖ್ಯೆಯ ಆಧಾರಿತ ಯೋಜನಾ ಅನುಮೋದನಾ ಮಂಡಳಿಯ ಅನುಮೋದನೆಯೊಂದಿಗೆ, ಮಾಡಬಹುದು. ಈ ಬಗ್ಗೆ ಯೋಜನಾ ಅನುಮೋದನಾ ಮಂಡಳಿಯು (ಪಿಎಬಿ) ನಿರ್ಬಂಧವನ್ನು ಹೊಂದಿರುವುದಿಲ್ಲ. (PAB- Project Approval Board)

*(ii)* ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಯು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ (ಡಿಸಿಪಿಒ) ಹಾಗೂ ರಕ್ಷಣಾ ಅಧಿಕಾರಿಯೊಂದಿಗೆ ಸಂಯೋಜಿಸುತ್ತದೆ.

*(iii)* ಕಾರ್ಯಕ್ರಮ ನಿರ್ವಾಹಕರು (ತರಬೇತಿ, ಐಇಸಿ ಮತ್ತು ವಕಾಲತ್ತು) ಇವರು, ದತ್ತು ವ್ಯವಸ್ಥೆಯಡಿ ಕೆಲಸ ನಿರ್ವಹಿಸುತ್ತಿರುವವರನ್ನೂ ಒಳಗೊಂಡಂತೆ ಸಿಬ್ಬಂದಿಗಳ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಜವಾಬ್ದಾರಿಯನ್ನು ಹೊಂದಿರುತ್ತಾರೆ.

## 4. ರಾಜ್ಯ ಯೋಜನಾ ಬೆಂಬಲ ಘಟಕ (ಎಸ್‌ಪಿಎಸ್‌ಯು) (SPSU- State Project Support Unit)

ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಐಸಿಪಿಎಸ್‌ನ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಪಡಿಸಲು ಕೇಂದ್ರೀಯ ಯೋಜನಾ ಬೆಂಬಲ ಘಟಕ (ಸಿಪಿಎಸ್‌ಯು) ಗೆ ಬೆಂಬಲ ಒದಗಿಸುವ ಸಲುವಾಗಿ, ಯೋಜನೆಯ ಅನುಷ್ಠಾನದ ಪ್ರಕಾರ ಐಸಿಪಿಎಸ್ ಅನ್ನು ಚಾಲನೆಗೊಳಿಸುವ ಪ್ರತಿಯೊಂದು ರಾಜ್ಯದಲ್ಲಿಯೂ ರಾಜ್ಯ ಯೋಜನಾ ಬೆಂಬಲ ಘಟಕ (ಎಸ್‌ಪಿಸಿಯು) ವನ್ನು ಸ್ಥಾಪಿಸಲಾಗುವುದು. ಈ ಘಟಕಗಳು ನೇರವಾಗಿ ಸಿಪಿಎಸ್‌ಯುಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಲ್ಲಿ ಮಿಷನ್ ನಿರ್ದೇಶಕರಿಗೆ ವರದಿ ಮಾಡಿಕೊಳ್ಳುತ್ತವೆ. ಕಾರ್ಯಕ್ರಮ ನಿರ್ವಾಹಕರೊಬ್ಬರ ಮುಂದಾಳತ್ವದಲ್ಲಿ ಪ್ರತಿ ಎಸ್‌ಪಿಎಸ್‌ಯು, ಆಯಾ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಐಸಿಪಿಎಸ್ ಅನುಷ್ಠಾನದೊಂದಿಗೆ ಸಂಬಂಧಪಟ್ಟ ರಾಜ್ಯ ಕಾರ್ಯದರ್ಶಿ ಹಾಗೂ ನಿರ್ದೇಶಕರೊಂದಿಗೆ ನಿಕಟವಾಗಿ ಕಾರ್ಯ ನಿರ್ವಹಿಸುವುದು. ಒಮ್ಮೆ ಸ್ಕೀಂನ ಅನುಷ್ಠಾನ ಪ್ರಕ್ರಿಯೆ ವೇಗವನ್ನು ಪಡೆದುಕೊಂಡ ನಂತರ ಈ ಘಟಕವನ್ನು ಮುಕ್ತಾಯಗೊಳಿಸಲಾಗುವುದು. ಎಂಡಬ್ಲ್ಯೂಸಿಡಿ ಈ ಘಟಕಗಳನ್ನು 2015–16 ನೇ ಸಾಲಿನೊಳಗೆ ಮುಕ್ತಾಯಗೊಳಿಸುವ ಯೋಜನೆಯನ್ನು ಹೊಂದಿದೆ. ಪ್ರತಿ ಎಸ್‌ಪಿಸಿಯು ನ ನಿರ್ಧಿಷ್ಟ ಪಾತ್ರಗಳು ಹಾಗೂ ಜವಾಬ್ದಾರಿಗಳು ಈ ಕೆಳಗಿನವನ್ನು ಒಳಗೊಂಡಿವೆ:

(i) ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಐಸಿಪಿಎಸ್ ನ ಅನುಷ್ಠಾನವನ್ನು ಆರಂಭಿಸಲು ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು;

(ii) ಎಸ್‌ಸಿಪಿಎಸ್, ಎಸ್‌ಎಆರ್‌ಎ, ಡಿಸಿಪಿಯು, ಎಸ್‌ಎಎ, ಎಸ್‌ಸಿಪಿಸಿ, ಡಿಸಿಪಿಸಿ, ಇತ್ಯಾದಿಗಳಂತಹ ಐಸಿಪಿಎಸ್‌ನಡಿ ಸೂಚಿಸಲಾದ ಮಕ್ಕಳ ರಕ್ಷಣಾ ವ್ಯವಸ್ಥೆಗಳು ಹಾಗೂ ಅವುಗಳ ಅಗತ್ಯ ರಚನೆಗಳ ಸ್ಥಾಪನೆಗೆ ಅನುಕೂಲ ಮಾಡಿಕೊಡುವುದು;

(iii) ಜಿಲ್ಲೆಗಳಲ್ಲಿ ಮಕ್ಕಳ ಪಾಲನಾ ಮತ್ತು ರಕ್ಷಣಾ ಸಂಸ್ಥೆಗಳು ಹಾಗೂ ಅವುಗಳ ಕಾರ್ಯನಿರ್ವಹಣೆಯ ಮುಖ್ಯ ಅಂಶಗಳ ಸ್ಥಿತಿಗತಿಗೆ ಸಂಬಂಧಪಟ್ಟಂತೆ ರಾಜ್ಯಮಟ್ಟದ ಮಾಹಿತಿಯ ಕ್ರಮಬದ್ಧ ಉನ್ನತೀಕರಣ, ಸಂಗ್ರಹ ಹಾಗೂ ಕ್ರೋಢೀಕರಣ;

(iv) ಡಿಸಿಪಿಯುಗಳ ನೆರವಿನೊಂದಿಗೆ ರಾಜ್ಯಮಟ್ಟದ ಮಕ್ಕಳ ನಿಗಾವಣಾ ವ್ಯವಸ್ಥೆ ಹಾಗೂ ತಪ್ಪಿಸಿಕೊಂಡಿರುವ ಮಕ್ಕಳ ವೆಬ್‌ಸೈಟ್‌ನ ಸ್ಥಾಪನೆ ಹಾಗೂ ನಿರ್ವಹಣೆಗೆ ಅನುಕೂಲ ಒದಗಿಸುವುದು;

(v) ಐಸಿಪಿಎಸ್‌ನ ಪರಿಣಾಮವನ್ನು ಅಂದಾಜಿಸಲು ಹಾಗೂ ಕೋರ್ಸ್ ತಿದ್ದುಪಡಿಗಾಗಿ ಅಗತ್ಯವಿದ್ದಾಗ ಆಯ್ದ ಜಿಲ್ಲೆಗಳಲ್ಲಿ ಬೇಸ್‌ಲೈನ್ ಸಮೀಕ್ಷೆಯನ್ನು ಕೈಗೊಳ್ಳುವುದು ಹಾಗೂ ಅನುಸರಣೆ ಮಾಡುವುದು;

(vi) ರಾಜ್ಯ ಸರ್ಕಾರ/ ಕೇಂದ್ರಾಡಳಿತ ಪ್ರದೇಶಗಳ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ತರಬೇತಿ ಹಾಗೂ ಅವರನ್ನು ಸಂವೇದನಾಶೀಲರನ್ನಾಗಿಸುವ ಪ್ರಯತ್ನವನ್ನು ಕೈಗೊಳ್ಳುವುದು;

(viii) ಐಸಿಪಿಎಸ್ ಕುರಿತು ಅರಿವು ಮೂಡಿಸುವ ಸಂಪನ್ಮೂಲಗಳ ಅಭಿವೃದ್ಧಿ ಹಾಗೂ ಪ್ರಸಾರ;

(ix) ಅತ್ಯುತ್ತಮ ಅಭ್ಯಾಸಗಳ ದಾಖಲೆ ನಿರ್ವಹಣೆ ಹಾಗೂ ಪ್ರಸಾರ;

(x) ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಾದ್ಯಂತ ಐಸಿಪಿಎಸ್ ಅನುಷ್ಠಾನದ ಉಸ್ತುವಾರಿ ಹಾಗೂ ಮೌಲ್ಯಮಾಪನ.

ಎಸ್‌ಪಿಎಸ್‌ಯುನ ಪಾತ್ರಗಳು ಹಾಗೂ ಜವಾಬ್ದಾರಿಗಳೊಂದಿಗೆ ಅವುಗಳ ಸ್ಥಾಪನೆಗೆ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ-**IV** ರಲ್ಲಿ ನೀಡಿದೆ.

# ಅಧ್ಯಾಯ 5 – ಕೇಂದ್ರ ಮಟ್ಟದ ಸೇವಾ ವಿತರಣಾ ರಚನೆಗಳು

## 1. ಕೇಂದ್ರೀಯ ದತ್ತು ಸಂಪನ್ಮೂಲ ಏಜೆನ್ಸಿ (ಪ್ರಾಧಿಕಾರ) (ಸಿಎಆರ್‌ಎ (CARA))

1.1 ಸಿಎಆರ್‌ಎ ಯನ್ನು, ಅನಾಥ, ಬಿಟ್ಟು ಹೋಗಿರುವ ಅಥವಾ ಶರಣಾಗಿರುವಂತಹ ಮಕ್ಕಳಿಗೆ ಒಳಪಟ್ಟ ಹಕ್ಕುಗಳು, ಹಿತಾಸಕ್ತಿಗಳು ಹಾಗೂ ವಿಧಾನಗಳ ವಿಷಯದಲ್ಲಿ ಅಂತರ್–ರಾಷ್ಟ್ರ ದತ್ತು ಹೇಗ್ ಸಮಾವೇಶ, 1993ರ ವಿವಿಧ ಉಪಬಂಧಗಳ ಅನುಷ್ಠಾನಕ್ಕಾಗಿ ಹಾಗೂ ದತ್ತುಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿ ಕೇಂದ್ರದ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಲು ಸ್ಥಾಪಿಸಲಾಯಿತು. ಸಿಎಆರ್‌ಎ ಯು, ಸಲಹಾ ಅಂಗವಾಗಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಚಿಂತನಾ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. (**CARA-**Central Adoption Resource Authority**)**

1.2 ಭಾರತ ಸರ್ಕಾರವು, ದೇಶದಲ್ಲಿ ಅನಾಥವಾಗಿರುವ, ಶರಣಾಗಿರುವ ಹಾಗೂ ಬಿಟ್ಟು ಹೋಗಿರುವ ಬಹು ದೊಡ್ಡ ಸಂಖ್ಯೆಯ ಮಕ್ಕಳ ದತ್ತು ಕಾರ್ಯಕ್ರಮ ಅಳವಡಿಕೆಯ ಅಂಶದ ಬಗ್ಗೆ ಕಾಳಜಿಯನ್ನು ಹೊಂದಿದೆ. ಇದೇ ಸಂದರ್ಭದಲ್ಲಿ ರಾಷ್ಟ್ರದಲ್ಲಿ ದತ್ತು (ಭಾರತೀಯ ಪ್ರಜೆಗಳು) ಸ್ವೀಕರಿಸಲು ಬಹಳ ದೊಡ್ಡ ಬೇಡಿಕೆಯಿದ್ದು, ಇದನ್ನು ಬಹುಪಾಲು ಪೂರೈಸಲಾಗಿಲ್ಲ. ಈ ತುರ್ತು ಅಗತ್ಯದ ಹಿನ್ನೆಲೆಯಲ್ಲಿ, ಸಿಎಆರ್‌ಎನ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ವಿಸ್ತರಿಸಬೇಕು ಹಾಗೂ ಐಸಿಪಿಎಸ್ ಸಹ ಈ ಪಾತ್ರವನ್ನು ನಿರ್ವಹಿಸಲು ಸಿಎಆರ್‌ಎ ಯನ್ನು ಸಮರ್ಥವಾಗಿಸಲು ಬೆಂಬಲ ನೀಡುತ್ತದೆ. ಸಿಎಆರ್‌ಎ ಯನ್ನು ಬಲಪಡಿಸಲು ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ**-III** ರಲ್ಲಿ ನೀಡಿದೆ.

## 2. ಕೇಂದ್ರ ಯೋಜನಾ ಬೆಂಬಲ ಘಟಕ (ಸಿಪಿಎಸ್‌ಯು)

2.1 ಐಸಿಪಿಎಸ್ ನ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಪಡಿಸಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಡಿ ಕೇಂದ್ರ ಯೋಜನಾ ಬೆಂಬಲ ಘಟಕವನ್ನು (ಸಿಪಿಎಸ್‌ಯು) ಸ್ಥಾಪಿಸಲಾಗುವುದು. ಸಿಪಿಎಸ್‌ಯು ದೆಹಲಿಯಲ್ಲಿ ಕೇಂದ್ರ ಸ್ಥಾನವನ್ನು ಹೊಂದಲಿದ್ದು, ಮಿಷನ್ ನಿರ್ದೇಶಕರ (ಜಂಟಿ ಕಾರ್ಯದರ್ಶಿ, ಮಕ್ಕಳ ಕಲ್ಯಾಣ ಬ್ಯೂರೊ, ಭಾರತ ಸರ್ಕಾರ) ಮುಂದಾಳತ್ವದ ಮಿಷನ್ ನಿರ್ದೇಶನಾಲಯದಂತೆ ಕಾರ್ಯನಿರ್ವಹಿಸಲಿದೆ. ಈ ಘಟಕವು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೊಂಡಿರುವ, ರಾಷ್ಟ್ರದಾದ್ಯಂತ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ವೃತ್ತಿಪರರ ಒಂದು ಸಣ್ಣ ತಂಡವನ್ನು ಒಳಗೊಂಡಿರುತ್ತದೆ.

2.2 ಸಿಪಿಎಸ್‌ಎಯುನ ನಿರ್ದಿಷ್ಟ ಪಾತ್ರಗಳು ಹಾಗೂ ಜವಾಬ್ದಾರಿಗಳು ಈ ಕೆಳಕಂಡ ಅಂಶಗಳನ್ನು ಒಳಗೊಂಡಿವೆ:

(i) ಐಸಿಪಿಎಸ್ ಅನುಷ್ಠಾನ ಹಾಗೂ ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ರಾಜ್ಯ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಲು ಅಗತ್ಯ ಅನುಕೂಲವನ್ನು ಒದಗಿಸಲು ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು;

(ii) ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಜ್ಯ ಯೋಜನಾ ಬೆಂಬಲ ಘಟಕಗಳನ್ನು (ಎಸ್‌ಪಿಎಸ್‌ಯುಗಳು) ಸ್ಥಾಪಿಸುವುದು;

(iii) ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಸಿಪಿಎಸ್‌ಗಳು, ಎಸ್‌ಎಆರ್‌ಎ ಗಳಂತಹವುಗಳು ಐಸಿಪಿಎಸ್ ಅಡಿ ಪ್ರಸ್ತಾಪಿಸಿರುವಂತೆ ಅಗತ್ಯ ರಚನೆಗಳು ಹಾಗೂ ಮಕ್ಕಳ ರಕ್ಷಣಾ ಕಾರ್ಯವಿಧಾನಗಳ ಸ್ಥಾಪನೆಗೆ ಅನುಕೂಲ ಒದಗಿಸುವುದು;

(iv) ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಪೂರಕ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳ ತರಬೇತಿ ಹಾಗೂ ಸಂವೇದನಾಶೀಲತೆಯನ್ನು ಖಾತ್ರಿಪಡಿಸುವುದು;

(v) ಐಸಿಪಿಎಸ್‌ನ ಪ್ರಾಥಮಿಕ ಅನುಷ್ಠಾನಕ್ಕಾಗಿ ಕೇಂದ್ರ ಹಾಗೂ ರಾಜ್ಯಗಳಲ್ಲಿ ತಾಂತ್ರಿಕ ಸಾಮರ್ಥ್ಯಾಭಿವೃದ್ಧಿಯನ್ನು ಖಾತ್ರಿಪಡಿಸುವುದು;

(vi) ಐಸಿಪಿಎಸ್‌ನ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅಗತ್ಯ ಸಾಂಸ್ಥಿಕ ಹಾಗೂ ನೀತಿ ಮಟ್ಟದ ಬದಲಾವಣೆಗಳನ್ನು ಕೈಗೊಳ್ಳಲು ಬೆಂಬಲ ಒದಗಿಸುವುದು;

(vii) ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಕ್ಕಳ ರಕ್ಷಣಾ ಸಂಸ್ಥೆಗಳ ಸ್ಥಿತಿಗತಿ ಹಾಗೂ ಅವುಗಳ ಮುಖ್ಯ ಅಂಶಗಳ ಕುರಿತಾದ ರಾಷ್ಟ್ರಮಟ್ಟದ ಮಾಹಿತಿಯನ್ನು ಸಂಗ್ರಹಿಸುವುದು, ಕ್ರೋಢೀಕರಿಸುವುದು ಹಾಗೂ ಕ್ರಮಬದ್ಧವಾಗಿ ಉನ್ನತೀಕರಿಸುವುದು;

(viii) ಎಸ್‌ಪಿಎಸ್‌ಯು, ಎಸ್‌ಸಿಪಿಎಸ್ ಹಾಗೂ ಎಸ್‌ಎಆರ್‌ಎಗಳ ನೆರವಿನೊಂದಿಗೆ ರಾಷ್ಟ್ರೀಯ ಮಕ್ಕಳ ನಿಗಾವಣಾ ವ್ಯವಸ್ಥೆ ಹಾಗೂ ತಪ್ಪಿಸಿಕೊಂಡಿರುವ ಮಕ್ಕಳ ವೆಬ್‌ಸೈಟ್‌ನ ಸ್ಥಾಪನೆ ಹಾಗೂ ನಿರ್ವಹಣೆ;

(ix) ಆಯ್ದ ಜಿಲ್ಲೆಗಳಲ್ಲಿ ಬೇಸ್‌ಲೈನ್ ಸಮೀಕ್ಷೆಯನ್ನು ಕೈಗೊಳ್ಳುವುದು ಹಾಗೂ ಕೋರ್ಸ್ ಕರೆಕ್ಷನ್‌ಗಾಗಿ ಐಸಿಪಿಎಸ್‌ನ ಫಲಿತಾಂಶದ ಅಂದಾಜಿಸುವಿಕೆಗಾಗಿ ಅನುಸರಣೆ ಮಾಡುವುದು, ಅಗತ್ಯವಿದ್ದಲ್ಲಿ;

(x) ಎಸ್‌ಪಿಎಸ್‌ಯುಗಳು/ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಸಮಯಕ್ಕೆ ಸರಿಯಾಗಿ ಹಣವನ್ನು ಹಂಚಿಕೆ ಮಾಡುವುದನ್ನು ಖಾತ್ರಿಪಡಿಸುವುದು;

(xi) ಐಸಿಪಿಎಸ್ ಕುರಿತಂತೆ ಅರಿವು ಮೂಡಿಸಲು ಅರಿವಿನ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಪ್ರಚಾರಗೊಳಿಸುವುದು;

(xii) ಐಸಿಪಿಎಸ್ ಕುರಿತು ಜಾರಿಯಲ್ಲಿರುವ ನೀತಿ ಅಭಿವೃದ್ಧಿಯ ಬಗ್ಗೆ ಚರ್ಚೆಯನ್ನು ಮೂಡಿಸಲು ವಿವಿಧ ಭಾಗೀದಾರರಿಗೆ ಮೇಲಿನ ಕಲಿಕೆಗಳನ್ನು ಒದಗಿಸುವುದು. ಇದರಿಂದ ಭವಿಷ್ಯದಲ್ಲಿ ರಾಷ್ಟ್ರದಾದ್ಯಂತ ವಿಸ್ತರಣೆಯಾಗುವುದು ಸಾಧ್ಯವಾಗುತ್ತದೆ;

(xiii) ರಾಷ್ಟ್ರದಾದ್ಯಂತ ಐಸಿಪಿಎಸ್‌ನ ಅನುಷ್ಠಾನದ ಉಸ್ತುವಾರಿ ಹಾಗೂ ಮೌಲ್ಯಮಾಪನ. ಸಿಪಿಎಸ್‌ಯು ಸ್ಥಾಪನೆಗಾಗಿ ಹಣಕಾಸಿನ ಬೆಂಬಲದ ಜೊತೆಗೆ ಅದರ ಪಾತ್ರಗಳು ಹಾಗೂ ಜವಾಬ್ದಾರಿಗಳ ಕುರಿತ ವಿವರಗಳನ್ನು ಅನುಬಂಧ-**IV** ರಲ್ಲಿ ನೀಡಿದೆ.

## 3. ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಐಪಿಸಿಸಿಡಿ (**NIPCCD-**National Institute of Public Cooperation and Child Development))

ಐಸಿಪಿಎಸ್, ರಾಷ್ಟ್ರದಾದ್ಯಂತ ಕೌಶಲ್ಯಭರಿತ ಮಕ್ಕಳ ರಕ್ಷಣಾ ಸಿಬ್ಬಂದಿಗಳ ವಿಶೇಷ ತಂಡವನ್ನು ಸ್ಥಾಪಿಸಲು ಪ್ರಸ್ತಾಪಿಸುತ್ತದೆ. ಜೊತೆಗೆ, ಮಕ್ಕಳ ರಕ್ಷಣೆಯ ವಿಷಯಗಳ ಮೇಲೆ ಸಾಕ್ಷಿ ಆಧಾರಿತ ಯೋಜನೆ ರೂಪಿಸುವಿಕೆ ಹಾಗೂ ಕ್ರಮವನ್ನು ಕೋರುತ್ತದೆ. ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕೌಶಲ್ಯವುಳ್ಳ ಜನರ ದತ್ತಾಂಶದ ಕೊರತೆ ಇರುವುದರಿಂದ ಈ ಯೋಜನೆಯು ಎನ್‌ಐಪಿಸಿಸಿಡಿ ಯನ್ನು ಬಲಪಡಿಸಲು ಬೆಂಬಲವನ್ನು ಒದಗಿಸುತ್ತದೆ ಹಾಗೂ ಅದನ್ನು ಐಸಿಪಿಎಸ್ ನಡಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಸಾಮರ್ಥ್ಯಗಳ ವೃದ್ಧಿ ಹಾಗೂ ಜ್ಞಾನಭಂಡಾರದ ನಿರ್ಮಾಣಕ್ಕಾಗಿ ನೋಡಲ್ ಏಜೆನ್ಸಿಯಾಗಿ ಗುರುತಿಸುತ್ತದೆ. ಒದಗಿಸಿರುವಂತಹ ಬೆಂಬಲ ಹಾಗೂ ಮಾರ್ಗಸೂಚಿಗಳ ವಿವರಗಳನ್ನು ಅನುಬಂಧ **XIII** ರಲ್ಲಿ ಒದಗಿಸಿದೆ.

# ಭಾಗ III – ಅನುಷ್ಠಾನ ಯೋಜನೆ, ಸಹಭಾಗಿತ್ವ, ಹಣಕಾಸು ಮಾದರಿ, ಫಲಿತಾಂಶ ಹಾಗೂ ಫಲಿತಗಳ ಸೂಚಕಗಳು

# ಅಧ್ಯಾಯ 6 – ಅನುಷ್ಠಾನ ಯೋಜನೆ ಮತ್ತು ಸಹಭಾಗಿತ್ವ

ಕಲ್ಯಾಣ ವಿಭಾಗ (Welfare Bureau) ದ ಜವಾಬ್ದಾರಿಗಳಲ್ಲಿ ಇವುಗಳು ಒಳಗೊಂಡಿವೆ: ಮಕ್ಕಳ ಕಾನೂನುಗಳು ಹಾಗೂ ಕಾರ್ಯನೀತಿಗಳನ್ನು ರೂಪಿಸುವುದು; ಮಕ್ಕಳ ಕಾರ್ಯನೀತಿಗಳು, ಕಾರ್ಯಕ್ರಮಗಳು ಹಾಗೂ ಸೇವೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಕಾಲತ್ತು ವಹಿಸುವುದು; ಮಕ್ಕಳಿಗೆ ಸಂಬಂಧಪಟ್ಟ ವಿವಿಧ ಅಂತರರಾಷ್ಟ್ರೀಯ ನಿಯಮಗಳು ಹಾಗೂ ಮಾನದಂಡಗಳಂತೆ ಅನುಷ್ಠಾನವನ್ನು ಖಾತ್ರಿಪಡಿಸುವುದು; ಹಾಗೂ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ವಿವಿಧ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಸರ್ಕಾರವನ್ನು ಪ್ರತಿನಿಧಿಸುವುದು. ಐಸಿಪಿಎಸ್ ನಂತಹ ವಿಸ್ತೃತ ಹಾಗೂ ದೊಡ್ಡ ಯೋಜನೆಯ ಅನುಷ್ಠಾನಕ್ಕೆ, ಈ ಬೃಹತ್ ಕಾರ್ಯದ ಯಶಸ್ವಿ ಹಾಗೂ ವೇಗವಾದ ಅನುಷ್ಠಾನವನ್ನು ಖಾತ್ರಿಪಡಿಸಲು, ರಾಜ್ಯ ಸರ್ಕಾರಗಳು ಹಾಗೂ ಇತರೆ ಭಾಗೀದಾರರೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುವ ಪೂರ್ಣಪ್ರಮಾಣಿತ ಸಮರ್ಪಿತ ಹಾಗೂ ವೃತ್ತಿಪರವಾಗಿ ಸುಸಜ್ಜಿತ ತಂಡದ ಅಗತ್ಯವಿದೆ.

1.2 ಈ ಯೋಜನೆಯ ಪರಿಕಲ್ಪನೆಯ ಪ್ರಕಾರ ಯೋಜನೆಯ ಪರಿಣಾಮಕಾರಿ ಅನುಷ್ಠಾನವನ್ನು ಪರಿಪೂರ್ಣವಾಗಿ ಕೈಗೊಳ್ಳಲಾಗುತ್ತಿದೆ. ಸಚಿವಾಲಯದ ಮಟ್ಟದಲ್ಲಿ ಸ್ಥಾಪಿಸಿರುವಂತಹ ಕೇಂದ್ರ ಯೋಜನಾ ಬೆಂಬಲ ಘಟಕವು (ಸಿಪಿಎಸ್‌ಯು), ಎಲ್ಲಾ ರಾಜ್ಯಗಳಲ್ಲಿಯೂ ರಾಜ್ಯ ಯೋಜನಾ ಬೆಂಬಲ ಘಟಕಗಳ (ಎಸ್‌ಪಿಎಸ್‌ಯು ಗಳು) ನೆರವಿನೊಂದಿಗೆ ಅನುಷ್ಠಾನದ ಪ್ರಕ್ರಿಯೆ ಮುಂದಾಳತ್ವವನ್ನು ವಹಿಸಿದೆ. ಎಸ್‌ಪಿಎಸ್‌ಯು ಗಳು ಸಿಪಿಎಸ್‌ಯು ನ ಒಟ್ಟಾರೆ ಮೇಲ್ವಿಚಾರಣೆ ಹಾಗೂ ನಿರ್ದೇಶನದಡಿ ಕಾರ್ಯನಿರ್ವಹಿಸುತ್ತಿದೆ. ಪ್ರತಿ ರಾಜ್ಯದಲ್ಲಿಯೂ ಈ ಯೋಜನೆಯ ಸರಿಯಾದ ಅನುಷ್ಠಾನವಾಗುವವರೆಗೂ ಎಸ್‌ಪಿಎಸ್‌ಯು ಗಳು ಕಾರ್ಯನಿರ್ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಎಸ್‌ಪಿಎಸ್‌ಯು ಗಳನ್ನು XII ಯೋಜನಾ ಅವಧಿಯಲ್ಲಿ ಮುಕ್ತಾಯಗೊಳಿಸಲಾಗುವುದು.

## 2. ಸಹಭಾಗಿತ್ವ

2.1 ಮಕ್ಕಳ ರಕ್ಷಣೆಯ ವಿಷಯ ಬಹಳ ಕ್ಲಿಷ್ಟಕರವಾದ ವಿಷಯವಾಗಿದ್ದು, ಸಮಗ್ರ ಹಾಗೂ ಬಹುಮುಖಿ ದೃಷ್ಟಿಕೋನದಿಂದ ನೋಡುವ ಅಗತ್ಯವಿದೆ. ಮಕ್ಕಳಿಗೆ ಆರೋಗ್ಯ, ಪೌಷ್ಠಿಕತೆ, ಪೋಷಣೆ, ರಕ್ಷಣೆ, ಅಭಿವೃದ್ಧಿ, ಶಿಕ್ಷಣ, ಪ್ರೀತಿ, ಮಮತೆ ಹಾಗೂ ಮನರಂಜನೆಗಳಂತಹವು ಬಹು ಅಗತ್ಯಗಳಿರುತ್ತವೆ. ಹೆಚ್‌ಐವಿ/ಏಡ್ಸ್‌ಪೀಡಿತ ಮಕ್ಕಳು ಅಥವಾ ವಿಶೇಷಚೇತನರಂತಹ ಕೆಲವು ಮಕ್ಕಳಿಗೆ ಕೆಲವು ವಿಶೇಷ ಅಗತ್ಯಳಿರುತ್ತವೆ. ಇಂತಹ ಮಕ್ಕಳಲ್ಲದೆ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಪೊಲೀಸ್, ನ್ಯಾಯಾಂಗ, ಪಂಚಾಯಿತಿ ರಾಜ್ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಸ್ಥಳೀಯ ಆಡಳಿತದಂತಹ ವಿವಿಧ ಇಲಾಖೆಗಳ ಮಧ್ಯಸ್ಥಿಕೆಗಳ ಅಗತ್ಯತೆಗಳಿಗನುಗುಣವಾಗಿ ಹೆಚ್ಚುವರಿ ಅಗತ್ಯಗಳಿರುತ್ತವೆ.

2.2 ಕ್ರೀಡಾ ಸೌಲಭ್ಯಗಳ ಬಳಕೆಗಾಗಿ ಭಾರತೀಯ ಕ್ರೀಡಾ ಪ್ರಾಧಿಕಾರದೊಂದಿಗೆ, ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದೊಂದಿಗೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸಹಭಾಗಿತ್ವವನ್ನು ಖಾತ್ರಿಪಡಿಸಬೇಕು ಹಾಗೂ ಉಚಿತ ಕಾನೂನು

ನೆರವನ್ನು ಖಾತ್ರಿಪಡಿಸಲು ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಿಗಳೊಂದಿಗೆ ಸಂಪರ್ಕಜಾಲಗಳನ್ನು ಅಭಿವೃದ್ಧಿಪಡಿಸುವುದು, ಮಕ್ಕಳಿಗಾಗಿ ಸಿದ್ಧಪಡಿಸಿರುವ **ವೈಯಕ್ತಿಕ ಪೋಷಣಾ ಯೋಜನೆ** ಪ್ರಕಾರ, ಸಿಡಬ್ಲ್ಯೂಸಿಗಳು ಹಾಗೂ ಜೆಜೆಬಿಗಳ ಸಮಾಲೋಚನೆಯೊಂದಿಗೆ ಡಿಸಿಪಿಯು ಉಚಿತ ವಸತಿಸಹಿತ ವೃತ್ತಿಪರ ತರಬೇತಿಯನ್ನು ಒದಗಿಸಲು ಗ್ರಾಮೀಣಾಭಿವೃದ್ಧಿ ಸಚಿವಾಲಯದಡಿ (MoRD) ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್‌ಆರ್‌ಎಲ್‌ಎಂ–NRLM) ಅಡಿ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯನ್ನು ಬಳಸಿಕೊಳ್ಳುವ ಸಾಧ್ಯತೆಯನ್ನೂ ಸಹ ಪರಿಶೋಧಿಸಿದೆ. ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ (ಎಂಎಲ್‌ಒಇ– MLoE) ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ (ಎಂಒಹೆಚ್‌ಆರ್‌ಡಿ– MoHRD) ಅನುಷ್ಠಾನಗೊಳಿಸುತ್ತಿರುವ ಮಕ್ಕಳ ವೃತ್ತಿಪರ ತರಬೇತಿ ಯೋಜನೆಗಳಂತಹ ಇತರೆ ಯೋಜನೆಗಳೊಂದಿಗೂ ಸಂಯೋಜನೆ ಹೊಂದುವ ಸಂಭವವನ್ನೂ ಸಹ ಪರಿಶೋಧಿಸುತ್ತಿದೆ.

2.3 ಈ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಸಹಭಾಗಿತ್ವಗೊಳ್ಳುವುದು ಹಾಗೂ ಮಕ್ಕಳಿಗೆ ಅದರ ಪ್ರಾಮುಖ್ಯತೆಯ ವಿವರಗಳನ್ನು ಉದಾಹರಣೆಯೊಂದಿಗೆ ಅನುಬಂಧ **V** ರಲ್ಲಿ ನೀಡಿದೆ.

**<u>Note: For information</u>**

NRLM: National Rural Livelihood Mission
MoRD: Ministry of Rural Development
MLoE: Ministry of Labour and Employment
MoHRD: Ministry of Human Resource Development

# ಅಧ್ಯಾಯ 7 – ಹಣಕಾಸು ಮಾದರಿ ಮತ್ತು ಹಣದ ಹರಿವು

## 1. ಹಣಕಾಸು ಮಾದರಿ

ಐಸಿಪಿಎಸ್ ಒಂದು ಕೇಂದ್ರ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು, ಕೇಂದ್ರ ಸರ್ಕಾರದ ದೊಡ್ಡ ಹಣಕಾಸಿನ ನೆರವಿನೊಂದಿಗೆ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯನ್ನು ಕೇಂದ್ರ ಸರ್ಕಾರ : ರಾಜ್ಯ ಸರ್ಕಾರಗಳು/ಎನ್‌ಜಿಒ ಗಳ ನಡುವೆ ಈ ಕೆಳಕಂಡಂತೆ ವೆಚ್ಚ ಹಂಚಿಕೆ ಅನುಪಾತಗಳ ಪ್ರಕಾರ ಅನುಷ್ಠಾನಗೊಳಿಸಲಾಗುವುದು:

| **ವಿವಿಧ ಅಂಶಗಳಿಗಾಗಿ ವೆಚ್ಚ ಹಂಚಿಕೆ ಅನುಪಾತ** | | | | |
|---|---|---|---|---|
| **ಕ್ರ. ಸಂ.** | **ಅಂಶ** | **ಕೇಂದ್ರ ಸರ್ಕಾರದ ಪಾಲು** | **ರಾಜ್ಯ ಸರ್ಕಾರದ ಪಾಲು** | **ಎನ್‌ಜಿಒ ಪಾಲು** |
| ***ವಿಶೇಷ ವರ್ಗದ ರಾಜ್ಯಗಳು – ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ್, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಹಿಮಾಚಲ ಪ್ರದೇಶ, ಉತ್ತರಾಖಾಂಡ್, ಜಮ್ಮು ಮತ್ತು ಕಾಶ್ಮೀರ*** | | | | |
| 1 | ಎಲ್ಲಾ ಅಂಶಗಳನ್ನೂ ಸರ್ಕಾರ ನಿರ್ವಹಿಸುತ್ತದೆ | 90% | 10% | -- |
| 2 | ಎಲ್ಲಾ ಅಂಶಗಳನ್ನೂ ಸಹ ಎನ್‌ಜಿಒ ಭಾಗವಹಿಸುವಿಕೆಯೊಂದಿಗೆ ನಿರ್ವಹಿಸಲಾಗುತ್ತದೆ | 90% | --- | 10% |
| ***ಇತರೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ (ಮೇಲ್ಕಾಣಿಸಿದವನ್ನು ಹೊರತುಪಡಿಸಿ)*** | | | | |
| 3 | ರಾಜ್ಯ ಯೋಜನಾ ಬೆಂಬಲ ಘಟಕದ ಎಲ್ಲಾ ರಚನಾತ್ಮಕ ಅಂಶಗಳು (ಎಸ್‌ಪಿಎಸ್‌ಯು), ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್), ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ (ಎಸ್‌ಎಆರ್‌ಎ) ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (ಡಿಸಿಪಿಯು ಗಳು) | 75% | 25% | --- |
| 4 | ಜೆಜೆ ಕಾಯ್ದೆಯಡಿ, ಅಂದರೆ ಮಕ್ಕಳ ನ್ಯಾಯ ಮಂಡಳಿಗಳು (ಜೆಜೆಬಿ), ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಗಳಡಿ ಒದಗಿಸಿರುವ ನಿಯಂತ್ರಣಾ ಕೇಂದ್ರಗಳು | 35% | 65% | --- |
| 5 | ಸರ್ಕಾರ ನಡೆಸುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳು / ಎಸ್‌ಎಎ | 75% | 25% | --- |
| 6 | ಎನ್‌ಜಿಒಗಳು ನಡೆಸುತ್ತಿರವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳು /ಎಸ್‌ಎಎ | 75% | 15% | 10% |
| 7 | ಎನ್‌ಜಿಒ ಭಾಗವಹಿಸುವಿಕೆಯೊಂದಿಗೆ ನಡೆಯುತ್ತಿರುವ ಓಪನ್ ಶೆಲ್ಟರ್‌ಗಳು | 90% | --- | 10% |
| **ಕೇಂದ್ರ ಮಟ್ಟದಲ್ಲಿ ನೇರವಾಗಿ ಬೆಂಬಲವಿರುವ ಇತರೆ ಅಂಶಗಳು** | | | | |
| 8 | ಕೇಂದ್ರ ಯೋಜನಾ ಬೆಂಬಲ ಘಟಕ | 100% | --- | --- |

| | | | | |
|---|---|---|---|---|
| | (ಸಿಪಿಎಸ್‌ಯು) | | | |
| 9 | ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್‌ಎ) | 100% | --- | --- |
| 10 | ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಐಪಿಸಿಸಿಡಿ) | 100% | --- | --- |
| 11 | ಎನ್‌ಐಪಿಸಿಸಿಡಿ ಯ ನಾಲ್ಕು ಪ್ರಾದೇಶಿಕ ಕೇಂದ್ರಗಳು | 100% | --- | --- |
| 12 | 'ಮದರ್ ಎನ್‌ಜಿಓ' ಪ್ರಸ್ತುತ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ (ಸಿಐಎಫ್) | 100% | --- | --- |
| 13 | 'ಮದರ್ ಎನ್‌ಜಿಓ' ನ ನಾಲ್ಕು ಪ್ರಾದೇಶಿಕ ಕೇಂದ್ರಗಳು | 100% | --- | --- |
| 14 | 'ಮದರ್ ಎನ್‌ಜಿಓ' ನಿರ್ವಹಿಸುತ್ತಿರುವ ಚೈಲ್ಡ್‌ಲೈನ್ ಸೇವೆಗಳು | 100% | --- | --- |

* (2015–16ರಲ್ಲಿ ಎಸ್‌ಪಿಎಸ್‌ಯುಗಳನ್ನು ಮುಕ್ತಾಯಗೊಳಿಸಲಾಗುವುದು)

## 2. ಹಣದ ಹರಿವು

2.1 ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣ ಸಹಾಯವನ್ನು ಎರಡು ಕಂತುಗಳಲ್ಲಿ ನೀಡಲಾಗುವುದು.

2.2 ಎಂಡಬ್ಲ್ಯೂಸಿಡಿ ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೆ ನಿಧಿಯನ್ನು ಒದಗಿಸುತ್ತದೆ ಹಾಗೂ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶ, ಎಂಡಬ್ಲ್ಯೂಸಿಡಿ ವತಿಯಿಂದ ನಿಧಿಯೊಂದಿಗೆ ತನ್ನ ಪಾಲಿನ ನಿಧಿಯನ್ನು ನೇರವಾಗಿ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗೆ (ಎಸ್‌ಸಿಪಿಎಸ್), ಕೇಂದ್ರದಿಂದ ಹಣ ಬಂದ 15 ದಿನಗಳೊಳಗೆ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತದೆ. ಎಸ್‌ಸಿಪಿಎಸ್, ರಾಜ್ಯ ಸರ್ಕಾರದಿಂದ ಹಣ ದೊರೆತ 15 ದಿನಗಳ ಒಳಗೆ ಯೋಜನೆಯ ವಿವಿಧ ಅಂಶಗಳಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (ಡಿಸಿಪಿಯು ಗಳು) ಹಾಗೂ ಸ್ವಯಂಸೇವಾ ಸಂಸ್ಥೆಗಳಿಗೆ ಗ್ರಾಂಟ್–ಇನ್–ಏಡ್ ಅನ್ನು ಒದಗಿಸುತ್ತದೆ.

## 3. ಫ್ಲೆಕ್ಸಿ ಫಂಡ್‌ನ ಅವಕಾಶ

3.1 ಎಂಡಬ್ಲ್ಯೂಸಿಡಿ, ಯೋಜನಾ ಆಯೋಗದ ಮಾರ್ಗಸೂಚಿಗಳ ಪ್ರಕಾರ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಫ್ಲೆಕ್ಸಿ ಫಂಡ್ ಅನ್ನು ಒದಗಿಸುತ್ತದೆ.[1] ಸ್ಥಳೀಯ ಅಗತ್ಯಗಳು ಹಾಗೂ ಅವಶ್ಯಕತೆಗಳನ್ನು ಪೂರೈಸಲು, ಐಸಿಪಿಎಸ್‌ನ ಒಟ್ಟಾರೆ ಉದ್ದೇಶದ ಸುಧಾರಿತ ಕ್ಷಮತೆಗಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗಾಗಿ ಒಟ್ಟಾರೆ ಯೋಜನೆಯ ಆಯವ್ಯಯದ ಪೈಕಿ 10% ರಷ್ಟು ಮೊತ್ತವನ್ನು ಫ್ಲೆಕ್ಸಿ ಫಂಡ್ ಆಗಿ ಇರಿಸಿದೆ. ಈ ನಿಧಿಯನ್ನು ನೈಸರ್ಗಿಕ ವಿಕೋಪಗಳುಂಟಾದಾಗ ಮಕ್ಕಳ ರಕ್ಷಣೆಗಾಗಿ ಉಪಶಮನ ಹಾಗೂ ಪುನರ್ವಸತಿ ಚಟುವಟಿಕೆಗಳಿಗೆ ಬಳಸಲಾಗುವುದು.

3.2 ಈ ನಿಧಿಯನ್ನು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ಸ್ವಂತ ನಿಧಿಗೆ ಪರ್ಯಾಯವಾಗಿ ಬಳಸಬಾರದು. ಜೊತೆಗೆ ಇತರೆ ಯಾವುದೇ ವರ್ಗದಿಂದ ಇತರೆ ಯಾವುದೇ ಯೋಜನೆಯಡಿ


[1] Guidelines of the Planning Commission on Flexi fund issued on 6th January,2014.

ಚಟುವಟಿಕೆಗಳನ್ನು ಕೈಗೊಳ್ಳಲು ಬದಲಿಸಬಾರದು. ನಿರ್ಮಾಣ/ದುರಸ್ತಿ, ಅಧಿಕಾರಿಗಳ ಮನೆ, ವಾಹನ ಖರೀದಿ, ಸಾರ್ವಜನಿಕ ಪ್ರಚಾರ, ಸಿಬ್ಬಂದಿಗಳಿಗೆ ನೀಡುವ ಪ್ರೋತ್ಸಾಹಕಗಳು, ಬಹುಮಾನಗಳ, ಇತ್ಯಾದಿಯಂತಹ ಕಾರಣಗಳಿಗೆ ಬಳಸುವಂತಿಲ್ಲ.

3.3 ಫ್ಲೆಕ್ಸಿ ಫಂಡ್‌ನ ಬಿಡುಗಡೆಯನ್ನು ಪ್ರೊ–ರಾಟಾ ಆಧಾರದ ಮೇಲೆ ಮಾಡಬಹುದು ಹಾಗೂ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸಲ್ಲಿಸಿರುವ ಹಣಕಾಸಿನ ಪ್ರಸ್ತಾವನೆಯೊಳಗೆ, ಬಿಡುಗಡೆ ಮಾಡಬಹುದು. ಅಂದರೆ ಇದಕ್ಕೆ ಪ್ರತ್ಯೇಕ ಬಿಡುಗಡೆ ವ್ಯವಸ್ಥೆ ಅಥವಾ ಪ್ರತ್ಯೇಕ ಬಳಕೆ ಪ್ರಮಾಣಪತ್ರದ ಅಗತ್ಯವಿಲ್ಲ. ಈ ನಿಧಿಗೆ ಸಿಎಜಿ ಒಳಗೊಂಡಂತೆ ಅದೇ ಲೆಕ್ಕಪರಿಶೋಧನಾ ಅಗತ್ಯಗಳಿವೆ.

## 4. ಹಂಚಿಕೆ ಪ್ರಕ್ರಿಯೆ

ಯೋಜನೆಯ ಹಣದ ಹರಿವು ಈ ಕೆಳಗೆ ನೀಡಿರುವ ಚಾರ್ಟ್ ಪ್ರಕಾರ ಇರುತ್ತದೆ:



# ಅಧ್ಯಾಯ 8 – ಫಲಿತಾಂಶ ಹಾಗೂ ಫಲಿತಗಳ ಸೂಚಕಗಳು.

ಫಲಿತಾಂಶ ಸೂಚಕಗಳು (ಸೂಚಕ, ಸಮಗ್ರವಲ್ಲ)

(i) ರಾಜ್ಯ ಮಕ್ಕಳ ರಕ್ಷಣಾ ರಚನೆಗಳು, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2000 ಹಾಗೂ ಅವುಗಳ ತಿದ್ದುಪಡಿ ಕಾಯ್ದೆ, 2006, ಎಸ್‌ಸಿಪಿಎಸ್, ಎಸ್‌ಎಆರ್‌ಎ ಒಳಗೊಂಡಂತೆ ಐಸಿಪಿಎಸ್ ಗಳಡಿ ನಿಗದಿಪಡಿಸಿರುವಂತೆ ಕಾರ್ಯನಿರ್ವಹಿಸುತ್ತಿವೆ;

(ii) ಜಿಲ್ಲಾ ಮಕ್ಕಳ ರಕ್ಷಣಾ ರಚನೆಗಳು, ಮಕ್ಕಳ ನ್ಯಾಯ ಕಾಯ್ದೆ, 2000 ಹಾಗೂ ಅದರ ತಿದ್ದುಪಡಿ ಕಾಯ್ದೆ, 2006 ಹಾಗೂ ಡಿಸಿಪಿಯು, ಡಿಸಿಪಿಸಿ, ಸಿಡಬ್ಲ್ಯೂಸಿ, ಜೆಜೆಬಿ, ಎಸ್‌ಜೆಪಿಯು, ಎಸ್‌ಎಎ ಹಾಗೂ ಇತರೆ, ಒಳಗೊಂಡಂತೆ ಐಸಿಪಿಎಸ್ ನಡಿ ನಿಗಧಿಪಡಿಸಿರುವಂತೆ ಕಾರ್ಯನಿರ್ವಹಿಸುತ್ತಿವೆ;

(iii) ಪ್ರತಿ ಜಿಲ್ಲೆಯ ಮೌಲ್ಯಮಾಪನಾ ಹಾಗೂ ಸಂಪನ್ಮೂಲಗಳ ಮ್ಯಾಪ್ಪಿಂಗ್ ಅಗತ್ಯವಿದೆ;

(iv) ರಾಜ್ಯ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ಅನುಷ್ಠಾನದಲ್ಲಿದೆ;

(v) ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ಅಗತ್ಯವಿರುವ ಮಕ್ಕಳಿಗೆ ಮುಕ್ತ ವಸತಿಗಳು, ತೊಟ್ಟಿಲು, ಮಕ್ಕಳ ಸ್ವಾಗತ ಕೇಂದ್ರಗಳು, ಆಶ್ರಯ ಗೃಹಗಳು, ಮಕ್ಕಳ ಪಾಲನಾ ಸಂಸ್ಥೆಗಳು, ಪರೀವಿಕ್ಷಣಾಲಯಗಳು , ವಿಶೇಷ ಗೃಹಗಳು ಹಾಗೂ ಸುರಕ್ಷಿತ ಸ್ಥಳಗಳನ್ನು ಸ್ಥಾಪಿಸಲಾಗಿವೆ;

(vi) ಎಲ್ಲಾ ಜಿಲ್ಲೆಗಳಲ್ಲಿಯೂ **ಚೈಲ್ಡ್‌ಲೈನ್** ಸೇವೆಗಳನ್ನು ಸ್ಥಾಪಿಸಲಾಗಿವೆ;

(vii) ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳು ಹಾಗೂ ಸೇವೆ ಒದಗಿಸುವ ಸಂಸ್ಥೆಗಳಿಗಾಗಿ ಪೋಷಣೆಯ ಕನಿಷ್ಠ ಮನದಂಡಗಳನ್ನು ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಲಾಗಿದೆ;

(viii) ಎಲ್ಲಾ ಸೇವೆ ಒದಗಿಸುವ ಸಂಸ್ಥೆಗಳಿಗೂ ಪೋಷಣಾ ಶಿಷ್ಠಾಚಾರವನ್ನು ಸಿದ್ಧಪಡಿಸಿ, ಅನುಷ್ಠಾನಗೊಳಿಸಲಾಗಿದೆ;

(ix) ಸೀಮಿತ ಅವಧಿಯೊಳಗೆ ಎಲ್ಲಾ ಮಕ್ಕಳಿಗಾಗಿ **ವೈಯಕ್ತಿಕ ಪೋಷಣಾ ಯೋಜನೆ**ಗಳನ್ನು ಸಿದ್ಧಪಡಿಸಲಾಗಿದ್ದು, ಅದನ್ನು ಅನುಸರಿಸಲಾಗುತ್ತಿದೆ ಹಾಗೂ ಕ್ರಮಬದ್ಧವಾಗಿ ಉನ್ನತೀಕರಿಸಲಾಗುತ್ತಿದೆ;

(x) ಐಸಿಪಿಎಸ್ ಕಾರ್ಯಕರ್ತರಿಗೆ ಹಾಗೂ ಸೇವೆ ಒದಗಿಸುವವರಿಗೆ ಸಾಮರ್ಥ್ಯಾಭಿವೃದ್ಧಿ ಯೋಜನೆಯನ್ನು ರೂಪಿಸಿ, ಅನುಷ್ಠಾನಗೊಳಿಸಲಾಗಿದೆ;

(xi) ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಹಾಗೂ ಅದರ ತಿದ್ದುಪಡಿ ಕಾಯ್ದೆ, 2006ರಡಿ ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳನ್ನೂ ಸಹ ನೊಂದಣಿ ಮಾಡಿಸಲಾಗಿದೆ;

(xii) ಕುಟುಂಬ ಆಧಾರಿತ, ಸಾಂಸ್ಥಿಕೇತರ ಪೋಷಣಾ ಸೇವೆಗಳನ್ನು ಮುಖ್ಯವಾಹಿನಿಗೆ ತರಲಾಗಿದೆ;

(xiii) ಡಿಸಿಪಿಯುನಲ್ಲಿ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಕಾರ್ಯಕ್ರಮ ಲಭ್ಯವಿದೆ;

(xiv) ಪೋಷಣಾ ನಂತರದ (ಅನುಪಾಲನಾ ಸೇವೆ) ಸೇವೆ ಮತ್ತು ಕಾರ್ಯಕ್ರಮಗಳನ್ನು ಅಗತ್ಯವಿರುವ ಮಕ್ಕಳಿಗಾಗಿ ಡಿಸಿಪಿಯುದಲ್ಲಿ ವ್ಯವಸ್ಥೆ ಮಾಡಲಾಗಿದೆ.

(xv) ಮಕ್ಕಳ ಟ್ರ್ಯಾಕ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ, ಚಾಲನೆಗೊಳಿಸಲಾಗಿದೆ;

(xvi) ತಪ್ಪಿಸಿಕೊಂಡಿರುವ ಮಕ್ಕಳಿಗಾಗಿ ವೆಬ್‌ಸೈಟ್ ಹಾಗೂ ಮಕ್ಕಳ ರಕ್ಷಣಾ ಎಂಐಎಸ್ ಅನ್ನು ಸಿದ್ಧಪಡಿಸಿ, ಚಾಲನೆ ನೀಡಲಾಗಿದೆ;

(xvii) ಐಸಿಪಿಎಸ್ ನಲ್ಲಿ ನಿಗಾವಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ;

(xviii) ಎಲ್ಲಾ ಹಂತಗಳು ಹಾಗೂ ಸೇವೆಗಳಲ್ಲಿಯೂ ಸಮಯೋಚಿತ ಹಂಚಿಕೆ, ವಿತರಣೆ ಹಾಗೂ ಹಣ ಬಳಕೆಯಾಗುತ್ತಿದೆ;

## 2. ಪರಿಣಾಮ ಸೂಚಕಗಳು (ಸೂಚಕ, ಸಮಗ್ರವಲ್ಲ)

(i) ಅಪಾಯದಲ್ಲಿರುವ ಮಕ್ಕಳು ಹಾಗೂ ಕುಟುಂಬಗಳ ಮಾಹಿತಿ/ಜ್ಞಾನದ ವಿವರಗಳು;

(ii) ಮಕ್ಕಳು ಸಂಕಷ್ಟಕ್ಕೀಡಾಗುವ ಸಂಭವದಲ್ಲಿ ಇಳಿಕೆ;

(iii) ಉತ್ತಮ ಮಕ್ಕಳ ರಕ್ಷಣಾ ಸೇವೆಗಳು;

(iv) ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಸಂಖ್ಯೆಯಲ್ಲಿ ಇಳಿಕೆ;

(v) ಕುಟುಂಬ ಆಧಾರಿತ ಸಾಂಸ್ಥಿಕೇತರ  ಪೋಷಣಾ ಸೇವೆಗಳಲ್ಲಿರುವ ಮಕ್ಕಳ ಪ್ರಮಾಣದಲ್ಲಿ ಏರಿಕೆ;

(vi) ರಾಷ್ಟ್ರದೊಳಗಿನ ಮಕ್ಕಳ ದತ್ತು ಸ್ವೀಕರಿಸುವ ಪ್ರಮಾಣದಲ್ಲಿ ಏರಿಕೆ;

(vii) ಸಾಂಸ್ಥಿಕ ಪೋಷಣೆಯಲ್ಲಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ  ಪೋಷಣೆ;

(viii) ವಿವಿಧ ಮಕ್ಕಳ ರಕ್ಷಣಾ ಸೇವೆಗಳ ಲಭ್ಯತೆ ಹಾಗೂ ದೊರೆಯುವಿಕೆಯಲ್ಲಿ ಏರಿಕೆ;

(ix) ಉತ್ಪಾದಕ ಚಟುವಟಿಕೆಯಲ್ಲಿ ಸ್ವಯಂಪೂರ್ಣ ಹಾಗೂ ಲಾಭದಾಯಕವಾಗಿ ತೊಡಗಿರುವ ಸಾಂಸ್ಥಿಕ ಪೋಷಣೆಯಿಂದ ಹೊರಗೆ ಹೋಗುವ ಮಕ್ಕಳು/ಯುವ ಜನರ ಪ್ರಮಾಣದಲ್ಲಿ ಏರಿಕೆ.

# ಭಾಗ IV – ಸೇವೆಗಳು ಮತ್ತು ಇತರೆ ಚಟುವಟಿಕೆಗಳು

# ಅಧ್ಯಾಯ 9 – ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳು

## ಮೇಲ್ನೋಟ

ಐಸಿಪಿಎಸ್ ಜಾರಿಯಲ್ಲಿರುವ ಹಲವಾರು ಮಕ್ಕಳ ರಕ್ಷಣಾ ಕಾರ್ಯಕ್ರಮಗಳನ್ನು ಒಂದು ಸೂರಿನಡಿ ತರುತ್ತದೆ ಹಾಗೂ ಈ ಕೆಳಕಂಡ ಅಂಶಗಳ ಮೇಲೆ ಕೇಂದ್ರೀಕರಿಸುವ ಗಮನಾರ್ಹ ಹೊಸ ಮಧ್ಯಸ್ಥಿಕೆಗಳನ್ನು ಪ್ರಸ್ತಾಪಿಸುತ್ತದೆ:

(i) ಅಪಾಯದಲ್ಲಿರುವ ಮಕ್ಕಳು ಮತ್ತು ಕುಟುಂಬಗಳ ಅಗತ್ಯತೆಗಳು ಹಾಗೂ ಸೇವೆಗಳ ಮ್ಯಾಪ್ಪಿಂಗ್;

(ii) ಜಿಲ್ಲೆ ಹಾಗೂ ರಾಜ್ಯ ಮಟ್ಟಗಳಲ್ಲಿ ಮಕ್ಕಳ ರಕ್ಷಣಾ ಯೋಜನೆಗಳನ್ನು ಸಿದ್ಧಪಡಿಸುವುದು; ಯೋಜನೆಯನ್ನು ನಿಧಾನವಾಗಿ ತಾಲ್ಲೂಕು ಹಾಗೂ ಸಮುದಾಯ ಮಟ್ಟಗಳಿಗೆ ವಿಸ್ತರಿಸಲಾಗುವುದು;

(iii) ತಡೆಗಟ್ಟುವ, ಶಾಸನಬದ್ಧ, ಪೋಷಣೆ ಹಾಗೂ ಪುನರ್ವಸತಿ ಸೇವೆಗಳು ಒಳಗೊಂಡಂತೆ ಸೇವಾ ಹಂಚಿಕೆ ಕಾರ್ಯವಿಧಾನಗಳು ಹಾಗೂ ಕಾರ್ಯಕ್ರಮಗಳನ್ನು ಬಲಪಡಿಸುವುದು;

(iv) ಒದಗಿಸುತ್ತಿರುವ ಸೇವೆಗಳ ಗುಣಮಟ್ಟ ಹಾಗೂ ದೊರೆಯುವಿಕೆಯಲ್ಲಿ ಸುಧಾರಣೆ;

(v) ಸಂಕಷ್ಟಕ್ಕೀಡಾಗುವ ಸಂಭವವಿರುವ ಕುಟುಂಬಗಳು, ಸಂಬಂಧಿಕರ ಪೋಷಣೆ, ರಾಷ್ಟ್ರದೊಳಗಿನ ದತ್ತು, ಫಾಸ್ಟರ್ ಕೇರ್ ಹಾಗೂ ಅಂತರ್–ರಾಷ್ಟ್ರ ದತ್ತು ಒಳಗೊಂಡಂತೆ ಪೋಷಕರ ಪೋಷಣೆಯಿಂದ ವಂಚಿತರಾಗಿರುವ ಮಕ್ಕಳಿಗೆ ಸಾಂಸ್ಥಿಕ ಕುಟುಂಬ ಆಧಾರಿತ ಪೋಷಣಾ ಆಯ್ಕೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಬಲಪಡಿಸುವುದು;

(vi) ಸೇವೆ ಒದಗಿಸುವವರ ಸಾಮರ್ಥ್ಯ ಅಭಿವೃದ್ಧಿ;

(vii) ಜ್ಞಾನ, ಅರಿವು ಹಾಗೂ ವಕಾಲತ್ತುಗಳ ಬಲಪಡಿಸುವಿಕೆ;

(viii) ಸಾಕ್ಷಿ ಆಧಾರಿತ ಉಸ್ತುವಾರಿ ಹಾಗೂ ಮೌಲ್ಯಮಾಪನ ಹಾಗೂ ಸೇವಾ ಯೋಜನೆ ರೂಪಿಸುವಿಕೆಯ ನಿರ್ಧಾರ ಕೈಗೊಳ್ಳುವಿಕೆಗಾಗಿ ಸಮಗ್ರ, ನೇರ, ಅಂತರ್ಜಾಲ ಆಧಾರಿತ ಡಾಟಾಬೇಸ್ (ಸಂಕಷ್ಟದ ಸನ್ನಿವೇಶಗಳಲ್ಲಿರುವ ಮಕ್ಕಳು, ಪೋಷಣೆಯಲ್ಲಿರುವ ಮಕ್ಕಳು, ಸೇವೆ ಒದಗಿಸುವವರು ಹಾಗೂ ಒದಗಿಸಿದ ಸೇವೆಗಳ ಕುರಿತು) ಸ್ಥಾಪನೆ;

(ix) ಉಸ್ತುವಾರಿ ಹಾಗೂ ಮೌಲ್ಯಮಾಪನ;

(x) ಎಲ್ಲಾ ಹಂತಗಳಲ್ಲಿಯೂ ಮಕ್ಕಳ ರಕ್ಷಣೆಗಾಗಿ ಪಾಲುದಾರಿಕೆಗಳು ಹಾಗೂ ಮೈತ್ರಿಗಳ ನಿರ್ಮಾಣ, ನಿರ್ಧಿಷ್ಟವಾಗಿ ಬೇರುಮಟ್ಟದ ಸಮುದಾಯ ಹಾಗೂ ಜಿಲ್ಲಾ ಹಂತಗಳಲ್ಲಿ;

(xi) ರಾಷ್ಟ್ರ/ರಾಜ್ಯ ಮಾನವ ಹಕ್ಕುಗಳ ಆಯೋಗಗಳು ಹಾಗೂ ರಾಷ್ಟ್ರ/ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು, ಇತ್ಯಾದಿಗಳಂತಹ ಇತರೆ ಅಂಗಗಳು ಹಾಗೂ ಸಂಸ್ಥೆಗಳೊಂದಿಗಿನ ಸಂಪರ್ಕಜಾಲಗಳನ್ನು ಬಲಪಡಿಸುವುದು;

(xii) ಐಸಿಪಿಎಸ್ ನಡಿ ಒದಗಿಸಿರುವ ವಿಶೇಷ ಸೇವಾ ಹಂಚಿಕೆ ರಚನೆಗಳ ವಿವರಗಳನ್ನು ಮುಂದಿನ ಅಧ್ಯಾಯಗಳಲ್ಲಿ ಕಾಣಬಹುದು.

# ಅಧ್ಯಾಯ 10 – ಪೋಷಣೆ ಮತ್ತು ಪುನರ್ವಸತಿ ಸೇವೆಗಳು

## A. ಮದರ್ ಎನ್‌ಜಿಒ ಮೂಲಕ ತುರ್ತು ಔಟ್‌ರೀಚ್ ಸೇವೆ

1. ಇದು ಸಂಕಷ್ಟದ ಸನ್ನಿವೇಶದಲ್ಲಿ ಸಿಲುಕಿರುವ ಮಕ್ಕಳಿಗಾಗಿ ಇರುವ ತುರ್ತು ಔಟ್‌ರೀಚ್ 24/7 ದೂರವಾಣಿ ಸೇವೆಯಾಗಿದ್ದು, ತುರ್ತು ಹಾಗೂ ದೀರ್ಘಾವಧಿ ಪೋಷಣೆ ಹಾಗೂ ಪುನರ್ವಸತಿ ಸೇವೆಗಳನ್ನ ಒದಗಿಸುವ ಸಂಸ್ಥೆಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಈ ಸೇವೆಯನ್ನು ಸಂಕಷ್ಟದ ಸನ್ನಿವೇಶದಲ್ಲಿರುವ ಯಾವುದೇ ಮಗು ಅಥವಾ ಮಗುವಿನ ಪರವಾಗಿ ವಯಸ್ಕರು ಪಡೆಯಬಹುದಾಗಿದ್ದು, **ನಾಲ್ಕು ಅಂಕಿಗಳ ಉಚಿತ ದೂರವಾಣಿ ಸಂಖ್ಯೆ (1098)**. ಭಾರತ ಸರ್ಕಾರದಿಂದ 1999ರಲ್ಲಿ ಸ್ಥಾಪನೆಯಾದ ಈ ಸೇವೆಯನ್ನು ರಾಷ್ಟ್ರದಾದ್ಯಂತ 280 ನಗರಗಳಿಗೆ ವಿಸ್ತರಿಸಲಾಗಿದೆ. ದೇಶದ ಎಲ್ಲಾ ಭಾಗಗಳಲ್ಲಿಯೂ ಮಕ್ಕಳಿಗೆ ಸುರಕ್ಷಿತ ಪರಿಸರವನ್ನು ಸೃಷ್ಟಿಸುವ ಸಲುವಾಗಿ ಐಸಿಪಿಎಸ್ ನ ಈ ಸೇವೆಯನ್ನು ಎಲ್ಲಾ ಜಿಲ್ಲೆಗಳು/ನಗರಗಳಿಗೂ ವಿಸ್ತರಿಸುವಂತೆ ಪ್ರಸ್ತಾಪಿಸುತ್ತದೆ. ಇದರ ಜೊತೆಗೆ, ಈ ವಿಸ್ತರಣಾ ಪ್ರಕ್ರಿಯೆಗೆ ಅನುಕೂಲ ಒದಗಿಸುವುದರ ಜೊತೆಗೆ, ರಾಷ್ಟ್ರದಲ್ಲಿ ಚೈಲ್ಡ್‌ಲೈನ್ **(ಮಕ್ಕಳ ಸಹಾಯವಾಣಿ–1098)** ಸೇವೆಯನ್ನು ಬಲಪಡಿಸುವುದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ದಾಖಲೆ ನಿರ್ವಹಣೆ, ಸಂಶೋಧನೆ, ಅರಿವು ಮೂಡಿಸುವ ಅಭಿಯಾನಗಳ ಆಯೋಜನೆಯೂ **'ಮದರ್ ಎನ್‌ಜಿಒ'** ನ ಜವಾಬ್ದಾರಿಯಾಗಿರುತ್ತದೆ.

1.1 ಪ್ರಸ್ತುತ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ (ಸಿಐಎಫ್ (CIF)) ಚೈಲ್ಡ್‌ಲೈನ್‌ನನ್ನು ನಿರ್ವಹಿಸುತ್ತಿರುವ 'ಮದರ್ ಎನ್‌ಜಿಒ' ಆಗಿದೆ. ಇದರ ಅನುಷ್ಠಾನಕ್ಕಾಗಿ ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ ಮತ್ತ್ಯಾವುದಾದರೂ ಪ್ರತಿಷ್ಠಿತ ಎನ್‌ಜಿಒ ವನ್ನು ಸಚಿವಾಲಯ 'ಮದರ್ ಎನ್‌ಜಿಒ' ಆಗಿ ಆಯ್ಕೆ ಮಾಡಬಹುದು.

1.2 'ಮದರ್ ಎನ್‌ಜಿಒ ತನ್ನ ವಾರ್ಷಿಕ ಅನುದಾನಕ್ಕೆ ಸಂಬಂಧಪಟ್ಟ ಹಣಕಾಸಿನ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಇದರಲ್ಲಿ ಸಚಿವಾಲಯದಲ್ಲಿ ಯೋಜನೆಯ ಅನುಮೋದನೆ ಮಂಡಳಿಗೆ ಮುಂಚಿತವಾಗಿ ತನ್ನ ನಾಲ್ಕು ಪ್ರಾದೇಶಿಕ ಕೇಂದ್ರಗಳು ಹಾಗೂ ಎಲ್ಲಾ ಜಾರಿಯಲ್ಲಿರುವ ಪಾಲುದಾರ ಎನ್‌ಜಿಒಗಳೂ ಸಹ ಒಳಗೊಂಡಿರಬೇಕು. 'ಮದರ್ ಎನ್‌ಜಿಒ' ದ ಪ್ರಸ್ತಾವನೆ ತನ್ನ ಚೈಲ್ಡ್‌ಲೈನ್ ಸೇವೆಗಳ ರಾಜ್ಯಾದ್ಯಂತ ವಿಸ್ತರಣಾ ಯೋಜನೆಯನ್ನು ಒಳಗೊಂಡಿರಬೇಕು. 'ಮದರ್ ಎನ್‌ಜಿಒ', ಅಗತ್ಯವಿದ್ದಾಗ ಪಿಎಬಿ ಯ ಅನುಮೋದನೆಯೊಂದಿಗೆ, ಒದಗಿಸಿರುವ ಒಟ್ಟಾರೆ ಅನುದಾನದಲ್ಲಿ ಚೈಲ್ಡ್‌ಲೈನ್ ಸೇವೆಗಳ ಹಾಲಿ ಮಾದರಿಗಳನ್ನು ಬದಲಾಯಿಸುವ ನಮ್ಯತೆಯನ್ನು ಹೊಂದಿರಬೇಕು. ಎಂಡಬ್ಲ್ಯೂಸಿಡಿ ಪ್ರತಿ ವರ್ಷ 50% ನ ಎರಡು ಕಂತುಗಳಲ್ಲಿ ಆಯ್ಕೆಯಾಗಿರುವ 'ಎನ್‌ಜಿಒ'ಗೆ ದೊಡ್ಡ ಮೊತ್ತದ ಅನುದಾನವನ್ನು ಒದಗಿಸುತ್ತದೆ. ಈ ಅನುದಾನವನ್ನು 'ಮದರ್ ಎನ್‌ಜಿಒ', ಚೈಲ್ಡ್‌ಲೈನ್ ಸೇವೆಗಳನ್ನು ನಡೆಸುತ್ತಿರುವ ಪಾಲುದಾರ ಎನ್‌ಜಿಒಗಳಿಗೆ ಬಿಡುಗಡೆ ಮಾಡುತ್ತದೆ.


## 2. ಸಾಂಸ್ಥಿಕ ರಚನೆ

ಪ್ರಸ್ತಾಪಿಸಿರುವ 'ಮದರ್ ಎನ್‌ಜಿಒ' ಹಾಗೂ ಅದರ ಪ್ರಾದೇಶಿಕ ಕೇಂದ್ರಗಳ ಸಾಂಸ್ಥಿಕ ರಚನೆಯನ್ನು ಈ ಕೆಳಗೆ ನೀಡಿದೆ:


### 2.1 ಕೇಂದ್ರಸ್ಥಾನ – 'ಮದರ್ ಎನ್‌ಜಿಒ'

ಐಸಿಪಿಎಸ್ ನಡಿ, ಪ್ರಸ್ತುತ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ (ಸಿಐಎಫ್)ಗೆ ರಾಷ್ಟ್ರದಲ್ಲಿ ಚೈಲ್ಡ್‌ಲೈನ್ ಸೇವೆಯನ್ನು ನಿರ್ವಹಿಸುತ್ತಿರುವ ಕಾರಣದಿಂದಾಗಿ "ಮದರ್ ಎನ್‌ಜಿಒ" ಪಟ್ಟವನ್ನು ನೀಡಲಾಗಿದೆ. ಈ ಯೋಜನೆಯು, ಅಗತ್ಯದ ಪ್ರಕಾರ 'ಮದರ್ ಎನ್‌ಜಿಒ' ನ ಪ್ರಾದೇಶಿಕ ಕೇಂದ್ರಗಳಿಗೆ ಬೆಂಬಲ ಒದಗಿಸುವುದರ ಜೊತೆಗೆ ರಾಷ್ಟ್ರದಲ್ಲಿರುವ ಕೇಂದ್ರಸ್ಥಾನಕ್ಕೆ ಬೆಂಬಲ ಒದಗಿಸುವ ಮೂಲಕ ಸಾಮರ್ಥ್ಯವನ್ನು ಬಲಪಡಿಸುತ್ತದೆ.

2.2 'ಮದರ್ ಎನ್‌ಜಿಒ'ಗಾಗಿ ಪ್ರಸ್ತಾಪಿಸಲಾಗಿರುವ ಸಾಂಸ್ಥಿಕ ರಚನೆ.



## 2.3 ಮದರ್ ಎನ್‌ಜಿಒ ದ ಪ್ರಾದೇಶಿಕ ಕೇಂದ್ರದ ಪ್ರಸ್ತಾಪಿತ ಸಾಂಸ್ಥಿಕ ರಚನೆ:




## 3. ಮಾರ್ಗಸೂಚಿಗಳು

ಚೈಲ್ಡ್‌ಲೈನ್ ಸೇವೆಗಳನ್ನು ದೇಶದ ಎಲ್ಲಾ ಜಿಲ್ಲೆಗಳು/ನಗರಗಳಿಗೂ ವಿಸ್ತರಿಸುವ ಹಾಗೂ ಉಸ್ತುವಾರಿವಹಿಸುವ ಜವಾಬ್ದಾರಿಯಿರುವ 'ಮದರ್ ಎನ್‌ಜಿಒ' ಹಾಗೂ ಅದರ ಪ್ರಾದೇಶಿಕ ಕೇಂದ್ರಗಳನ್ನು ಬೆಂಬಲಿಸುವ ಮಾರ್ಗಸೂಚಿಗಳನ್ನು ಅನುಬಂಧ **VI (a)** ಹಾಗೂ **VI (a)** ರಲ್ಲಿ ನೀಡಿದೆ. ಈ ಮಾರ್ಗಸೂಚಿಗಳಲ್ಲಿ ವಿವಿಧ ಕಾರ್ಯಕರ್ತರ ಪಾತ್ರಗಳು ಹಾಗೂ ಜವಾಬ್ದಾರಿಗಳು ಹಾಗೂ ಎಂಡಬ್ಲ್ಯೂಸಿಡಿ ಇಂದ ಒದಗಿಸಲಾಗುವ ಹಣಕಾಸಿನ ಬೆಂಬಲ ಒಳಗೊಂಡಿದೆ. ಈ ಪ್ರಾದೇಶಿಕ ಕೇಂದ್ರಗಳು 'ಮದರ್ ಎನ್‌ಜಿಒ'ನ ಕೇಂದ್ರ ಕಚೇರಿಗೆ ವರದಿ ಮಾಡಿಕೊಳ್ಳುತ್ತವೆ ಹಾಗೂ ಈ ಕೆಳಕಂಡ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ಹೊಂದಿರುತ್ತದೆ:

(i) ರಾಜ್ಯಗಳಲ್ಲಿ ಪ್ರತಿ ಪ್ರದೇಶ ವ್ಯಾಪ್ತಿಯಡಿ ಬರುವ ಎಲ್ಲಾ ಜಿಲ್ಲೆಗಳಿಗೂ ಚೈಲ್ಡ್‌ಲೈನ್ ಸೇವೆಗಳ ವಿಸ್ತರಣೆ;

(ii) ಪ್ರತಿ ಪ್ರದೇಶ ವ್ಯಾಪಿಸುವ ರಾಜ್ಯಗಳಲ್ಲಿನ ಜಿಲ್ಲೆಗಳಲ್ಲಿಯೂ ಚೈಲ್ಡ್‌ಲೈನ್ ಸೇವೆಯ ಉಸ್ತುವಾರಿ ಮಾಡಿಕೊಳ್ಳುವುದು;

(iii) ಆಯಾ ಪ್ರದೇಶಗಳಲ್ಲಿ ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳ ಕುರಿತು ವಕಾಲತ್ತು, ತರಬೇತಿ ಹಾಗೂ ಸಂಶೋಧನೆಯನ್ನು ಕೈಗೊಳ್ಳುವುದು.

## 4. ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು

(i) ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳಿಗೆ ರಕ್ಷಣೆ ಹಾಗೂ ತುರ್ತು ಔಟ್‌ರೀಚ್ ಸೇವೆಗಳನ್ನು ಒದಗಿಸುವುದು ಹಾಗೂ ರಾಷ್ಟ್ರೀಯ ಉಚಿತ ದೂರವಾಣಿ ಸಂಖ್ಯೆ 1098ನ ಕರೆಗಳಿಗೆ ಪ್ರತಿಕ್ರಿಯಿಸುವುದು;

(ii) ಪೊಲೀಸ್, ಆಡಳಿತ, ಕಾರ್ಮಿಕ, ಆರೋಗ್ಯ, ರೈಲ್ವೆ ಹಾಗೂ ಇತರೆ ಪೂರಕ ಸ್ಥಳೀಯ ಇಲಾಖೆಗಳ ನೆರವಿನೊಂದಿಗೆ ರಕ್ಷಣೆಗೆ ಸಂಯೋಜನೆ ಹಾಗೂ ಇತರೆ ಔಟ್‌ರೀಚ್ ಸೇವೆಗಳನ್ನು ಒದಗಿಸುವುದು;

(iii) ರಕ್ಷಿಸಲಾಗುವ ಎಲ್ಲಾ ಮಕ್ಕಳಿಗೆ ಅವರ ಪುನರ್ವಸತಿ ಹಾಗೂ ಪುನಃಸ್ಥಾಪನೆಗಾಗಿ ಸರಿಯಾದ ದಾಖಲೆ ಪತ್ರಗಳ ನಿರ್ವಹಣೆಯನ್ನು ಖಾತ್ರಿಪಡಿಸುವುದು;

(iv) ಡಿಸಿಪಿಯು ನ ಒಟ್ಟಾರೆ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುವುದು;

(v) ಪೋಷಣೆ ಹಾಗೂ ರಕ್ಷಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಯ (ಸಿಡಬ್ಲ್ಯೂಸಿ) ಎದುರು ಹಾಜರುಪಡಿಸುವುದು;

(vi) ಮಕ್ಕಳ ದೀರ್ಘಾವಧಿ ಪುನರ್ವಸತಿಯಲ್ಲಿ, ಅಗತ್ಯವಿರುವಾಗ, ಸಿಡಬ್ಲ್ಯೂಸಿ ಗೆ ಬೆಂಬಲ ನೀಡುವುದು;

(vii) ತಪ್ಪಿಸಿಕೊಂಡಿರುವ/ಕಾಣೆಯಾದ ಮಕ್ಕಳನ್ನು ಪತ್ತೆಹಚ್ಚಲು ರಾಷ್ಟ್ರೀಯ ಸಂಪರ್ಕಜಾಲವನ್ನು ಬೆಂಬಲಿಸುವುದು;

(viii) ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ರಾಷ್ಟ್ರೀಯ ಸಮಗ್ರ ಡಾಟಾಬೇಸ್ ನ ಕ್ರೋಢೀಕರಣಕ್ಕಾಗಿ ಡಿಸಿಪಿಯು/ಎಸ್‌ಸಿಪಿಎಸ್ ಗೆ ಮಕ್ಕಳ ರಕ್ಷಣೆ ಹಾಗೂ ಪುನರ್ವಸತಿಗೆ ಸಂಬಂಧಪಟ್ಟ ದತ್ತಾಂಶವನ್ನು ಒದಗಿಸುವುದು;

(ix) ಮಕ್ಕಳ ಸಹಾಯವಾಣಿ–1098 ಸಂಖ್ಯೆ ಬಗ್ಗೆ ಅರಿವು ಮೂಡಿಸುವುದು ಹಾಗೂ ಈ ಸೇವೆ ಎಲ್ಲರಿಗೂ ಲಭ್ಯವಾಗುವಂತೆ ಖಾತ್ರಿಪಡಿಸುವುದು.

(x) ಮಕ್ಕಳ ಸಹಾಯವಾಣಿಗೆ ಸಂಬಂಧಪಟ್ಟ ವಿಷಯಗಳ ಕುರಿತು ಸಂಶೋಧನೆ, ದಾಖಲೆಗಳ ನಿರ್ವಹಣೆ, ಅರಿವು ಮೂಡಿಸುವುದು ಹಾಗೂ ವಕಾಲತ್ತು ವಹಿಸುವುದು;

(xi) ರಕ್ಷಿಸಲ್ಪಟ್ಟಂತಹ ಮಕ್ಕಳ ತತ್‌ಕ್ಷಣದ ಅಗತ್ಯಗಳ ಈಡೇರಿಕೆಗಾಗಿ ಇತರೆ ಮಕ್ಕಳ ರಕ್ಷಣಾ ಸೇವೆಗಳು, ಸಮುದಾಯ ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ಸಂಪರ್ಕ ಸ್ಥಾಪಿಸುವುದು;

## 5. ಚೈಲ್ಡ್‌ಲೈನ್‌ನ ರಚನೆ ಹಾಗೂ ಕಾರ್ಯನಿರ್ವಹಣೆಗಳ ಕುರಿತು ಸಲಹೆ

### 5.1 ನಗರ ಮಾದರಿ

ನಗರ ಮಟ್ಟದಲ್ಲಿ ಚೈಲ್ಡ್‌ಲೈನ್ ಕಾರ್ಯಕ್ರಮವು ನಗರ ಮಟ್ಟದ ಸಲಹಾ ಮಂಡಳಿ (ಸಿಎಬಿ), ಒಂದು ನೋಡಲ್ ಸಂಸ್ಥೆ ಹಾಗೂ ಒಂದು ಸಂಯೋಜನಾ ಸಂಸ್ಥೆಗಳನ್ನು ಒಳಗೊಂಡಿರುತ್ತದೆ. 65% ರಷ್ಟು ನಗರಗಳು ಬೆಂಬಲ ಸಂಸ್ಥೆಯನ್ನು ಹೊಂದಿರುತ್ತವೆ.

- ಮದರ್ ಎನ್‌ಜಿಒ
- ನಗರ ಮಟ್ಟದ ಸಲಹಾ ಮಂಡಳಿ
- ನೋಡಲ್ ಸಂಸ್ಥೆ
- ಸಂಯೋಜಕ ಸಂಸ್ಥೆ
- ಬೆಂಬಲ ಸಂಸ್ಥೆ

### 5.2 ಗ್ರಾಮೀಣ ಮಾದರಿ

ಜಿಲ್ಲಾ ಮಟ್ಟದ ಚೈಲ್ಡ್‌ಲೈನ್ ಕಾರ್ಯಕ್ರಮವು, ಜಿಲ್ಲಾ ಮಟ್ಟದ ಸಲಹಾ ಮಂಡಳಿ (ಡಿಎಬಿ), ಒಂದು ನೋಡಲ್ ಸಂಸ್ಥೆ, ಒಂದು ಸಂಯೋಜಕ ಸಂಸ್ಥೆ ಹಾಗೂ ಆರು ಜಿಲ್ಲಾ ಉಪ-ಕೇಂದ್ರಗಳನ್ನು ಒಳಗೊಂಡಿರುತ್ತದೆ. ನೋಡಲ್ ಹಾಗೂ ಸಂಯೋಜಕ ಸಂಸ್ಥೆಗಳ ಪಾತ್ರ ಹಾಗೂ ಜವಾಬ್ದಾರಿಗಳು ಈ ಕೆಳಗಿನಂತಿವೆ:

- ಮದರ್ ಎನ್‌ಜಿಒ
- ಜಿಲ್ಲಾ ಮಟ್ಟದ ಸಲಹಾ ಮಂಡಳಿ
- ನೋಡಲ್ ಸಂಸ್ಥೆ
- ಸಂಯೋಜಕ ಸಂಸ್ಥೆ
- ಜಿಲ್ಲಾ ಉಪ-ಕೇಂದ್ರಗಳು (6)

## 6. ನಗರ/ಜಿಲ್ಲಾ ಸಲಹಾ ಮಂಡಳಿಗಳು ಹಾಗೂ ಪಾಲುದಾರ ಸಂಸ್ಥೆಗಳ ಕಾರ್ಯನಿರ್ವಹಣೆಗಳು

### 6.1 ನಗರ/ಜಿಲ್ಲಾ ಮಟ್ಟದ ಸಲಹಾ ಮಂಡಳಿ:

ನಗರ/ಜಿಲ್ಲಾ ಮಟ್ಟದ ಸಲಹಾ ಮಂಡಳಿಯು ನಗರ/ಜಿಲ್ಲೆಯ ಸರ್ಕಾರಿ ಇಲಾಖೆಗಳ ಅತ್ಯಂತ ಹಿರಿಯ ಕಾರ್ಯಕರ್ತರನ್ನು ಒಳಗೊಂಡಿರುತ್ತದೆ. ಈ ಇಲಾಖೆಗಳೆಂದರೆ: ಸಮಾಜ ಕಲ್ಯಾಣ ಇಲಾಖೆ/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕಾರ್ಮಿಕ, ರೈಲ್ವೆ, ಟೆಲಿಕಾಂ, ಮಾಹಿತಿ ಹಾಗೂ ಪ್ರಸಾರ ಇಲಾಖೆಗಳು ಹಾಗೂ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ನ್ಯಾಯ ಮಂಡಳಿ, ಇತ್ಯಾದಿಗಳ ಅಧ್ಯಕ್ಷರು. ಜಿಲ್ಲಾ ಮ್ಯಾಜಿಸ್ಟ್ರೇಟ್/ಜಿಲ್ಲಾಧಿಕಾರಿಗಳು ನಗರ/ಜಿಲ್ಲಾ ಮಟ್ಟದ ಸಲಹಾ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ನಗರ/ಜಿಲ್ಲಾ ಮಟ್ಟದ ಸಲಹಾ ಮಂಡಳಿಯ ಕಾರ್ಯನಿರ್ವಹಣೆಗಳು ಈ ಕೆಳಗಿನಂತಿರುತ್ತವೆ:

(i) ಚೈಲ್ಡ್‌ಲೈನ್ ಸೇವೆಗಳ ಕಾರ್ಯನಿರ್ವಹಣೆಯನ್ನು ಅಂದಾಜಿಸುವುದು ಹಾಗೂ ಪರಿಶೀಲಿಸುವುದು;

(ii) ಮಧ್ಯಸ್ಥಿಕೆ ವಹಿಸಿದ ಪ್ರಕರಣಗಳಿಂದ ಉದ್ಭವಿಸುವ ಕಾರ್ಯನೀತಿ ವಿಷಯಗಳನ್ನು ಬಗೆಹರಿಸುವುದು;

(iii) ವ್ಯವಸ್ಥೆಯನ್ನು ಹೆಚ್ಚು ಮಕ್ಕಳ-ಸ್ನೇಹಿಯನ್ನಾಗಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುವುದು.

ಜಿಲ್ಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯನ್ನು (ಡಿಸಿಪಿಸಿ) ಸ್ಥಾಪಿಸಿ, ಕೆಲಸ ಆರಂಭಿಸಿದ ನಂತರ, ನಗರ/ಜಿಲ್ಲಾ ಮಟ್ಟದ ಸಲಹಾ ಮಂಡಳಿಯ ಕಾರ್ಯನಿರ್ವಹಣೆಗಳನ್ನು ಡಿಸಿಪಿಸಿ ವಹಿಸಿಕೊಳ್ಳುತ್ತದೆ.

### 6.2 ನೋಡಲ್ ಸಂಸ್ಥೆ: (ಗ್ರಾಮೀಣ ಹಾಗೂ ನಗರ ಮಾದರಿಗಳೆರಡೂ)

ಚೈಲ್ಡ್‌ಲೈನ್ ಸೇವೆಗಳ ನೋಡಲ್ ಸಂಸ್ಥೆಗಳು, ನೆಟ್‌ವರ್ಕಿಂಗ್, ಸಂಯೋಜನೆ ಹಾಗೂ ಸಂಶೋಧನಾ ಕೌಶಲ್ಯಗಳನ್ನು ಹೊಂದಿರುವ ಶೈಕ್ಷಣಿಕ ಸಂಸ್ಥೆಗಳು ಅಥವಾ ಸರ್ಕಾರೇತರ ಸಂಸ್ಥೆಗಳಾಗಿರಬೇಕು. ನೋಡಲ್ ಸಂಸ್ಥೆಯು, ಜವಾಬ್ದಾರಿಯನ್ನು ವಹಿಸಿಕೊಂಡಿರುವ ಸಂಸ್ಥೆಯ/ಇಲಾಖೆಯ ಮುಖ್ಯಸ್ಥರಾಗಿರುವಂತಹ ನೋಡಲ್ ನಿರ್ದೇಶಕರ (ಗೌರವ ಹುದ್ದೆ) ಮೇಲ್ವಿಚಾರಣೆ ಅಡಿ ಕಾರ್ಯನಿರ್ವಹಿಸುವ ಓರ್ವ ಸಂಯೋಜಕರನ್ನು ಒಳಗೊಂಡಿರುತ್ತದೆ.

ನಗರ ಮಟ್ಟದಲ್ಲಿ ನೋಡಲ್ ಸಂಸ್ಥೆಗಳು ಮಕ್ಕಳಿಗೆ ರಕ್ಷಣಾತ್ಮಕ ಪರಿಸರವನ್ನು ಸೃಷ್ಟಿಸಲು ಜವಾಬ್ದಾರರಾಗಿರುತ್ತಾರೆ. ಈ ಕೆಳಕಂಡ ಕ್ರಮಗಳ ಮೂಲಕ ಇದನ್ನು ಸಾಧಿಸಬಹುದಾಗಿದೆ:

i) ಚೈಲ್ಡ್‌ಲೈನ್ ಸೇವೆಯ ಪ್ರಾರಂಭಿಸುವ ಮುಂಚೆ ಪ್ರಾಥಮಿಕವಾಗಿ ಅಗತ್ಯತೆಯ ಅಂದಾಜಿಸುವಿಕೆಯ ಅಧ್ಯಯನ ನಡೆಸುವುದು;

ii) ನಗರದಲ್ಲಿರುವ ಮಕ್ಕಳಿಗಾಗಿ ಸೇವೆಗಳ ಕೈಪಿಡಿಯನ್ನು ಸಿದ್ಧಪಡಿಸುವುದು ಹಾಗೂ ಅದನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡುವುದು;

iii) ನಗರದಲ್ಲಿರುವ ಚೈಲ್ಡ್‌ಲೈನ್ (ಮಕ್ಕಳ ಸಹಾಯವಾಣಿ) ಕಾರ್ಯನಿರ್ವಹಣೆಯ ಕುರಿತು 'ಮದರ್ ಎನ್‌ಜಿಓಗೆ (ಪ್ರಸ್ತುತ 'ಮದರ್ ಎನ್‌ಜಿಓ') ಮಾಸಿಕ ವರದಿಗಳನ್ನು ಸಲ್ಲಿಸುವುದು;

iv) ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಚೈಲ್ಡ್‌ಲೈನ್ ಸಲಹಾ ಮಂಡಳಿಯ (Childline Advisory Board (CAB)) ಸಭೆಗಳನ್ನು ಆಯೋಜಿಸುವುದು;

v) ಡಿಸಿಪಿಯು ಹಾಗೂ ಎಸ್‌ಸಿಪಿಎಸ್ ನ ಸಂಯೋಜನೆಯೊಂದಿಗೆ ವಿವಿಧ ಸರ್ಕಾರಿ ಇಲಾಖೆಗಳಿಗೆ ಮಕ್ಕಳ ರಕ್ಷಣೆಯ ಕುರಿತು ಪುನರ್‌ಮನನ ಹಾಗೂ ಅರಿವು ಮೂಡಿಸುವುದು;

vi) ವಿದ್ಯಾರ್ಥಿಗಳನ್ನು ಅರಿವು ಮೂಡಿಸುವ ಅಭಿಯಾನಗಳಿಗಾಗಿ ಚೈಲ್ಡ್‌ಲೈನ್ ಸರ್ವೀಸಸ್‌ಗೆ ಸ್ವಯಂಸೇವಕರಾಗಿ ನೇಮಕ ಮಾಡುವುದು ಹಾಗೂ ಕಾರ್ಯಕ್ರಮ ನಿರ್ವಹಣೆಗೆ ಸಹಾಯ ಮಾಡುವುದು;

vii) ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಸಂಶೋಧನೆ;

viii) ಪಾಲುದಾರ ಸಂಸ್ಥೆಗಳೊಂದಿಗೆ ಮಾಸಿಕ ಸಭೆಗಳ ಆಯೋಜನೆ;

ix) ನೋಡಲ್ ಸಂಸ್ಥೆಗಳ ಪಾತ್ರ ನಿರ್ವಹಿಸುವ ಶೈಕ್ಷಣಿಕ ಸಂಸ್ಥೆಗಳು ಸಂಶೋಧನಾ ಕೌಶಲ್ಯಗಳು, ನೆಟ್‌ವರ್ಕಿಂಗ್ ಸಾಮರ್ಥ್ಯ, ತರಬೇತಿ ಕೌಶಲ್ಯಗಳು ಹಾಗೂ ವಿದ್ಯಾರ್ಥಿಗಳನ್ನು ಚೈಲ್ಡ್‌ಲೈನ್ ಸೇವೆಗಳಿಗೆ ಸಂಪನ್ಮೂಲಗಳಾಗಿ ಹಾಗೂ ಮೂಲಭೂತಸೌಕರ್ಯವಾಗಿ ಕೊಡುಗೆ ನೀಡುತ್ತವೆ.

## 6.3 ಸಹವರ್ತಿ ಸಂಸ್ಥೆಗಳು (ಗ್ರಾಮೀಣ ಹಾಗೂ ನಗರ ಎರಡೂ ಮಾದರಿಗಳು):

ಇವು ಸ್ವಯಂಸೇವಕ ಏಜೆನ್ಸಿಗಳಾಗಿದ್ದು, ಚೈಲ್ಡ್‌ಲೈನ್ ಸೇವೆಗಳ ಕಾಲ್ ಸೆಂಟರ್‌ಗಳಾಗಿ ಕಾರ್ಯನಿರ್ವಹಿಸುತ್ತವೆ. ಇವು ದಿನದ 24 ಗಂಟೆಗಳೂ ಕೆಲಸ ಮಾಡುತ್ತವೆ ಹಾಗೂ 1098 ಮಕ್ಕಳ ಸಾಹಯವಾಣಿಗೆ ಬರುವ ಕರೆಗಳಿಗೆ ಪ್ರತಿಕ್ರಿಯಿಸುತ್ತವೆ. ಸಹವರ್ತಿ ಸಂಸ್ಥೆಗಳಿಗೆ ಓರ್ವ ಕೇಂದ್ರ ಸಂಯೋಜಕರನ್ನು ನಿಯೋಜಿಸಲಾಗಿರುತ್ತದೆ. ಇವರು ಕರೆಗಳಿಗೆ ಪ್ರತಿಕ್ರಿಯಿಸುವ ಹಾಗೂ ತುರ್ತು ಸಂದರ್ಭಗಳಲ್ಲಿ ಸಹಾಯ ಒದಗಿಸುವ 12 ಜನರ ತಂಡವನ್ನು ನಿರ್ವಹಿಸುತ್ತಾರೆ.

**ಸಹವರ್ತಿ ಸಂಸ್ಥೆಗಳ ಪಾತ್ರ ಹಾಗೂ ಕಾರ್ಯನಿರ್ವಹಣೆಗಳು ಈ ಕೆಳಗಿನಂತಿರುತ್ತವೆ:**

i) 1098 ಚೈಲ್ಡ್‌ಲೈನ್ ಸೇವೆಗಳಿಗೆ ಬರುವ ಕರೆಗಳಿಗೆ ದಿನದ 24 ಗಂಟೆಗಳೂ ಪ್ರತಿಕ್ರಿಯಿಸುವುದು/ಸ್ಪಂದಿಸುವುದು;

ii) ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಂಕಷ್ಟದಲ್ಲಿರುವ ಮಕ್ಕಳ ಪ್ರದೇಶಗಳನ್ನು ಗುರುತಿಸಲು ಸಿಟಿ ಮ್ಯಾಪ್ಪಿಂಗ್ ಮಾಡುವುದು;

iii) ದೈನಂದಿನ ಆಧಾರದ ಮೇಲೆ ದಿನನಿತ್ಯದ ಮಧ್ಯಸ್ಥಿಕೆ ಹಾಗೂ ಪ್ರಕರಣದ ಅನುಸರಣೆ ಮಾಡುವುದು;

iv) ದೈನಂದಿನ ಆಧಾರದ ಮೇಲೆ ದಿನನಿತ್ಯ ಸಮುದಾಯದಲ್ಲಿ ಅರಿವು ಮೂಡಿಸುವುದು ಹಾಗೂ ಔಟ್‌ರೀಚ್ ಸೇವೆ ಒದಗಿಸುವುದು;

v) ಮಕ್ಕಳ ಸಹಾಯವಾಣಿ ಸೇವೆಗಳನ್ನು ಬಳಸುವಂತಹ ಮಕ್ಕಳೊಂದಿಗೆ ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮಾಸಿಕ ಮುಕ್ತ ಚರ್ಚೆ;

vi) ಪ್ರಕರಣಗಳ ಬಗ್ಗೆ ಚರ್ಚಿಸಲು ಹಾಗೂ ಅನುಸರಣೆ ಮಾಡಲು ವಾರಕ್ಕೊಮ್ಮೆ ಆಂತರಿಕ ಸಭೆಗಳನ್ನು ಆಯೋಜಿಸುವುದು;

vii) ಒಳಬರುವ ಪ್ರತಿ ಕರೆಗೆ ಗಣಕೀಕೃತ ದಾಖಲೆ ನಿರ್ವಹಣೆ (ಚೈಲ್ಡ್‌ನೆಟ್ ಪ್ಯಾಕೇಜ್‌ನಲ್ಲಿ);

viii) ನೋಡಲ್ ಸಂಸ್ಥೆಗೆ ಮಾಸಿಕ ವರದಿಗಳ ಸಲ್ಲಿಕೆ.

## 6.4 ಬೆಂಬಲ ಸಂಸ್ಥೆಗಳು (ನಗರ ಮಾದರಿಯಲ್ಲಿ)

ಬೆಂಬಲ ಸಂಸ್ಥೆಗಳೆಂದರೆ ಬಲಿಷ್ಠ ಸಮುದಾಯ ಆಧಾರಿತ ಕಾರ್ಯಕ್ರಮಗಳಿರುವಂತಹ ಸ್ವಯಂಸೇವಕ ಸಂಸ್ಥೆಗಳು. ಆ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಸಹವರ್ತಿ ಸಂಸ್ಥೆಯ ಕಾರ್ಯನಿರ್ವಹಣೆಗಳಿಗೆ ಪೂರಕ ಸೇವೆಯನ್ನು ಒದಗಿಸುವುದು ಬೆಂಬಲ ಸಂಸ್ಥೆಗಳ ಪಾತ್ರವಾಗಿರುತ್ತದೆ. ಈ ಸಂಸ್ಥೆಗಳು ನಗರ ಪ್ರದೇಶಗಳಲ್ಲಿರುವ ಉಪನಗರಗಳು ವ್ಯಾಪ್ತಿಯೊಳಗಿರಬೇಕು. ಬೆಂಬಲ ಸಂಸ್ಥೆಗಳನ್ನು ಹೊಂದುವ ಉದ್ದೇಶವೇನೆಂದರೆ, ಮಕ್ಕಳಿಗೆ ಸಂಕಷ್ಟದ ಸನ್ನಿವೇಶಗಳಲ್ಲಿ ಸಂಯೋಚಿತ ನೆರವು ಒದಗಿಸುವುದನ್ನು ಖಾತ್ರಿಪಡಿಸಲು ಚೈಲ್ಡ್‌ಲೈನ್ ಸೇವೆಗಳ ತಲುಪುವಿಕೆಯನ್ನು ವಿಸ್ತರಿಸುವುದಾಗಿದೆ. ಈ ಬೆಂಬಲ ಸಂಸ್ಥೆಗಳ ಪಾತ್ರ ಹಾಗೂ ಕಾರ್ಯನಿರ್ವಹಣೆಗಳು ಈ ಕೆಳಗಿನಂತಿರುತ್ತವೆ:

i) ಅಗತ್ಯಗಳುಳ್ಳ ಮಕ್ಕಳಿರುವ ಹೆಚ್ಚಿನ ಸಂಭವವಿರುವ ಸ್ಥಳಗಳಲ್ಲಿ, ಸ್ಥಳೀಯ ಪ್ರದೇಶಗಳಲ್ಲಿ ಕ್ಷೇತ್ರ ಕೆಲಸ ಹಾಗೂ ಸಂಪರ್ಕಗಳನ್ನು ಹೊಂದುವುದು;

ii) ಈ ಪ್ರದೇಶಗಳಲ್ಲಿ ಸಹಾಯವಾಣಿ ಸೇವೆಗಳ ಬಗ್ಗೆ ಅರಿವು ಮೂಡಿಸುವುದು;

iii) ಸಹವರ್ತಿ ಸಂಸ್ಥೆಯಿಂದ ಉಲ್ಲೇಖಿತವಾಗಿರುವ ಪ್ರಕರಣಗಳ ಅನುಸರಣೆ ಮಾಡುವುದು;

iv) ಮಕ್ಕಳ ಸಹಾಯವಾಣಿ (1098) ಯನ್ನು ಬಳಸುವ ಮಕ್ಕಳಿಂದ ಹಿಮ್ಮಾಹಿತಿಯನ್ನು ಪಡೆಯಲು ಮಾಸಿಕ ಮುಕ್ತ ಚರ್ಚೆಗಳನ್ನು ಏರ್ಪಡಿಸುವುದು ಹಾಗೂ ಮಕ್ಕಳಿಗೆ ಸಂಬಂಧಪಟ್ಟ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಆದ್ಯತೆ ನೀಡುವುದು;

v) ಮಧ್ಯಸ್ಥಿಕೆ ವಹಿಸಲಾದ ಪ್ರಕರಣಗಳ ದಾಖಲೆ ನಿರ್ವಹಣೆ;

## 6.5 ಜಿಲ್ಲಾ ಉಪ–ಕೇಂದ್ರಗಳು (ಗ್ರಾಮೀಣ ಮಾದರಿ)

ಮಕ್ಕಳ ಸಹಾಯವಾಣಿ ಸೇವೆಗಳನ್ನು ಒದಗಿಸುತ್ತಿರುವ ಪ್ರತಿ ಸಹವರ್ತಿ ಸಂಸ್ಥೆಯು ಆಯಾ ಪ್ರದೇಶದಲ್ಲಿನ ಮಕ್ಕಳ ಜನಸಂಖ್ಯೆಗೆ ಅನುಗುಣವಾಗಿ ಹಾಗೂ ಜಿಲ್ಲೆಯಲ್ಲಿ ತನ್ನ ಭೌಗೋಳಿಕ ವ್ಯಾಪ್ತಿಯನ್ನು ಆಧರಿಸಿ ಗರಿಷ್ಠ 6 ಉಪಕೇಂದ್ರಗಳನ್ನು ಸ್ಥಾಪಿಸಲು ಅವಕಾಶವಿದೆ. ಪ್ರತಿ ಉಪಕೇಂದ್ರದಲ್ಲಿ ಓರ್ವ ಮುಖ್ಯಸ್ಥರು

ಹಾಗೂ ನಾಲ್ಕು ಜನ ಸಿಬ್ಬಂದಿಗಳಿರುವ ತಂಡವಿರುತ್ತದೆ. ಇವರಿಗೆ ಜಿಲ್ಲೆಯಲ್ಲಿ ಮಹಿಳಾ ಸಮಾಖ್ಯ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ಪಂಚಾಯಿತಿಯ ಮಹಿಳಾ ಸದಸ್ಯರಂತಹ ಈಗಾಗಲೇ ಸ್ಥಾಪನೆಯಾಗಿರುವಂತಹ ನೆಟ್‌ವರ್ಕ್‌ಗಳಿಂದ ಸ್ವಯಂಸೇವಕರು ನೆರವಾಗುತ್ತಾರೆ. ಉಪಕೇಂದ್ರದ ಪಾತ್ರ ಈ ಕೆಳಗಿನಂತಿರುತ್ತದೆ:

i) ನಿರ್ಧಿಷ್ಟವಾದ ಉಪಕೇಂದ್ರದ ಕಾರ್ಯಾಚರಣೆ ವ್ಯಾಪ್ತಿಯಡಿಯಲ್ಲಿ ಬರುವ ಗ್ರಾಮಗಳಿಗೆ ಭೇಟಿ ನೀಡುವುದು. ಪ್ರತಿ ಉಪಕೇಂದ್ರವು ಏಳರಿಂದ ಒಂಬತ್ತು ಗ್ರಾಮಗಳನ್ನು ನೋಡಿಕೊಳ್ಳುತ್ತವೆ.

ii) ಸೇವೆಗೆ ಸಂಬಂಧಪಟ್ಟ ಔಟ್‌ರೀಚ್ ಸೇವೆ ಹಾಗೂ ಅರಿವು ಕಾರ್ಯಕ್ರಮಗಳನ್ನು ಮೂಡಿಸುವುದು.

iii) ಮಕ್ಕಳ ಸಹಾಯವಾಣಿ ಸೇವೆಗಳ ಕಾಲ್ ಸೆಂಟರ್ ವತಿಯಿಂದ ಉಲ್ಲೇಖವಾಗಿರುವ ಹಾಗೂ ಸ್ಥಳೀಯ ಮಟ್ಟದಲ್ಲಿ ಸ್ವಯಂಸೇವಕರು ಆಯ್ಕೆ ಮಾಡಿರುವಂತಹ ಪ್ರಕರಣಗಳಲ್ಲಿ ಮಧ್ಯಸ್ಥಿಕೆ ವಹಿಸುವುದು.

iv) ಔಟ್‌ರೀಚ್ ಸೇವೆ ಅಡಿಯಲ್ಲಿ ವ್ಯಾಪಿಸಿದ ಪ್ರದೇಶದ ವಿವರಗಳು ಹಾಗೂ ಮಕ್ಕಳ ಸಹಾಯವಾಣಿ ಸೇವೆಗಳು ಉಲ್ಲೇಖಿಸಿದಂತಹ ಪ್ರಕರಣ ಮಧ್ಯಸ್ಥಿಕೆಗಳ ಕುರಿತು ದಾಖಲೆ ನಿರ್ವಹಿಸುವುದು;

v) ಮಕ್ಕಳ ಸಹಾಯವಾಣಿ ಕಾಲ್ ಸೆಂಟರ್‌ಗೆ ಆಗುತ್ತಿರುವ ಬೆಳವಣಿಗೆಗಳು ಹಾಗೂ ಅನುಸರಣಾ ಕ್ರಮಗಳ ಬಗ್ಗೆ ಕ್ರಮಬದ್ಧವಾಗಿ ವರದಿಗಳನ್ನು ಸಲ್ಲಿಸುವುದು.

vi) ಸ್ಥಳೀಯ ಸ್ವಯಂಸೇವಕರು ತಮ್ಮ ಗ್ರಾಮಗಳಿಗೆ ಹಿಂದುರುಗಿರುವಂತಹ ರಕ್ಷಿಸಲ್ಪಟ್ಟ ಮಕ್ಕಳ ಅನಸುರಣೆ ಮಾಡುತ್ತಾರೆ. ಜೊತೆಗೆ ಅವರು ಮಕ್ಕಳ ರಕ್ಷಣೆ ವಿಷಯಗಳ ಕುರಿತು ಅರಿವನ್ನು ಮೂಡಿಸುತ್ತಾರೆ.

'ಮದರ್ ಎನ್‌ಜಿಒ'ಗೆ ನೋಡಲ್, ಸಂಯೋಜನೆ ಹಾಗೂ ಬೆಂಬಲ ಸಂಸ್ಥೆಗಳಿಗೆ ಹಾಗೂ ಜಿಲ್ಲಾ ಉಪಕೇಂದ್ರಗಳಿಗಾಗಿ, ಎಂಡಬ್ಲ್ಯೂಸಿಡಿ ಯಿಂದ ಒದಗಿಸುವ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ– VIII ರಲ್ಲಿ ನೀಡಿದೆ.

## ಬಿ. ನಗರ ಹಾಗೂ ಭಾಗಶಃ ನಗರ ಪ್ರದೇಶಗಳಲ್ಲಿರುವ ಅಗತ್ಯವುಳ್ಳ ಮಕ್ಕಳಿಗಾಗಿ ತೆರೆದ ಆಶ್ರಯತಾಣಗಳು

1. ಅತಿ ಹೆಚ್ಚಿನ ಸಂಖ್ಯೆಯ ಸೂರಿಲ್ಲದಿರುವ ಮಕ್ಕಳು, ರಸ್ತೆಬದಿ ಜೀವಿಸುವ ಮಕ್ಕಳು, ರಸ್ತೆಯಲ್ಲಿರುವ ಮಕ್ಕಳು, ಬಾಲಕಾರ್ಮಿಕರು, ಮಾದಕವ್ಯಸನಿ ಮಕ್ಕಳು, ಭಿಕ್ಷುಕರು, ಪರಿತ್ಯಜಿಸಿರುವ ಮಕ್ಕಳು, ಪೋಷಣೆ ಹಾಗೂ ಬೆಂಬಲದ ಅಗತ್ಯವಿರುವ ಮಕ್ಕಳು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುತ್ತಾರೆ. ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ ಸೇವೆ, ಮನರಂಜನೆ ಸೌಲಭ್ಯಗಳು, ಇತ್ಯಾದಿಗಳಂತಹ ಮೂಲಭೂತ ಸೇವೆಗಳು ದೊರಕದಿರುವ ಹಾಗೂ ಆಶ್ರಯದ ಕೊರತೆಯಿರುವಂತಹ, ತೀವ್ರ ಬಡತನದಲ್ಲಿ ಜೀವಿಸುತ್ತಿರುವಂತಹವರು ಸಾಮಾನ್ಯವಾಗಿ ವಾಹನ ಸಂಚಾರಿ ಸಿಗ್ನಲ್‌ಗಳು, ರೈಲ್ವೆ ನಿಲ್ದಾಣಗಳು, ರಸ್ತೆಬದಿ, ತರಕಾರಿ ಮಂಡಿ, ಇತ್ಯಾದಿಗಳಂತಹ ಸ್ಥಳಗಳಲ್ಲಿ ಭಿಕ್ಷೆ ಬೇಡುತ್ತಾ, ವಾಹನಗಳ ಕಿಟಕಿ ಗಾಜುಗಳನ್ನು ಒರೆಸುವುದು, ಚಿಂದಿ ಆಯುವಿಕೆ, ರಸ್ತೆ ಬದಿ ಮಾರಾಟ ಮಾಡುವಂತಹ ಕೆಲಸಗಳಲ್ಲಿ ತೊಡಗುತ್ತಾರೆ.

ಇಂತಹ ಮಕ್ಕಳು ಬಹುತೇಕ ಬಾರಿ, ದೈಹಿಕ, ಲೈಂಗಿಕ, ಭಾವನಾತ್ಮಕ ಹಾಗೂ ಆರ್ಥಿಕ ಶೋಷಣೆ ಒಳಗೊಂಡಂತೆ ಎಲ್ಲಾ ರೀತಿಯ ವಯಸ್ಕ ನಿಂದನೆಯ ಸಂತ್ರಸ್ತರಾಗಿರುತ್ತಾರೆ. ಅಮಾನವೀಯ ಹಾಗೂ ಹಿಂಸಾತ್ಮಕ ಸನ್ನಿವೇಶಗಳು ಇಂತಹ ಅನೇಕ ಮಕ್ಕಳನ್ನು ಕಾನೂನು ಉಲ್ಲಂಘಿಸುವವರನ್ನಾಗಿ, (ಆರೋಪಿಗಳನ್ನಾಗಿ) ಹಾಗೂ ಶೋಷಣೆ ಮಾಡುವವರನ್ನಾಗಿ ಮಾಡುತ್ತದೆ.

2. ಈ ಮಕ್ಕಳ ಪೈಕಿ ದೊಡ್ಡ ಸಂಖ್ಯೆಯ ಮಕ್ಕಳು ಮಾದಕವ್ಯಸನಿಗಳಾಗಿರುವುದನ್ನೂ ಸಹ ಸರ್ಕಾರ ಈ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನಾಗರಿಕ ಸಮಾಜ ಸಂಸ್ಥೆಗಳ ಮೂಲಕ ಗುರುತಿಸಿದೆ. ಇಂತಹ ಮಕ್ಕಳು ಸಾಮಾನ್ಯವಾಗಿ ಒಂದು ರೀತಿಯ ಮಾದಕ ದ್ರವವನ್ನು ಬಳಸುತ್ತಾರೆ, ಇನ್ನೂ ಕೆಲವು ಮಕ್ಕಳು ಕೋಕೆನ್, ಇತ್ಯಾದಿಯಂತಹ ಮಾದಕವಸ್ತುಗಳ ಬಳಕೆಯಲ್ಲಿಯೂ ತೊಡಗಿದ್ದಾರೆ. ಮಕ್ಕಳಲ್ಲಿ ಇಂತಹ ಮಾದಕವಸ್ತುಗಳ ಬಳಕೆಯ ವಿಧಾನವೂ ಬಹಳ ಅಪಾಯಕಾರಿ ಸ್ವರೂಪ ಹೊಂದಿದೆ. ಮಕ್ಕಳು ಗಳಿಸುವ ಬಹುಪಾಲು ಹಣ ಇಂತಹ ಮಾದಕವಸ್ತುಗಳಿಗೆ ಖರ್ಚಾಗುತ್ತದೆ ಎಂದು ತಿಳಿದು ಬಂದಿದೆ.

ಇಂತಹ ಮಕ್ಕಳು ಸಣ್ಣಪುಟ್ಟ ಕಳ್ಳತನಗಳು, ಮಾದಕ ವಸ್ತುಗಳ ಮಾರಾಟಗಳಲ್ಲಿಯೂ ತೊಡಗಿರುವ ಸಾಧ್ಯತೆಗಳಿರುತ್ತವೆ ಅಥವಾ ಭಿಕ್ಷೆ ಬೇಡುವ ಅಥವಾ ಕಳ್ಳತನ ಮಾಡುವ ಗುಂಪುಗಳಿಂದ ನಿಯಂತ್ರಣ ಹೊಂದಿರುತ್ತಾರೆ. ಅನೇಕ ಮಕ್ಕಳು ಜೀವಿಸುವುದಕ್ಕಾಗಿ ಲೈಂಗಿಕ ಕ್ರಿಯೆಗಳಲ್ಲಿಯೂ ತೊಡಗುತ್ತಾರೆ ಹಾಗೂ ಶಿಶುಕಾಮ ಸಾಮಾನ್ಯವಾಗಿದೆ. ಜೊತೆಗೆ, ನಗರ ಪ್ರದೇಶಗಳು ದೊಡ್ಡ ಸಂಖ್ಯೆಯಲ್ಲಿ ಅನಧಿಕೃತ ಕೊಳಗೇರಿಗಳು ಹಾಗೂ ವಿಶೇಷವಾಗಿ ಮಕ್ಕಳು ಜೀವಿಸಲು ಕಷ್ಟಕರವಾದ ವಾತಾವರಣವಿರುವಂತಹ ಜಾಗಗಳು ಲೈಂಗಿಕ ಸಾಗಾಣಿಕೆ ಕೇಂದ್ರಗಳಿಂದ ಕೂಡಿರುತ್ತವೆ. ಇಂತಹ ಸನ್ನಿವೇಶಗಳಲ್ಲಿ ಮಕ್ಕಳು ವಯಸ್ಸಿಗೆ ಅಸಮರ್ಪಕವಾದ ಮಾಹಿತಿ ಪಡೆಯುವ, ಎರಡನೆ ತಲೆಮಾರಿನ ವೇಶ್ಯಾವಾಟಿಕೆ, ಇತ್ಯಾದಿಗಳಂತಹ ಸನ್ನಿವೇಶಗಳಿಗೆ ಈಡಾಗುವ ಸಾಧ್ಯತೆ ಹೆಚ್ಚು. ಐಸಿಪಿಎಸ್ ಇಂತಹ ತೆರೆದ ಆಶ್ರಯಗಳ ಸೇವೆಗಳ ಮೂಲಕ ಇಂತಹ ಮಕ್ಕಳಿಗೆ, ತಡೆಗಟ್ಟುವ, ಉಪಚಾರ ಹಾಗೂ ಪುನರ್ವಸತಿ ಸೇವೆಗಳೂ ಒಳಗೊಂಡಂತೆ ಅವರ ಅಗತ್ಯಗಳನ್ನು ಪೂರೈಸುತ್ತದೆ.

3. ಈ ತೆರೆದ ಅಥವಾ ಮುಕ್ತ ಆಶ್ರಯಗಳ ಅನುಕೂಲಕರ ಕಾರ್ಯವಿಧಾನಗಳು, ವಿಶೇಷವಾಗಿ ನಗರ ಪ್ರದೇಶಗಳಲ್ಲಿನ ಮಕ್ಕಳ ಅಗತ್ಯಗಳನ್ನು ಪೂರೈಸುತ್ತಿದೆ ಹಾಗೂ ಇಂತಹ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರಿಗೆ ದೇಶದ ಉತ್ಪಾದಕ ನಾಗರಿಕರಾಗುವ ಅವಕಾಶವನ್ನು ಒದಗಿಸುತ್ತಿದೆ. ಇವು ಮಕ್ಕಳಿಗೆ ಆಟವಾಡುವ, ಓದುವ, ತಮ್ಮ ಸಮಯವನ್ನು ಉತ್ಪಾದಕ ರೀತಿಯಲ್ಲಿ ಬಳಸಿಕೊಳ್ಳುವ ಹಾಗೂ ಆ

ಮೂಲಕ ಸುರಕ್ಷಿತ ಪರಿಸರದಲ್ಲಿ ಹಾಗೂ ತಮ್ಮದೇ ಸಮುದಾಯದ ಒಳಗೆ ಸಂಗೀತ, ನೃತ್ಯ, ನಾಟಕ, ಯೋಗ ಮತ್ತು ಧ್ಯಾನ, ಕಂಪ್ಯೂಟರ್ ಕಲಿಕೆ, ಒಳಾಂಗಣ ಹಾಗೂ ಹೊರಾಂಗಣ ಆಟಗಳು, ಇತ್ಯಾದಿಗಳಂತಹ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಒಳಗೊಳ್ಳುವ ಅವಕಾಶ ಕಲ್ಪಿಸುತ್ತದೆ.

4. ಈ ಚಟುವಟಿಕೆಗಳು ಅರ್ಥಪೂರ್ಣ ಸಮಾನಮನಸ್ಕರ ಸಮೂಹ ಭಾಗವಹಿಸುವಿಕೆ ಹಾಗೂ ಪರಸ್ಪರ ಸಂವಾದವನ್ನು ಪ್ರೋತ್ಸಾಹಿಸುತ್ತದೆ. ಇದು ಮಕ್ಕಳ ಒಟ್ಟಾರೆ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ಖಾತ್ರಿಪಡಿಸುತ್ತದೆ ಹಾಗೂ ಆಹಾರ, ಪೌಷ್ಠಿಕತೆ ಹಾಗೂ ಆರೋಗ್ಯಕ್ಕಾಗಿ ಮೂಲಭೂತ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಅವರನ್ನು ಸಾಮಾಜಿಕವಾಗಿ ವಿಪರೀತದ ನಡವಳಿಕೆಗಳಿಂದ ದೂರವಿಡುತ್ತದೆ. ಈ ತೆರೆದ/ಮುಕ್ತ ಆಶ್ರಯಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆ, ಹಾಗೂ ಅನುಕೂಲಕರ ಸಮಯಾವಧಿಯ ಶಿಕ್ಷಣ (ಮುಖ್ಯವಾಹಿನಿ ಶಾಲೆಗಳೊಂದಿಗೆ ಸಂಪರ್ಕ ಒಳಗೊಂಡಂತೆ) ಹಾಗೂ ವೃತ್ತಿಪರ ತರಬೇತಿಗಳ ಅವಕಾಶಗಳಿರುತ್ತವೆ ಮತ್ತು ಮಕ್ಕಳು ತಮ್ಮ ವಸ್ತುಗಳು ಹಾಗೂ ಗಳಿಸಿದ ಹಣವನ್ನು ಸುರಕ್ಷಿತವಾಗಿಡಲು ಸ್ಥಳವೂ ಇರುತ್ತದೆ. ಈ ಮಕ್ಕಳಿಗೆ ಅವರ ಶಕ್ತಿಯನ್ನು ಉತ್ಪಾದಕ ಕೆಲಸಗಳಿಗೆ ಹೊರಳಿಸಲು ಆಪ್ತಸಮಾಲೋಚನೆ ಮಾರ್ಗದರ್ಶನ ಹಾಗೂ ಜೀವನ ಕೌಶಲ್ಯಗಳ ಶಿಕ್ಷಣವನ್ನು ಒದಗಿಸಲಾಗುತ್ತದೆ. ದೀರ್ಘಾವಧಿಯಲ್ಲಿ, ಅವರನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವುದು, ಅವರನ್ನು ರಸ್ತೆಬದಿಯ ಜೀವನದಿಂದ ಮುಕ್ತಗೊಳಿಸುವುದು ಅಥವಾ ನಿಷ್ಕ್ರೀಯ ನಡವಳಿಕೆಗಳಿಂದ ದೂರಗೊಳಿಸುವುದು ಗುರಿಯಾಗಿದೆ.

## 5. ಗುರಿ ಗುಂಪು

ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿರುವ ಮುಕ್ತ ಆಶ್ರಯಗಳು ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಎಲ್ಲಾ ಮಕ್ಕಳಿಗೂ ಸೇವೆಯನ್ನು ಸಲ್ಲಿಸುತ್ತದೆ, ಅದರಲ್ಲಿಯೂ ಭಿಕ್ಷುಕರ, ಮಾದಕವ್ಯಸನಕ್ಕೆ ಈಡಾಗಿರುವ ಮಕ್ಕಳು, ರಸ್ತೆ ಬದಿಯ ಮಕ್ಕಳು ಹಾಗೂ ಬಾಲಕಾರ್ಮಿಕರು, ಚಿಂದಿ ಆಯುವವರು, ಚಿಕ್ಕ ವ್ಯಾಪಾರಿಗಳು, ಬೀದಿ ಬದಿ ಪ್ರದರ್ಶನ ನೀಡುವ ಮಕ್ಕಳು, ಅನಾಥ ಮಕ್ಕಳು, ತ್ಯಜಿಸಲ್ಪಟ್ಟ ಮಕ್ಕಳು, ಸಾಗಾಣಿಗೆ ಒಳಗಾಗಿರುವ ಹಾಗೂ ಓಡಿ ಬಂದಿರುವ ಮಕ್ಕಳು, ವಲಸೆ ಬಂದಿರುವ ಜನರ ಮಕ್ಕಳು, ಅನಧಿಕೃತ ಪ್ರದೇಶಗಳು/ಕೊಳಗೇರಿಗಳಲ್ಲಿ ವಾಸಿಸುವ ಮಕ್ಕಳು, ಸಾಮಾಜಿಕವಾಗಿ ಅಂಚಿನಲ್ಲಿರುವ ಗುಂಪುಗಳ ಮಕ್ಕಳು, ಹಾಗೂ ಇತರೆ ಸಂಕಷ್ಟದಲ್ಲಿರುವ ಮಕ್ಕಳು.

## 6. ಉದ್ದೇಶಗಳು

ಎನ್‌ಜಿಒಗಳು (ಸ್ವಯಂಸೇವಾ ಸಂಸ್ಥೆಗಳು) ಹಾಗೂ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳು ನಡೆಸುತ್ತಿರುವ ಈ ಮುಕ್ತ ಅಥವಾ ತೆರೆದ ತಂಗುದಾಣ ಮಕ್ಕಳ ಪಾಲನಾ ಸಂಸ್ಥೆಗಳು ಮಕ್ಕಳಿಗೆ ಖಾಯಂ ವಸತಿ ಸೌಲಭ್ಯಗಳನ್ನು ಒದಗಿಸುವುದಿಲ್ಲ, ಬದಲಿಗೆ ಹಾಲಿ ಇರುವಂತಹ ಸಾಂಸ್ಥಿಕ ಪೋಷಣಾ ಸೌಲಭ್ಯಗಳನ್ನು ಸೂಚಿಸುತ್ತದೆ. ಈ ತೆರೆದ ತಂಗುದಾಣಗಳ ಉದ್ದೇಶಗಳು ಈ ಕೆಳಗಿನಂತಿವೆ:

(i) ಮೇಲೆ ವಿವರಿಸಿರುವಂತಹ ಗುರಿ ಗುಂಪಿನ ಮಕ್ಕಳನ್ನು ಅವರ ಪ್ರಸ್ತುತ ಸಂಕಷ್ಟದ ಜೀವನದ ಸ್ಥಿತಿಯಿಂದ, ಸುರಕ್ಷಿತ ಪರಿಸರಕ್ಕೆ ತರುವುದು;

(ii) ಸುಸ್ಥಿರ ಮಧ್ಯಸ್ಥಿಕೆಗಳ ಮೂಲಕ ಮಕ್ಕಳನ್ನು ಸಂಕಷ್ಟದ ಸ್ಥಿತಿಯಿಂದ ಹೊರಗೆ ತರುವುದು;

(iii) ಇಂತಹ ಮಕ್ಕಳನ್ನು ಅತೀ ಹೆಚ್ಚಿನ ಅಪಾಯ ಹಾಗೂ ಸಾಮಾಜಿಕವಾಗಿ ವಿಪರೀತದ ನಡವಳಿಕೆಗಳಿಂದ ದೂರ ಸರಿಸಲು ಮಾರ್ಗದರ್ಶನ ನೀಡುವುದು;

(iv) ಶಿಕ್ಷಣದ ಅವಕಾಶಗಳನ್ನು ಒದಗಿಸುವುದು ಹಾಗೂ ಅವರ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಬೆಳೆಸುವುದು;

(v) ಜೀವನ ಕೌಶಲ್ಯಗಳನ್ನು ವೃದ್ಧಿಸುವುದು ಹಾಗೂ ಶೋಷಣೆಗೊಳಗಾಗುವ ಅವರ ದುರ್ಬಲತೆಯನ್ನು ಕಡಿಮೆಗೊಳಿಸುವುದು;

(vi) ಈ ಮಕ್ಕಳನ್ನು ಅವರ ಕುಟುಂಬಗಳೊಂದಿಗೆ, ಪರ್ಯಾಯ ಪೋಷಣೆ ಹಾಗೂ ಸಮುದಾಯದೊಂದಿಗೆ ಮರುಸೇರ್ಪಡೆಗೊಳಿಸುವುದು

(vii) ಮಕ್ಕಳು ಪುನಃ ಸಂಕಷ್ಟದ ಸನ್ನಿವೇಶಗಳಿಗೆ ಮರಳದಿರುವಂತೆ ಖಾತ್ರಿಪಡಿಸಲು ಕ್ರಮಬದ್ಧವಾಗಿ ಅನುಸರಣೆಯನ್ನು ಕೈಗೊಳ್ಳುವುದು.

## 7. ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳು

(i) ತೆರೆದ ತಂಗುದಾಣಗಳಿರುವ ಪ್ರದೇಶದ ಭೌಗೋಳಿಕ ವ್ಯಾಪ್ತಿಯೊಳಗಿರುವಂತಹ ಮಕ್ಕಳನ್ನು ಗುರುತಿಸುವುದು;

(ii) ಮಕ್ಕಳೊಂದಿಗೆ ಸಂಪರ್ಕ ಹೊಂದಲು ನವೀನ **ಮಕ್ಕಳ–ಸ್ನೇಹಿ** ದೃಷ್ಟಿಕೋನಗಳು ಹಾಗೂ ಔಟ್‌ರೀಚ್ ಸೇವೆ ಚಟುವಟಿಕೆಗಳ ಬಳಕೆ;

(iii) ಇಂತಹ ತೆರೆದ ತಂಗುದಾಣಗಳನ್ನು ಸ್ಥಾಪಿಸುವ ಸಂಸ್ಥೆಗಳು ತಮ್ಮ ಸೇವೆಗಳನ್ನು, ರೈಲ್ವೆ ಪ್ಲಾಟ್‌ಫಾರಂಗಳು, ಗಿಜಿಗುಡುವ ಮಾರುಕಟ್ಟೆ ಪ್ರದೇಶಗಳು, ಪ್ರವಾಸಿ ತಾಣಗಳು, ಬಸ್ ನಿಲ್ದಾಣಗಳು, ಇತ್ಯಾದಿಗಳಂತಹ ಸ್ಥಳಗಳಲ್ಲಿ ತಮ್ಮ ಸಂಪರ್ಕ ಸ್ಥಳಗಳ ಮೂಲಕ ಒದಗಿಸುವುದು;

(iv) 24 ಗಂಟೆಗಳ ತೆರೆದ ತಂಗುದಾಣಗಳನ್ನು ನಡೆಸುತ್ತಿರುವಂತಹ ಸಂಸ್ಥೆಗಳು ಅಥವಾ ಅವರ ಪಾಲುದಾರರ ಮೂಲಕ ಸಂಪರ್ಕ ಸ್ಥಳಗಳ ಸ್ಥಾಪನೆ;

(v) ಮಕ್ಕಳ ಆಸಕ್ತಿಯನ್ನು ಆಕರ್ಷಿಸಲು ಹಾಗೂ ಸುಸ್ಥಿರಗೊಳಿಸಲು ಸಂಗೀತ, ನಾಟಕ, ಕತೆ ಹೇಳುವುದು, ಪ್ರವಾಸಗಳು ಹಾಗೂ ಇತರೆ ಮಕ್ಕಳ–ಸ್ನೇಹಿ ವಿಧಾನಗಳ ತಂತ್ರಗಳ ಬಳಕೆ;

(vi) ಮಕ್ಕಳು ಒಮ್ಮೆ ಭಾಗವಹಿಸುವುದನ್ನು ಆರಂಭಿಸಿದರೆ, ಈ ತೆರೆದ ತಂಗುದಾಣದಲ್ಲಿ ಭೌಗೋಳಿಕವಾಗಿ ಸೂಕ್ತವಾಗುವಂತಹ ಶಿಕ್ಷಣ, ವೃತ್ತಿಪರ ತರಬೇತಿ, ಮನರಂಜನೆ, ಸೇತುಬಂಧ ಶಿಕ್ಷಣ, ರಾಷ್ಟ್ರೀಯ ಮುಕ್ತ ಶಾಲಾ ಕಾರ್ಯಕ್ರಮ (ಎನ್‌ಓಎಸ್‌ಪಿ) ಕ್ಕೆ ಸಂಪರ್ಕಗಳು, ಆರೋಗ್ಯ ಸೇವೆ, ಆಪ್ತಸಮಾಲೋಚನೆ, ಇತ್ಯಾದಿಗಳನ್ನು ಪರಿಚಯಸಬೇಕಾಗುತ್ತದೆ;

(vii) ಮಕ್ಕಳಿಗೆ ಉಪಯುಕ್ತ ವೃತ್ತಿಪರ ತರಬೇತಿಯನ್ನು ಒದಗಿಸಲು ಪ್ರತಿ ತೆರೆದ ತಂಗುದಾಣವೂ ಸಹ, ವೃತ್ತಿಪರ ತರಬೇತಿ ಸೌಲಭ್ಯಗಳನ್ನು ಒದಗಿಸಲು ಮಕ್ಕಳನ್ನು ಅಂತಹ ಎನ್‌ಜಿಓ ಗಳಿಗೆ ಕಳುಹಿಸುವ ಮೂಲಕ ಎನ್‌ಜಿಓ ಗಳೊಂದಿಗೆ ಹಾಗೂ ತೆರೆದ ತಂಗುದಾಣದೊಳಗೆ ಅಂತಹ ಸೌಲಭ್ಯಗಳನ್ನು ಒದಗಿಸಲು ಐಟಿ ಕಂಪನಿಗಳೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬೇಕಾಗುತ್ತದೆ;

(viii) ಮಾದಕವಸ್ತುಗಳ ಸೇವನೆ, ನಡವಳಿಕೆ ಸಮಸ್ಯೆಗಳು ಹಾಗೂ ಸಾಮಾಜಿಕವಾಗಿ ವ್ಯತಿರಿಕ್ತವಾದ ನಡವಳಿಕೆಗಳಂತಹ ವ್ಯಕ್ತಿಗತ ನಿರ್ಧಿಷ್ಟ ಅಗತ್ಯಗಳನ್ನು ಪೂರೈಸುವುದು;

(ix) ಸಾಮಾಜಿಕ ಕಾರ್ಯಕರ್ತರು, ಸಮುದಾಯ ಸ್ವಯಂಸೇವಕರು, ಸಮಾನಮನಸ್ಕ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರರ ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು. ಇದು ಕೌಶಲ್ಯಗಳುಳ್ಳ ಜನರಿಗೆ ಮಾರ್ಗದರ್ಶನ ನೀಡಲು ಹಾಗೂ ಇಂತಹ ಮಕ್ಕಳ ಜೀವನದ ಗುಣಮಟ್ಟ ಸುಧಾರಣೆಗೆ ಪೂರಕವಾಗುವಂತಹ ಮಾರ್ಗದರ್ಶನ ನೀಡುವ ಅವಕಾಶವನ್ನು ಒದಗಿಸುತ್ತದೆ;

(x) ಮಕ್ಕಳಿಗೆ, ವ್ಯಕ್ತಿತ್ವ ವಿಕಸನ, ಸ್ವಾಭಿಮಾನ ವೃದ್ಧಿಸುವ, ಜೀವನದ ಕಡೆ ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದುವುದು, ಸಂವಹನಾ ಕೌಶಲ್ಯಗಳ ವೃದ್ಧಿ, ಆಘಾತಗಳನ್ನು ಎದುರಿಸುವ ಕ್ಷಮತೆ, ಅಪಾಯ ಹಾಗೂ ಸಂಕಷ್ಟಗಳನ್ನು ಕಡಿಮೆಗೊಳಿಸುವುದು, ಇತ್ಯಾದಿಗಳಂತಹ ಜೀವನಕೌಶಲ್ಯಗಳನ್ನು ಒದಗಿಸುವುದು;

(xi) ಮಕ್ಕಳಿಗೆ ತಾತ್ಕಾಲಿಕವಾಗಿ ಉಳಿದುಕೊಳ್ಳುವ ಸೌಲಭ್ಯಗಳನ್ನು ಒದಗಿಸುವುದು; ಹಾಗೂ ದೀರ್ಘಾವಧಿ ಪೋಷಣೆಯ ಅಗತ್ಯವಿರುವಂತಹ ಮಕ್ಕಳನ್ನು ಹತ್ತಿರದ ಆಶ್ರಯಗೃಹ/ಮಕ್ಕಳ ಗೃಹಕ್ಕೆ ಉಲ್ಲೇಖಿಸುವುದು;

(xii) ಮಕ್ಕಳಿಗೆ ಅಗತ್ಯ ಸಹಾಯವನ್ನು ಪಡೆಯಲು ಹಾಗೂ ಒದಗಿಸಲು 24–ಗಂಟೆಗಳ ಬಿಕ್ಕಟ್ಟು ನಿರ್ವಹಣಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುವುದು;

(xiii) ಬಾಲಕರು ಹಾಗೂ ಬಾಲಕಿಯರಿಗಾಗಿ ಪ್ರತ್ಯೇಕ ತೆರೆದ ತಂಗುದಾಣಗಳನ್ನು ಸ್ಥಾಪಿಸುವುದು;

(xiv) ಒಂದು ನಗರದಲ್ಲಿ ಒಂದು ಎನ್‌ಜಿಓ ಅಗತ್ಯದ ಪ್ರಕಾರ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ತೆರೆದ ತಂಗುದಾಣಗಳನ್ನು ನಡೆಸಬಹುದು;

(xv) ಮಕ್ಕಳಿಗೆ ದಿನವಿಡೀ ಪ್ರವೇಶವನ್ನು ಒದಗಿಸುವುದು;

(xvi) 18 ವರ್ಷ ವಯಸ್ಸಿನವರೆಗಿನ ಎಲ್ಲಾ ಮಕ್ಕಳಿಗೆ ಪ್ರವೇಶವನ್ನು ಒದಗಿಸುವುದು;

(xvii) ಮಕ್ಕಳಿಗೆ ಗುಣಮಟ್ಟದ ಶೌಚಾಲಯಗಳು, ಅವರ ವಸ್ತುಗಳನ್ನು ಇಟ್ಟುಕೊಳ್ಳಲು ಲಾಕರ್‌ಗಳು, ಬಟ್ಟೆಗಳನ್ನು ಒಗೆಯುವ ಸೌಲಭ್ಯಗಳು, ಒಳಾಂಗಣ ಹಾಗೂ ಹೊರಾಂಗಣ ಎರಡೂ ರೀತಿಯ ಮನರಂಜನಾ ಸೌಲಭ್ಯಗಳು, ಇತ್ಯಾದಿಗಳನ್ನು ಒದಗಿಸುವುದು;

(xviii) ಅಗತ್ಯವಿರುವ ಮಕ್ಕಳಿಗೆ ಮಾದಕವಸ್ತುಗಳ ಸೇವೆಯನ್ನು ತಡೆಗಟ್ಟುವ, ಹೆಚ್‌ಐವಿ/ಏಡ್ಸ್/ಎಸ್‌ಟಿಐಗಳು ಹಾಗೂ ಇತರೆ ಗಂಭೀರ ಸ್ವರೂಪದ ಅನಾರೋಗ್ಯಗಳನ್ನು ತಡೆಗಟ್ಟುವ ವಿಶೇಷ ಸೇವೆಗಳಿಗೆ ಉಲ್ಲೇಖಿಸುವುದು ಹಾಗೂ ಆರೋಗ್ಯ ಸೇವಾ ಸೌಲಭ್ಯಗಳನ್ನು ನೀಡುವುದು;

(xix) ಪೋಷಣೆಯ ಗುಣಮಟ್ಟದ ಮಾಪಕಗಳ (ಮಾನದಂಡಗಳ) ನಿರ್ವಹಣೆ ಹಾಗೂ ಮಕ್ಕಳನ್ನು ತೆರೆದ ತಂಗುದಾಣಗಳ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು;

(xx) ಪ್ರತಿ ಮಗುವಿಗೆ **ವೈಯಕ್ತಿಕ ಪೋಷಣಾ ಯೋಜನೆ** ಯನ್ನು ಸಿದ್ಧಪಡಿಸುವುದು;
ಡಿಸಿಪಿಯು ಅದನ್ನು ಕಾಲಕಾಲದ ಉಸ್ತುವಾರಿ ಮಡುವುದು.

(xxi) ಪ್ರತಿಯೊಂದು ಮಗುವಿನ ವಿವರಗಳ ವಿದ್ಯುನ್ಮಾನ ದತ್ತಾಂಶವನ್ನು ನಿರ್ವಹಿಸಬೇಕು ಹಾಗೂ ಆ ವಿವರಗಳನ್ನು ಮಕ್ಕಳ ನಿಗಾವಣಾ ವ್ಯವಸ್ಥೆಯ ಭಾಗವಾಗಿ ಡಿಸಿಪಿಯು ಗೆ ಸಲ್ಲಿಸಬೇಕು ಹಾಗೂ ನಿರ್ದೇಶನಗಳು ಬಂದಾಗ ಸೇವೆಗಳನ್ನು ಪಡೆಯುತ್ತಿರುವ ಮಕ್ಕಳ ಹೆಸರುಗಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ಒದಗಿಸಬೇಕು.

## 8. ವಸತಿ ಅಗತ್ಯ:

(i) 25 ಮಕ್ಕಳ ಒಂದು ಘಟಕ, ಅಡುಗೆ ಕೋಣೆ, ಎರಡು ಶೌಚಾಲಯಗಳು ಹಾಗೂ ಎರಡು ಸ್ನಾನದ ಮಕ್ಕಳ ಪಾಲನಾ ಸಂಸ್ಥೆಗಳು ಒಳಗೊಂಡಂತೆ ಕನಿಷ್ಠ 2,000 ಚದರ ಅಡಿ ಕಾರ್ಪೆಟ್ ಪ್ರದೇಶವನ್ನು ಹೊಂದಿರಬೇಕು.

(ii) ಈ ತೆರೆದ ತಂಗುದಾಣಗಳನ್ನು ನಡೆಸುತ್ತಿರುವ ಎನ್‌ಜಿಓ ಗಳು ತಮ್ಮ ತೆರೆದ ತಂಗುದಾಣಗಳಿಗೆ ಸೂಕ್ತ ವಸತಿ ಅಥವಾ ಸಂಪರ್ಕ ಬಿಂದುಗಳಿಗಾಗಿ ಮುನಿಸಿಪಲ್ ನಿಗಮಗಳು, ಜಿಲ್ಲಾ ಪರಿಷತ್‌ಗಳು, ಕೊಳಗೇರಿ ಮಂಡಳಿಗಳು, ರೈಲ್ವೆ ಹಾಗೂ ಸಾರಿಗೆ ಪ್ರಾಧಿಕಾರಗಳನ್ನು ಸಂಪರ್ಕಿಸಬಹುದು.

(iii) ವಸತಿ ವ್ಯವಸ್ಥೆಯನ್ನು ಮಾಡಲು ಎನ್‌ಜಿಓ ಗಳು ಡಿಸಿಪಿಯು ನ ನೆರವನ್ನು ಕೋರಬಹುದು. ಅನುಬಂಧ-VIII ರ ಪ್ರಕಾರ ತೆರೆದ ತಂಗುದಾಣಗಳನ್ನು ಸ್ಥಾಪಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶಗಳ ಮೂಲಕ ಹಣಕಾಸಿನ ನೆರವನ್ನು ಒದಗಿಸಲಾಗುತ್ತದೆ. ಒಂದು ವೇಳೆ ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶಕ್ಕೆ ಈ ತೆರೆದ ತಂಗುದಾಣಗಳನ್ನು ನಡೆಸಲು ಸೂಕ್ತವಾದಂತಹ ಸ್ವಯಂಸೇವಾ ಸಂಸ್ಥೆಯನ್ನು ಪತ್ತೆ ಹಚ್ಚುವುದು ಸಾಧ್ಯವಾಗದಿದ್ದಲ್ಲಿ, ಆ ರಾಜ್ಯ/ಕೇಂದ್ರಾಡಳಿತ ಪ್ರದೇಶವೇ ಈ ಹಣವನ್ನು ಬಳಸಿಕೊಂಡು ಕೇಂದ್ರಗಳನ್ನು ನಡೆಸಬಹುದು.

## C.ಪ್ರಾಯೋಜಕತ್ವ, ಫಾಸ್ಟರ್ ಕೇರ್, ದತ್ತು ಮತ್ತು ಅನುಪಾಲನಾ ಸೇವೆಗಳ ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆ.

1. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಹಾಗೂ ಅದರಡಿ ರೂಪಿಸಿರುವ ಮಾದರಿ ನಿಯಮಗಳು ಪ್ರಾಯೋಜಕತ್ವ, ಫಾಸ್ಟರ್ ಕೇರ್, ದತ್ತು ಹಾಗೂ ಅನುಪಾಲನಾ ಸೇವೆಗಳ ಮೂಲಕ ಮಕ್ಕಳಿಗೆ ಪುನರ್ವಸತಿ ಹಾಗೂ ಪುನರ್‌ಸಂಯೋಜನೆಗೊಳಿಸುತ್ತದೆ.

## 2. ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ (ಪೋಷಕತ್ವ)

2.1 **ಮುಖ್ಯ ಪರಿಕಲ್ಪನೆಗಳು:** ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಸಹಾಯ, ಸಾಂಸ್ಥಿಕ ಪೋಷಣೆಯ ಹೋಲಿಕೆಯಲ್ಲಿ ಕೇವಲ **ದರ** ಪರಿಣಾಮಕಾರಿಯಷ್ಟೇ ಅಲ್ಲದೆ ಅದು:

i) ಮಗು ನಿರ್ಗತಿಕವಾಗುವುದನ್ನು ತಡೆಯುತ್ತದೆ ಹಾಗೂ ಸಮಗ್ರ ಮಕ್ಕಳ ರಕ್ಷಣೆಯನ್ನು ಒದಗಿಸುತ್ತದೆ;

ii) ಮಗು ಆತ/ಆಕೆಯ ಶಿಕ್ಷಣವನ್ನು ಮುಂದುವರೆಸುವುದನ್ನು ಖಾತ್ರಿಪಡಿಸಲು ಷರತ್ತು ಆಧಾರಿತ ಸಹಾಯವನ್ನು ಒದಗಿಸುತ್ತದೆ;

iii) ಕುಟುಂಬಗಳು ಹಾಗೂ ಸಮೂಹ ಪೋಷಣಾ ಗೃಹಗಳನ್ನು ಬೆಂಬಲಿಸುವುದು ಹಾಗೂ ಹಣಕಾಸು ನೆರವಿನ ಮೇಲ್ವಿಚಾರಣೆ ಮಾಡುವುದು;

iv) ಕುಟುಂಬದ ವ್ಯವಸ್ಥೆಯೊಳಗೆ ಮಗುವಿನ ಪೋಷಣೆ;

v) ಕುಟುಂಬಗಳ ಸಂರಕ್ಷಣೆ ಹಾಗೂ ಪೋಷಕರಿಗೆ ಅವರ ಜವಾಬ್ದಾರಿಗಳನ್ನು ಪೂರೈಸಲು ಪ್ರೋತ್ಸಾಹ ನೀಡುವುದು;

2.2 ಐಸಿಪಿಎಸ್, ಡಿಸಿಪಿಯು ವಿಲೇವಾರಿ ಮಾಡಬಲ್ಲಂತಹ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ನಿಧಿಯ ಸೃಷ್ಟಿಯನ್ನು ಬೆಂಬಲಿಸುತ್ತದೆ. ಈ ಯೋಜನೆಯಡಿ ಪ್ರತಿ ಜಿಲ್ಲೆಗೆ ವಾರ್ಷಿಕ ರೂ. 10 ಲಕ್ಷವನ್ನು ಒದಗಿಸಲಾಗುವುದು. ರಾಜ್ಯ ಸರ್ಕಾರಗಳನ್ನು ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ನಿಧಿಯಡಿ ಹೆಚ್ಚುವರಿ ಅನುದಾನವನ್ನು ನೀಡುವಂತೆ ಪ್ರೋತ್ಸಾಹಿಸುವುದು ಹಾಗೂ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಸಂಸ್ಥೆಗಳ ಬೆಂಬಲದೊಂದಿಗೆ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳನ್ನು ಸಕ್ರಿಯವಾಗಿ ಗುರುತಿಸುವ ಕ್ರಮಗಳನ್ನು ಕೈಗೊಳ್ಳಬಹುದು.

**2.3 ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್‌ಎಫ್‌ಸಿಎಸಿ (SFCAC)):** ಪ್ರಾಯೋಜಕತ್ವ ಮಂಜೂರಾತಿ (ತಡೆಗಟ್ಟುವ ಕೆಲಸಗಳಿಗಾಗಿ ಮಾತ್ರ) ಹಾಗೂ ಫಾಸ್ಟರ್ ಕೇರ್ ನಿಧಿಯನ್ನು ಪುನರ್‌ಪರಿಶೀಲಿಸಲು ಪ್ರತಿ ಜಿಲ್ಲೆಯಲ್ಲಿಯೂ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿಯಿರಬೇಕು. ಎಸ್‌ಎಫ್‌ಸಿಎಸಿ ಯು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಒಂದು ಪ್ರಕರಣವನ್ನು, ಅರ್ಜಿಯ ದಿನಾಂಕದಿಂದ ಮೂರು ತಿಂಗಳೊಳಗಾಗಿ ವಿಲೇವಾರಿ ಮಾಡಬೇಕು. ಎಸ್‌ಎಫ್‌ಸಿಎಸಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ:

(i) ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ – ಅಧ್ಯಕ್ಷರು

(ii) ರಕ್ಷಣಾ ಅಧಿಕಾರಿ (ಸಾಂಸ್ಥಿಕೇತರ ಪೋಷಣೆ) – ಸದಸ್ಯರು

(iii) ಅಧ್ಯಕ್ಷ/ಸದಸ್ಯ, ಮಕ್ಕಳ ಕಲ್ಯಾಣ ಸಮಿತಿ – ಸದಸ್ಯರು

(iv) ಎಸ್‌ಎಎ ಪ್ರತಿನಿಧಿ – ಸದಸ್ಯ

(v) ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿ– ಸದಸ್ಯ

## 3. ಪ್ರಾಯೋಜಕತ್ವ

**3.1 ಪ್ರಾಯೋಜಕತ್ವಕ್ಕೆ ಕಾರಣಗಳು:** ಈ ಕೆಳಕಂಡ ಕಾರಣಗಳಿಗಾಗಿ ಪ್ರಾಯೋಜಕತ್ವ ಬೆಂಬಲವನ್ನು ಒದಗಿಸಲಾಗುವುದು:

**i) ತಡೆಗಟ್ಟುವಿಕೆ:** ಮಗು ಕುಟುಂಬದಲ್ಲಿ ಇರುವುದನ್ನು ಮುಂದುವರಿಸಲು, ಆತ/ಆಕೆಯ ಶಿಕ್ಷಣವನ್ನು ಮುಂದುವರಿಸಲು ನೆರವಾಗುವಂತೆ ಕುಟುಂಬಕ್ಕೆ ಪ್ರಾಯೋಜಕತ್ವ ಬೆಂಬಲ ಒದಗಿಸಲಾಗುವುದು. ಇದು ಮಕ್ಕಳಿಗೆ ನಿರ್ಗತಿಕ/ಸಂಕಷ್ಟಕ್ಕೀಡಾಗುವುದು, ಓಡಿ ಹೋಗುವುದು, ಬಲವಂತದ ಬಾಲ್ಯವಿವಾಹ, ಬಾಲಕಾರ್ಮಿಕತೆ, ಇತ್ಯಾದಿಗಳಂತಹ ಕೆಲಸಗಳಲ್ಲಿ ತೊಡಗುವುದನ್ನು ತಡೆಗಟ್ಟುವ ಪ್ರಯತ್ನವಾಗಿದೆ. ಡಿಸಿಪಿಯು, ತನ್ನ ಸಾಮಾಜಿಕ ಕಾರ್ಯಕರ್ತರು, ಔಟ್‌ರೀಚ್ ಕಾರ್ಯಕರ್ತರು, ಸ್ವಯಂಸೇವಕರು ಹಾಗೂ **ಗ್ರಾಮ ಮಕ್ಕಳ ರಕ್ಷಣಾ ಸಮಿತಿಗಳ** ನೆರವಿನೊಂದಿಗೆ, ಪ್ರಾಯೋಜಕತ್ವ ಬೆಂಬಲ ಒದಗಿಸಲು ಸಂಕಷ್ಟದಲ್ಲಿರುವ ಕುಟುಂಬಗಳು ಅಥವಾ ಮಕ್ಕಳನ್ನು ಗುರುತಿಸುತ್ತದೆ. ತಡೆಗಟ್ಟುವ ಪ್ರಾಯೋಜಕತ್ವಕ್ಕಾಗಿ ಮಾರ್ಗಸೂಚಿಗಳನ್ನು ಎಂಡಬ್ಲ್ಯೂಸಿಡಿ ಸಿದ್ಧಪಡಿಸುತ್ತದೆ.

***ii) ಪುನರ್ವಸತಿ:*** ಪ್ರಾಯೋಜಕತ್ವದ ಸಹಾಯದೊಂದಿಗೆ ಸಂಸ್ಥೆಗಳೊಳಗಿನ ಮಕ್ಕಳನ್ನೂ ಸಹ ಅವರು ಕುಟುಂಬಗಳೊಂದಿಗೆ ಸೇರಿಸಬಹುದು. **ವೈಯಕ್ತಿಕ ಪೋಷಣಾ ಯೋಜನೆ** ಯ ಆಧಾರದ ಮೇಲೆ ಒಂದು ಸಂಸ್ಥೆಯು, ಪ್ರಾಯೋಜಕತ್ವ ನಿಧಿಯ ಮೂಲಕ ಪುನರ್ವಸತಿಗಾಗಿ ಡಿಸಿಪಿಯು ಗೆ ಸೂಕ್ತ ಪ್ರಕರಣವನ್ನು ಶಿಫಾರಸ್ಸು ಮಾಡುವಂತೆ ಸಿಡಬ್ಲ್ಯೂಸಿ/ಜೆಜೆಬಿಯನ್ನು ಕೋರಬಹುದು. ಇಂತಹ ಪ್ರಕರಣಗಳನ್ನು ಪ್ರಾಯೋಜಕತ್ವ ನಿಧಿಗೆ ಮಂಜೂರಾತಿ ಕೋರಲು ಡಿಸಿಪಿಯು ಗೆ ಶಿಫಾರಸ್ಸು ಮಾಡುವ ಮುಂಚೆ ಸಿಡಬ್ಲ್ಯೂಸಿ/ಜೆಜೆಬಿ ವತಿಯಿಂದ ಪುನರ್‌ಪರಿಶೀಲಿಸಲಾಗುತ್ತದೆ. ಪುನರ್ವಸತಿ ಪ್ರಾಯೋಜಕತ್ವದ ಮಾರ್ಗಸೂಚಿಗಳನ್ನು ಅಂತಿಮಗೊಳಿಸಿ ಹಾಗೂ ಅದನ್ನು www.wcd.nic.in ಗೆ ಕಳುಹಿಸಬಹುದು.

### 3.2 ಪ್ರಾಯೋಜಕತ್ವಕ್ಕಾಗಿ ಮಕ್ಕಳ ಆಯ್ಕೆಯ ಮಾನದಂಡ:

i) ಸಂಸ್ಥೆಗಳಲ್ಲಿರುವ ಮಕ್ಕಳನ್ನು ಕುಟುಂಬಗಳೊಂದಿಗೆ ಪುನಃ ಸೇರಿಸುವಂತಹ ಮಕ್ಕಳಿಗೆ (de-institutionalization)

ii) ಈ ಕೆಳಗೆ ತಿಳಿಸಿರುವಂತೆ ಕುಟುಂಬದ ಆದಾಯವನ್ನು ಮೀರದಿರುವಂತಹ, ತೀವ್ರ ಬಡತನದ ಪರಿಸ್ಥಿತಿಯಲ್ಲಿರುವಂತಹ ಮಕ್ಕಳಿಗೆ ಪ್ರಾಯೋಜಕತ್ವಕ್ಕೆ, ವಸತಿ ಬಡಾವಣೆಯ ವಿಧಗಳು, ಸಾಮಾಜಿಕ ಬಡತನ ಹಾಗೂ ವೃತ್ತಿಗಳಂತಹ " proxy parameters" ಗಳನ್ನು ಆಧರಿಸಿ ಆಯ್ಕೆ ಮಾಡಲಾಗುತ್ತದೆ:

a) ಮಹಾನಗರಗಳಲ್ಲಿ ವಾರ್ಷಿಕ ಗರಿಷ್ಠ ರೂ.36,000

b) ಇತರೆ ನಗರಗಳಲ್ಲಿ ವಾರ್ಷಿಕ ಗರಿಷ್ಠ ರೂ.30,000

c) ಗ್ರಾಮೀಣ ಪ್ರದೇಶಗಳಲ್ಲಿ ವಾರ್ಷಿಕ ಗರಿಷ್ಠ ರೂ.24,000

ತಡೆಗಟ್ಟುವಿಕೆ ಪ್ರಾಯೋಜಕತ್ವದ ಅನುಷ್ಠಾನಕ್ಕಾಗಿ ಎಂಡಬ್ಲ್ಯೂಸಿಡಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕಾಗಿರುವುದರಿಂದ ಪ್ರಸ್ತುತ ಈ ಮಾನದಂಡವು ಕೇವಲ ಸೂಚಕದಂತಿದೆ.

### 3.3 ಪ್ರಾಯೋಜಕತ್ವ ಕಾರ್ಯಕ್ರಮದಡಿ ಮಂಜೂರಾತಿ ಹಾಗೂ ಹಣ ಬಿಡುಗಡೆಯ ವಿಧಾನ:

i) ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ಪ್ರಾಯೋಜಕತ್ವದ ಮೊತ್ತ ರೂ.2,000/– ಗಳಾಗಿರುತ್ತದೆ ಹಾಗೂ ಎಂಡಬ್ಲ್ಯೂಸಿಡಿ ವತಿಯಿಂದ ನಿಗದಿಪಡಿಸುವಂತಹ ಮುಂದಿನ ಮಾರ್ಗಸೂಚಿಗಳ ಪ್ರಕಾರ ಇರುತ್ತದೆ.

ii) ಡಿಸಿಪಿಒ ಮಗುವಿನ ಹೆಸರಿನಲ್ಲಿ ಬ್ಯಾಂಕ್/ಅಂಚೆ ಕಚೇರಿ ಖಾತೆಯನ್ನು ತೆರೆಯಬೇಕು. ಈ ಖಾತೆಯನ್ನು ಮಗುವಿನ ಆದ್ಯತೆಯಂತೆ ತಾಯಿ ಅಥವಾ ಪಾಲಕ ನಿರ್ವಹಿಸಬೇಕು.

iii) ಯಾವುದೇ ರೀತಿಯ ನಗದು ವರ್ಗಾವಣೆ ಇರುವುದಿಲ್ಲ. ಹಣವನ್ನು ಡಿಸಿಪಿಯು ನ ಬ್ಯಾಂಕ್ ಖಾತೆಯಿಂದ ನೇರವಾಗಿ ಈ ಬ್ಯಾಂಕ್/ಅಂಚೆ ಕಚೇರಿಗೆ ವರ್ಗಾಯಿಸಲಾಗುತ್ತದೆ.

iv) ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿಯು, ಪ್ರಾಯೋಜಕತ್ವ ಸಹಾಯ ನೀಡುವುದನ್ನು ನಿರ್ಧರಿಸಲು ಹಾಗೂ ಡಿಸಿಪಿಯು/ಎಸ್ಎಎ ದಲ್ಲಿರುವ ಸಾಮಾಜಿಕ ಕಾರ್ಯಕರ್ತ ಅಥವಾ ಔಟ್‌ರೀಚ್ ಕಾರ್ಯಕರ್ತರೊಬ್ಬರಿಂದ, ಮನೆ ಮತ್ತು ಶಾಲಾ ವಿಚಾರಣಾ ವರದಿ ಒಳಗೊಂಡಂತೆ ಪೂರಕ ದಾಖಲಾತಿಗಳನ್ನು ಕೋರುವ ಅಧಿಕಾರವನ್ನು ಹೊಂದಿರುತ್ತದೆ.

v) ಪ್ರಾಯೋಜಕತ್ವ ಬೆಂಬಲದ ಅವಧಿಯನ್ನು, ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ ವತಿಯಿಂದ ಆಯಾ ಪ್ರಕರಣವನ್ನು ಆಧರಿಸಿ ನಿರ್ಧರಿಸಲಾಗುವುದು ಹಾಗೂ ವಿಶೇಷ ಸಂದರ್ಭಗಳನ್ನು ಹೊರತುಪಡಿಸಿದಂತೆ ಮೂರು ವರ್ಷಗಳನ್ನು ಮೀರುವಂತಿಲ್ಲ;

vi) ಪ್ರಾಯೋಜಕತ್ವ ಬೆಂಬಲ ಪ್ರತಿ ಕುಟುಂಬಕ್ಕೆ ಗರಿಷ್ಠ ಇಬ್ಬರು ಮಕ್ಕಳಿಗೆ ಇರುತ್ತದೆ;

vii) ಮಕ್ಕಳು ಹಾಗೂ ಕುಟುಂಬಗಳ ಮೇಲ್ವಿಚಾರಣಾ ಜವಾಬ್ದಾರಿಯನ್ನು ಡಿಸಿಪಿಯು ವಹಿಸಿಕೊಳ್ಳುತ್ತದೆ ಹಾಗೂ ಇದರಲ್ಲಿ ಮೂರು ತಿಂಗಳಿಗೊಮ್ಮೆ ಮನೆ ಹಾಗೂ ಶಾಲಾ ಭೇಟಿಗಳನ್ನು ಒಳಗೊಂಡಿರುತ್ತದೆ;

viii) ಶಾಲೆಗೆ ಹೋಗುವ ವಯಸ್ಸಿನ ಎಲ್ಲಾ ಪ್ರಾಯೋಜಕತ್ವದ ಮಕ್ಕಳು ವಿಕಲಚೇತನತೆ ಹೊಂದಿರುವುದರ ಹೊರತು ಅಥವಾ ಅನಾರೋಗ್ಯಪೀಡಿತವಾಗಿರುವುದರ ಹೊರತಾಗಿ ಕಡ್ಡಾಯವಾಗಿ ಔಪಚಾರಿಕ ಶಾಲೆಗೆ ಹೋಗಬೇಕು. ಇದನ್ನು ಡಿಸಿಪಿಯು ಪರಿಶೀಲಿಸುತ್ತದೆ.

ix) ಪ್ರಾಯೋಜಕತ್ವ ನಿಧಿಯನ್ನು ಪಡೆಯುತ್ತಿರುವ ಕುಟುಂಬಗಳು ಆಪ್ತಸಮಾಲೋಚನಾ ಬೆಂಬಲವನ್ನು ಹೊಂದುವಂತಿರಬೇಕು.

x) ಯಾವುದೇ ಸಮಯದಲ್ಲಾದರೂ ಯಾವುದೇ ಮಗುವಿಗೆ ಸಾಂಸ್ಥೀಕರಣದ ಅಗತ್ಯ ಬಿದ್ದಲ್ಲಿ ಪ್ರಾಯೋಜಕತ್ವದ ಸಹಾಯವನ್ನು ಮುಂದುವರಿಸಲಾಗುವುದಿಲ್ಲ.

xi) ಒಂದು ವೇಳೆ ಶಾಲೆಗೆ ಹೋಗುತ್ತಿರುವ ಮಗು ಶಾಲೆಗೆ ದಿನ ಹೋಗದಿರುವುದು ಕಂಡು ಬಂದರೆ ತತ್‌ಕ್ಷಣವೇ ಪ್ರಾಯೋಜಕತ್ವದ ಸಹಾಯವನ್ನು ನಿಲ್ಲಿಸಲಾಗುವುದು.

ಪ್ರಾಯೋಜಕತ್ವದ ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಗಾಗಿ ಒದಗಿಸುವ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ–I ರಲ್ಲಿ ನೀಡಿದೆ (ಕೋಷ್ಠಕ 5.1, ಕ್ರ. ಸಂ. 7)

## 4. ಫಾಸ್ಟರ್ ಕೇರ್.(ಪೋಷಕತ್ವ)

4.1 ಫಾಸ್ಟರ್ ಕೇರ್ ಎಂದರೆ ಮಗು ವಾಸಿಸುವ ಒಂದು ವ್ಯವಸ್ಥೆ, ಸಾಮಾನ್ಯವಾಗಿ ಸಂಬಂಧವಿಲ್ಲದ ಕುಟುಂಬ ಸದಸ್ಯರೊಂದಿಗೆ ತಾತ್ಕಾಲಿಕವಾಗಿ. ಇಂತಹ ಒಂದು ವ್ಯವಸ್ಥೆಯಡಿ ಜನ್ಮ ನೀಡಿದ ಪೋಷಕರು ತಮ್ಮ ಯಾವುದೇ ಪೋಷಣಾ ಹಕ್ಕುಗಳು ಅಥವಾ ಜವಾಬ್ದಾರಿಗಳಿಂದ ವಂಚಿತವಾಗುವುದಿಲ್ಲ. ದತ್ತು ಪಡೆಯಲು ಕಾನೂನಾತ್ಮಕವಾಗಿ ಮುಕ್ತವಲ್ಲದಿರುವಂತಹ ಮಕ್ಕಳು ಹಾಗೂ ಅವರ ಪೋಷಕರು ಅನಾರೋಗ್ಯ, ಸಾವು, ಓರ್ವ ಪೋಷಕರಿಂದ ಪರಿತ್ಯಜಿಸಲ್ಪಟ್ಟಾಗ ಅಥವಾ ಮತ್ಯಾವುದಾದರೂ ರೀತಿಯ ಗಂಡಾಂತರದಿಂದಾಗಿ ಮಗು ಅಥವಾ ಮಕ್ಕಳನ್ನು ನೋಡಿಕೊಳ್ಳಲು ಆಗದಿರುವಂತಹ ಸಂದರ್ಭಗಳಲ್ಲಿ ಈ ವ್ಯವಸ್ಥೆ ಮಗು/ಮಕ್ಕಳ ಪೋಷಣೆಯನ್ನು ನೋಡಿಕೊಳ್ಳಲಾಗುತ್ತದೆ. ಕಾಲ ಕ್ರಮೇಣ ಮಗುವನ್ನು ಆತ/ಆಕೆಯ ಕುಟುಂಬದೊಂದಿಗೆ ಪರಿಸ್ಥಿತಿ ಸುಧಾರಿಸಿದ ನಂತರ ಪುನಃ ಒಟ್ಟುಗೂಡಿಸುವುದು ಈ ವ್ಯವಸ್ಥೆಯ ಗುರಿಯಾಗಿದೆ ಹಾಗೂ ಈ ಮೂಲಕ ಸಂಕಷ್ಟದಲ್ಲಿರುವ ಮಕ್ಕಳ ಸಾಂಸ್ಥೀಕರಣವನ್ನು ತಡೆಗಟ್ಟುವುದಾಗಿದೆ. ಈ ಯೋಜನೆಯು ಡಿಸಿಪಿಯು ಬಳಿಯಿರುವಂತಹ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ನಿಧಿಯ ಮೂಲಕ ಫಾಸ್ಟರ್ ಕೇರ್‌ನ್ನು ಬೆಂಬಲಿಸುತ್ತದೆ. ಈ ಫಾಸ್ಟರ್ ಕೇರ್ ಕಾರ್ಯಕ್ರಮವನ್ನು ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ವಿಶೇಷ ದತ್ತು ಏಜೆನ್ಸಿ/ಮಕ್ಕಳ ಪೋಷಣಾ ಸಂಸ್ಥೆಗಳು ಜಂಟಿಯಾಗಿ ನಿರ್ವಹಿಸಬಹುದು ಹಾಗೂ ಈ ಪ್ರತಿ ಏಜೆನ್ಸಿಯೂ ಸಹ ಈ ಕೆಳಕಂಡ ಜವಾಬ್ದಾರಿಗಳನ್ನು ಹೊಂದಿರಬೇಕು:

## (i) ವಿಶೇಷ ದತ್ತು ಏಜೆನ್ಸಿ (ಎಸ್‌ಎಎ)/ ಮಕ್ಕಳ ಪಾಲನಾ ಸಂಸ್ಥೆಗಳು (ಸಿಸಿಐ)

ಎಸ್‌ಎಎ ಫಾಸ್ಟರ್ ಕೇರ್ ಬೆಂಬಲಕ್ಕಾಗಿ ಸಂಕಷ್ಟದಲ್ಲಿರುವಂತಹ ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸುತ್ತದೆ ಹಾಗೂ **ಮಗುವಿನ ವೈಯಕ್ತಿಕ ಪೋಷಣಾ ಯೋಜನೆಯನ್ನು ಸಿದ್ಧಪಡಿಸಿ,** ಪ್ರಕರಣವನ್ನು ಸೂಕ್ತ ಆದೇಶಕ್ಕಾಗಿ ಸಿಡಬ್ಲೂ ಸಿ ಗೆ ಶಿಫಾರಸ್ಸು ಮಾಡುತ್ತದೆ. ಒಮ್ಮೆ ಮಗುವನ್ನು ಫಾಸ್ಟರ್ ಕೇರ್‌ಗೆ ಸೇರಿಸಿದ ನಂತರ, ಎಸ್‌ಎಎ/ಸಿಸಿಐ ಆ ಮಗುವಿನ ಪ್ರಗತಿಯ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಮಾಡುತ್ತಾರೆ ಹಾಗೂ ಸಿಡಬ್ಲ್ಯುಸಿ ಹಾಗೂ ಡಿಸಿಪಿಯು ಗೆ ನಿಯತಕಾಲಿಕವಾಗಿ ವರದಿಯನ್ನು ನೀಡಬೇಕು.

## (ii) ಮಕ್ಕಳ ಕಲ್ಯಾಣ ಸಮಿತಿ

ಸಿಡಬ್ಲ್ಯುಸಿ ಯು ಎಸ್‌ಎಎ ಹಾಗೂ ಅರ್ಹ ಎಂದು ಪರಿಗಣಿಸುವಂತಹ ಇತರೆ ಪ್ರಕರಣಗಳ ಪುನರ್‌ಪರಿಶೀಲನೆಯನ್ನು ಮಾಡುತ್ತದೆ ಹಾಗೂ ಮಗುವನ್ನು ಫಾಸ್ಟರ್ ಕೇರ್ ಗೆ ಸೇರಿಸುತ್ತದೆ.

## (iii) ಜಿಲ್ಲಾ ಮಕ್ಕಳ ರಕ್ಷಣಾ ಘಟಕ

a) ಫಾಸ್ಟರ್ ಕೇರ್ ಕಾರ್ಯಕ್ರಮದ ಕುರಿತು ಅರಿವು ಮೂಡಿಸುವಿಕೆ;

b) ಸಮುದಾಯದಲ್ಲಿ ಫಾಸ್ಟರ್ ಕೇರ್‌ನ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಬಯಸುವ ಕುಟುಂಬಗಳನ್ನು ನೇಮಕ ಮಾಡುವುದು ಹಾಗೂ ಇಂತಹ ಫಾಸ್ಟರ್ ಕೇರ್ ನಡೆಸುವ ಕುಟುಂಬಗಳ ವಿಳಾಸಗಳ ವಿವರಗಳ ಪಟ್ಟಿಯನ್ನು ನಿರ್ವಹಿಸುವುದು;

c) ಸಂಬಂಧಪಟ್ಟ ರಾಜ್ಯ ಸರಕಾರವು ಅನುಮೋದಿತ ಮಾನದಂಡವನ್ನು ಆಧರಿಸಿ ಫಾಸ್ಟರ್ ಕೇರ್ ಕುಟುಂಬಗಳ ಆಯ್ಕೆ ಹಾಗೂ ಅವುಗಳ ಸಾಮರ್ಥ್ಯಾಭಿವೃದ್ಧಿ;

d) ಕನಿಷ್ಠ ಎರಡು ಬಾರಿ ಮನೆಗೆ ಭೇಟಿ ನೀಡಿದ ನಂತರ, ಫಾಸ್ಟರ್ ಕೇರ್‌ನ್ನು ನಡೆಸುವ ಪಾಲಕರೊಂದಿಗೆ ಸಂದರ್ಶನಗಳು ಹಾಗೂ ಕುಟುಂಬದ ಇತರರೊಂದಿಗೆ ಸಂದರ್ಶನಗಳನ್ನು ನಡೆಸಿದ ನಂತರ ಸಂಭವನೀಯ ಫಾಸ್ಟರ್ ಕೇರ್ ಕುಟುಂಬದ ಗೃಹ ಅಧ್ಯಯನ ವರದಿಯನ್ನು ಸಿದ್ಧಪಡಿಸುವುದು;

e) ನಿಗಧಿಪಡಿಸಿರುವಂತೆ ಸೂಕ್ತ ಮಾದರಿಯಲ್ಲಿ ಪ್ರತಿ ಮಗುವಿನ ವಿವರವಾದ ಪ್ರಕರಣ ಚರಿತ್ರೆಯನ್ನು ನಿರ್ವಹಿಸುವುದು;

f) ಜವಾಬ್ದಾರಿ ವಹಿಸಿಕೊಳ್ಳಲು ಅವರನ್ನು ಸಿದ್ಧಪಡಿಸಲು ಹಾಗೂ ಅವರು ಎದುರಿಸಬಹುದಾದಂತಹ ವಾಸ್ತವ ಸಮಸ್ಯೆಗಳನ್ನು ನಿರ್ವಹಿಸಲು ಸಶಕ್ತರಾಗುವಂತೆ ಸಜ್ಜುಗೊಳಿಸಲು ಕುಟುಂಬಕ್ಕೆ ಹಾಗೂ ಮಗುವಿಗೆ ಆಪ್ತಸಮಾಲೋಚನೆಯನ್ನು ಒದಗಿಸುವುದು;

g) ಔಟ್‌ರೀಚ್ ಕಾರ್ಯಕರ್ತರು ಮೊದಲ ತಿಂಗಳಲ್ಲಿ ಕನಿಷ್ಠ ವಾರಕ್ಕೊಮ್ಮೆ ಇಂತಹ ಪ್ರತಿ ಕುಟುಂಬಕ್ಕೆ ಭೇಟಿ ನೀಡಬೇಕು ಹಾಗೂ ನಂತರದ ತಿಂಗಳುಗಳಲ್ಲಿ ಮಾಸಿಕ ಭೇಟಿ ನೀಡಿ ವರದಿಗಳನ್ನು ನಿರ್ವಹಿಸಬೇಕು;

h) ಪ್ರತಿ ಮಗುವಿನ ತ್ರೈಮಾಸಿಕ ಮೇಲ್ವಿಚಾರಣಾ ವರದಿಗಳನ್ನು ನಿರ್ವಹಿಸಬೇಕು ಹಾಗೂ ಅದನ್ನು ಗೌಪ್ಯವಾಗಿರಿಸಬೇಕು;

i) ಕಾರ್ಯಕ್ರಮದ ಉಸ್ತುವಾರಿ ಹಾಗೂ ಮೌಲ್ಯಮಾಪನ.

ಹೆಚ್‌ಐವಿ/ಏಡ್ಸ್ ಸೋಂಕಿತ ಮಕ್ಕಳಿಗೆ ಹಾಗೂ ನೈಸರ್ಗಿಕ ವಿಕೋಪಗಳಿಂದ ಸಂಕಷ್ಟದಲ್ಲಿರುವಂತಹ ಮಕ್ಕಳಿಗೆ ಫಾಸ್ಟರ್ ಕೇರ್ ಅಥವಾ ಪ್ರಾಯೋಜಕತ್ವ ಯೋಜನೆಯನ್ನು ಖಾತ್ರಿಪಡಿಸಲು ವಿಶೇಷ ಪ್ರಯತ್ನಗಳನ್ನು ಮಾಡುವುದು.

**4.2 ಫಾಸ್ಟರ್ ಕೇರ್ ಕಾರ್ಯಕ್ರಮದಡಿ ಹಣ ಮಂಜೂರಾತಿ ಹಾಗೂ ಬಿಡುಗಡೆಯ ವಿಧಾನ**

ಫಾಸ್ಟರ್ ಕೇರ್ ಕಾರ್ಯಕ್ರಮವನ್ನು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 (ತಿದ್ದುಪಡಿ ಕಾಯ್ದೆ, 2006) ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಸೂಚಿತ ನಿಯಮಗಳಡಿ ಸೂಚಿಸಿರುವಂತಹ ನಿಬಂಧನೆಗಳ ಪ್ರಕಾರ ಅನುಷ್ಠಾನಗೊಳಿಸಲಾಗುವುದು. ಒಂದು ತಿಂಗಳಿಗೆ ಒಂದು ಮಗುವಿಗೆ ನೀಡುವ ಪೋಷಣಾ ಮೊತ್ತದ ಪ್ರಮಾಣ ರೂ.2,000/-ಗಳಾಗಿದ್ದು, ಫಾಸ್ಟರ್ ಕೇರ್ ಕಾರ್ಯಕ್ರಮವನ್ನು ಕೈಗೊಳ್ಳಲು ಜೆಜೆ ಕಾಯ್ದೆ ಹಾಗೂ ಕೇಂದ್ರ ಮಾದರಿ ನಿಯಮಗಳು, 2007ರಡಿ ಇರುವ 34 ಹಾಗೂ 35ನೇ ನಿಯಮಗಳು ನಿಗಧಿಪಡಿಸಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಇರುತ್ತದೆ.

ಫಾಸ್ಟರ್ ಕೇರ್ ಯೋಜನೆಯ ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಗೆ ನೀಡುವ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ (ಕೋಷ್ಟಕ 5.1, ಕ್ರ.ಸಂ.7)

# 5. ದತ್ತು

5.1 ಮಗುವಿನ ಪೋಷಕರು ಮರಣ ಹೊಂದಿರುವ ಕಾರಣದಿಂದಾಗಿ ಅಥವಾ ಮಗುವನ್ನು ಪರಿತ್ಯಜಿಸಿರುವುದು, ಅಥವಾ ಮಗುವನ್ನು ವಶಕ್ಕೆ ಒಪ್ಪಿಸಿರುವಂತಹ ಕಾರಣಗಳಿಂದಾಗಿ ಜನ್ಮ ನೀಡಿರುವ ಪೋಷಕರಿಂದ ಖಾಯಂ ಆಗಿ ಪ್ರತ್ಯೇಕಗೊಂಡಿರುವ ಮಗು, ಹೊಸ ಸಂಬಂಧದ ಎಲ್ಲಾ ಹಕ್ಕುಗಳು, ಅನುಕೂಲಗಳು ಹಾಗೂ ಜವಾಬ್ದಾರಿಗಳೊಂದಿಗೆ ದತ್ತು ಪೋಷಕರು ಎಂದು ಉಲ್ಲೇಖಿಸಲಾದ ಹೊಸ ಪೋಷಕ(ರು)ರ ಕಾನೂನುಪ್ರಕಾರದ ಮಗುವಾಗಿರುವುದನ್ನು ದತ್ತು ಪ್ರಕ್ರಿಯೆ ಎನ್ನಲಾಗುತ್ತದೆ.

**5.2 ವಿಶೇಷ ದತ್ತು ಏಜೆನ್ಸಿ (ಎಸ್‌ಎಎ(SAA)) – ದತ್ತು ಪ್ರಕ್ರಿಯೆಗೆ ಅನುಕೂಲ ಒದಗಿಸುವುದು.**

5.2.1 ಜೆಜೆ ಕಾಯ್ದೆಯು ಅನಾಥ ಮಕ್ಕಳು, ಪರಿತ್ಯಜಿಸಿರುವ ಮಕ್ಕಳು ಅಥವಾ ದತ್ತು ನೀಡಲು ಒಪ್ಪಿಸಲಾಗಿರುವ ಮಕ್ಕಳನ್ನು, ರಾಜ್ಯ ಸರ್ಕಾರ, ಅಥವಾ **ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ** (ಸಿಎಆರ್‌ಎ) ದತ್ತುಗೆ ಸಂಬಂಧಪಟ್ಟಂತೆ ಕಾಲಕಾಲಕ್ಕೆ ನಿಗದಿಪಡಿಸುವ ವಿವಿಧ ಮಾರ್ಗಸೂಚಿಗಳ ಉಪಬಂಧಗಳು ಹಾಗೂ ಕೇಂದ್ರ ಸರ್ಕಾರದ ಅಧಿಸೂಚನೆಗಳ ಪ್ರಕಾರ ಸೂಕ್ತ ಸ್ಥಳದಲ್ಲಿ ಸೇರಿಸುವ ಸಲುವಾಗಿ ರಾಜ್ಯ ಸರ್ಕಾರಗಳಿಗೆ ಪ್ರತಿ ಜಿಲ್ಲೆಯಲ್ಲಿ ಎಸ್ಸರಿರಿ ನಂತೆ ಒಂದು ಅಥವಾ ಹೆಚ್ಚಿನ ಸಂಖ್ಯೆಯ ಸಂಸ್ಥೆಗಳು ಅಥವಾ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸುವ ಅಧಿಕಾರವನ್ನು ಒದಗಿಸಿದೆ. ಎಲ್ಲಾ ಎಸ್‌ಎಎ ಗಳನ್ನೂ ಸಹ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 (2006ರಲ್ಲಿ ತಿದ್ದುಪಡಿ ಮಾಡಿದೆ) ಹಾಗೂ ಸಂಘಗಳ ನೊಂದಣಿ ಕಾಯ್ದೆ, 1860ರ ಪ್ರಕಾರ ಅಥವಾ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ ರಾಷ್ಟ್ರದೊಳಗೆ/ಅಂತರ್ ರಾಷ್ಟ್ರಗಳ ದತ್ತುಗೆ ಸಂಬಂಧಪಟ್ಟಂತೆ ಕಾಲಕಾಲಕ್ಕೆ ನಿಗದಿಪಡಿಸುವ ನಿಯಮಾವಳಿಗಳು ಅಥವಾ ಮಾರ್ಗಸೂಚಿಗಳ ನೊಂದಣಿ ಮಾಡಿಸಬೇಕು. ಎಸ್‌ಎಎ, ಕಾನೂನಿನ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸಬೇಕು ಹಾಗೂ ಎಲ್ಲಾ ಪೂರಕ ಕಾನೂನುಗಳು, ನಿಯಮಾವಳಿಗಳು ಹಾಗೂ ಮಾರ್ಗಸೂಚಿಗಳನ್ನು ಅನುಸರಿಸಬೇಕು.

5.2.2 ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ, ದತ್ತುಗೆ ಸಿದ್ಧವಾಗಿರುವ ಮಕ್ಕಳಿಗೆ ವಸತಿ ಆಧಾರಿತ ಪೋಷಣೆ ಒದಗಿಸುವ, ರಾಜ್ಯ ಸರ್ಕಾರ ಹಾಗೂ ಎನ್‌ಜಿಓಗಳು ನಡೆಸುವ ವಿಶೇಷ ದತ್ತು ಏಜೆನ್ಸಿ (ಎಸ್‌ಎಎ) ಗಳಿಗೆ ಐಸಿಪಿಎಸ್ ಬೆಂಬಲ ನೀಡುತ್ತದೆ. ವಿಶೇಷ ದತ್ತು ಏಜೆನ್ಸಿ (ಎಸ್‌ಎಎ), ಜಿಲ್ಲಾ ಮಕ್ಕಳ ರಕ್ಷಣಾ ಘಟಕದ (ಡಿಸಿಪಿಯು) ಸಹಯೋಗದೊಂದಿಗೆ **ಒಂದು ತಿಂಗಳೊಳಗೆ ವೈಯಕ್ತಿಕ ಪೋಷಣೆ ಯೋಜನೆಯನ್ನು ಸಿದ್ಧಪಡಿಸುತ್ತದೆ** ಹಾಗೂ ಡಿಸಿಪಿಯು ಒಪ್ಪಿದ ನಂತರ 15 ದಿನಗಳೊಳಗೆ

ಅನುಮೋದನೆಗಾಗಿ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಗೆ ಕಳುಹಿಸುತ್ತದೆ. ಸಿಡಬ್ಲ್ಯೂಸಿ ಪೋಷಣಾ ಯೋಜನೆಯನ್ನು ಅನುಮೋದಿಸಿದ ಆರು ತಿಂಗಳೊಳಗೆ, ವೈಯಕ್ತಿಕ ಮಕ್ಕಳ ಪೋಷಣಾ ಯೋಜನೆಯ ಅನುಷ್ಠಾನದ ಕುರಿತು ಎಸ್‌ಎಎ ಡಿಸಿಪಿಯು ಗೆ ವರದಿ ಮಾಡಿಕೊಳ್ಳುತ್ತದೆ. **ಈ ವೈಯಕ್ತಿಕ ಪೋಷಣಾ ಯೋಜನೆಯನ್ನು ಪ್ರತಿ ಆರು ತಿಂಗಳಿಗೊಮ್ಮೆ ಪುನರ್‌ಪರಿಶೀಲಿಸಲಾಗುತ್ತದೆ** ಹಾಗೂ ಯಾವುದೇ ಮಗುವು ಒಂದು ವರ್ಷಕ್ಕಿಂತ ಹೆಚ್ಚಿನ ಸಮಯದವರೆಗೆ ಎಸ್‌ಎಎನ ಪೋಷಣೆಯಡಿ ಇರುವಂತಿಲ್ಲ.

5.2.3. ಎಸ್‌ಎಎ ಗಳ ನಿಗಿಧಿತ ಪಾತ್ರಗಳು ಹಾಗೂ ಜವಾಬ್ದಾರಿಗಳು ಈ ಕೆಳಗಿನಂತಿರುತ್ತವೆ:

### (i) ಮಕ್ಕಳಿಗೆ ಸಂಬಂಧಪಟ್ಟ ಕಾರ್ಯನಿರ್ವಹಣೆಗಳು:

a) ಅನಾಥ, ಪರಿತ್ಯಜಿಸಿರುವ ಹಾಗೂ ಶರಣಾದ ಮಕ್ಕಳ ದಾಖಲಾತಿ ಹಾಗೂ ನೊಂದಣಿ:

b) ಮಗುವಿನ ಆಗಮನದ ಬಗ್ಗೆ ಸಿಡಬ್ಲ್ಯೂಸಿ ಗೆ ವರದಿ ಮಾಡುವುದು;

c) ಸಿಡಬ್ಲ್ಯೂಸಿ ಆದೇಶದ ನಂತರ, ಮಗುವಿನ ನೊಂದಣಿಯ ವರದಿಯನ್ನು ಡಿಸಿಪಿಯು ಹಾಗೂ ಎಸ್‌ಎಆರ್‌ಎ ಗಮನಕ್ಕೆ ತರುವುದು;

d) ದಾಖಲು ಮಾಡಿರುವ ಎಲ್ಲ ಮಕ್ಕಳ ಆನ್‌ಲೈನ್ ಡಾಟಾಬೇಸ್[2] ಅನ್ನು ನಿರ್ವಹಿಸುವುದು;

e) ಮಕ್ಕಳ ಅಧ್ಯಯನ ವರದಿ ಹಾಗೂ ದೈಹಿಕ ಪರೀಕ್ಷೆಯ ವರದಿಯನ್ನು ಸಿದ್ಧಪಡಿಸುವುದು;

f) ಅಗತ್ಯದ ಪ್ರಕಾರ ಸಿಡಬ್ಲ್ಯೂಸಿಗೆ ವಿಚಾರಣೆಯಲ್ಲಿ ನೆರವಾಗುವುದು;

g) ಮಕ್ಕಳಿಗೆ ದತ್ತುಗೆ ಪೂರ್ವ ಹಾಗೂ ನಂತರದಲ್ಲಿ ಆಪ್ತಸಮಾಲೋಚನೆಯನ್ನು ಒದಗಿಸುವುದು;

h) ಮಗುವನ್ನು ಮ್ಯಾಚ್ ಮಾಡುವುದು;

i) ಸಂಬಂಧಪಟ್ಟ ಎಸ್‌ಎಎ ಹಾಗೂ ರಕ್ಷಣಾ ಅಧಿಕಾರಿ–ಸಾಂಸ್ಥಿಕೇತರ ಸೇವೆಗಳಿಂದ ಕ್ರಮವಾಗಿ ಇಬ್ಬರು ಸದಸ್ಯರೊಂದಿಗೆ ಡಿಸಿಪಿಓ ಅಧ್ಯಕ್ಷತೆಯಡಿಯಲ್ಲಿ ಇರುವ ಜಿಲ್ಲಾ ಪ್ಲೇಸ್‌ಮೆಂಟ್ ಸಮಿತಿಯ ನೆರವಿನೊಂದಿಗೆ ಮಕ್ಕಳನ್ನು ದತ್ತು ಅಥವಾ ದತ್ತು ಪೂರ್ವ ಫಾಸ್ಟರ್ ಕೇರ್ ಗೆ ನೀಡಲು ಅನುಕೂಲ ಒದಗಿಸುವುದು;

j) ದತ್ತು ಅಥವಾ ನಿಯೋಜನೆಗೆ ಸಂಬಂಧಪಟ್ಟ ನ್ಯಾಯಾಲಯದ ಪ್ರಕ್ರಿಯೆ;

k) ಮಗುವಿನ ಜನನ ಪ್ರಮಾಣಪತ್ರವನ್ನು ಪಡೆಯುವುದು;

l) ದತ್ತು ನಂತರದ ಅನುಸರಣೆ;

m) ಜನನ ನೀಡಿದ ಪೋಷಕರು, ಅವರ ವೈದ್ಯಕೀಯ/ಚರಿತ್ರೆಯ ವಿವರಗಳು, ಮಗುವಿನ ಕೇಸ್ ರೆಕಾರ್ಡ್‌ಗಳು, ಜನನ ನೀಡಿದ ಪೋಷಕರು ಹಾಗೂ ದತ್ತು ಪೋಷಕರಿಗೆ ಸಂಬಂಧಪಟ್ಟ ಪೂರಕ ವಿವರಗಳು/ವರದಿಗಳು/ಕಡತಗಳನ್ನು ಸಂಗ್ರಹಿಸುವುದು;

n) ಪೋಷಣೆಗೆ ಸಂಬಂಧಪಟ್ಟಂತೆ ಕನಿಷ್ಠ ಮಾಪಕಗಳ (ಗುಣಮಟ್ಟದ ಮಾನದಂಡಗಳ) ನಿರ್ವಹಣೆ;

o) ಎಸ್‌ಎಎಗೆ ದಾಖಲು ಮಾಡಿದ ಪ್ರತಿ ಮಗುವಿನ **ಪುನರ್ವಸತಿ ಯೋಜನೆಯನ್ನು** ಸೂಚಿಸಲು ಡಿಸಿಪಿಯು ಹಾಗೂ ಎಸ್‌ಎಆರ್‌ಎ ಗೆ ತ್ರೈಮಾಸಿಕ ಪ್ರಗತಿ ವರದಿಯನ್ನು ಸಲ್ಲಿಸುವುದು;

### (ii) ನಿರೀಕ್ಷಿತ ದತ್ತು ಪೋಷಕರಿಗೆ (ಪಿಎಪಿ ಗಳು (PAP-Prospective Adoptive Parents)) ಸಂಬಂಧಪಟ್ಟ ಕಾರ್ಯನಿರ್ವಹಣೆಗಳು

a) ನಿರೀಕ್ಷಿತ ದತ್ತು ಪಡೆಯುವ ಪೋಷಕರ ನೊಂದಣಿ ;

b) ಡಿಸಿಪಿಯು ಹಾಗೂ ಎಸ್‌ಎಆರ್‌ಎ ಗೆ ಪಿಎಪಿ ಗಳ ನೊಂದಣಿಯ ವರದಿಯನ್ನು ಸಲ್ಲಿಸುವುದು;

[2] This online database will be a part of the Child Tracking System and will have restricted accessibility to agencies such as DCPU, SARA and CARA.

c) ನೊಂದಣಿಯಾಗಿರುವ ಪಿಎಪಿ ಗಳ ಹಾಲಿ ಅರ್ಜಿಗಳ ಸ್ಥಿತಿಗತಿಯ ವಿವರಗಳೊಂದಿಗೆ ಆನ್‌ಲೈನ್ ಡಾಟಾಬೇಸ್‌ನ[3] ನಿರ್ವಹಣೆ;

d) ಮಗುವನ್ನು ಒಪ್ಪಿಸುತ್ತಿರುವ ಜನನ ನೀಡಿದ ಪೋಷಕರು/ಮದುವೆಯಾಗದಿರುವ ತಾಯಿಗೆ ಆಪ್ತಸಮಾಲೋಚನೆ ಹಾಗೂ ಮಗುವನ್ನು ಪರಿತ್ಯಜಿಸವುದನ್ನು ತಡೆಗಟ್ಟಲು ಆಪ್ತಸಮಾಲೋಚನೆ ಒದಗಿಸುವುದು ಹಾಗೂ ಮಗುವಿಗೆ ಪುನರ್ವಸತಿ ಕಲ್ಪಿಸುವುದು;

e) ಗೃಹ ಅಧ್ಯಯನ ವರದಿಯನ್ನು ನಡೆಸುವುದು;

f) ಮಗುವನ್ನು ಪಿಎಪಿ ಗಳೊಂದಿಗೆ ಸರಿಹೊಂದಿಸುವುದು;

g) ದತ್ತುಪೂರ್ವ ಫಾಸ್ಟರ್ ಕೇರ್ ನಲ್ಲಿ ಮಗುವನ್ನು ಸೇರಿಸಲು ಸಹಾಯ ಒದಗಿಸುವುದು;

h) ಎಲ್ಲಾ ಪಿಎಪಿ ಗಳಿಗೆ ದತ್ತು ಪೂರ್ವ ಹಾಗೂ ನಂತರದ ಆಪ್ತಸಮಾಲೋಚನೆ ಒದಗಿಸುವುದು;

i) ಮಗುವಿನ ದತ್ತು ಅಥವಾ ನಿಯೋಜನೆಗೆ ಸಂಬಂಧಪಟ್ಟ ನ್ಯಾಯಾಲಯದ ವಿಧಾನಗಳನ್ನು ಕೈಗೊಳ್ಳುವುದು;

j) ದತ್ತು ನಂತರದ ಅನುಸರಣೆಯನ್ನು ಮಾಡುವುದು.

5.2.4. ಎಸ್‌ಎಎ, ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಗಳ ಒಟ್ಟಾರೆ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುತ್ತದೆ. ಎಸ್‌ಎಎ ಅನ್ನು ನಡೆಸಲು, ಮಕ್ಕಳ ಪೋಷಣಾ ಸಂಸ್ಥೆ (ಸಿಸಿಐ) ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ತಿದ್ದುಪಡಿ ಕಾಯ್ದೆ, 2006ರ ಕಲಂ–34(3) ರಡಿ ನಿಗಧಿಪಡಿಸಿರುವ ನಿಬಂಧನೆಗಳಡಿ ನೊಂದಣಿ ಯಾಗಿರಬೇಕು. ರಾಜ್ಯ ಸರ್ಕಾರವು ಕಾಯ್ದೆಯ ಕಲಂ–41(4)ರ ನಿಬಂಧನೆಗಳಡಿ ಇರುವ ಸಿಸಿಐ ಗಳಂತಹ ಎಸ್‌ಎಎ ಗಳನ್ನು ಗುರುತಿಸಬೇಕು. ಅಂತರ–ರಾಷ್ಟ್ರ ದತ್ತುವಿನ ಹೇಗ್ ಒಡಂಬಡಿಕೆಯಡಿ ನಿಗಧಿಪಡಿಸಿರುವ ನಿಬಂಧನೆಗಳ ಪ್ರಕಾರ ಮಗುವನ್ನು ಅಂತರ–ರಾಷ್ಟ್ರ ದತ್ತುವಿನ ಅಡಿ ನಿಯೋಜಿಸಲು ಕೆಲಸ ಮಾಡುತ್ತಿರುವ ಎಸ್‌ಎಎ ಗಳಿಗೆ ವಿಶೇಷ ಮಾನ್ಯತೆಯನ್ನು ನೀಡಲು ಸಿಎಆರ್ ಗೆ ಅಧಿಕಾರ ನೀಡಲಾಗಿದೆ.

## 5.3 ತೊಟ್ಟಿಲು ಮಗುವಿನ ಸ್ವಾಗತ ಕೇಂದ್ರ (Cradle Baby Reception Centres)

5.3.1 ದೇಶದಲ್ಲಿ 80% ಗಿಂತ ಹೆಚ್ಚಿನ ಪ್ರಮಾಣದ ಜಿಲ್ಲೆಗಳಲ್ಲಿ ಸಂಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ, ವಿಶೇಷವಾಗಿ ಪರಿತ್ಯಜಿಸಲ್ಪಟ್ಟಿರುವ ಹಾಗೂ ಮಾನವ ಕಳ್ಳ ಸಾಗಣೆಕೆಗೆ ಈಡಾಗುವ ಸಂಭವವಿರುವಂತಹ ಮಕ್ಕಳಿಗೆ ಸೂಕ್ತ ತಾತ್ಕಾಲಿಕ ವಸತಿ ಸೌಕರ್ಯ ಕಲ್ಪಿಸಲು ಅಥವಾ ಪಡೆಯುವ ಸೌಕರ್ಯಗಳು ಇಲ್ಲದಿರುವಂತಹ ಪರಿಸ್ಥಿತಿಯನ್ನು ಗುರುತಿಸಿ, ಪ್ರತಿ ಜಿಲ್ಲೆಯಲ್ಲಿಯೂ ತೊಟ್ಟಿಲು ಮಗುವಿನ ಸ್ವಾಗತ ಕೇಂದ್ರಗಳನ್ನು ಸ್ಥಾಪಿಸಲು ಐಸಿಪಿಎಸ್ ಸೂಚಿಸುತ್ತದೆ. ಡಿಸಿಪಿಯು ಜಿಲ್ಲೆಯಲ್ಲಿ ಎಸ್‌ಎಎ ಅನ್ನು ತೊಟ್ಟಿಲು ಮಗುವಿನ ಸ್ವಾಗತ ಕೇಂದ್ರವಾಗಿ ಕಾರ್ಯನಿರ್ವಹಿಸಲು ನಿಯೋಜಿಸುತ್ತದೆ. ಈ ಕೇಂದ್ರಗಳು ಎಸ್‌ಎಎ ವತಿಯಿಂದ ಅದರ ಆವರಣಗಳಿಂದಲೇ ಕಾರ್ಯನಿರ್ವಹಿಸುತ್ತವೆ ಹಾಗೂ ಶಿಶುಗಳಿಗೆ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುತ್ತದೆ. ಪರಿತ್ಯಜಿಸಿರುವ ಮಕ್ಕಳನ್ನು ರಕ್ಷಿಸುವುದು ಹಾಗೂ ಆತ/ಆಕೆಯನ್ನು ಯಾರಾದರೂ ದತ್ತು ಪಡೆಯುವವರೆಗೂ ಪಾಲಿಸುವುದು ಈ ಸ್ವಾಗತ ಕೇಂದ್ರಗಳ (ರಿಸೆಪ್ಷನ್ ಸೆಂಟರ್ಸ್) ಮೂಲಭೂತ ಉದ್ದೇಶವಾಗಿದೆ.

[3] This online database will have restricted accessibility to agencies such as DCPU, SARA and CARA.

ಪ್ರತಿ ಎಸ್ಎಎ ಇಂತಹ ಮಕ್ಕಳನ್ನು ಪಡೆದುಕೊಳ್ಳುವ ಸಲುವಾಗಿ ಬಾಗಿಲ ಬಳಿ ಒಂದು ತೊಟ್ಟಿಲನ್ನು ಅಳವಡಿಸಬೇಕು. ಈ ತೊಟ್ಟಿಲ ಶಿಶು ಸ್ವಾಗತ ಕೇಂದ್ರಗಳನ್ನು, ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಪಿಹೆಚ್ಸಿಗಳು), ಆಸ್ಪತ್ರೆಗಳು/ನರ್ಸಿಂಗ್ ಹೋಂಗಳು, ಸ್ವಧಾರ್ ಘಟಕಗಳು, ಅಲ್ಪಾವಧಿ ವಸತಿ ಮಕ್ಕಳ ಪಾಲನಾ ಸಂಸ್ಥೆಗಳು ಹಾಗೂ ಡಿಸಿಪಿಯು ಕಚೇರಿಯಲ್ಲಿ ಪರಿತ್ಯಜಿಸಿರುವ ಮಕ್ಕಳನ್ನು ದಾಖಲಿಸಿಕೊಳ್ಳುವ ಸಲುವಾಗಿ ಅಲ್ಲಿರುವ ತೊಟ್ಟಿಲ ಘಟಕಗಳೊಂದಿಗೆ ಸಂಪರ್ಕ ಕಲ್ಪಿಸಲಾಗುವುದು. ಈ ತೊಟ್ಟಿಲ ಶಿಶು ಸ್ವಾಗತ ಕೇಂದ್ರದಲ್ಲಿ ದಾಖಲಿಸಿಕೊಳ್ಳಲಾಗುವ ಪ್ರತಿಯೊಂದು ಮಗುವಿಗೂ, ಸಿಡಬ್ಲ್ಯೂಸಿ ವತಿಯಿಂದ ಅನುಮೋದನೆ ದೊರೆತ ನಂತರ ಶಿಶುವನ್ನು ಪಾಲಿಸುತ್ತಿರುವ ಎಸ್ಎಎ ವತಿಯಿಂದ ಅಭಿವೃದ್ಧಿಪಡಿಸಲಾಗುವ ಹಾಗೂ ಸಿದ್ಧಪಡಿಸಲಾಗುವ ಆ ಸ್ವಾಗತ ಕೇಂದ್ರದ ವತಿಯಿಂದ **ವೈಯಕ್ತಿಕ ಪೋಷಣಾ ಯೋಜನೆ**ಯನ್ನು ರಚಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

5.3.2 ತೊಟ್ಟಿಲ ಘಟಕದಿಂದ ಒಮ್ಮೆ ಶಿಶುವನ್ನು ತೊಟ್ಟಿಲ ಶಿಶು ಸ್ವಾಗತ ಕೇಂದ್ರ ಪಡೆದುಕೊಂಡ ನಂತರ ಆ ಕೇಂದ್ರವು ಆ ಶಿಶುವಿನ ಪುನರ್ವಸತಿಗಾಗಿ ಈ ಕೆಳಕಂಡ ವ್ಯವಸ್ಥೆಗಳನ್ನು ಮಾಡಬೇಕು:

(i) ವೈದ್ಯಕೀಯ ಅಧಿಕಾರಿಯ ಸಲಹೆಯ ಪ್ರಕಾರ ಸೂಕ್ತ ವೈದ್ಯಕೀಯ ಚಿಕಿತ್ಸೆ ಹಾಗೂ ಆಹಾರವನ್ನು ಒದಗಿಸುವುದು;

(ii) ಶಿಶುವಿನ ಆಗಮನದ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡುವುದು;

(iii) ಶಿಶುವಿನ ಎಲ್ಲಾ ಮೂಲಭೂತ ಅಗತ್ಯಗಳನ್ನು ಪೂರೈಸುವುದು;

(iv) ಶಿಶುವಿಗೆ ಪೋಷಣೆ ಹಾಗೂ ರಕ್ಷಣೆಯನ್ನು ಒದಗಿಸುವುದು;

(v) ಸಕ್ಷಮ ಪ್ರಾಧಿಕಾರದಲ್ಲಿ ಶಿಶುವಿನ ಜನನ ನೊಂದಣಿ ಯನ್ನು ಮಾಡಿಸುವುದು;

(vi) ಶಿಶುವನ್ನು ದತ್ತು ಮೂಲಕ ಯಾವುದಾದರೂ ಕುಟುಂಬಕ್ಕೆ ಸೇರಿಸುವ ಸಾಧ್ಯತೆಗಳನ್ನು ಪರಿಶೋಧಿಸುವುದು.

5.3.3 ತೊಟ್ಟಿಲ ಘಟಕಗಳಿಗೆ ತೊಟ್ಟಿಲನ್ನು ಕೊಳ್ಳಲು ಡಿಸಿಪಿಯು ಅಗತ್ಯ ಅನುಕೂಲವನ್ನು ಒದಗಿಸಬೇಕು. ಪಿಹೆಚ್ಸಿಗಳು ತಮ್ಮಲ್ಲಿ ಅಳವಡಿಸಿರುವ ತೊಟ್ಟಿಲನ್ನು ನೋಡಿಕೊಳ್ಳಲು ಓರ್ವ ಎಎನ್ಎಂ ಅನ್ನು ನಿಯೋಜಿಸಬೇಕು. ಒಂದು ಶಿಶುವಿನ ಆಗಮನದ ನಂತರ, ಎಎನ್ಎಂ ಆ ಶಿಶುವಿಗೆ ಅಗತ್ಯವಿರುವ ವೈದ್ಯಕೀಯ ಆರೈಕೆಯನ್ನು ಒದಗಿಸಲು ಹಾಗೂ ಆ ಶಿಶುವನ್ನು ಪಡೆದುಕೊಳ್ಳಲು ಎಸ್ಎಎ ಕಂ ಸ್ವಾಗತ ಕೇಂದ್ರಕ್ಕೆ ಮಾಹಿತಿಯನ್ನು ಒದಗಿಸಲು ತುರ್ತು ವ್ಯವಸ್ಥೆಯನ್ನು ಕೈಗೊಳ್ಳಬೇಕು. ಎಎನ್ಎಂ ಒಂದು ರಿಜಿಸ್ಟರ್‌ನಲ್ಲಿ ಶಿಶುವಿನ ವಿವರಗಳನ್ನು ಬರೆಯಬೇಕು ಹಾಗೂ ಆ ಪ್ರಕಾರವಾಗಿ ವೈದ್ಯಕೀಯ ಅಧಿಕಾರಿಯು, ಶಿಶುವನ್ನು ಸ್ವಾಗತ ಕೇಂದ್ರಕ್ಕೆ ಹಸ್ತಾಂತರಿಸುವ ಸಮಯದಲ್ಲಿ ವರ್ಗಾವಣಾ ಪ್ರಮಾಣಪತ್ರವನ್ನು ನೀಡಬೇಕು. ರಾಜ್ಯಮಟ್ಟದಲ್ಲಿ ಐಸಿಪಿಎಸ್ ಕಾರ್ಯಕ್ರಮವನ್ನು ನಿರ್ವಹಿಸುತ್ತಿರುವ ಸಂಬಂಧಪಟ್ಟ ಕಾರ್ಯದರ್ಶಿಯು, ತಮ್ಮ ಕೆಲಸದ ವಿವರಣೆಯ ಭಾಗವಾಗಿ ಎಎನ್ಎಂ ಗೆ ವಹಿಸಲು ರಾಜ್ಯ ಆರೋಗ್ಯ ಕಾರ್ಯದರ್ಶಿಗಳೊಂದಿಗೆ ಸಂಬಂಧ ಹೊಂದುವುದು. ಒಂದು ವೇಳೆ ಶಿಶು ಸ್ವಾಗತ ಕೇಂದ್ರದ ವಶದಲ್ಲಿರುವಾಗ ಮೃತಪಟ್ಟರೆ, ಆ ಕೇಂದ್ರವು ಆ ಶಿಶುವಿನ ಅಂತಿಮ ಸಂಸ್ಕಾರದ ವ್ಯವಸ್ಥೆಯನ್ನು ಕೈಗೊಳ್ಳಬೇಕು. ಅದಕ್ಕೆ ತಗಲುವ ವೆಚ್ಚಗಳನ್ನು ಸಾದಿಲ್ವಾರು ಠೇವಣಿಯಿಂದ ಭರಿಸುವುದು.

**5.4 ರಾಜ್ಯ ದತ್ತು ಸಲಹಾ ಸಮಿತಿ:** ರಾಜ್ಯಮಟ್ಟದಲ್ಲಿ ಪ್ರಾಯೋಜಕತ್ವ, ರಾಷ್ಟ್ರದ ಒಳಗಿನ ಫಾಸ್ಟರ್ ಕೇರ್ ಹಾಗೂ ಅಂತರ–ರಾಷ್ಟ್ರ ದತ್ತು ಪ್ರಕ್ರಿಯೆ ಒಳಗೊಂಡಂತೆ ಕುಟುಂಬ ಆಧಾರಿತ ಸಾಂಸ್ಥಿಕೇತರ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಲು, ಅನುಷ್ಠಾನಗೊಳಿಸಲು, ಮೇಲ್ವಿಚಾರಣೆ ನಡೆಸಲು ಹಾಗೂ ಉಸ್ತುವಾರಿ ಮಾಡಲು ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ರಾಜ್ಯ ದತ್ತು ಸಲಹಾ

ಸಮಿತಿಯನ್ನು ರಚಿಸುವುದು. ರಾಜ್ಯ ದತ್ತು ಸಲಹಾ ಸಮಿತಿಯು ಮಕ್ಕಳ ಕಲ್ಯಾಣ ಕ್ರಮಗಳ ಕುರಿತು ಚರ್ಚಿಸಲು ಹಾಗೂ ಶಿಶುಗಳ ರಾಷ್ಟ್ರದ ಒಳಗಿನ ದತ್ತು ಪ್ರಕ್ರಿಯೆಯನ್ನು ಪ್ರೋತ್ಸಾಹಿಸಲು ತ್ರೈಮಾಸಿಕ ಸಭೆಯನ್ನು ಆಯೋಜಿಸುವುದು. ಪ್ರತಿ ಸಭೆಯ ನಡಾವಳಿಗಳನ್ನು ಸಿಎಆರ್ಎ ಗೆ ಕಳುಹಿಸಿಕೊಡುವುದು. ಈ ಸಮಿತಿಗಳ ಅಧಿಕಾರಾವಧಿ ಮೂರು ವರ್ಷಗಳಾಗಿರುತ್ತವೆ.

### 5.4.1 ಈ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರಿರುತ್ತಾರೆ:

| ಕ್ರ. ಸಂ. | ಸದಸ್ಯರು | ಹುದ್ದೆ |
|---|---|---|
| 1. | ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಥವಾ ದತ್ತು ಕಾರ್ಯಕ್ರಮಕ್ಕಾಗಿ ಇರುವ ಆಡಳಿತ ಇಲಾಖೆ | ಅಧ್ಯಕ್ಷರು |
| 2. | ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಥವಾ ಸಂಬಂಧಪಟ್ಟ ದತ್ತು ಕಾರ್ಯಕ್ರಮದ ನಿರ್ದೇಶನಾಲಯ | ಸದಸ್ಯ ಕಾರ್ಯದರ್ಶಿ |
| 3. | ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರತಿನಿಧಿ | ಸದಸ್ಯ |
| 4. | ಆಹ್ವಾನದ ಮೇರೆಗೆ ಸಿಎಆರ್ಎ ಪ್ರತಿನಿಧಿ | ಸದಸ್ಯ |
| 5. | ಕಾರ್ಯಕ್ರಮ ವ್ಯವಸ್ಥಾಪಕರು, ಎಸ್ಎಆರ್ಎ | ಸದಸ್ಯ |
| 6. | ದತ್ತು ಸಂಯೋಜನಾ ಏಜೆನ್ಸಿಗಳ ಅಧ್ಯಕ್ಷರು/ಪ್ರತಿನಿಧಿಗಳು | ಸದಸ್ಯ |
| 7. | ಸರದಿಯ ಪ್ರಕಾರ ಎರಡು ಎಸ್ಎಎ ಗಳ ಪ್ರತಿನಿಧಿಗಳು | ಸದಸ್ಯ |
| 8. | ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ರಕ್ಷಣಾ ಕ್ಷೇತ್ರದ ತಜ್ಞರು | ಸದಸ್ಯ |
| 9. | ಕಾನೂನು ತಜ್ಞ | ಸದಸ್ಯ |
| 10. | ಚೈಲ್ಡ್‌ಲೈನ್ ಸೇವೆಗಳ ಪ್ರತಿನಿಧಿ | ಸದಸ್ಯ |

ದತ್ತು ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಗಾಗಿ ಒದಗಿಸಲಾಗುವ ಹಣಕಾಸಿನ ನೆರವಿನ ವಿವರಗಳನ್ನು ಅನುಬಂಧ **IX** ರಲ್ಲಿ ನೀಡಲಾಗಿದೆ.

## 6. ಅನುಪಾಲನಾ ಸೇವೆಗಳು (ಆಪ್ಟರ್ ಕೇರ್(After Care))

6.1. 18 ವರ್ಷಗಳನ್ನು ಪೂರೈಸಿದ ನಂತರ, ಸಾಂಸ್ಥಿಕ ಪೋಷಣೆಯನ್ನು ತೊರೆಯುವಂತಹ, ಕುಟುಂಬ ಅಥವಾ ಇತರೆ ಬೆಂಬಲ ಇಲ್ಲದಿರುವಂತಹ ಮಗುವನ್ನು, ಸಾಂಸ್ಥಿಕ ಜೀವನದಿಂದ ಸ್ವತಂತ್ರ ಜೀವನಕ್ಕೆ ಬದಲಾಗುವ ಸಮಯದಲ್ಲಿ ಸುಸ್ಥಿರತೆಯನ್ನು ಹೊಂದಲು ಮಕ್ಕಳ ನ್ಯಾಯ ಕಾಯ್ದೆಯು ಅನುಪಾಲನಾ ಸೇವಾ ಕಾರ್ಯಕ್ರಮಗಳನ್ನು ಒದಗಿಸುವಂತೆ ಸೂಚಿಸುತ್ತದೆ. ಇಂತಹ ಮಕ್ಕಳು ಸಮಾಜಕ್ಕೆ ಹೊಂದಿಕೊಳ್ಳುವುದನ್ನು ಖಾತ್ರಿಡಿಸುವುದು ಹಾಗೂ ಸಾಂಸ್ಥಿಕ ಆಧಾರಿತ ಜೀವನದಿಂದ ದೂರ ಉಳಿಯುವಂತೆ ಪ್ರೋತ್ಸಾಹಿಸುವುದು ಈ ಅನುಪಾಲನಾ ಸೇವಾ ಕಾರ್ಯಕ್ರಮದ ಉದ್ದೇಶವಾಗಿದೆ.

6.2 ಇಂತಹ ಅನುಪಾಲನಾ ಸೇವಾ ಕಾರ್ಯಕ್ರಮಗಳನ್ನು ನಡೆಸುವಂತಹ ಸೂಕ್ತ ಸ್ವಯಂಸೇವಾ ಸಂಸ್ಥೆಗಳನ್ನು ಡಿಸಿಪಿಯು ಗುರುತಿಸಬೇಕು. ಈ ಸಂಸ್ಥೆಗಳು, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಭಿವೃದ್ಧಿ ಪಡಿಸಿರುವ ನಿಯಮಗಳಡಿ ಸೂಚಿಸಿರುವ ಉಪಬಂಧಗಳ ಪ್ರಕಾರ ಇಂತಹ ಶಿಶುಗಳಿಗೆ ಮೂರು ವರ್ಷ ಅವಧಿಯ ಅನುಪಾಲನಾ ಸೇವಾ ಕಾರ್ಯಕ್ರಮವನ್ನು ರಚಿಸಬೇಕು. ಈ ಕಾರ್ಯಕ್ರಮದಲ್ಲಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು:

(i) 6 ರಿಂದ 8 ಯುವಜನರಿರುವ ತಾತ್ಕಾಲಿಕವಾದ ಸಮೂಹ ಸಮುದಾಯ ಸಮೂಹ ವಸತಿ;

(ii) ಯಾವುದಾದರೂ ವೃತ್ತಿಪರ ಅಥವಾ ಆದಾಯಗಳಿಸುವಂತಹ ವೃತ್ತಿಯನ್ನು ಕಲಿತುಕೊಳ್ಳುವಂತೆ ಹಾಗೂ ವಸತಿಯನ್ನು ನಡೆಸಲು ಬೇಕಾದ ಖರ್ಚು ಹಾಗೂ ಬಾಡಿಗೆಯನ್ನು ಭರಿಸಲು ಕೊಡುಗೆ ನೀಡಲು ಪ್ರೋತ್ಸಾಹಿಸುವುದು;

(iii) ಕಾಲಕ್ರಮೇಣ ರಾಜ್ಯದ ಬೆಂಬಲವಿಲ್ಲದೆ ತಮ್ಮ ಕಾಲ ಮೇಲೆ ನಿಲ್ಲುವಂತೆ ಪ್ರೋತ್ಸಾಹಿಸುವುದು ಹಾಗೂ ಸಮೂಹ ವಸತಿಯನ್ನು ತೊರೆದು, ತಮ್ಮ ಆದಾಯದ ಮೂಲಕ ಸಾಕಷ್ಟು ಹಣವನ್ನು ಕೂಡಿಟ್ಟುಕೊಂಡು ತಮ್ಮ ಸ್ವಂತ ಸ್ಥಳಕ್ಕೆ ಸ್ಥಳಾಂತರಗೊಳ್ಳುವಂತೆ ಪ್ರೋತ್ಸಾಹಿಸುವುದು;

(iv) ಪುನರ್ವಸತಿ ಯೋಜನೆಗಳ ಕುರಿತು ಚರ್ಚಿಸಲು ಹಾಗೂ ಅವರ ಸಾಮರ್ಥ್ಯವನ್ನು ಚಾನಲೈಜ್ ಮಾಡಲು ಕ್ರಿಯಾಶೀಲ ಔಟ್‌ಲೆಟ್‌ಗಳನ್ನು ಒದಗಿಸಲು ಮತ್ತು ಅವರ ಜೀವನದಲ್ಲಿ ಬಿಕ್ಕಟ್ಟಿನ ಸಮಯವನ್ನು ಸಮರ್ಥವಾಗಿ ಎದರಿಸುವಂತೆ ಮಾಡಲು ಈ ಗುಂಪುಗಳೊಡನೆ ನಿರಂತರವಾಗಿ ಸಂಪರ್ಕದಲ್ಲಿರಲು ವರಿಷ್ಠ ಆಪ್ತಸಮಾಲೋಚಕರ ಸೇವೆಗಳನ್ನು ಒದಗಿಸುವುದು;

(v) ಯುವಕ/ಯುವತಿ ಉದ್ಯೋಗವನ್ನು ಸೇರುವವರೆಗೂ ವೃತ್ತಿಪರ ತರಬೇತಿಯಲ್ಲಿರುವಾಗ ಶಿಷ್ಯವೇತನವನ್ನು ಒದಗಿಸುವುದು;

(vi) ಔದ್ಯಮಿಕ ಚಟುವಟಿಕೆಗಳನ್ನು ಸ್ಥಾಪಿಸಲು ಆಸಕ್ತಿ ಹೊಂದಿರುವ ಯುವಕರಿಗೆ ಸಾಲಗಳನ್ನು ಪಡೆಯಲು ವ್ಯವಸ್ಥೆ ಮಾಡುವುದು.

**6.3 ಪ್ರಕರಣದ ಆಧಾರದ ಮೇಲೆ ಜೆಜೆಬಿ/ಸಿಡಬ್ಲ್ಯೂಸಿ ಮಗುವನ್ನು ಅನುಪಾಲನಾ ಸೇವಾ** ಕಾರ್ಯಕ್ರಮಕ್ಕೆ ಒದಗಿಸಬಹುದು. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಹಾಗೂ ಕಾಯ್ದೆಯಡಿ ಸೂಚಿಸಿರುವ ರಾಜ್ಯದ ನಿಯಮಗಳ ಪ್ರಕಾರ ಮಗುವಿಗೆ ಅನುಪಾಲನಾ ಸೇವಾ ವ್ಯವಸ್ಥೆಯನ್ನು ಕಲ್ಪಿಸಲು ಜೆಜೆಬಿ/ಸಿಡಬ್ಲ್ಯೂಸಿ ಆದೇಶದ ಒಂದು ಪ್ರತಿಯನ್ನು ಡಿಸಿಪಿಯುಗೆ ಒದಗಿಸುವುದು. ಎಸ್‌ಸಿಪಿಎಸ್ ಇದಕ್ಕೆ ಪ್ರತಿಯಾಗಿ, ಪ್ರತಿ ಮಗುವಿನ ವೈಯಕ್ತಿಕ ಅಗತ್ಯಗಳನ್ನು ಆಧರಿಸಿ ಅನುಪಾಲನಾ ಸೇವಾ ಕಾರ್ಯಕ್ರಮವನ್ನು ನಡೆಸುತ್ತಿರುವ ಸಂಸ್ಥೆಗೆ, ಒಂದು ಮಗುವಿಗೆ, ಒಂದು ತಿಂಗಳಿಗೆ, ಗರಿಷ್ಠ ರೂ.2000/– ಅನುದಾನವನ್ನು ಬಿಡುಗಡೆ ಮಾಡುತ್ತದೆ. ಈ ಮೊತ್ತ ಮಗು/ಯುವಕನ ಆಹಾರ, ಬಟ್ಟೆ, ಆರೋಗ್ಯ ರಕ್ಷಣೆ ಹಾಗೂ ವಸತಿ; ವಯಸ್ಸಿಗೆ ಅನುಗುಣವಾದ ಹಾಗೂ ಅಗತ್ಯ ಆಧಾರಿತ ಶಿಕ್ಷಣ ಹಾಗೂ ವೃತ್ತಿಪರ ತರಬೇತಿ; ಶಿಷ್ಯ ವೇತನ; ಹಾಗೂ ಇತರೆ ಯಾವುದಾದರೂ ಅಗತ್ಯಗಳು ಒಳಗೊಂಡಂತೆ ಮೂಲಭೂತ ಅಗತ್ಯಗಳನ್ನು ಒಳಗೊಂಡಿದೆ.

**6.4 ಈ ಕೆಳಗೆ ತಿಳಿಸಿರುವಂತೆ ರಾಜ್ಯದಲ್ಲಿರುವ ಜಿಲ್ಲೆಗಳ ಸಂಖ್ಯೆಯ ಆಧಾರದ ಮೇಲೆ ರಾಜ್ಯಮಟ್ಟದಲ್ಲಿ** ಎಸ್‌ಸಿಪಿಎಸ್ ಗೆ ಅನುಪಾಲನಾ ಸೇವಾ ಕಾರ್ಯಕ್ರಮ ನಿರ್ವಹಣೆಗಾಗಿ ಅನುದಾನವನ್ನು ಒದಗಿಸಲಾಗುತ್ತಿದೆ;

i) 15 ಜಿಲ್ಲೆಗಳಿಗಿಂತ ಕಡಿಮೆ ಸಂಖ್ಯೆ ಜಿಲ್ಲೆಗಳಿರುವ ರಾಜ್ಯಗಳಿಗೆ: ರೂ. 15 ಲಕ್ಷ

ii) 15ಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಿಗೆ: ರೂ.30 ಲಕ್ಷ

iii) 30 ಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಿಗೆ: ರೂ.45 ಲಕ್ಷ

ಅನುಪಾಲನಾ ಸೇವಾ ಕಾರ್ಯಕ್ರಮದ ಮೂಲಕ ಸಾಂಸ್ಥಿಕೇತರ ಪೋಷಣೆಗಾಗಿ ಒದಗಿಸುವ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ– I ರಲ್ಲಿ ನೀಡಲಾಗಿದೆ (ಕೋಷ್ಠಕ 5.2, ಕ್ರ.ಸಂ.12)

## ಡಿ. ಸಾಂಸ್ಥಿಕ ಸೇವೆಗಳು

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ದ ಪ್ರಕಾರ ಈ ಯೋಜನೆಯು, ಕಾನೂನಿನೊಂದಿಗೆ ಸಂಘರ್ಷವನ್ನು ಎದುರಿಸುತ್ತಿರುವಂತಹ ಹಾಗೂ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಎರಡೂ ರೀತಿಯ ಮಕ್ಕಳಿಗಾಗಿ ಹಾಲಿ ಇರುವ ಸಾಂಸ್ಥಿಕ ಸೌಕರ್ಯಗಳ ನಿರ್ವಹಣೆ ಹಾಗೂ ಹೊಸ ಸಾಂಸ್ಥಿಕ ಸೌಲಭ್ಯಗಳ ಸೃಷ್ಟಿಗಾಗಿ ಬೆಂಬಲವನ್ನು ಒದಗಿಸುತ್ತದೆ. ಆಶ್ರಯ ತಾಣಗಳು, ಮಕ್ಕಳ ಪಾಲನಾ ಸಂಸ್ಥೆಗಳು, ವೀಕ್ಷಣಾಲಯಗಳು, ವಿಶೇಷ ಗೃಹಗಳು ಮತ್ತು ಸುರಕ್ಷತಾ ಕೇಂದ್ರ ಇದರಲ್ಲಿ ಒಳಗೊಂಡಿವೆ. ಜೊತೆಗೆ, ಈ ಯೋಜನೆಯು, ಹಾಲಿ ಕಾರ್ಯನಿರ್ವಹಿಸುತ್ತಿರುವ ಗೃಹಗಳ ಒಳಗೆ ವಿಶೇಷ ಘಟಕವನ್ನು ಬೆಂಬಲಿಸುವ ಮೂಲಕ ಅಥವಾ ವಿಶೇಷ ಅಗತ್ಯಗಳ ಅವಶ್ಯಕತೆ ಇರುವ ಮಕ್ಕಳಿಗಾಗಿ ವಿಶೇಷ ಆಶ್ರಯ ತಾಣಗಳನ್ನು ಬೆಂಬಲಿಸುವ ಮೂಲಕ ವಿಶೇಷ ಅಗತ್ಯವಿರುವಂತಹ ಮಕ್ಕಳ ಸಾಂಸ್ಥಿಕ ಪೋಷಣೆಗೆ ಅನುಕೂಲವನ್ನು ಒದಗಿಸಬೇಕು. ಇಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಶಾಸನಬದ್ಧ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು ಕೇಂದ್ರ ಮಾದರಿ ಮಕ್ಕಳ ನ್ಯಾಯ ಕಾಯ್ದೆ, 2000 ರಡಿ ಹಾಗೂ ಅದರ ತಿದ್ದುಪಡಿ ಕಾಯ್ದೆ, 2006 ರಡಿ ಇರುವಂತಹ ನಿಯಮಗಳು/ರಾಜ್ಯ ನಿಯಮಗಳ ಉಪಬಂಧಗಳ ಪ್ರಕಾರ ಇರುತ್ತದೆ. ಬಾಲಕಿಯರ ಗೃಹಕ್ಕೆ ಸಿಬ್ಬಂದಿಯನ್ನು ಆಯ್ಕೆ ಮಾಡುವಾಗ ಸಾಧ್ಯವಾದಷ್ಟೂ ಮಹಿಳಾ ಸಿಬ್ಬಂದಿಗಳನ್ನೇ ನೇಮಕ ಮಾಡಲು, ವಿಶೇಷವಾಗಿ ನಾಯಕತ್ವ ಹಾಗೂ ನಿರ್ಧಾರ ಮಾಡುವ ಹಂತಗಳು ಹಾಗೂ ಬಾಲಕಿಯರೊಂದಿಗೆ ಸಂಭಾಷಣೆ ಮಾಡುವಂತಹ ಮಹಿಳಾ ಸಿಬ್ಬಂದಿಗಳನ್ನು ನೇಮಕ ಮಾಡಲು ಪ್ರಯತ್ನಿಸಬೇಕು.

2. ಸಂಸ್ಥೆಗಳನ್ನು ಸ್ಥಾಪಿಸುವಾಗ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು, ಅನುಬಂಧ **XIV** ರಲ್ಲಿ ಸೂಚಿಸಿರುವಂತೆ ಸಂಸ್ಥೆಗಳಲ್ಲಿನ ಮಕ್ಕಳ ಪೋಷಣೆಯ ನಿಗಧಿತ ಗುಣಮಟ್ಟದ ಮಾನದಂಡಗಳೊಂದಿಗೆ (ಮಾಪಕಗಳ) ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಬೇಕು:

### i) ಸಂಸ್ಥೆ ಇರುವ ಸ್ಥಳ

ಸಂಸ್ಥೆಗಳು, ಮಕ್ಕಳು ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗುವಂತೆ ಸಾಕಷ್ಟು ಮುಕ್ತ ಸ್ಥಳಗಳೊಂದಿಗೆ, ನೈಸರ್ಗಿಕ ಪರಿಸರದಿಂದ ಕೂಡಿರುವಂತಹ ಹಿತಕರವಾದ **ಮಕ್ಕಳಸ್ನೇಹಿ** ಪರಿಸರದಲ್ಲಿರಬೇಕು. ನಿರ್ದಿಷ್ಟ ನಗರ ಅಥವಾ ಪಟ್ಟಣದಲ್ಲಿರುವ ಸಂಸ್ಥೆಯ ಸ್ಥಳ ಹಾಗೂ ಗಾತ್ರ, ಮಕ್ಕಳ ಕಲ್ಯಾಣ ಸಮಿತಿಯು ಉಲ್ಲೇಖಿಸುವ ಹಾಗೂ ಮಕ್ಕಳ ನ್ಯಾಯ ಮಂಡಳಿಯು ವಿವರಿಸುವ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಂಖ್ಯೆಯನ್ನು ಅವಲಂಭಿಸಿರುತ್ತದೆ. ಪ್ರತಿ ಸಂಸ್ಥೆಯು ವಿವಿಧ ಸಾರಿಗೆ ವ್ಯವಸ್ಥೆಗಳಿಗೆ ಸಂಪರ್ಕವನ್ನು ಹೊಂದಿರುವಂತಿರಬೇಕು ಹಾಗೂ ಕಾನೂನಿನೊಂದಿಗೆ ಸಂಘರ್ಷ ಕ್ಕೊಳಗಾದ/ಪೋಷಣೆಯಡಿ ಇರುವ ಮಕ್ಕಳಿಗೆ ಸುಲಭವಾಗಿ ದೊರೆಯುವಂತಹ ಶಾಲೆಗಳು ಹಾಗೂ ತಾಂತ್ರಿಕ ಹಾಗೂ ಇತರೆ ವೃತ್ತಿಪರ ತರಬೇತಿ ಸಂಸ್ಥೆಗಳಿಗೆ ಹತ್ತಿರವಿರಬೇಕು.

### ii) ಕಟ್ಟಡ

ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತಹ ವೀಕ್ಷಣಾಲಯಗಳು ಹಾಗೂ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವಂತಹ ಮಕ್ಕಳ ಪಾಲನಾ ಸಂಸ್ಥೆಗಳು ಪ್ರತ್ಯೇಕ ಆವರಣಗಳಿಂದ ಕಾರ್ಯನಿರ್ವಹಿಸಬೇಕು. ಪ್ರತಿ ಸಂಸ್ಥೆಯಲ್ಲಿರುವ ವಸತಿ ಸೌಕರ್ಯ ಈ ಕೆಳಕಂಡ ಮಾನದಂಡಗಳ ಪ್ರಕಾರ ಇರಬೇಕು:

### (a) ವೀಕ್ಷಣಾಲಯಗಳು. (OH-Observation Home)

i. ಬಾಲಕಿಯರು ಹಾಗೂ ಬಾಲಕರಿಗಾಗಿ ಪ್ರತ್ಯೇಕ ವೀಕ್ಷಣಾಲಯಗಳು.

ii. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಶಾರೀರಿಕ ಹಾಗೂ ಮಾನಸಿಕ ಸ್ಥಿತಿಗತಿ ಹಾಗೂ ಎಸಗಿರುವ ಅಪರಾಧದ ತೀವ್ರತೆಯನ್ನು ಪರಿಗಣಿಸಿ, ಅವರ ವಯಸ್ಸಿಗೆ ಅನುಗಣವಾಗಿ ವರ್ಗೀಕರಣ ಹಾಗೂ ಪ್ರತ್ಯೇಕಿಸುವುದು, ಆದ್ಯತೆಯಾಗಿ 7–11 ವರ್ಷಗಳು, 12–16 ವರ್ಷಗಳು ಹಾಗೂ 16–18 ವರ್ಷಗಳು.

## (b) ವಿಶೇಷ ಗೃಹ

i. 10 ವರ್ಷಗಳಿಗಿಂತ ಮೇಲ್ಪಟ್ಟ ವಯಸ್ಸಿನ ಬಾಲಕಿಯರು ಹಾಗೂ 11 ರಿಂದ 15 ವರ್ಷ ಹಾಗೂ 16 ರಿಂದ 18 ವರ್ಷ ವಯಸ್ಸಿನ ನಡುವಿನ ಬಾಲಕರಿಗಾಗಿ ಪ್ರತ್ಯೇಕ ವಿಶೇಷ ಗೃಹ.

ii. ವಯಸ್ಸು, ಅಪರಾಧದ ಸ್ವರೂಪ ಹಾಗೂ ಅವರ ಮಾನಸಿಕ ಹಾಗೂ ಶಾರೀರಿಕ ಸ್ಥಿತಿಗಳನ್ನು ಆಧರಿಸಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ವರ್ಗೀಕರಣ ಹಾಗೂ ಪ್ರತ್ಯೇಕೀಕರಣ.

## (c) ಬಾಲಮಂದಿರಗಳು. (ಮಕ್ಕಳ ಗೃಹ).

i. 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕ, ಬಾಲಕಿಯರನ್ನು ಒಂದೇ ಕಡೆ ಇರಿಸಬಹುದು. ಆದರೆ 5–10 ವರ್ಷ ವಯಸ್ಸಿನ ಬಾಲಕರು ಹಾಗೂ ಬಾಲಕಿಯರ ಮಲಗುವ, ಸ್ನಾನದ ಗೃಹ ಹಾಗೂ ಮಲಗುವ ಸೌಕರ್ಯಗಳು ಪ್ರತ್ಯೇಕವಾಗಿರಬೇಕು.

ii. 7–11 ಹಾಗೂ 12–18 ವರ್ಷಗಳ ವಯೋಮಾನದ ಬಾಲಕರು ಹಾಗೂ ಬಾಲಕಿಯರಿಗೆ ಪ್ರತ್ಯೇಕವಾಗಿರಬೇಕು.

iii. ಶಿಶುಗಳಿಗೆ ಸೂಕ್ತ ಸೌಕರ್ಯಗಳೊಂದಿಗೆ 0–5 ವರ್ಷ ವಯಸ್ಸಿನ ಗುಂಪಿನ ಮಕ್ಕಳಿಗೆ ಪ್ರತ್ಯೇಕ ಸೌಕರ್ಯಗಳು.

## (d) ಆಶ್ರಯ ಗೃಹ (ಶೆಲ್ಟರ್ ಹೋಂ)

i. ಬಾಲಕಿಯರು ಹಾಗೂ ಬಾಲಕರಿಗಾಗಿ ಪ್ರತ್ಯೇಕ ಆಶ್ರಯ ಗೃಹ

ii. 10 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಬಾಲಕಿಯರು ಹಾಗೂ 11 ರಿಂದ 15 ವರ್ಷ ಹಾಗೂ 16 ರಿಂದ 18 ವರ್ಷ ವಯಸ್ಸಿನ ಗುಂಪಿನ ಬಾಲಕರಿಗಾಗಿ ಪ್ರತ್ಯೇಕ ಆಶ್ರಯ ಗೃಹಗಳು;

### 3. ಸಿಬ್ಬಂದಿಗಳ ತರಬೇತಿ

3.1 ಮಕ್ಕಳ ನ್ಯಾಯ ಕಾಯ್ದೆ, 2000 ಹಾಗೂ ಅದರ ತಿದ್ದುಪಡಿ ಕಾಯ್ದೆ, 2006 ರಡಿ, ಸಂಸ್ಥೆಗಳಲ್ಲಿ ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ, ಮಕ್ಕಳ ಪೋಷಣೆಯನ್ನು ನೋಡಿಕೊಳ್ಳುತ್ತಿರುವ ಸಿಬ್ಬಂದಿಗಳಿಗೆ ನಿಯೋಜಿಸಿರುವ ಕೆಲಸದ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಆ ಕೆಲಸಕ್ಕೆ ನೇಮಕ ಮಾಡಿರುವ ಸಿಬ್ಬಂದಿಗಳಿಗೆ, ಕಾನೂನುಬದ್ಧ ಜವಾಬ್ದಾರಿಗಳು ಹಾಗೂ ನಿರ್ಧಿಷ್ಟ ಉದ್ಯೋಗ ಅಗತ್ಯಗಳ ಅಗತ್ಯದ ಪ್ರಕಾರ ತರಬೇತಿಯನ್ನು ನೀಡಬೇಕು.

3.2 ಈ ಸಂಸ್ಥೆಗಳ ಮೇಲ್ವಿಚಾರಕ/ಯೋಜನಾ ವ್ಯವಸ್ಥಾಪಕ, ಪ್ರೊಬೇಷನ್ ಅಧಿಕಾರಿ ಹಾಗೂ ಮಕ್ಕಳ ಕಲ್ಯಾಣ/ರಕ್ಷಣಾ ಅಧಿಕಾರಿಗಳ ಹುದ್ದೆಗಳಿಗೆ, ಮಕ್ಕಳ ನ್ಯಾಯ ವ್ಯವಸ್ಥೆಯಲ್ಲಿ ತರಬೇತಿ ಹೊಂದಿರುವ ಹಾಗೂ ಮಕ್ಕಳ ಪೋಷಣೆ ಹಾಗೂ ರಕ್ಷಣೆಯ ಬಗ್ಗೆ ಜ್ಞಾನ ಹೊಂದಿರುವಂತಹ ವ್ಯಕ್ತಿಗಳನ್ನು ಮಾತ್ರ ನೇಮಕ ಮಾಡಬೇಕು. ಒಂದು ವೇಳೆ ಇಂತಹ ಹುದ್ದೆಗಳಲ್ಲಿ ತರಬೇತಿ ರಹಿತ ವ್ಯಕ್ತಿಗಳಿದ್ದರೆ, ಅವರಿಗೆ ರಾಜ್ಯ ಸರ್ಕಾರ ಅಥವಾ ಪ್ರಭಾರ ಅಧಿಕಾರಿಯು, ಅವರಿಗೆ ಸೇವೆಯಲ್ಲಿನ ತರಬೇತಿಯನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ರಾಜ್ಯ ಸರ್ಕಾರವು, ವಿವಿಧ ವರ್ಗಗಳ ಸಿಬ್ಬಂದಿಗಳಿಗೆ ವಿಶೇಷ ತರಬೇತಿ

ಕಾರ್ಯಕ್ರಮಗಳನ್ನು ಆಯೋಜಿಸಲು, ಎನ್‌ಐಪಿಪಿಸಿಡಿ, ಎನ್‌ಐಎಸ್‌ಡಿ, ನಿಮ್ಹಾನ್ಸ್ ಹಾಗೂ ಸಾಮಾಜಿಕ ಕೆಲಸದಲ್ಲಿ ಗುರುತಿಸಿಕೊಂಡಿರುವ ಶಾಲೆಗಳು/ಸಂಸ್ಥೆಗಳು ಅಥವಾ ಮಕ್ಕಳ ಸಂಬಂಧಿತ ವಿಷಯಗಳಲ್ಲಿ ತಜ್ಞತೆಯನ್ನು ಹೊಂದಿರುವ ತಜ್ಞ ಸಂಸ್ಥೆಗಳು/ಅಂಗಗಳ ಸಹಾಯವನ್ನು ಪಡೆದುಕೊಳ್ಳಬಹುದು.

ಈ ತರಬೇತಿ ಕಾರ್ಯಕ್ರಮಗಳು, ಮಕ್ಕಳ ಹಕ್ಕುಗಳು, ಮಕ್ಕಳ ಮನಃಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳ, ಮಕ್ಕಳನ್ನು ಸೂಕ್ಷ್ಮ ರೀತಿಯಲ್ಲಿ ನೋಡಿಕೊಳ್ಳುವುದು, ಮಕ್ಕಳ ನ್ಯಾಯ, ಆಪ್ತಸಮಾಲೋಚನೆ, ಜೀವನಕೌಶಲ್ಯಗಳ ತರಬೇತಿ ಹಾಗೂ ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಮಕ್ಕಳು ಹಾಗೂ ನಡವಳಿಕೆ ಸಮಸ್ಯೆಗಳೊಂದಿಗೆ ಕೆಲಸ ನಿರ್ವಹಿಸುವ ವಿಷಯಗಳನ್ನು ಒಳಗೊಂಡಿರಬೇಕು. ಈ ತರಬೇತಿ ಕಾರ್ಯಕ್ರಮಗಳನ್ನು ಈ ಕೆಳಗಿನ ಕ್ರಮಾಂಕದಂತೆ ವ್ಯವಸ್ಥೆಗೊಳಿಸಬಹುದು:

i) ಹೊಸದಾಗಿ ನೇಮಕವಾಗಿರುವ ಸಿಬ್ಬಂದಿಗಳಿಗೆ ಪುನರ್‌ಮನನ ಹಾಗೂ ತರಬೇತಿ ಹಾಗೂ ಹಾಲಿ ಸಿಬ್ಬಂದಿಗಳಿಗೆ ಸೇವೆಯೊಳಗಿನ ತರಬೇತಿಯನ್ನು ಒದಗಿಸುವುದು;

ii) ಪ್ರತಿ ಸಿಬ್ಬಂದಿಗೂ ಕನಿಷ್ಠ ಎರಡು ವರ್ಷಗಳಿಗೊಮ್ಮೆ ಪುನರಧ್ಯಯನ ತರಬೇತಿ ಕಾರ್ಯಕ್ರಮಗಳ ಆಯೋಜನೆ;

iii) ಮಕ್ಕಳ ನ್ಯಾಯ ವ್ಯವಸ್ಥೆ ಹಾಗೂ ವಿವಿಧ ಹಂತಗಳಲ್ಲಿರುವ ರಾಜ್ಯ ಸರ್ಕಾರಿ ಅಧಿಕಾರಿಗಳು ಅಥವಾ ಇತರೆ ವಿವಿಧ ಭಾಗೀದಾರರೊಂದಿಗೆ ಆವರ್ತಕ ಸಿಬ್ಬಂದಿ ಸಮಾವೇಶಗಳು, ವಿಚಾರಗೋಷ್ಠಿಗಳು, ಕಾರ್ಯಾಗಾರಗಳಲ್ಲಿ ಭಾಗವಹಿಸುವುದು.

## 4. ಮಕ್ಕಳ ಪಾಲನಾ ಕೇಂದ್ರಗಳ ವ್ಯವಸ್ಥಾಪಕ ಸಮಿತಿ.

ಸಂಸ್ಥೆಯ ನಿರ್ವಹಣೆಗಾಗಿ ಹಾಗೂ ಪ್ರತಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೂ ಹಾಗೂ ಮಗುವಿನ ಪ್ರಗತಿಯ ಉಸ್ತುವಾರಿಗಾಗಿ ಜೆಜೆ ನಿಯಮಾವಳಿಗಳ ನಿಯಮ 55ರಡಿ ಸೂಚಿಸಿರುವಂತೆ, ಪ್ರತಿ ಸಂಸ್ಥೆಯು **ವ್ಯವಸ್ಥಾಪಕ ಸಮಿತಿ**ಯೊಂದನ್ನು ರಚಿಸಬೇಕು. ಸಮಿತಿಯು ಮಕ್ಕಳ/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿನಿಂದ ದೂರುಗಳು ಹಾಗೂ ಕೋರಿಕೆಗಳನ್ನು ಪಡೆದುಕೊಳ್ಳಬೇಕು ಹಾಗೂ ಪ್ರತಿಕ್ರಿಯೆ ನೀಡಬೇಕು.

## 5. ಮಕ್ಕಳ ಸಮಿತಿಗಳು

5.1 ಪ್ರತಿ ಸಂಸ್ಥೆಯು ವಿವಿಧ ವಯೋಮಾನದ ಗುಂಪುಗಳ ಮಕ್ಕಳಿಗಾಗಿ ಜೆಜೆ ನಿಯಮಾವಳಿಗಳು, 2007ರಡಿ ನಿಯಮ 56ರ ಪ್ರಕಾರ ಮಕ್ಕಳ ಸಮಿತಿಯನ್ನು ರಚಿಸಬೇಕು. ಈ ಸಮಿತಿಗಳು ಪ್ರತಿ ತಿಂಗಳು ಸಭೆ ನಡೆಸಿ, ಸಭೆಯ ನಡಾವಳಿಗಳನ್ನು ನಿರ್ವಹಿಸಬೇಕು ಹಾಗೂ ಅದನ್ನು ಮಾಸಿಕ ಸಭೆಗಳಲ್ಲಿ ನಿರ್ವಹಣಾ ಸಮಿತಿಗಳೊಂದಿಗೆ ಹಂಚಿಕೊಳ್ಳಬೇಕು. ಈ ಸಮಿತಿಗಳನ್ನು, ನಾಯಕರನ್ನು ಆಯ್ಕೆ ಮಾಡಲು, ಸಭೆಗಳನ್ನು ಆಯೋಜಿಸಲು, ನಿಯಮಗಳನ್ನು ಅಭಿವೃದ್ಧಿಪಡಿಸುವುದು, ಇತ್ಯಾದಿ ಕೆಲಸಗಳಿಗೆ ಬೆಂಬಲ ಒದಗಿಸುವಂತಹ ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳು ಅಥವಾ ಮಕ್ಕಳ ಭಾಗವಹಿಸುವಿಕೆ ತಜ್ಞರ ಸಹಾಯವನ್ನು ಪಡೆದು ರಚಿಸಬೇಕು.

5.2 ಮಕ್ಕಳು ಸಂಸ್ಥೆಯ ನಿರ್ವಹಣೆ ಕೆಲಸದಲ್ಲಿ ಭಾಗವಹಿಸಬೇಕು ಹಾಗೂ ಇವುಗಳನ್ನು ಒಳಗೊಂಡಿರಬೇಕು:

(i) ಶಿಕ್ಷಣ, ಮನರಂಜನೆ, ಕ್ರೀಡೆಗಳು, ಇತ್ಯಾದಿ ಒಳಗೊಂಡಂತೆ ಅವರ ಟೈಂಟೇಬಲ್/ದೈನಂದಿನ ದಿನಚರಿಯನ್ನು ಅಭಿವೃದ್ಧಿಪಡಿಸುವುದು;

(ii) ಅವರ ಊಟದ ವ್ಯವಸ್ಥೆಯ ಯೋಜನೆ – ಮೆಸ್ ಸಮಿತಿಯೊಂದನ್ನು ರಚಿಸುವುದು ಹಾಗೂ ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಮಗು/ಮಕ್ಕಳಿಗೆ, ಪೌಷ್ಟಿಕ ತಜ್ಞರ ನೆರವಿನೊಂದಿಗೆ ಅವರ ಊಟವನ್ನು ಆಯ್ಕೆ ಮಾಡುವುದು ಹಾಗೂ ಯೋಜಿಸುವುದು;

(iii) ಅವರ ಸ್ವಂತ ಸ್ಥಳದ ನಿರ್ವಹಣೆ – ಕೊಠಡಿಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು;

(iv) ತೆರೆದ ಸ್ಥಳಗಳು, ಉದ್ಯಾನವನಗಳು, ಇತ್ಯಾದಿಗಳನ್ನು ಸ್ವಚ್ಛಗೊಳಿಸುವುದು;

(v) ಕೌಶಲ್ಯ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಪಠ್ಯೇತರ ಚಟುಟಿಕೆಗಳು.

## 6.ವೈಯಕ್ತಿಕ ಪೋಷಣಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು. (ತಯಾರಿಸುವುದು).

ಸಂಬಂಧಪಟ್ಟ ಏಜೆನ್ಸಿಯು ಡಿಸಿಪಿಯು ದೊಂದಿಗೆ ಸಮಾಲೋಚಿಸಿ ಒಂದು ತಿಂಗಳೊಳಗೆ ಸಾಂಸ್ಥಿಕ ಪೋಷಣೆಯಡಿ ಇರುವ ಪ್ರತಿಯೊಂದು ಮಗುವಿಗೂ **ವೈಯಕ್ತಿಕ ಪೋಷಣಾ ಯೋಜನೆಯನ್ನು ಅಭಿವೃದ್ಧಿಪಡಿಸಬೇಕು (ತಯಾರಿಸುವುದು)**. ಡಿಸಿಪಿಯು ಅನುಮೋದನೆಯ ನಂತರ ಈ ವೈಯಕ್ತಿಕ ಪೋಷಣಾ ಯೋಜನೆಯನ್ನು, ಸಿಡಬ್ಲ್ಯೂಸಿ/ಜೆಜೆಬಿಗೆ 15 ದಿನಗಳೊಳಗೆ ಅನುಮೋದನೆ ಪಡೆಯಲು ಕಳುಹಿಸುವುದು. ***ಸಂಬಂಧಪಟ್ಟ ಏಜೆನ್ಸಿಯು, ಸಿಡಬ್ಲ್ಯೂಸಿ/ಜೆಜೆಬಿ ವತಿಯಿಂದ ಪೋಷಣಾ ಯೋಜನೆ ಅನುಮೋದನೆಯಾದ ಆರು ತಿಂಗಳೊಳಗೆ ವೈಯಕ್ತಿಕ ಮಕ್ಕಳ ಪೋಷಣಾ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಡಿಸಿಪಿಯುಗೆ ವರದಿ ಮಾಡಿಕೊಳ್ಳಬೇಕು. ವೈಯಕ್ತಿಕ ಪೋಷಣಾ ಯೋಜನೆಯನ್ನು ಪ್ರತಿ ಆರು ತಿಂಗಳಿಗೊಮ್ಮೆ ಪುನರ್ ಪರಿಶೀಲಿಸಬೇಕು.***

## 7. ಗೃಹಗಳಿಗಾಗಿ ಕೈಪಿಡಿಗಳು/ಶಿಷ್ಟಾಚಾರಗಳ ರಚನೆ:

**ಮಕ್ಕಳಸ್ನೇಹಿ** ಗೃಹಗಳ ರಚನೆಗಾಗಿ ಎಂಡಬ್ಲ್ಯೂಸಿಡಿ ಕೈಪಿಡಿಗಳು/ಶಿಷ್ಟಾಚಾರಗಳನ್ನು ಅಭಿವೃದ್ಧಿಪಡಿಸಬೇಕು. ಮಕ್ಕಳು ರಚನಾತ್ಮಕವಾಗಿ ಒಳಗೊಳ್ಳುವ ವಿವಿಧ ಚಟುವಟಿಕೆಗಳನ್ನು ಇದು ಒಳಗೊಂಡಿರಬೇಕು ಹಾಗೂ ಗೃಹಗಳ ನಿರ್ವಹಣೆಯಲ್ಲಿ ಮಕ್ಕಳ ಭಾಗವಹಿಸುವಿಕೆಯೆಡೆಗೆ ಹೆಚ್ಚು ಗಮನವನ್ನು ಕೇಂದ್ರೀಕರಿಸಬೇಕು. ಇಂತಹ ಕೈಪಿಡಿಗಳು/ಶಿಷ್ಟಾಚಾರಗಳನ್ನು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಹಂಚಿಕೊಳ್ಳಬೇಕು. ಈ ಶಿಷ್ಟಾಚಾರಗಳು ವಿವಿಧ ರೀತಿಯ ಗೃಹಗಳಲ್ಲಿ ಸಮುದಾಯ ಭಾಗವಹಿಸುವಿಕೆಯನ್ನು ಒಳಗೊಂಡಿರಬೇಕು ಹಾಗೂ ಈ ಗೃಹಗಳ ಮುಕ್ತ ಹಾಗೂ ಪಾರದರ್ಶಕ ನಿರ್ವಹಣೆಯನ್ನು ಪ್ರೋತ್ಸಾಹಿಸುವಂತಿರಬೇಕು.

## 8. ವಿವಿಧ ರೀತಿಯ ಗೃಹಗಳಿಗೆ ಬೆಂಬಲ

ಈ ಯೋಜನೆಯು ಈ ವಿಷಯದಡಿ ಎರಡು ರೀತಿಯ ಅನುದಾನಗಳನ್ನು ಒದಗಿಸುತ್ತದೆ, 1) ನಿರ್ಮಾಣ ಹಾಗೂ ನಿರ್ವಹಣಾ ಅನುದಾನ ಹಾಗೂ 2) ನಿರ್ವಹಣಾ ಅನುದಾನ. ನಿರ್ಮಾಣ ಹಾಗೂ ನಿರ್ವಹಣಾ ಅನುದಾನದಡಿ ಯೋಜನೆಯು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹೊಸ ಗೃಹದ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಬೆಂಬಲ ಒದಗಿಸುತ್ತದೆ. ಇಂತಹ ಮಕ್ಕಳ ಪಾಲನಾ ಸಂಸ್ಥೆಗಳು /ಸಂಸ್ಥೆಯ ನಿರ್ವಹಣಾ ಅನುದಾನದ ಅಡಿ ಕೇವಲ ನಿರ್ವಹಣೆಗಾಗಿ ಮಾತ್ರ ಅನುದಾನ ನೀಡುವುದು. ಕೆಳಗೆ ಚರ್ಚಿಸಿರುವ ವಿವಿಧ ಸಂಸ್ಥೆಗಳ ಸ್ಥಾಪನೆ ಹಾಗೂ ನಿರ್ವಹಣೆಗಾಗಿ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ **X** ರಲ್ಲಿ ನೀಡಿದೆ.

### i) ಆಶ್ರಯ ಗೃಹ (ಶೆಲ್ಟರ್ ಹೋಂ– (Shelter Home)).

ನಗರ ಪ್ರದೇಶಗಳಲ್ಲಿರುವ ಅಂಚಿನಲ್ಲಿರುವ ದೊಡ್ಡ ಸಂಖ್ಯೆಯ ಮಕ್ಕಳಿಗೆ ಡೇ ಕೇರ್ ಸೇವೆಗಳ ಅಗತ್ಯವಿದ್ದು, ಒಂದು ಅಥವಾ ಹೆಚ್ಚಿನ ಕಾರಣಗಳಿಗಾಗಿ ತಾತ್ಕಾಲಿಕ ಅವಧಿಯವರೆಗೆ ಗೃಹ ಆಧಾರಿತ

ಪೋಷಣೆಯ ಅಗತ್ಯವಿರುವ ಹಾಗು ಇತರೆ ಅನೇಕ ಮಕ್ಕಳೂ ಇದ್ದಾರೆ. ಇಂತಹ ಮಕ್ಕಳ ಪೈಕಿ, ಪಾಲಕರ ಪೋಷಣೆ ಇಲ್ಲದಿರುವ, ಓಡಿ ಬಂದಿರುವ ಮಕ್ಕಳು, ವಲಸೆ ಬಂದ ಮಕ್ಕಳು ಹಾಗೂ ಮಾದಕ ವಸ್ತುಗಳಿಗೆ ಈಡಾಗಿರುವ ಇತ್ಯಾದಿ ಮಕ್ಕಳು ಒಳಗೊಂಡಿದ್ದಾರೆ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಹಾಗೂ ಕೇಂದ್ರ ಮಾದರಿ ನಿಯಮಾವಳಿಗಳು, ರಾಜ್ಯ ಸರ್ಕಾರಗಳಿಗೆ, ಇಂತಹ ಮಕ್ಕಳ ಅಗತ್ಯಗಳನ್ನು ಪೂರೈಸುವ ಪ್ರತಿಷ್ಠಿತ ಹಾಗೂ ಸಮರ್ಥ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸುವ ಅಧಿಕಾರವನ್ನು ಒದಗಿಸುತ್ತದೆ. ರಾಜ್ಯ ಸರ್ಕಾರವು ಇಂತಹ ಆಶ್ರಯ ಗೃಹಗಳನ್ನು ಸ್ಥಾಪಿಸಲು ಹಾಗೂ ನಿರ್ವಹಿಸಲು ಹಣಕಾಸಿನ ಸಹಾಯವನ್ನು ಒದಗಿಸುತ್ತದೆ. ಈ ಪೈಕಿ ರಾಜ್ಯದಲ್ಲಿರುವ ಒಂದು ಆಶ್ರಯ ಗೃಹವನ್ನಾದರೂ, ಪೋಷಣೆಯ ಗೃಹ, ಮಾದಕವ್ಯಸನಕ್ಕೆ ಈಡಾಗಿರುವ ಮಕ್ಕಳಿಗೆ ವ್ಯಸನಮುಕ್ತಗೊಳಿಸುವ ಹಾಗೂ ಆಪ್ತಸಮಾಲೋಚನೆಯನ್ನು ಒದಗಿಸುವಂತೆ ಅಧಿಸೂಚಿಸಬೇಕು. ಈ ಆಶ್ರಯ ಗೃಹ ಬೆಂಬಲ ಸೇವೆಗಳ ಅಗತ್ಯವುಳ್ಳ ಮಕ್ಕಳಿಗೆ ತಾತ್ಕಾಲಿಕ ಅವಧಿಯವರೆಗೆ ಬೆಳಗ್ಗೆ ಹಾಗೂ ರಾತ್ರಿ ಆಶ್ರಯ ಸೌಕರ್ಯಗಳನ್ನು ಒದಗಿಸಬೇಕು. ಜೊತೆಗೆ ಆ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಪ್ರಯತ್ನಗಳನ್ನೂ ಮಾಡಬೇಕು. ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಗುಂಪುಗಳಲ್ಲಿ ಆಶ್ರಯ ಗೃಹಗಳ ಸ್ಥಾಪನೆಗೆ ಅನುಕೂಲ ಕಲ್ಪಿಸಲು ಹಾಗೂ ವೇಗಗೊಳಿಸಲು ಈ ಯೋಜನೆಯು ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವನ್ನು ಒದಗಿಸುತ್ತದೆ.

## ii) ಮಕ್ಕಳ ಪಾಲನಾ ಸಂಸ್ಥೆಗಳು. (ಬಾಲಮಂದಿರಗಳು– (Children's Home))

ಮಕ್ಕಳ ಕಲ್ಯಾಣ ಸಮಿತಿಗಳ ಮೂಲಕ ಮಕ್ಕಳ ನ್ಯಾಯ ವ್ಯವಸ್ಥೆಯನ್ನು ಪ್ರವೇಶಿಸುವ ಪೋಷಣೆ ಹಾಗೂ ರಕ್ಷಣೆಯ ಅಗತ್ಯವುಳ್ಳ ದೊಡ್ಡ ಸಂಖ್ಯೆಯ ಮಕ್ಕಳಿಗೆ, ವಿಚಾರಣೆ ಬಾಕಿಯಿರುವ ಸಮಯದಲ್ಲಿ ಹಾಗೂ ನಂತರದಲ್ಲಿ ದೀರ್ಘಾವಧಿ ಪೋಷಣೆ, ಚಿಕಿತ್ಸೆ, ಶಿಕ್ಷಣ, ತರಬೇತಿ, ಅಭಿವೃದ್ಧಿ ಹಾಗೂ ಪುನರ್ವಸತಿಯ ಅಗತ್ಯವನ್ನು ಹೊಂದಿರುತ್ತಾರೆ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000, ಸ್ವಯಂ ಸೇವಾ ಸಂಸ್ಥೆಗಳ ಸಂಯೋಜನೆಯೊಂದಿಗೆ ಅಥವಾ ರಾಜ್ಯ ಸರ್ಕಾರವೊಂದಕ್ಕೆ ಇಂತಹ ಮಕ್ಕಳ ಗೃಹ ಆಧಾರಿತ ಪೋಷಣೆಗಾಗಿ ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ಮಕ್ಕಳ ಗೃಹಗಳನ್ನು ಸ್ಥಾಪಿಸುವ ಅಧಿಕಾರವನ್ನು ನೀಡಿದೆ. ಈ ಮಕ್ಕಳ ಪಾಲನಾ ಸಂಸ್ಥೆಗಳು ಮನೆಯಿಂದ ದೂರ ಮನೆಯ ಸೇವೆಯನ್ನು ಒದಗಿಸುವುದರ ಜೊತೆಗೆ ಮಕ್ಕಳ ಒಟ್ಟಾರೆ ಬೆಳವಣಿಗೆಯನ್ನು ಖಾತ್ರಿಪಡಿಸಲು ಸಮಗ್ರ ಮಕ್ಕಳ ಪೋಷಣೆ ಸೌಕರ್ಯಗಳನ್ನು ಕಲ್ಪಿಸುತ್ತವೆ.

ಈ ಮಕ್ಕಳ ಪಾಲನಾ ಸಂಸ್ಥೆಗಳು ಮಕ್ಕಳ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಹಾಗೂ ಮಕ್ಕಳನ್ನು ಮುಖ್ಯವಾಹಿನಿ ಸಮಾಜದಲ್ಲಿ ಸೇರಿಸಲು ಹಾಗೂ ಪುನರ್ವಸತಿಗೊಳಿಸಲು ಅನುಕೂಲವಾಗುವಂತೆ ಕುಟುಂಬಗಳ ಜೊತೆಗೂಡಿ ಕೆಲಸ ನಿರ್ವಹಿಸಬೇಕು.

## iii) ವೀಕ್ಷಣಾಲಯಗಳು. (OH- Obsertvation Home)

ಮಕ್ಕಳ ನ್ಯಾಯ ಮಂಡಳಿಗಳ (ಜೆಜೆಬಿ ಗಳು) ಮೂಲಕ ಮಕ್ಕಳ ನ್ಯಾಯ ವ್ಯವಸ್ಥೆಯನ್ನು ಪ್ರವೇಶಿಸುವ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ರಡಿ ವಿಚಾರಣೆ ಬಾಕಿಯಿರುವ ಅವಧಿಯಲ್ಲಿ ಸೂಕ್ತ ಗೃಹ ಆಧಾರಿತ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುತ್ತದೆ. ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ತಾತ್ಕಾಲಿಕ ಆತಿಥ್ಯ ಒದಗಿಸುವ ಸಲುವಾಗಿ ಸ್ವಯಂಸೇವಾ ಸಂಸ್ಥೆಗಳು, ವೀಕ್ಷಣಾಲಯಗಳೊಂದಿಗೆ ಒಪ್ಪಂದದಡಿ ಅಥವಾ ಸ್ವತಃ ಸ್ಥಾಪಿಸಲು ಹಾಗೂ ನಿರ್ವಹಿಸಲು ರಾಜ್ಯ ಸರ್ಕಾರಗಳಿಗೆ ಈ ಕಾಯ್ದೆ ಅಧಿಕಾರ ನೀಡಿದೆ.

ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ವೀಕ್ಷಣಾಲಯಗಳನ್ನು ಸ್ಥಾಪಿಸಲು ಅನುಕೂಲ ಒದಗಿಸಲು ಹಾಗೂ ಸ್ಥಾಪನೆಯನ್ನು ವೇಗಗೊಳಿಸಲು ಈ ಯೋಜನೆಯು ರಾಜ್ಯ ಸರ್ಕಾರಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವನ್ನು ಒದಗಿಸುತ್ತದೆ.

### iv) ವಿಶೇಷ ಗೃಹಗಳು. (Special Homes)

ಮಕ್ಕಳ ನ್ಯಾಯ ಮಂಡಳಿಗಳಿಂದ (ಜೆಜೆಬಿ ಗಳು) ದೀರ್ಘಾವಧಿ ಪುನರ್ವಸತಿ ಹಾಗೂ ರಕ್ಷಣೆಯನ್ನು ಒದಗಿಸಲು ಬದ್ಧವಾಗಿರುವ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಾಂಸ್ಥಿಕ ಸೇವೆಗಳ ಅಗತ್ಯವಿದೆ. ರಾಜ್ಯ ಸರ್ಕಾರಗಳು, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೂ ಆತಿಥ್ಯ ಹಾಗೂ ಪುನರ್ವಸತಿಗಾಗಿ ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ಸ್ವಯಂಸೇವಾ ಸಂಸ್ಥೆಗಳು, ವಿಶೇಷ ಗೃಹಗಳೊಂದಿಗೆ ಒಪ್ಪಂದದಡಿ ಅಥವಾ ಸ್ವತಃ ವಿಶೇಷ ಗೃಹಗಳನ್ನು ಸ್ಥಾಪಿಸಲು ಹಾಗೂ ನಿರ್ವಹಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಿದೆ. ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ವಿಶೇಷ ಗೃಹಗಳ ಸ್ಥಾಪನೆಯನ್ನು ವೇಗಗೊಳಿಸಲು ಯೋಜನೆಯು ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ಬೆಂಬಲವನ್ನು ಒದಗಿಸುತ್ತದೆ.

### v) ಸುರಕ್ಷತಾ ಸ್ಥಳ: (Place of Safety)

a) ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000ರ ಕಲಂ 16ರ ಪ್ರಕಾರ, ಮಕ್ಕಳ ನ್ಯಾಯ ಮಂಡಳಿಗೆ 16 ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನ  ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವನ್ನು, ಆ  ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು ಎಸಗಿರುವ ಅಪರಾಧ ಗಂಭೀರವಾಗಿದೆ ಹಾಗೂ/ಅಥವಾ  ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿನ ನಡವಳಿಕೆ ವಿಶೇಷ ಗೃಹದಲ್ಲಿ ಇರಿಸಲು ಸೂಕ್ತವಲ್ಲ ಎಂದೆನಿಸಿದಲ್ಲಿ, ಸುರಕ್ಷಿತವಾಗಿರುವ ಸ್ಥಳದಲ್ಲಿ ಸೇರಿಸುವ ಅಧಿಕಾರವನ್ನು ನೀಡಿದೆ. **'ಸುರಕ್ಷಿತ ಸ್ಥಳ'** ಎಂದರೆ ವೀಕ್ಷಣಾಲಯ ಅಥವಾ ವಿಶೇಷ ಗೃಹಕ್ಕೆ ಹೊಂದಿಕೊಂಡಂತೆ ಅಥವಾ ಪ್ರತ್ಯೇಕವಾಗಿ ಸ್ಥಾಪಿಸಿರುವ ಯಾವುದಾದರೂ ಸ್ಥಳ ಅಥವಾ ಸಂಸ್ಥೆಯಾಗಿದ್ದು, **(ಪೊಲೀಸ್ ಲಾಕ್‌ಅಪ್ ಅಥವಾ ಜೈಲ್ ಅಲ್ಲದಿರುವ),** ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತಹ, ಮಂಡಳಿಯ ಆದೇಶದ ಮೇರೆಗೆ ಅಲ್ಲಿಗೆ ಒಂದು ನಿರ್ದಿಷ್ಟ ಅವಧಿಗೆ ಹಾಗೂ ಆದೇಶದಲ್ಲಿ ವ್ಯಾಖ್ಯಾನಿಸಿರುವಂತಹ ಉದ್ದೇಶಕ್ಕಾಗಿ ಕಳುಹಿಸಿರುವ ಆ  ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವನ್ನು ಸೇರಿಸಿಕೊಂಡು, ಪಾಲಿಸಲು ಬಯಸುವ ಆ ಸ್ಥಳ ಅಥವಾ ಸಂಸ್ಥೆಯ ಪ್ರಭಾರ ವ್ಯಕ್ತಿಯಿರುವ ಸ್ಥಳ.

b) ಮಂಡಳಿಯು ಉಲ್ಲೇಖಿಸಿರುವಂತಹ  ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವನ್ನು, ಇಂತಹ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ಸೂಕ್ತ ಎಂದು ಘೋಷಿಸಿರುವಂತಹ 'ಸುರಕ್ಷಿತವಾದ ಸ್ಥಳ'ಕ್ಕೆ ಸೇರಿಸುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕೆಂದು ಹಾಗೂ ಅಂತಹ  ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವನ್ನು ರಕ್ಷಣಾ ಬಂಧನದಲ್ಲಿ, ಅಂತಹ ಸ್ಥಳ ಹಾಗೂ ಅಂತಹ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಅದಕ್ಕೆ ಸೂಕ್ತವೆನಿಸಿದಂತೆ, ಇರಿಸುವಂತೆ ಆದೇಶವನ್ನು ನೀಡಬಹುದು ಎಂದು ವಿವರಿಸುತ್ತದೆ. ರಾಜ್ಯ ಸರ್ಕಾರವು, ನಿಯಮಾವಳಿಗಳ ಮೂಲಕ, 'ಸುರಕ್ಷಿತ ಸ್ಥಳ' ಹಾಗೂ ಅಲ್ಲಿ ಒದಗಿಸುವಂತಹ ಸೌಕರ್ಯಗಳು ಹಾಗೂ ಸೇವೆಗಳು ಸೂಕ್ತವಾಗಿವೆ ಎಂದು ಸ್ಥಳಗಳನ್ನು ಗುರುತಿಸಬಹುದು.

## vi) ವಿಶೇಷ ಅಗತ್ಯವಿರುವ ಮಕ್ಕಳಿಗಾಗಿ ವಿಶೇಷ ಸೇವೆಗಳು

a) ಸಾಕಷ್ಟು ಸಂಖ್ಯೆಯ ಮಕ್ಕಳು ಹೆಚ್‌ಐವಿ/ಏಡ್ಸ್ ಪೀಡಿತರು/ಸೋಂಕಿತರಿದ್ದಾರೆ. ಅನೇಕ ಮಕ್ಕಳು ಮಾದಕ ವಸ್ತುಗಳ ನಿಂದನೆಗೆ ಅಥವಾ ಮಾನಸಿಕ ಅಥವಾ ಶಾರೀರಕ ಸವಾಲಿನಿಂದ ಪೀಡಿತರಾಗಿದ್ದಾರೆ. ಇಂತಹ ಮಕ್ಕಳಿಗೆ, ಪರಿತ್ಯಜಿಸಿರುವ ಕಾರಣ, ಓರ್ವ ಅಥವಾ ಇಬ್ಬರೂ ಪೋಷಕರ ನಿಧನದಿಂದಾಗಿ ಅಥವಾ ಪೋಷಕರು/ಪಾಲಕರು ಆ ಮಕ್ಕಳನ್ನು ನೋಡಿಕೊಳ್ಳಲು ಅಶಕ್ತರು ಎನ್ನುವ ಕಾರಣಗಳಿಂದಾಗಿ ದೀರ್ಘಾವಧಿ ಪೋಷಣೆಯ ಅಗತ್ಯವಿರುತ್ತದೆ. ಇಂತಹ ಮಕ್ಕಳು ವಿಶೇಷವಾಗಿ ಸಂಕಷ್ಟದಲ್ಲಿರುತ್ತಾರೆ, ಏಕೆಂದರೆ ಅವರಿಗೆ ಕುಟುಂಬ ಪೋಷಣೆಯ ಪರ್ಯಾಯ ವ್ಯವಸ್ಥೆಗಳ ಸಂಭವ ಬಹಳ ಕಡಿಮೆ ಇರುತ್ತದೆ ಹಾಗಾಗಿ ವಿಶೇಷ ಸಾಂಸ್ಥಿಕ ಪೋಷಣೆ ವೈದ್ಯಕೀಯ, ಪೌಷ್ಠಿಕ, ಹಾಗೂ ಮಾನಸಿಕ ಬೆಂಬಲ ಒಳಗೊಂಡಂತೆ ಚಿಕಿತ್ಸೆಯ ಅಗತ್ಯವಿರುತ್ತದೆ.

b) ಮೇಲೆ ವಿವರಿಸಿರುವಂತಹ ವಿಶೇಷ ಅಗತ್ಯಗಳಿರುವ ಮಕ್ಕಳಿರುವಂತಹ ಸಂಸ್ಥೆಗಳಿಗೆ ಈ ಯೋಜನೆಯು ಹೆಚ್ಚುವರಿ ಹಣಕಾಸಿನ ಬೆಂಬಲವನ್ನು ಒದಗಿಸುತ್ತದೆ. ಜೊತೆಗೆ, ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ಇರುವ ಕಾರ್ಯಕ್ರಮವನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳೊಂದಿಗೆ ಸಂಯೋಜಿಸಬೇಕು ಅಥವಾ ಇಂತಹ ಮಕ್ಕಳಿಗಾಗಿ ವಿಶೇಷ ಗೃಹಗಳನ್ನು ಸ್ಥಾಪಿಸಲು ಅನುಕೂಲವನ್ನು ಈ ಯೋಜನೆ ಒದಗಿಸುತ್ತದೆ. ಆದರೆ ಮೂಲಭೂತ ಗಮನ ವಿಶೇಷ ಅಗತ್ಯಗಳಿರುವ ಮಕ್ಕಳನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಗೃಹಗಳಲ್ಲಿ ಸೇರಿಸುವುದಾಗಿರುತ್ತದೆ. ಒಂದು ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ವಿಶೇಷ ಅಗತ್ಯಗಳಿರುವ ದೊಡ್ಡ ಸಂಖ್ಯೆಯ ಮಕ್ಕಳಿದ್ದಾಗ ಮಾತ್ರ ಇಂತಹ ಮಕ್ಕಳಿಗಾಗಿ ಪ್ರತ್ಯೇಕ ಗೃಹವನ್ನು ಸ್ಥಾಪಿಸಬಹುದು.

## *E.* ಅಗತ್ಯ ಆಧಾರಿತ/ ನವೀನ ಮಧ್ಯಸ್ಥಿಕೆಗಳಿಗಾಗಿ ಸಾಮಾನ್ಯ ಸಹಾಯಧನ

1.ಸಂಕಷ್ಟದ ಸನ್ನಿವೇಶಗಳಲ್ಲಿರುವ ಎಲ್ಲಾ ಮಕ್ಕಳಿಗಾಗಿ ಇರುವ ಎಲ್ಲಾ ಪ್ರಮುಖ ಮಧ್ಯಸ್ಥಿಕೆಗಳು/ಸೇವೆಗಳನ್ನು ಐಸಿಪಿಎಸ್ ನೊಂದಿಗೆ ಸೇರ್ಪಡೆ ಮಾಡುವ ಪ್ರಯತ್ನದ ನಡುವೆಯೇ, ಮಂತ್ರಾಲಯವು ಅಗತ್ಯ ಆಧಾರಿತ/ನವೀನ ಮಧ್ಯಸ್ಥಿಕೆ ಕಾರ್ಯಕ್ರಮಗಳಿಗೆ ಬೆಂಬಲ ನೀಡಬೇಕಾದ ಪ್ರಾಮುಖ್ಯತೆಯನ್ನು ಗಮನಿಸಿದೆ. ಇಂತಹ ಕಾರ್ಯಕ್ರಮಗಳು ಒಂದು ಜಿಲ್ಲೆ/ನಗರದ ನಿರ್ಧಿಷ್ಟವಾದ ಅಗತ್ಯಗಳ ಮೇಲೆ ಅವಲಂಭಿಸಿರುತ್ತದೆ ಹಾಗೂ ಪ್ರಾಯೋಗಿಕ ಯೋಜನೆಗಳಾಗಿ ಅನುಷ್ಠಾನಗೊಳಿಸಬಹುದಾಗಿದೆ: ಉದಾಹರಣೆಗೆ, ಖೈದಿಗಳ ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮಗಳು ಲೈಂಗಿಕ ಕಾರ್ಯಕರ್ತರ ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮಗಳು, ಇತ್ಯಾದಿ. ಈ ಅಂಶವನ್ನು ಪುನರ್ವಸತಿ ಕೆಲಸದ ನಂತರದ ವಿಕೋಪಕ್ಕೂ ಬಳಸಿಕೊಳ್ಳಬಹುದು. ಯೋಜನೆಯು ರಾಜ್ಯ ಸರ್ಕಾರಗಳಿಗೆ, ಈ ಯೋಜನೆಯಡಿ ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕ್ರಮಗಳಲ್ಲಿ ಇಲ್ಲದಿರುವಂತಹ ವಿಷಯಗಳು/ಗಂಡಾಂತರಗಳು/ಸಂಕಷ್ಟಗಳ ಮೇಲೆ ನವೀನ ರೀತಿಯ ಯೋಜನೆಗಳನ್ನು ಕೈಗೊಳ್ಳುವ ಸೌಲಭ್ಯವನ್ನು ಒದಗಿಸಿದೆ. ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯು ಇಂತಹ ಯೋಜನೆಗಳಿಗೆ ಬೆಂಬಲ ಒದಗಿಸುವಂತಹ ಸಾಮಾನ್ಯ ಸಹಾಯಧನ ನಿಧಿಯನ್ನು ಹೊಂದಿರಬೇಕು.

2. ಮೇಲೆ ತಿಳಿಸಿರುವಂತೆ ನವೀನ ಯೋಜನೆಗಾಗಿ ಹಣಕಾಸಿನ ಬೆಂಬಲ ಒದಗಿಸುವ ವಿವರಗಳನ್ನು **ಅನುಬಂಧ–I** ರಲ್ಲಿ ನೀಡಲಾಗಿದೆ (ಕೋಷ್ಟಕ 5.2, ಕ್ರ. ಸಂ. 10)

# ಅಧ್ಯಾಯ 11 – ಶಾಸನಬದ್ಧ ಬೆಂಬಲ ಸೇವೆಗಳು.

## ಎ. ಮಕ್ಕಳ ಕಲ್ಯಾಣ ಸಮಿತಿಗಳು (ಸಿಡಬ್ಲ್ಯೂಸಿಗಳು (CWCs))

1. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000, ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳ ಪೋಷಣೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಹಾಗೂ ಪುನರ್ವಸತಿಗೆ ಸಂಬಂಧಪಟ್ಟ ಪ್ರಕರಣಗಳನ್ನು ವಿಲೇವಾರಿ ಮಾಡಲು ಮತ್ತು ಅಂತಹ ಮಕ್ಕಳ ಮೂಲಭೂತ ಅಗತ್ಯಗಳನ್ನು ಪೂರೈಸಲು ಹಾಗೂ ಮಾನವ ಹಕ್ಕುಗಳ ರಕ್ಷಣೆ ಮಾಡಲು ಅಂತಿಮ ಪ್ರಾಧಿಕಾರವಾಗಿ ಪ್ರತಿ ಜಿಲ್ಲೆಯಲ್ಲಿ ಒಂದು ಮಕ್ಕಳ ಕಲ್ಯಾಣ ಸಮಿತಿಯನ್ನು ಕಡ್ಡಾಯವಾಗಿ ಸ್ಥಾಪಿಸುವಂತೆ ಸೂಚಿಸುತ್ತದೆ.

2. ಪ್ರತಿ ಜಿಲ್ಲೆಯಲ್ಲಿ ಈ ಸಿಡಬ್ಲ್ಯೂಸಿಗಳ ಸ್ಥಾಪನೆಗೆ ಅಗತ್ಯ ಅನುಕೂಲ ಒದಗಿಸಲು ಹಾಗೂ ಅದರ ಪರಿಣಾಮಕಾರಿಯಾದ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಲು ಈ ಯೋಜನೆಯು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸೂಕ್ತ ಮೂಲಭೂತಸೌಕರ್ಯ ಹಾಗೂ ಹಣಕಾಸಿನ ಬೆಂಬಲವನ್ನು ಒದಗಿಸುತ್ತದೆ.

## 3. ಮಕ್ಕಳ ಕಲ್ಯಾಣ ಸಮಿತಿಗಳು (ಸಿಡಬ್ಲ್ಯೂಸಿಗಳು) ಸ್ಥಾಪನೆಗಾಗಿ ಮಾರ್ಗಸೂಚಿಗಳು

### i. ಸಿಡಬ್ಲ್ಯೂಸಿ ಸ್ಥಳ

ಮಕ್ಕಳ ನ್ಯಾಯ ಕಾಯ್ದೆ, 2000ರಡಿ ಒದಗಿಸಿರುವಂತೆ ಈ ಮಕ್ಕಳ ಕಲ್ಯಾಣ ಸಮಿತಿಗಳು ತನ್ನ ವಿಚಾರಣೆಗಳನ್ನು ಮಕ್ಕಳ ಗೃಹದ (ಮಕ್ಕಳ ಪಾಲನಾ ಕೇಂದ್ರ/ಬಾಲಮಂದಿರ) ಆವರಣದೊಳಗೆ ನಡೆಸಬೇಕು.

### ii. ಸ್ಥಳ ಹಾಗೂ ಮೂಲಭೂತ ಸೌಕರ್ಯ

a) ಹೊಸದಾಗಿ ನಿರ್ಮಾಣವಾಗಿರುವ ಬಾಲಮಂದಿರಗಳು, ಸಿಡಬ್ಲ್ಯೂಸಿಗಾಗಿ 300 ಚದರ ಅಡಿ ಅಳತೆಯ ಎರಡು ಕೊಠಡಿಗಳನ್ನು ಹೊಂದಿರಬೇಕು. ಸಮಿತಿಗಾಗಿ ಆವರಣದ ಒಳಗೆ ಅಗತ್ಯ ಸ್ಥಳಾವಕಾಶವಿರುವಂತಹ ಹಾಲಿ ಬಾಲಮಂದಿರಗಳಲ್ಲಿ ಸ್ಥಳವನ್ನು ಒದಗಿಸಬೇಕು. ಆದರೆ, ಬಾಲಮಂದಿರ ಇಲ್ಲದಿರುವಂತಹ ಅಥವಾ ಹಾಲಿ ಇರುವಂತಹ ಬಾಲಮಂದಿರಗಳಲ್ಲಿ ಸಿಡಬ್ಲ್ಯೂಸಿಗಾಗಿ ಅಗತ್ಯ ಸ್ಥಳಾವಕಾಶ ಇಲ್ಲದಿರುವಂತಹ ಜಿಲ್ಲೆಗಳಲ್ಲಿ ಐಸಿಪಿಎಸ್ ಸಿಡಬ್ಲ್ಯೂಸಿಗೆ ನಿರ್ಮಾಣ ಮಾಡಲು ಅಥವಾ ಸೂಕ್ತ ಸ್ಥಳವನ್ನು ಬಾಡಿಗೆಗೆ ಪಡೆಯಲು ಅಗತ್ಯ ನಿಧಿಯನ್ನು ಒದಗಿಸುತ್ತದೆ.

**b)** ಸಮಿತಿಯು ತನ್ನ ಒಂದು ಕೊಠಡಿಯಲ್ಲಿ ವಿಚಾರಣೆಗಳನ್ನು ನಡೆಸಬೇಕು ಹಾಗೂ ಮತ್ತೊಂದು ಕೊಠಡಿಯನ್ನು ಮಕ್ಕಳು ಹಾಗೂ ಕುಟುಂಬದ ಸದಸ್ಯರಿಗೆ ಕಾಯುವ ಕೋಣೆಯಾಗಿ ಬಳಸಿಕೊಳ್ಳಬೇಕು. ಸಿಡಬ್ಲ್ಯೂಸಿ ವಿಚಾರಣೆಗಳನ್ನು ನಡೆಸುವಂತಹ ಕೋಣೆಯಲ್ಲಿ ಅಗತ್ಯ ಪೀಠೋಪಕರಣಗಳು ಹಾಗೂ ಇತರೆ ವಸ್ತುಗಳನ್ನು ಹೊಂದಿರಬೇಕು, ಸೂಕ್ತ ಗಾಳಿ ಬೆಳಕು ಬರುವಂತಿರಬೇಕು ಹಾಗೂ **ಮಕ್ಕಳ ಸ್ನೇಹಿ ಪರಿಸರವನ್ನು ಹೊಂದಿರುವಂತಿರಬೇಕು. ಕಾಯುವ ಕೋಣೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮಕ್ಕಳಿಗಾಗಿ ಸ್ವಲ್ಪ ಒಳಾಂಗಣ ಮನರಂಜನಾ ಸೌಲಭ್ಯಗಳನ್ನು ಕಲ್ಪಿಸಬೇಕು.**

c) ಮಕ್ಕಳ ಕಲ್ಯಾಣ ಸಮಿತಿಗಳನ್ನು ಸ್ಥಾಪಿಸಲು ಹಣಕಾಸಿನ ನೆರವಿನ ವಿವರಗಳನ್ನು ಅನುಬಂಧ XI ರಲ್ಲಿ ನೀಡಿದೆ.

## B. ಮಕ್ಕಳ ನ್ಯಾಯ ಮಂಡಳಿಗಳು (ಜೆಜೆಬಿ (JJB))

i. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000, ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತಹ ಮಕ್ಕಳ ವಿಷಯಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ನಿರ್ವಹಿಸಲು **ಪ್ರತಿ ಜಿಲ್ಲೆಯಲ್ಲಿಯೂ ಕಡ್ಡಾಯವಾಗಿ ಒಂದು ಮಕ್ಕಳ ನ್ಯಾಯ ಮಂಡಳಿಯನ್ನು (ಜೆಜೆಬಿ) ಸ್ಥಾಪಿಸಬೇಕೆಂದು ತಿಳಿಸುತ್ತದೆ.** ಪ್ರತಿ ಜಿಲ್ಲೆಯಲ್ಲಿ ಈ ಜೆಜೆಬಿಯನ್ನು ಸ್ಥಾಪಿಸಲು ಹಾಗೂ ಅದರ ಪರಿಣಾಮಕಾರಿಯಾದ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಲು, ಈ ಯೋಜನೆಯು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸೂಕ್ತ ಮೂಲಭೂತ ಸೌಕರ್ಯ ಹಾಗೂ ಹಣಕಾಸಿನ ಬೆಂಬಲವನ್ನು ಕಲ್ಪಿಸುತ್ತದೆ.

### ii. ಮಕ್ಕಳ ನ್ಯಾಯ ಮಂಡಳಿಗಳನ್ನು (ಜೆಜೆಬಿಗಳು) ಸ್ಥಾಪಿಸಲು ಮಾರ್ಗಸೂಚಿಗಳು

#### a) ಜೆಜೆಬಿಯ ಸ್ಥಳ

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000ರಡಿ ಸೂಚಿಸಿರುವಂತೆ ಜೆಜೆಬಿಯು ತನ್ನ ವಿಚಾರಣೆಗಳನ್ನು ವೀಕ್ಷಣಾ ಗೃಹಗಳ ಆವರಣದೊಳಗೆ ನಡೆಸಬೇಕು.

#### b) ಸ್ಥಳ ಹಾಗೂ ಮೂಲಭೂತ ಸೌಕರ್ಯಗಳು.

ಹೊಸದಾಗಿ ನಿರ್ಮಾಣ ಮಾಡಿರುವಂತಹ ವೀಕ್ಷಣಾಲಯಗಳು, ಮಕ್ಕಳ ಪಾಲನಾ ಸಂಸ್ಥೆಗಳು , ಜೆಜೆಬಿಗಾಗಿ 300 ಚದರಡಿ ಅಳತೆಯ ಎರಡು ಕೋಣೆಗಳನ್ನು ಹೊಂದಿರಬೇಕು. ಈಗಾಗಲೇ ವೀಕ್ಷಣಾಲಯಗಳು ಇರುವಂತಹ ಜಿಲ್ಲೆಗಳಲ್ಲಿ, ಜೆಜೆಬಿ ಗಾಗಿ ಅಗತ್ಯ ಸ್ಥಳಾವಕಾಶವನ್ನು ಆವರಣದೊಳಗೆ ಲಭ್ಯಗೊಳಿಸಬೇಕು. ವೀಕ್ಷಣಾಲಯಗಳು ಇಲ್ಲದಿರುವಂತಹ ಜಿಲ್ಲೆಗಳಲ್ಲಿ, ವೀಕ್ಷಣಾಲಯಗಳ ನಿರ್ಮಾಣ ಆಯವ್ಯಯದಲ್ಲಿ ಜೆಜೆಬಿಗಾಗಿ ಕೋಣೆಗಳಿಗೆ ಅಗತ್ಯ ನಿಧಿಯನ್ನು ಒದಗಿಸಲಾಗಿದೆ. ಮಂಡಳಿಯು ತನ್ನ ವಿಚಾರಣೆಗಳಿಗೆ ಒಂದು ಕೋಣೆ, ಹಾಗೂ ಮತ್ತೊಂದು ಕೋಣೆಯನ್ನು ಮಕ್ಕಳು ಹಾಗೂ ಕುಟುಂಬದ ಸದಸ್ಯರು ಕಾಯುವ ಕೋಣೆಯನ್ನಾಗಿ ಉಪಯೋಗಿಸಿಕೊಳ್ಳಬೇಕು. ಮಂಡಳಿಯು ವಿಚಾರಣೆಗಳನ್ನು ನಡೆಸುವಂತಹ ಕೋಣೆಯು ಅಗತ್ಯ ಪೀಠೋಪಕರಣಗಳು ಹಾಗೂ ಉಪಕರಣಗಳನ್ನು ಹೊಂದಿರಬೇಕು ಹಾಗೂ ಮಕ್ಕಳ ಸ್ನೇಹಿ ಪರಿಸರದೊಂದಿಗೆ ಸೂಕ್ತ ನೈಸರ್ಗಿಕ ಗಾಳಿ, ಬೆಳಕು ಬರುವಂತಿರಬೇಕು. ಕಾಯುವ ಕೋಣೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು ಹಾಗೂ ಮಕ್ಕಳಿಗಾಗಿ ಕೆಲವು ಒಳಾಂಗಣ ಮನರಂಜನಾ ಸೌಲಭ್ಯಗಳನ್ನು ಕಲ್ಪಿಸಬೇಕು.

c) ಮಕ್ಕಳ ನ್ಯಾಯ ಮಂಡಳಿಗಳನ್ನು ಸ್ಥಾಪಿಸಲು ಒದಗಿಸುವ ಅಗತ್ಯ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ XII ರಲ್ಲಿ ನೀಡಿದೆ.

## C) ಮಕ್ಕಳ ವಿಶೇಷ ಪೊಲೀಸ್ ಘಟಕ (ಎಸ್.ಜೆ.ಪಿ.ಯು (SJPU))

i. ಮಕ್ಕಳ ನ್ಯಾಯ ಕಾಯ್ದೆಯು, ಪ್ರತಿ ಜಿಲ್ಲೆಯಲ್ಲಿಯೂ ಮಕ್ಕಳೊಂದಿಗೆ ಪೊಲೀಸರ ಪರಸ್ಪರ ಸಂಪರ್ಕವನ್ನು ಸಂಯೋಜಿಸಲು ಹಾಗೂ ಉನ್ನತೀಕರಿಸುವ ಉದ್ದೇಶದೊಂದಿಗೆ ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಸ್ಥಾಪಿಸುವಂತೆ ಸೂಚಿಸಿದೆ. ಜಿಲ್ಲೆ ಅಥವಾ ನಗರದಲ್ಲಿ ಮಕ್ಕಳ ಕಲ್ಯಾಣ ಅಧಿಕಾರಿಗಳೆಂಬ ಹುದ್ದೆಯನ್ನು ಹೊಂದಿರುವಂತಹ ಎಲ್ಲಾ ಪೊಲೀಸ್ ಅಧಿಕಾರಿಗಳು, ಎಸ್‌ಜೆಪಿಯು ನ ಸದಸ್ಯರಾಗಿರುತ್ತಾರೆ.

ii. ಶಾಸನಬದ್ಧವಾದ ಅಗತ್ಯದಂತೆ ಐಸಿಪಿಎಸ್ ಈ ಘಟಕವನ್ನು ಬೆಂಬಲಿಸುವ ಸಲುವಾಗಿ ಪ್ರತಿ ಎಸ್‌ಜೆಪಿಯು ಗೆ ಇಬ್ಬರು ವೇತನಸಹಿತ ಸಾಮಾಜಿಕ ಕಾರ್ಯಕರ್ತರನ್ನು ಒದಗಿಸಲಾಗುತ್ತದೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಈ ನೇಮಕಾತಿಗಳನ್ನು ಮಾಡಬೇಕು ಹಾಗೂ ಅಗತ್ಯದ ಪ್ರಕಾರ ಎಸ್‌ಜೆಪಿಯು ಗೆ ತನ್ನ ಸೇವೆಗಳನ್ನು ನಿಯೋಜಿಸಬೇಕು. ಈ ಇಬ್ಬರು ಸಾಮಾಜಿಕ ಕಾರ್ಯಕರ್ತರ ಪೈಕಿ ಒಬ್ಬರು ಮಹಿಳೆಯಿರಬೇಕು ಹಾಗೂ ಮತ್ತೊಬ್ಬರು ಮಕ್ಕಳ ರಕ್ಷಣೆ ಕಾರ್ಯಚಟುವಟಿಕೆಗಳಲ್ಲಿ ಪರಿಣಿತಿಯನ್ನು ಹೊಂದಿರುವವರಾಗಿಬೇಕು. ಡಿಸಿಪಿಯು ಅಡಿ ಈ ಸಾಮಾಜಿಕ ಕಾರ್ಯಕರ್ತರಿಗೆ ಒದಗಿಸಲಾಗುವ ಹಣಕಾಸಿನ ಬೆಂಬಲದ ವಿವರಗಳನ್ನು **ಅನುಬಂಧ I** ರಲ್ಲಿ ಒದಗಿಸಿದೆ (ಕೋಷ್ಠಕ 5.1, ಕ್ರ. ಸಂ. 3).

# ಅಧ್ಯಾಯ 12 – ಇತರೆ ಚಟುವಟಿಕೆಗಳು

## 1. ಆಪ್ತಸಮಾಲೋಚನಾ ಸೇವೆಗಳನ್ನು ಬಲಪಡಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ

1.1 ಸಂಕಷ್ಟದಲ್ಲಿರುವಂತಹ ಮಕ್ಕಳು ಹಾಗೂ ಕುಟುಂಬಗಳಿಗಾಗಿ ಆಪ್ತಸಮಾಲೋಚನೆ ಐಸಿಪಿಎಸ್‌ನ ಒಂದು ಸಮಗ್ರ ಅಂಶವಾಗಿದೆ. ಇಂತಹ ಒಂದು ಶ್ರೇಣಿಯ ಕೊರತೆಯನ್ನು ಸಮ್ಮತಿಸುತ್ತಾ ಐಸಿಪಿಎಸ್, ಈ ಯೋಜನೆಯ ವಿವಿಧ ಅಂಶಗಳಡಿ ಬರುವಂತಹ ವೃತ್ತಿಪರ ಆಪ್ತಸಮಾಲೋಚನಾ ಸೇವೆಗಳನ್ನು ಒದಗಿಸಲು ಆಪ್ತಸಮಾಲೋಚಕರ ಒಂದು ಪಡೆಯನ್ನು ಅಭಿವೃದ್ಧಿಪಡಿಸಲು ಒತ್ತು ನೀಡುತ್ತದೆ.

1.2 ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಐಪಿಸಿಸಿಡಿ (NIPCCD)) ಹಾಗೂ ಅದರ ನಾಲ್ಕು ಪ್ರಾದೇಶಿಕ ಕೇಂದ್ರಗಳು ಸ್ವತಃ ಹಾಗೂ ಸಮಾಜ ಕಾರ್ಯದ ಶಾಲೆಗಳು, ಸಮಾಜ ವಿಜ್ಞಾನ ಇಲಾಖೆಗಳು, ಇತ್ಯಾದಿಗಳ ಆಶ್ರಯದ ಮೂಲಕ ವೃತ್ತಿಪರ ಆಪ್ತಸಮಾಲೋಚನಾ ಕೋರ್ಸ್‌ಗಳನ್ನು ಕೈಗೊಳ್ಳಬೇಕು. ಇಂತಹ ಕೋರ್ಸ್‌ಗಳು ಪೂರಕ ಸಂಸ್ಥೆ/ಅಂಗದಿಂದ ಮಾನ್ಯತೆಯನ್ನು ಪಡೆದಿರಬೇಕು.

## 2. ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ

2.1 ಸಂಕಷ್ಟದ ಸನ್ನಿವೇಶಗಳಲ್ಲಿರುವಂತಹ ಮಕ್ಕಳಿಗೆ ಸಮಗ್ರ ಸೇವೆಗಳನ್ನು ಒದಗಿಸುವ ಸಲುವಾಗಿ ವೃತ್ತಿಪರ ತರಬೇತಿ ಹೊಂದಿರುವ ಮಾನವ ಸಂಪನ್ಮೂಲದ ತೀವ್ರ ಕೊರತೆಯಿದೆ. (ಎ) ಐಸಿಪಿಎಸ್‌ನಡಿ ಹೊಸದಾಗಿ ನೇಮಕವಾದ ಅಭ್ಯರ್ಥಿಗಳಿಗೆ; (ಬಿ) ಸಾಮರ್ಥ್ಯ ವೃದ್ಧಿ ಹಾಗೂ ಸಂವೇದನಾಶೀಲತೆಯ ಅಗತ್ಯವಿರುವಂತಹ ಹಾಲಿ ಮಾನವ ಸಂಪನ್ಮೂಲಕ್ಕೆ ತರಬೇತಿಯ ಅಗತ್ಯವಿದೆ. ಐಸಿಪಿಎಸ್‌ನಡಿ ಕಾರ್ಯನಿರ್ವಹಿಸುತ್ತಿರುವಂತಹ ಎಲ್ಲ ಅಭ್ಯರ್ಥಿಗಳೂ ಒಳಗೊಂಡಂತೆ ರಾಷ್ಟ್ರದಾದ್ಯಂತ ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ತೊಡಗಿರುವ ಎಲ್ಲ ಸಿಬ್ಬಂದಿಗಳಿಗೂ ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿಯನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುವುದು. ಎಲ್ಲಾ ಹಂತಗಳಲ್ಲಿಯೂ ಮಕ್ಕಳ ಸ್ನೇಹಿ ಸೇವೆಗಳನ್ನು ಒದಗಿಸಲು ಮಕ್ಕಳ ರಕ್ಷಣಾ ಪಡೆಗಳನ್ನು ಸೇರಲು ಇಂತಹ ಸಿಬ್ಬಂದಿಗಳಿಗೆ ತರಬೇತಿ ನೀಡುವ ಹಾಗೂ ಸಿದ್ಧಪಡಿಸುವ ಅಗತ್ಯವಿದೆ. ಈ ಸವಾಲುಗಳನ್ನು ಎದುರಿಸಲು ಐಸಿಪಿಎಸ್ ಈ ಕೆಳಕಂಡ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುತ್ತದೆ:

**2.2 ಎನ್‌ಐಪಿಸಿಸಿಡಿನ ಪಾತ್ರ:** ರಾಷ್ಟ್ರ ಹಾಗೂ ಪ್ರಾದೇಶಿಕ ಮಟ್ಟಗಳಲ್ಲಿ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಒದಗಿಸಲು ಎನ್‌ಐಪಿಸಿಸಿಡಿ ನೋಡಲ್ ಏಜೆನ್ಸಿಯಾಗಿದೆ. ಎನ್‌ಐಪಿಸಿಸಿಡಿ ವ್ಯಾಪ್ತಿಯೊಳಗೆ ರಾಷ್ಟ್ರ ಮಟ್ಟದಲ್ಲಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿ, ಮಕ್ಕಳ ರಕ್ಷಣಾ ತರಬೇತಿ ಹಾಗೂ ಸಾಮರ್ಥ್ಯ ನಿರ್ಮಾಣ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಅಗತ್ಯ ಅನುಕೂಲವನ್ನು ಒದಗಿಸಲು ಮಕ್ಕಳ ರಕ್ಷಣಾ ವಿಭಾಗವನ್ನು ಸ್ಥಾಪಿಸುವಂತೆ ಐಸಿಪಿಎಸ್ ಪ್ರಸ್ತಾಪಿಸುತ್ತದೆ. ಎನ್‌ಐಪಿಸಿಸಿಡಿ ಇವುಗಳನ್ನು ಖಾತ್ರಿಪಡಿಸುತ್ತದೆ:

i. ತರಬೇತಿ ಮಾದರಿಗಳು ಹಾಗೂ ಕೋರ್ಸ್‌ನ ಪಠ್ಯಕ್ರಮದ ರಚನೆ

ii. ತರಬೇತುದಾರರ ತರಬೇತಿ ಆಯೋಜನೆ

iii. ಪ್ರಾದೇಶಿಕ ಹಂತದ ತರಬೇತಿ ಆಯೋಜನೆ ಹಾಗೂ ಅತ್ಯುತ್ತಮ ಅಭ್ಯಾಸಗಳ ವಿನಿಮಯ/ಹಂಚಿಕೆ.

iv. ವಿಶ್ವವಿದ್ಯಾಲಯಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಂಪರ್ಕ

**2.3 ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ,** ರಾಷ್ಟ್ರೀಯ ಸಾಮಾಜಿಕ ರಕ್ಷಣಾ ಸಂಸ್ಥೆ (ಎನ್‌ಐಎಸ್‌ಡಿ (NISD)), ನಿಮ್ಹಾನ್ಸ್, ಜ್ಯುಡಿಷಿಯಲ್ ಅಕಾಡೆಮಿಗಳು, ಪೋಲೀಸ್ ತರಬೇತಿ ಶಾಲೆಗಳು ಹಾಗೂ ಆಡಳಿತ ಸಂಸ್ಥೆಗಳು/ಅಕಾಡೆಮಿಗಳು, ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ ಹಾಗೂ ಮಾನ್ಯತೆಯುಳ್ಳ ಸಾಮಾಜಿಕ ಕಾರ್ಯ ಶಾಲೆಗಳು ಸಂಸ್ಥೆಗಳು, ಕಾನೂನು ಹಾಗೂ ಇತರೆ ಪೂರಕ ತಜ್ಞರೊಂದಿಗೆ ಬಲಿಷ್ಠವಾದ ನೆಟ್‌ವರ್ಕಿಂಗ್ ಹಾಗೂ ಸಂಯೋಜನೆಯನ್ನು ಅಭಿವೃದ್ಧಿಪಡಿಸಬೇಕು. ಇದು ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳು ಈ ಕೋರ್ಸ್‌ನ ಪಠ್ಯಕ್ರಮದ ಭಾಗವಾಗಿರುವುದನ್ನು ಖಾತ್ರಿಪಡಿಸುತ್ತದೆ ಹಾಗೂ ಯೋಜನೆ ರೂಪಿಸುವಿಕೆ ಮತ್ತು ಅನುಷ್ಠಾನ ಪ್ರಕ್ರಿಯೆಗಳಲ್ಲಿ ಅತಿ ಹೆಚ್ಚಿನ ಆದ್ಯತೆಯನ್ನು ಪಡೆದುಕೊಳ್ಳುತ್ತವೆ.

**2.4 ಈ ಪ್ರಕಾರವಾಗಿ,** ಮಕ್ಕಳ ರಕ್ಷಣೆಯ ತರಬೇತಿ, ಸಂಶೋಧನೆ ಹಾಗೂ ದಾಖಲೆ ನಿರ್ವಹಣೆಯ ನೋಡಲ್ ಜವಾಬ್ದಾರಿಯನ್ನು ಕೈಗೊಳ್ಳಲು ಎನ್‌ಐಪಿಸಿಸಿಡಿ ಸಾಮರ್ಥ್ಯವನ್ನು ಬಲಪಡಿಸಲು, ಐಸಿಪಿಎಸ್ ಎನ್‌ಐಪಿಸಿಸಿಡಿಯೊಳಗೆ ಮಕ್ಕಳ ರಕ್ಷಣಾ ವಿಭಾಗವೊಂದನ್ನು ಸೃಷ್ಟಿಸುವಂತೆ ಪ್ರಸ್ತಾಪಿಸುತ್ತದೆ. ಎನ್‌ಐಪಿಸಿಸಿಡಿಯೊಳಗೆ ಹಾಗೂ ಬೆಂಗಳೂರು, ಗೌಹಾಟಿ, ಇಂದೋರ್ ಹಾಗೂ ಲಕ್ನೋ ನಗರಗಳಲ್ಲಿರುವ ತನ್ನ ನಾಲ್ಕು ಪ್ರಾದೇಶಿಕ ಕೇಂದ್ರಗಳಲ್ಲಿ ಮಕ್ಕಳ ರಕ್ಷಣಾ ವಿಭಾಗವನ್ನು ಸೃಷ್ಟಿಸಲು ನೀಡಲಾಗುವ ಹಣಕಾಸಿನ ಬೆಂಬಲದ ವಿವರಗಳೊಂದಿಗೆ ಅವುಗಳ ಪಾತ್ರಗಳು ಹಾಗೂ ಜವಾಬ್ದಾರಿಗಳ ವಿವರಗಳನ್ನು ಅನುಬಂಧ XIII ರಲ್ಲಿ ನೀಡಲಾಗಿದೆ.

**2.5 ತರಬೇತಿಗಳನ್ನು ಆಯೋಜಿಸುವಲ್ಲಿ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗಳ (ಎಸ್‌ಸಿಪಿಎಸ್) ಪಾತ್ರ:** ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮಟ್ಟದಲ್ಲಿ ತರಬೇತಿ ನೀಡುವ ಹಾಗೂ ಸಾಮರ್ಥ್ಯಾಭಿವೃದ್ಧಿಗೊಳಿಸುವ ನೋಡಲ್ ಜವಾಬ್ದಾರಿ ಎಸ್‌ಸಿಪಿಎಸ್‌ದ್ದಾಗಿರುತ್ತದೆ. ಡಿಸಿಪಿಯುಗಳ ನೆರವಿನೊಂದಿಗೆ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ತರಬೇತಿಯ ಮಾಸ್ಟರ್ ಪ್ಲಾನ್ ಅನ್ನು ಅಭಿವೃದ್ಧಿಪಡಿಸುವುದು ಎಸ್‌ಸಿಪಿಎಸ್‌ನ ಜವಾಬ್ದಾರಿಯಾಗಿರುತ್ತದೆ. ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ತರಬೇತಿ ಕೋರ್ಸ್‌ಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಸಮಾಜ ಕಾರ್ಯದಲ್ಲಿ ಪರಿಣತಿಯುಳ್ಳ ಸಂಸ್ಥೆಗಳು/ ಸಂಘಗಳು/ ವಿಶ್ವವಿದ್ಯಾಲಯಗಳು/ ಶಾಲೆಗಳ ತಂಡವನ್ನು ಹಾಗೂ ಮಕ್ಕಳ ಹಕ್ಕುಗಳು ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಎಸ್‌ಸಿಪಿಎಸ್ ಗುರುತಿಸಬೇಕು. ಜೊತೆಗೆ ಎನ್‌ಐಪಿಸಿಸಿಡಿ ಹಾಗೂ ಅದರ ಪ್ರಾದೇಶಿಕ ಕೇಂದ್ರಗಳ ನೆರವಿನೊಂದಿಗೆ, ಸಂಬಂಧಪಟ್ಟ ವಿಷಯಗಳ ಕುರಿತು ಮಾಸ್ಟರ್ ಟ್ರೇನರ್‌ಗಳನ್ನಾಗಿ ತರಬೇತಿ ನೀಡಲು ಐಸಿಪಿಎಸ್ ಅಡಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಗುರುತಿಸಿ ತರಬೇತುಗೊಳಿಸುವ ವ್ಯವಸ್ಥೆಯನ್ನು ಕೈಗೊಳ್ಳಬೇಕು.

**2.5.1 ಆಪ್ತಸಮಾಲೋಚನೆಗೆ ಸಂಬಂಧಪಟ್ಟ ಹೊಸ ಕೋರ್ಸ್‌ಗಳ ರೂಪಿಸುವಿಕೆ ಹಾಗೂ ಮಕ್ಕಳ ರಕ್ಷಣಾ ವಿಷಯಗಳ** ಮೇಲೆ ಕೆಲಸ ನಿರ್ವಹಿಸಲು ವೃತ್ತಿಪರವಾಗಿ ಸಜ್ಜಾಗಿರುವ ಮಾನವ ಸಂಪನ್ಮೂಲವನ್ನು ನಿರ್ಮಿಸಲು ಇತರೆ ವಿಶೇಷ ಮಕ್ಕಳ ರಕ್ಷಣಾ ವಿಷಯಗಳ ಕುರಿತು ಕೋರ್ಸ್‌ಗಳನ್ನು ರೂಪಿಸಲು ಎಸ್‌ಸಿಪಿಎಸ್ ವಿಶ್ವವಿದ್ಯಾಲಯಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಕೆಲಸ ನಿರ್ವಹಿಸಬೇಕು.

**2.5.2. ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಎಸ್‌ಸಿಪಿಎಸ್ ಅನ್ನು ಸ್ಥಾಪಿಸಲು ಒದಗಿಸುವ ಹಣಕಾಸಿನ ಬೆಂಬಲದ** ವಿವರಗಳು ಹಾಗೂ ಅದರ ಪಾತ್ರ ಹಾಗೂ ಜವಾಬ್ದಾರಿಗಳ ವಿವರಗಳನ್ನು **ಅನುಬಂಧ–I** ರಲ್ಲಿ ನೀಡಿದೆ (ಕೋಷ್ಟಕ 5.2)

## 3. ಜ್ಞಾನದ ಅಡಿಪಾಯವನ್ನು ಬಲಪಡಿಸುವುದು

3.1 ಮಕ್ಕಳಿಗೆ ಸುರಕ್ಷಿತವಾದ ಪರಿಸರವನ್ನು ಸೃಷ್ಟಿಸಲು, ಮಾಹಿತಿ ನೀಡುವ ಹಾಗೂ ಕಾರ್ಯತಾಂತ್ರಿಕ ಪ್ರತಿಕ್ರಿಯೆಗಳನ್ನು ಅಭಿವೃದ್ಧಿಪಡಿಸಲು ಬಲಿಷ್ಠವಾದ ಜ್ಞಾನ ಅಡಿಪಾಯದ ಅಗತ್ಯವಿದೆ. ದತ್ತಾಂಶದ ಕೊರತೆಯು, ಯೋಜನೆ ರೂಪಿಸುವಿಕೆ, ಸೂಕ್ತವಾದ ಸೇವೆಗಳ ಪ್ರಾವಧಾನ ಹಾಗೂ ಸಂಪನ್ಮೂಲಗಳ ಹಂಚಿಕೆಗಳ ಮೇಲೆ ಅಡ್ಡ ಪರಿಣಾಮವನ್ನು ಬೀರುತ್ತದೆ. ಐಸಿಪಿಎಸ್ ನಡಿ ಈ ಕೆಳಕಂಡ ನಿರ್ಧಿಷ್ಟವಾದ ಕ್ರಮಗಳನ್ನು ಅಭಿವೃದ್ಧಿಪಡಿಸಿ, ಬಲಪಡಿಸಬೇಕು:

**3.2 ಸಂಶೋಧನೆ ಹಾಗೂ ದಾಖಲೆ ನಿರ್ವಹಣೆ:** ಮಕ್ಕಳ ಕಳ್ಳ ಸಾಗಣೆಕೆಗೆ ಹಾಗೂ ಮಕ್ಕಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಲೈಂಗಿಕವಾಗಿ ಶೋಷಿಸುವುದು, ಮಕ್ಕಳ ವಿರುದ್ಧ ದೌರ್ಜನ್ಯ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು, ಭ್ರೂಣಹತ್ಯೆ, ನಗರ ಹಾಗೂ ಇತರೆ ಯಾವುದಾದರೂ ಪ್ರದೇಶಗಳಲ್ಲಿ ವಿವಿಧ ಸನ್ನಿವೇಶಗಳಲ್ಲಿರುವಂತಹ ಮಕ್ಕಳ ವಿಷಯಗಳ ಕುರಿತು ಮಕ್ಕಳ ರಕ್ಷಣೆಯ ನಿರ್ದಿಷ್ಟವಾದ ವಿಷಯಗಳ ಗಂಭೀರತೆ, ಸ್ವರೂಪ ಹಾಗೂ ಕಾರಣಗಳನ್ನು ಅಂದಾಜಿಸಲು ಸಮಗ್ರವಾದ ಅಧ್ಯಯನಗಳನ್ನು ಕೈಗೊಳ್ಳಲು ಈ ಯೋಜನೆಯು ಅನುಕೂಲವನ್ನು ಒದಗಿಸುತ್ತದೆ.

**3.3 ಪೂರಕ ಜ್ಞಾನದ ನಿರ್ಮಾಣಕ್ಕಾಗಿ, ಸಾಕ್ಷಿ ಹಾಗೂ ಕಲಿಕೆಗಳನ್ನು ಕಾರ್ಯನೀತಿಗಳು** ಹಾಗೂ ಕಾರ್ಯಕ್ರಮಗಳಲ್ಲಿ ಏಕೀಕರಣಗೊಳಿಸಲು ಮಕ್ಕಳ ರಕ್ಷಣೆಗೆ ಹೊಸ ಸವಾಲುಗಳು ಅಥವಾ ಸಂಭವನೀಯ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲು ಈ ಯೋಜನೆಯು ಬೆಂಬಲ ನೀಡುತ್ತದೆ. ಜೀವನೋಪಾಯ ಹಾಗೂ ಸುರಕ್ಷತೆ, ವಲಸೆ, ಆಂತರಿಕ ಸ್ಥಳಾಂತರ, ಮಕ್ಕಳ ನಿಂದನೆ ಹಾಗೂ ಶೋಷಣೆ, ಮಕ್ಕಳ ಅಶ್ಲೀಲತೆ ಹಾಗೂ ಇತರೆ ಉದ್ಭವಿಸುತ್ತಿರುವ ವಿಷಯಗಳು ಹಾಗೂ ಮಕ್ಕಳ ಹಕ್ಕುಗಳೊಂದಿಗೆ ಅವುಗಳ ಸಂಬಂಧಗಳಂತಹ ವಿಷಯಗಳು ಇದರಲ್ಲಿ ಒಳಗೊಂಡಿರುತ್ತವೆ.

**3.4 ಎನ್ಐಪಿಸಿಸಿಡಿ ಹಾಗೂ ಅದರ ಪ್ರಾದೇಶಿಕ ಕೇಂದ್ರಗಳಿಗೆ ಸ್ವತಃ ತಾನೇ** ಅಥವಾ ಅರ್ಹ ವ್ಯಕ್ತಿಗಳು ಹಾಗೂ/ಅಥವಾ ಏಜೆನ್ಸಿಗಳಿಗೆ ಉಪಗುತ್ತಿಗೆ ನೀಡುವ ಮೂಲಕ ರಾಷ್ಟ್ರ ಹಾಗೂ ಪ್ರಾದೇಶಿಕ ಹಂತಗಳಲ್ಲಿ ಸಂಶೋಧನೆ ಹಾಗೂ ದಾಖಲೆ ನಿರ್ವಹಣೆಯನ್ನು ಕೈಗೊಳ್ಳುವ ಅಧಿಕಾರವಿದೆ. ಈ ಯೋಜನೆಯು ಇದಕ್ಕಾಗಿ ಎನ್ಐಪಿಸಿಸಿಡಿ ಗೆ ಅಗತ್ಯ ಹಣಕಾಸಿನ ಬೆಂಬಲವನ್ನು ನೀಡುತ್ತದೆ. ಇದರ ಜೊತೆಗೆ, ಎಸ್‌ಸಿಪಿಎಸ್ ಹಾಗೂ ಸಿಎಆರ್‌ಎ ಗಳಿಗೂ ಸಹ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ಹಂತಗಳಲ್ಲಿ ಇಂತಹ ಚಟುವಟಿಕೆಳನ್ನು ಕೈಗೊಳ್ಳಲು ಬೆಂಬಲ ನೀಡಲು ಅಗತ್ಯ ಹಣಕಾಸಿನ ವ್ಯವಸ್ಥೆಗಳನ್ನು ಹೊಂದಿವೆ.

ಸಂಶೋಧನೆ ಹಾಗೂ ದಾಖಲೆ ನಿರ್ವಹಣೆಗಾಗಿ ಎನ್ಐಪಿಸಿಸಿಡಿ ಗೆ ಒದಗಿಸುವ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ XIIIರಲ್ಲಿ ಹಾಗೂ ಸಿಎಆರ್‌ಎ ಗೆ ಅನುಬಂಧ IIIರಲ್ಲಿ ನೀಡಿದೆ.

## 4. ಮಕ್ಕಳ ನಿಗಾವಣಾ ವ್ಯವಸ್ಥೆ (ಚೈಲ್ಡ್ ಟ್ರ್ಯಾಕಿಂಗ್ ಸಿಸ್ಟಂ)

4.1 ಪ್ರಸ್ತುತ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಕುರಿತಾದ ದತ್ತಾಂಶ ಹಾಗೂ ಮಾಹಿತಿಯ ತೀವ್ರ ಕೊರತೆಯಿದೆ ಎಂಬುದನ್ನು ಎಂಡಬ್ಲ್ಯೂಸಿಡಿ ಗುರುತಿಸಿದೆ. ಈ ಅಂತರದಿಂದಾಗಿ, ಈ ಸಮಸ್ಯೆಯ ಗಂಭೀರತೆಯ ಕುರಿತು ನಿಖರವಾದ ಅರಿವಿಲ್ಲ, ಅಂದರೆ ಬೆಂಬಲದ ಅಗತ್ಯವಿರುವ ಮಕ್ಕಳ ಸಂಖ್ಯೆ ಹಾಗೂ ಅವರಿಗೆ ಅಗತ್ಯವಿರುವ ಸೇವೆಗಳ ವಿವರಗಳ ಮಾಹಿತಿ ಲಭ್ಯವಿಲ್ಲ.

**4.2 ಈ ಕೊರತೆಯನ್ನು ತುಂಬಲು ಎಂಡಬ್ಲ್ಯೂಸಿಡಿ, ಐಸಿಪಿಎಸ್ ಯೋಜನೆಯಡಿ ಮಕ್ಕಳ ರಕ್ಷಣೆಯ ದತ್ತಾಂಶ ನಿರ್ವಹಣೆ** ಹಾಗೂ ವರದಿಗಾರಿಕೆಗಾಗಿ ಪರಿಣಾಮಕಾರಿಯಾದ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸಿದೆ, ಹಾಗೂ ಅದರ ಎಲ್ಲಾ ಮಕ್ಕಳ ರಕ್ಷಣಾ ಯೋಜನೆಗಳ ಅನುಷ್ಠಾನ ಉಸ್ತುವಾರಿಗಾಗಿ

ಸಾಧನವೊಂದನ್ನು ಅಭಿವೃದ್ಧಿಪಡಿಸಿದೆ. ಮಕ್ಕಳ ರಕ್ಷಣೆಯ ಅಂತರ್ಜಾಲ ಆಧಾರಿತ ದತ್ತಾಂಶ ನಿರ್ವಹಣಾ ವ್ಯವಸ್ಥೆಯು ಮಕ್ಕಳ ರಕ್ಷಣೆಯ ವಿಷಯಗಳಿಗಾಗಿ ಸಂಪನ್ಮೂಲ ದತ್ತಾಂಶವನ್ನು ಸೃಷ್ಟಿಸಿದೆ. ತಪ್ಪಿಸಿಕೊಂಡಿರುವ ಮಕ್ಕಳು ಹಾಗೂ ಅವರ ಅಂತಿಮ ಪುನರಾಗಮನ ಹಾಗೂ ಪುನರ್ವಸತಿಗಾಗಿ **'ಟ್ರ್ಯಾಕ್‌ಚೈಲ್ಡ್'** ಎಂಬ ಹೆಸರಿನ ರಾಷ್ಟ್ರವ್ಯಾಪಿ ಅಂತರ್ಜಾಲತಾಣವೊಂದನ್ನು ಅಭಿವೃದ್ಧಿಪಡಿಸಲಾಗಿದೆ.

**4.3 ಇದು ಅತೀ ಹೆಚ್ಚಿನ ಸಮಯ ಹಾಗೂ ಸಂಪನ್ಮೂಲಗಳನ್ನು ಬೇಡುವ ಸಂಕೀರ್ಣ ಹಾಗೂ ತೀವ್ರವಾದ ಚಟುವಟಿಕೆಯಾಗಿದ್ದು,** ಕಾಲಕ್ರಮೇಣ ಅಭಿವೃದ್ಧಿಪಡಿಸಿ ಅದನ್ನು ಇಡೀ ರಾಷ್ಟ್ರಕ್ಕೆ ವಿಸ್ತರಿಸಲಾಗುವುದು. ಕೇಂದ್ರ ಯೋಜನಾ ಬೆಂಬಲ ಘಟಕ (ಸಿಪಿಎಸ್‌ಯು), ಡಾಟಾ ಎಂಟ್ರಿ ಕಾರ್ಯವಿಧಾನಗಳು ಹಾಗೂ ಈ ಕಾರಣಕ್ಕಾಗಿ ಎನ್‌ಐಸಿ ಅಭಿವೃದ್ಧಿಪಡಿಸಿರುವ ಅಂತರ್ಜಾಲ ಚಾಲಿತ ಸಾಫ್ಟ್‌ವೇರ್‌ನ ಪರಿಣಾಮಕಾರಿಯಾದ ಬಳಕೆಯ ಮೂಲಕ ಕೇಂದ್ರೀಕೃತ ಸಂಯೋಜನೆಯನ್ನು ಸಾಧ್ಯಗೊಳಿಸಲು ಮಕ್ಕಳ ನಿಗಾವಣಾ ವ್ಯವಸ್ಥೆಯನ್ನು ಸ್ಥಾಪಿಸಿದೆ. ರಾಜ್ಯ ಮಟ್ಟದಲ್ಲಿ ಎಸ್‌ಸಿಪಿಎಸ್, ಡಿಸಿಪಿಯುನ ಬೆಂಬಲದೊಂದಿಗೆ ಮಕ್ಕಳ ನಿಗಾವಣಾ ವ್ಯವಸ್ಥೆಯನ್ನು ಸ್ಥಾಪಿಸಿ, ನಿರ್ವಹಿಸುತ್ತಿದೆ. ಈ ಮಕ್ಕಳ ನಿಗಾವಣಾ ವ್ಯವಸ್ಥೆಯು ಎರಡು ಅಂಶಗಳನ್ನು ಹೊಂದಿವೆ:

**i. ಅಂತರಜಾಲ ಚಾಲಿತ ಮಕ್ಕಳ ರಕ್ಷಣಾ ನಿರ್ವಹಣೆ ಮಾಹಿತಿ ವ್ಯವಸ್ಥೆ (ಎಂಐಎಸ್(MIS))**

ಜಿಲ್ಲೆಯಲ್ಲಿ ಸಂಕಷ್ಟದ ಸನ್ನಿವೇಶಗಳಲ್ಲಿರುವಂತಹ ಹಾಗೂ ಸಂಕಷ್ಟಕ್ಕೀಡಾಗುವ ಸಂಭವವಿರುವಂತಹ ಮಕ್ಕಳು ಹಾಗೂ ಅವರ ಕುಟುಂಬಗಳಿಗೆ ಎಲ್ಲಾ ಸೇವೆಗಳನ್ನು ಲಭ್ಯಗೊಳಿಸಲು ಅಗತ್ಯ ಚಟುವಟಿಕೆಯನ್ನು ಕೈಗೊಳ್ಳುವುದು ಡಿಸಿಪಿಯುಗಳ ಜವಾಬ್ದಾರಿಯಾಗಿರುತ್ತದೆ. ಉದಾಹರಣೆಗೆ ಇದರಲ್ಲಿ ಎಲ್ಲಾ ಪೊಲೀಸ್ ಠಾಣೆಗಳು, ಮಕ್ಕಳ ಪಾಲನಾ ಸಂಸ್ಥೆಗಳು, ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಹೆಚ್‌ಸಿ) ವ್ಯವಸ್ಥೆಗಳು, ಮಕ್ಕಳ ವೈದ್ಯರು, ಸಿಡಬ್ಲ್ಯೂಸಿಗಳ ಸದಸ್ಯರು ಹಾಗೂ ಜೆಜೆಬಿಗಳು, ಮಕ್ಕಳ ಸಹಾಯವಾಣಿ ಸೇವೆಗಳು, ಇತ್ಯಾದಿಗಳ ಸ್ಥಳ ಹಾಗೂ ಸಂಪರ್ಕ ವಿಳಾಸದ ವಿವರಗಳು ಒಳಗೊಂಡಿವೆ. ಜೊತೆಗೆ, ಒಟ್ಟಾರೆಯಾಗಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳಿಗಾಗಿ ಸಮಗ್ರ, ಏಕೀಕೃತ ಲೈವ್ ಡಾಟಾಬೇಸ್ ಅನ್ನು ಅಭಿವೃದ್ಧಿಪಡಿಸುವ ಗುರಿಯೊಂದಿಗೆ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕ ಪೋಷಣೆ ಹಾಗೂ ಸಾಂಸ್ಥಿಕೇತರ ಪೋಷಣೆಯಡಿ ಇರುವಂತಹ ಎಲ್ಲಾ ಮಕ್ಕಳ ದತ್ತಾಂಶವನ್ನು ಡಿಸಿಪಿಯು ನಿರ್ವಹಿಸಬೇಕು.

**ii. ತಪ್ಪಿಸಿಕೊಂಡಿರುವ/ಕಾಣೆಯಾದ ಮಕ್ಕಳಿಗಾಗಿ ವೆಬ್‌ಸೈಟ್.**

ವಿವಿಧ ಕಾರಣಗಳಿಗಾಗಿ ಮನೆಯಿಂದ ಓಡಿ ಹೋಗುವ ಅಥವಾ ತಪ್ಪಿಸಿಕೊಳ್ಳುತ್ತಿರುವ ಅಥವಾ ಕಾಣಿಯಾದ ದೊಡ್ಡ ಸಂಖ್ಯೆಯ ಮಕ್ಕಳ ಮೇಲೆ ನಿಗಾವಹಿಸಲು ಹಾಗೂ ಅಂತಹ ಮಕ್ಕಳನ್ನು ಪತ್ತೆ ಹಚ್ಚಿ, ಪುನರ್ವಸತಿ ಕಲ್ಪಿಸಲು, ವ್ಯವಸ್ಥಿತ ಹಾಗೂ ಕೇಂದ್ರೀಕೃತ ಕಾರ್ಯವಿಧಾನವನ್ನು ಸೃಷ್ಟಿಸುವ ಅಗತ್ಯವಿದೆ. ರಾಷ್ಟ್ರೀಯ ಪೋರ್ಟಲ್ **'ಟ್ರ್ಯಾಕ್‌ಚೈಲ್ಡ್'**, ಇಂತಹ ಮಕ್ಕಳ ಉಸ್ತುವಾರಿಗಾಗಿ ಎಸ್‌ಸಿಪಿಯುಗಳು ಹಾಗೂ ಡಿಸಿಪಿಯುಗಳೊಂದಿಗೆ ಸಂಪರ್ಕಗಳನ್ನು ಹೊಂದಿವೆ.

ಡಿಸಿಪಿಯುಗೆ ಕಂಪ್ಯೂಟರ್‌ಗಳು/ಲ್ಯಾಪ್‌ಟಾಪ್‌ಗಳು, ಡಾಟಾ ಎಂಟ್ರಿ ಆಪರೇಟರ್‌ಗಳು ಹಾಗೂ ಇಂಟರನೆಟ್ ಸಂಪರ್ಕ ಪಡೆಯಲು ಒದಗಿಸಲಾಗುವ ಹಣಕಾಸಿನ ನೆರವನ್ನು ಅನುಬಂಧ I ರಲ್ಲಿ (ಕೋಷ್ಠಕ 5.1) ಒದಗಿಸಿದೆ; ಎಸ್‌ಸಿಪಿಎಸ್ ಗೆ ಅನುಬಂಧ I (ಕೋಷ್ಠಕ 5.2) ಹಾಗೂ ಎಸ್‌ಎಆರ್‌ಎಗೆ ಅನುಬಂಧ II ರಲ್ಲಿ ಒದಗಿಸಿದೆ.

# 5. ವಕಾಲತ್ತು, ಸಾರ್ವಜನಿಕ ಶಿಕ್ಷಣ ಹಾಗೂ ಸಂವಹನ

5.1 ಪ್ರತಿ ದಿನ ದೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಕ್ಕಳು ನಿರ್ಲಕ್ಷ್ಯ, ನಿಂದನೆ ಹಾಗೂ ಶೋಷಣೆಗೆ ಒಳಗಾಗುತ್ತಿದ್ದಾರೆ. ಸಂಪ್ರದಾಯ ಹಾಗೂ ಸಂಸ್ಕೃತಿ: ಬಾಲ್ಯವಿವಾಹ, ಬಾಲಕಾರ್ಮಿಕತೆ, ಹೆಣ್ಣು ಭ್ರೂಣ ಹತ್ಯೆ/ ಶಿಶುಹತ್ಯೆ, ಲಿಂಗ ತಾರತಮ್ಯತೆ ಇತ್ಯಾದಿಗಳ ಹೆಸರಿನಲ್ಲಿ ಸಮಾಜವು ಕೆಲವು ರೂಪಗಳ ಮಕ್ಕಳ ನಿಂದನೆಯ ಅಭ್ಯಾಸಗಳನ್ನು ಸಮಾಜ ಬೆಂಬಲಿಸುತ್ತಿದೆ ಅಥವಾ ಒಪ್ಪಿಕೊಳ್ಳುತ್ತಿದೆ. ಕೆಲವೊಮ್ಮೆ ಇಂತಹ ಮನಃಸ್ಥಿತಿಗಳನ್ನು ಬದಲಿಸಲು ಕೇವಲ ಶಾಸನಗಳನ್ನು ರೂಪಿಸುವುದು ಹಾಗೂ ಕಾರ್ಯನೀತಿಗಳನ್ನು ರೂಪಿಸುವುದರಷ್ಟೇ ಸಾಕಾಗುವುದಿಲ್ಲ. ಇಂತಹ ಮನಃಸ್ಥಿತಿಗಳ ವಿರುದ್ಧ ಸಾರ್ವಜನಿಕ ಜಾಗೃತಿ ಮೂಡಿಸಲು ಸಮಗ್ರ ಪ್ರಯತ್ನಗಳ ಅಗತ್ಯವಿದೆ. ಅದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ವಿವರಿಸುವುದು ಹಾಗೂ ಕ್ರಮೇಣ ಸಾಮಾಜಿಕ ಪರಿವರ್ತನೆ ತರುವುದು ಅಗತ್ಯವಿದೆ. ಮುಂದುವರೆದು, ರಾಷ್ಟ್ರದಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಕುರಿತಂತೆ ಆಗುತ್ತಿರುವ ಜಾಗೃತಿ ಅಥವಾ ಅರಿವು ಮೂಡಿಸುವ ಪ್ರಯತ್ನಗಳು ಬಹಳ ಕಡಿಮೆ ಎನ್ನುವುದು ಸಾಬೀತಾಗಿದೆ. **'ಮಕ್ಕಳ ಹಕ್ಕುಗಳು'** ಹಾಗೂ **'ಮಕ್ಕಳ ಸಂರಕ್ಷಣೆ'** ಎಂಬ ಪದಗಳನ್ನು ಅರ್ಥಮಾಡಿಕೊಳ್ಳುವುದೂ ಸಹ ಕಡಿಮೆಯೇ. ವಕಾಲತ್ತು ವಹಿಸುವಿಕೆ, ಸಾರ್ವಜನಿಕ ಶಿಕ್ಷಣ ಹಾಗೂ ಸಂವಹನೆಗಳ ಪಾತ್ರವೇನೆಂದರೆ ಎಲ್ಲಾ ಹಂತಗಳಲ್ಲಿಯೂ ಮನಃಸ್ಥಿತಿಯನ್ನು ಬದಲಾಯಿಸುವುದಾಗಿದೆ.

5.2 ಮಕ್ಕಳ ರಕ್ಷಣೆಗಾಗಿ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳು/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಆದಾಗ್ಯೂ, ಇಂತಹ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಅರಿವಿನ ಪ್ರಮಾಣ ಬಹಳ ಸಾಧಾರಣ ಮಟ್ಟದಲ್ಲಿದೆ. ಹಾಗಾಗಿ, ಜನರಿಗೆ ಇಂತಹ ಕಾರ್ಯಕ್ರಮಗಳಡಿ ಸೇವೆಗಳನ್ನು ಪಡೆಯುವುದು ಸಾಧ್ಯವಾಗುತ್ತಿಲ್ಲ. ಜನರಿಗೆ ಅವರವರ ರಾಜ್ಯಗಳು/ಜಿಲ್ಲೆಗಳಲ್ಲಿ ಸಂಕಷ್ಟದ ಸನ್ನಿವೇಶಗಳಲ್ಲಿರುವ **ಮಕ್ಕಳಿಗೆ ಅಗತ್ಯ ಪೋಷಣೆ ಹಾಗೂ ರಕ್ಷಣೆ** ನೀಡುವಂತಹ ಸಕ್ಷಮ ಪ್ರಾಧಿಕಾರಗಳು ಯಾವುವು ಎಂಬುದೂ ಸಹ ತಿಳಿದಿಲ್ಲ. ಉದಾಹರಣೆಗೆ, ಮಕ್ಕಳಿಲ್ಲದಿರುವಂತಹ ಪೋಷಕರ ಪೈಕಿ ದತ್ತು ಪಡೆಯುವ ವಿಧಾನದ ಕುರಿತು ಅರಿವಿನ ಕೊರತೆಯಿದೆ. ಇದು ಮಕ್ಕಳನ್ನು ದತ್ತು ಪಡೆಯಲು ದೊಡ್ಡ ತೊಡಕಾಗಿದೆ.

5.3 ಎಂಡಬ್ಲ್ಯೂಸಿಡಿ, ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳ ಪಾಲುದಾರಿಕೆಯೊಂದಿಗೆ, ಮಕ್ಕಳ ಹಕ್ಕುಗಳು ಹಾಗೂ ರಕ್ಷಣೆಯ ಸಂಬಂಧ ಪರಿಣಾಮಕಾರಿಯಾದ ಸಂವಹನಾ ಹಾಗೂ ಸಾರ್ವಜನಿಕ ಶಿಕ್ಷಣ ಕಾರ್ಯತಂತ್ರವೊಂದನ್ನು ಅಭಿವೃದ್ಧಿಪಡಿಸಬೇಕು. ಈ ಸಂವಹನಾ ಕಾರ್ಯತಂತ್ರವು, ಟಿವಿ, ದಿನಪತ್ರಿಕೆಗಳು, ನಿಯತಕಾಲಿಕೆಗಳು, ಮ್ಯಾಗಜಿನ್‌ಗಳು, ಹೋರ್ಡಿಂಗ್‌ಗಳು, ಬಸ್ ಪ್ಯಾನೆಲ್‌ಗಳು, ಸಿನೆಮಾ ಹಾಲ್‌ಗಳು, ರೇಡಿಯೊ, ಬೀದಿ ನಾಟಕಗಳು, ಚರ್ಚಾ ವೇದಿಕೆಗಳು, ಇತ್ಯಾದಿಗಳು ಒಳಗೊಂಡಂತೆ ಎಲ್ಲಾ ರೀತಿಯ ಮಾಸ್ ಮೀಡಿಯಾಗಳನ್ನು ಬಳಸಿಕೊಳ್ಳುವುದನ್ನು ಒಳಗೊಂಡಿರಬೇಕು. ಜೊತೆಗೆ ಮಾಹಿತಿ ಮುದ್ರಣ ಹಾಗೂ ಹಂಚಿಕೆ, ಶಿಕ್ಷಣ ಹಾಗೂ ಸಂವಹನಾ ಸಾಮಗ್ರಿಗಳ ಹಂಚಿಕೆ ಹಾಗೂ ಪೂರಕ ವ್ಯವಸ್ಥೆಗಳು, ಸಮುದಾಯಗಳು ಹಾಗೂ ಸ್ಥಳೀಯ ಸಂಸ್ಥೆಗಳ ಸದಸ್ಯರೊಂದಿಗೆ ಸಮಾಲೋಚನೆಗಳು ಹಾಗೂ ವಕಾಲತ್ತು ಕಾರ್ಯಾಗಾರಗಳ ಆಯೋಜನೆಯನ್ನೂ ಒಳಗೊಂಡಿರಬೇಕು.

5.4 ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ, ಎಸ್‌ಸಿಪಿಎಸ್, ಎಸ್‌ಎಆರ್‌ಎ ಹಾಗೂ ಡಿಸಿಪಿಯುಗಳು ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ವಕಾಲತ್ತು ವಹಿಸುವಿಕೆ ಹಾಗೂ ಸಂವಹನೆಗೆ ಸಂಬಂಧಪಟ್ಟ ವಿಚಾರಗಳ ಜವಾಬ್ದಾರಿಯನ್ನು ವಹಿಸಬೇಕು. ಈ ಯೋಜನೆಯು ಇಂತಹ ಚಟುವಟಿಕೆಗಳಿಗೆ, ಒಟ್ಟಾರೆ ಆಯವ್ಯಯ ಪ್ರಾವಧಾನಗಳಡಿ ಅಗತ್ಯ ಹಣಕಾಸಿನ ಹಂಚಿಕೆಯನ್ನು ಒದಗಿಸುತ್ತದೆ.

5.5 ಡಿಸಿಪಿಯು ಗೆ ವಕಾಲತ್ತು ಹಾಗೂ ಅರಿವು ಮೂಡಿಸುವ ಚಟುವಟಿಕೆಗಳ ಆಯೋಜನೆಗೆ ಒದಗಿಸಲಾಗುವ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ I (ಕೋಷ್ಠಕ 5.1, ಕ್ರ. ಸಂ. 8)ರಲ್ಲಿ ಒದಗಿಸಿದೆ; ಎಸ್‌ಸಿಪಿಎಸ್‌ಗೆ ಅನುಬಂಧ I (ಕೋಷ್ಠಕ 5.2 (i), ಕ್ರ. ಸಂ.9) ಹಾಗೂ (ಕೋಷ್ಠಕ 5.2 (ii), ಕ್ರ. ಸಂ.10); ಹಾಗೂ ಎಸ್‌ಎಆರ್‌ಎ **ಅನುಬಂಧ II** ರಲ್ಲಿ ಒದಗಿಸಿದೆ.

## 6. ಉಸ್ತುವಾರಿ. (MONITORING)

6.1 ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಮಟ್ಟಗಳಲ್ಲಿ ಉಸ್ತುವಾರಿಯನ್ನು ಕೈಗೊಳ್ಳಬೇಕು. ಪ್ರತಿ ಹಂತದಲ್ಲಿಯೂ ಸಹ ಒಂದು ಪ್ರಮಾಣಿತ ನಮೂನೆ ಹಾಗೂ ಸಾಕ್ಷ್ಯಾಧಾರಿತ ಉಸ್ತುವಾರಿಗಾಗಿ ಇನ್‌ಪುಟ್, ಔಟ್‌ಪುಟ್ ಹಾಗೂ ಪರಿಣಾಮ ಸೂಚಕಗಳನ್ನು ಆಧರಿಸಿ ಸ್ಥಾಪಿಸಲಾಗಿದೆ. ಉಸ್ತುವಾರಿ ವ್ಯವಸ್ಥೆಯು ಸ್ವಯಂಚಾಲಿತ ನಿರ್ವಹಣಾ ಮಾಹಿತಿ ವ್ಯವಸ್ಥೆಯಿಂದ ಬೆಂಬಲಿತವಾಗಿದೆ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಹಾಗೂ ಅದರ ತಿದ್ದುಪಡಿ ಕಾಯ್ದೆ, 2006 ರಡಿ ಸ್ಥಾಪಿಸಿರುವಂತಹ ಸಂಸ್ಥೆಗಳ ಮೂಲಕ ರಾಷ್ಟ್ರದಾದ್ಯಂತ ಅಂದಾಜಿಸುವಿಕೆಯ ಮೂಲಕ ಸಂಗ್ರಹಿಸಿರುವಂತಹ ಮಾಹಿತಿಯು ಈ ನಿರ್ವಹಣಾ ಮಾಹಿತಿ ವ್ಯವಸ್ಥೆಯ ಅಭಿವೃದ್ಧಿಗಾಗಿ ಬೇಸ್‌ಲೈನ್‌ನಂತೆ ಕೆಲಸ ನಿರ್ವಹಿಸಿದೆ. ಡಿಸಿಪಿಯು ಸಂಸ್ಥೆ ಹಾಗೂ ಸಾಂಸ್ಥಿಕೇತರ ಪೋಷಣೆಯಲ್ಲಿರುವ ಎಲ್ಲಾ ಮಕ್ಕಳ ಪ್ರತ್ಯೇಕಿಸಲಾಗಿರುವ ಡಾಟಾಬೇಸ್ ಅನ್ನು ಸಂಗ್ರಹಿಸಿ, ಉನ್ನತೀಕರಿಸಿ, ನಿರ್ವಹಿಸಬೇಕು. ನಂತರ ಡಿಸಿಪಿಯು ಜಿಲ್ಲೆಯಲ್ಲಿ ಸಂಕಷ್ಟಕ್ಕೀಡಾಗುವ ಸಂಭವವಿರುವ ಮಕ್ಕಳ ದತ್ತಾಂಶವನ್ನು ಸಂಗ್ರಹಿಸುತ್ತದೆ. ಡಿಸಿಪಿಯುಗಳ ಇನ್‌ಪುಟ್‌ಗಳನ್ನು ಆಧರಿಸಿ ಎಸ್‌ಸಿಪಿಎಸ್ ಗಳು ರಾಜ್ಯ ಮಟ್ಟದ ಡಾಟಾಬೇಸ್ ಅನ್ನು ನಿರ್ವಹಿಸಬೇಕು.

**6.2 ಕೇಂದ್ರ ಮಟ್ಟದಲ್ಲಿ ಉಸ್ತುವಾರಿ:** ಎಂಡಬ್ಲ್ಯೂಸಿಡಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುವ ನಿಗಾವಣಾ ವ್ಯವಸ್ಥೆಯನ್ನು ಸ್ಥಾಪಿಸಿದೆ.

i. **ಯೋಜನಾ ಅನುಮೋದನಾ ಮಂಡಳಿ (ಪಿಎಬಿ)** ಯೋಜನೆಯಡಿ ಅನುದಾನವನ್ನು ಒದಗಿಸಲು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಹಾಗೂ ಇತರೆ ಸಂಸ್ಥೆಗಳಿಂದ ಬರುವ ಯೋಜನೆಗಳ ಅನುಷ್ಠಾನ, ವಾರ್ಷಿಕ ಯೋಜನೆಗಳು ಹಾಗೂ ಹಣಕಾಸಿನ ಪ್ರಸ್ತಾವನೆಗಳನ್ನು ಅನುಮೋದಿಸಲು ಹಾಗೂ ಪರಿಶೀಲಿಸಲು ಸಚಿವಾಲಯದಲ್ಲಿ ಯೋಜನಾ ಅನುಮೋದನಾ ಮಂಡಳಿಯನ್ನು (ಪಿಎಬಿ) ರಚಿಸಲಾಗಿದೆ. ಈ ಮಂಡಳಿಯು ಕಾಲಕಾಲಕ್ಕೆ ಯೋಜನೆಯ ಅನುಷ್ಠಾನದ ಪ್ರಗತಿಯ ಉಸ್ತುವಾರಿ ಹಾಗೂ ಪರಿಷ್ಕರಿಸುವ ಜವಾಬ್ದಾರಿಗಳನ್ನೂ ವಹಿಸುತ್ತದೆ. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು, ಪರಿಶೀಲನೆಗಾಗಿ ಅನುಷ್ಠಾನ ಯೋಜನೆಗಳೊಂದಿಗೆ ನಿಗದಿತ ನಮೂನೆಗಳಲ್ಲಿ ತುಂಬಿರುವ ಹಣಕಾಸಿನ ಪ್ರಸ್ತಾವನೆಗಳನ್ನು ಸಲ್ಲಿಸುತ್ತೇವೆ. ಅದನ್ನು ಮೌಲ್ಯಮಾಪನ

ಹಾಗೂ ಅನುಮೋದನೆಗಾಗಿ ಪಿಎಬಿ ಮುಂದೆ ಮಂಡಿಸುತ್ತವೆ. ಸಿಪಿಎಸ್‌ಯು ಪಿಎಬಿಗೆ ಕಾರ್ಯದರ್ಶಿಯ ನೆರವನ್ನು ಒದಗಿಸುತ್ತದೆ. ಅಧ್ಯಕ್ಷರು ಪಿಎಬಿ ಸಭೆಗೆ ಹಾಜರಾಗಲು ಇತರೆ ಯಾವುದಾದರೂ ತಜ್ಞ ಅಥವಾ ಸಂಬಂಧಪಟ್ಟ ಸಂಸ್ಥೆಯನ್ನು ಆಹ್ವಾನಿಸಬಹುದು.

ii. ಪಿಎಬಿ ಯಲ್ಲಿ ಈ ಕೆಳಕಂಡ ಸದಸ್ಯರಿರುತ್ತಾರೆ:

| ಕ್ರ. ಸಂ. | ಅಧಿಕಾರಿಯ ಹೆಸರು ಹಾಗೂ ಹುದ್ದೆ | ಮಂಡಳಿಯಲ್ಲಿ ಹುದ್ದೆ |
|---|---|---|
| 1. | ಕಾರ್ಯದರ್ಶಿ, ಎಂಡಬ್ಲ್ಯೂಸಿಡಿ | ಅಧ್ಯಕ್ಷ |
| 2. | ಕಾರ್ಯದರ್ಶಿ, ಎಂಎಸ್‌ಜೆ&ಇ ಪ್ರತಿನಿಧಿ | ಸದಸ್ಯ |
| 3. | ಕಾರ್ಯದರ್ಶಿ, ಗೃಹ ಮಂತ್ರಾಲಯ/ ಪ್ರತಿನಿಧಿ | ಸದಸ್ಯ |
| 4. | ಕಾರ್ಯದರ್ಶಿ, ಪಂಚಾಯಿತಿ ರಾಜ್ ಮಂತ್ರಾಲಯ/ಪ್ರತಿನಿಧಿ | ಸದಸ್ಯ |
| 5. | ಕಾರ್ಯದರ್ಶಿ, ಕಾರ್ಮಿಕ ಮಂತ್ರಾಲಯ/ ಪ್ರತಿನಿಧಿ | ಸದಸ್ಯ |
| 6. | ಕಾರ್ಯದರ್ಶಿ, ಎಂಹೆಚ್‌ಆರ್‌ಡಿ, ಪ್ರಾಥಮಿಕ ಶಿಕ್ಷಣ ಇಲಾಖೆ/ ಪ್ರತಿನಿಧಿ | ಸದಸ್ಯ |
| 7. | ಹೆಚ್ಚುವರಿ ಕಾರ್ಯದರ್ಶಿ, ಎಂಡಬ್ಲ್ಯೂಸಿಡಿ | ಸದಸ್ಯ |
| 8. | ಹೆಚ್ಚುವರಿ ಕಾರ್ಯದರ್ಶಿ ಹಾಗೂ ಹಣಕಾಸು ಸಲಹಾಗಾರ, ಎಂಡಬ್ಲ್ಯೂಸಿಡಿ | ಸದಸ್ಯ |
| 9. | ಜಂಟಿ ಕಾರ್ಯದರ್ಶಿ, (ಮಕ್ಕಳ ಕಲ್ಯಾಣ) ಎಂಡಬ್ಲ್ಯೂಸಿಡಿ | ಸದಸ್ಯ |
| 10. | ಕಾರ್ಯದರ್ಶಿ, ಸಿಎಆರ್‌ಎ | ಸದಸ್ಯ |
| 11. | ನಿರ್ದೇಶಕ, ಎನ್‌ಐಪಿಸಿಸಿಡಿ | ಸದಸ್ಯ |
| 12. | ನಿರ್ದೇಶಕ, (ಮಕ್ಕಳ ಕಲ್ಯಾಣ), ಎಂಡಬ್ಲ್ಯೂಸಿಡಿ | ಸದಸ್ಯ ಕಾರ್ಯದರ್ಶಿ |

## i. ಉಸ್ತುವಾರಿ ವರದಿಗಳು: (ಮೇಲ್ವಿಚಾರಣೆ/ಪ್ರಗತಿ ಪರಿಶೀಲನಾ ವರದಿ).

ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು, ಐಸಿಪಿಎಸ್‌ನಲ್ಲಿರುವ ವಿವಿಧ ಶೀರ್ಷಿಕೆಗಳಡಿ ಸಂಕಷ್ಟದಲ್ಲಿರುವ ಮಕ್ಕಳು, ರಚನೆಗಳು ಹಾಗೂ ಪ್ರಗತಿಯ ದತ್ತಾಂಶದ ತ್ರೈಮಾಸಿಕ ಜಿಲ್ಲಾ ಹಾಗೂ ರಾಜ್ಯವಾರು ವರದಿಯನ್ನು ಆನ್‌ಲೈನ್ ಮೂಲಕ, ಎಂಡಬ್ಲ್ಯೂಸಿಡಿ ವತಿಯಿಂದ ಒದಗಿಸಿರುವ ಕೇಂದ್ರ ಮಟ್ಟದ ಪ್ರಗತಿ ಪರಿಶೀಲನಾ ನಮೂನೆಗಳಲ್ಲಿ ಸಲ್ಲಿಸಬೇಕು. ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೂ ಗುರುತಿನ ಹೆಸರು ಹಾಗೂ ಪಾಸ್‌ವರ್ಡ್ ಅನ್ನು ಒದಗಿಸಲಾಗಿರುತ್ತದೆ. ಈ ವರದಿಗಳನ್ನು ಎಂಡಬ್ಲ್ಯೂಸಿಡಿಯಲ್ಲಿ ಪರಿಶೀಲಿಸಿ, ರಾಜ್ಯಗಳಿಗೆ ಮುಂದಿನ ಕ್ರಮಗಳ ಕುರಿತು ಹಿಮ್ಮಾಹಿತಿಯನ್ನು ಒದಗಿಸಲಾಗುವುದು.

## iii. ಎಂಡಬ್ಲ್ಯೂಸಿಡಿ, ರಾಷ್ಟ್ರೀಯ ಮಟ್ಟದಲ್ಲಿ ಐಸಿಪಿಎಸ್‌ನ ಉಸ್ತುವಾರಿ ಹಾಗೂ ಅನುಷ್ಠಾನದ ಮೇಲ್ವಿಚಾರಣೆಯನ್ನು ಈ ಕೆಳಕಂಡ ಕ್ರಮಗಳ ಮೂಲಕ ಕೈಗೊಳ್ಳುತ್ತದೆ.

ಎ) ರಾಜ್ಯ ಕಾರ್ಯದರ್ಶಿಗಳ ವಾರ್ಷಿಕ ಪುನರಾವಲೋಕನ ಸಭೆ ಆಯೋಜನೆ

ಬಿ) ರಾಜ್ಯಗಳಲ್ಲಿ ತ್ರೈಮಾಸಿಕ ಪುನರಾವಲೋಕನಾ ಸಭೆಗಳನ್ನು ನಡೆಸುವ ಮೂಲಕ ರಾಜ್ಯಗಳಲ್ಲಿ ಅನುಷ್ಠಾನದ ಮಟ್ಟದ ನಿಕಟವಾದ ಉಸ್ತುವಾರಿ

ಸಿ) ಯೋಜನೆಯ ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ತಾಂತ್ರಿಕ ಬೆಂಬಲವನ್ನು ಒದಗಿಸುವುದು

ಡಿ) ಸೇವೆಯಲ್ಲಿ ಅತ್ಯುತ್ಕೃಷ್ಟತೆಯನ್ನು ಪ್ರೋತ್ಸಾಹಿಸಲು ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳ ರಚನೆ.

## iv. ಸಾಮಾಜಿಕ ಲೆಕ್ಕಪರಿಶೋಧನೆಯ ಮೂಲಕ ಏಕಕಾಲಿಕ ಉಸ್ತುವಾರಿ :

ಯೋಜನೆಯ ಅನುಷ್ಠಾನವನ್ನು ಗಮನಿಸಲು, ಎಂಡಬ್ಲ್ಯೂಸಿಡಿಯು ಕಾಲಕಾಲಕ್ಕೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಕಳುಹಿಸಲು ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿರುವ ತಜ್ಞರು/ಬಾಹ್ಯ ಏಜೆನ್ಸಿಗಳನ್ನು ನಿಯೋಜಿಸಬಹುದು. ಈ ತಜ್ಞರು ವಿವಿಧ ರೀತಿಯ ಮಕ್ಕಳ ಪಾಲನಾ ಸಂಸ್ಥೆಗಳು ಹಾಗೂ ಜೆಜೆ ಕಾಯ್ದೆಯಡಿ ನಿಗದಿಪಡಿಸಿರುವಂತೆ ಆ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಯೋಜನೆಯಡಿ ಅನುಷ್ಠಾನಗೊಳಿಸಿರುವ ಸಾಂಸ್ಥಿಕೇತರ ಪೋಷಣಾ ಕಾರ್ಯಕ್ರಮಗಳನ್ನು ಭೇಟಿ ನೀಡುತ್ತಾರೆ. ಈ ತಜ್ಞರು/ಬಾಹ್ಯ ಏಜೆನ್ಸಿಗಳ ವತಿಯಿಂದ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಲು ಸೂಕ್ತ ನಿಬಂಧನೆಯನ್ನೂ ಸಹ ಕೈಗೊಳ್ಳಬಹುದು.

**6.3 ರಾಜ್ಯಮಟ್ಟದಲ್ಲಿ ಉಸ್ತುವಾರಿ:** ರಾಜ್ಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು, ರಾಜ್ಯ ಮಕ್ಕಳ ರಕ್ಷಣಾ ಸಮಿತಿಯ (ಎಸ್‌ಸಿಪಿಸಿ) ನೆರವಿನೊಂದಿಗೆ ಐಸಿಪಿಎಸ್ ಅನುಷ್ಠಾನದ ಮೇಲ್ವಿಚಾರಣೆಯನ್ನು ಕೈಗೊಳ್ಳುತ್ತಾರೆ. ರಾಜ್ಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರ ಅಧ್ಯಕ್ಷತೆಯಡಿ ಇರುವಂತಹ ಸಮಿತಿಯು ಆರೋಗ್ಯ, ಶಿಕ್ಷಣ, ಕಾರ್ಮಿಕ, ವಸತಿ, ನ್ಯಾಯಾಂಗ, ಗೃಹ, ರೈಲ್ವೆಯಂತಹ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳ ಸದಸ್ಯರು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು, ಯುಎಲ್‌ಬಿ ಗಳಂತಹ ಸ್ಥಳೀಯ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳ ಸದಸ್ಯರು ಹಾಗೂ ನಾಗರಿಕ ಸಮಾಜದ ಸದಸ್ಯರನ್ನು ಒಳಗೊಂಡಿರಬೇಕು. ಎಸ್‌ಸಿಪಿಸಿಯು, ಅಭಿವೃದ್ಧಿಪಡಿಸಲಾಗಿರುವಂತಹ ರಾಜ್ಯ ನಿರ್ದಿಷ್ಟವಾದಂತಹ ಸೂಚಕಗಳನ್ನು ಆಧರಿಸಿ ಐಸಿಪಿಎಸ್‌ನ ಅನುಷ್ಠಾನವನ್ನು ಉಸ್ತುವಾರಿ ಮಾಡುತ್ತದೆ. ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮುಖ್ಯ ಕಾರ್ಯದರ್ಶಿಗಳು ರಾಜ್ಯ ಮಟ್ಟದಲ್ಲಿ ಐಸಿಪಿಎಸ್‌ನ ಅನುಷ್ಠಾನದ ವಾರ್ಷಿಕ ಪುನರಾವಲೋಕನವನ್ನು ಕೈಗೊಳ್ಳುತ್ತಾರೆ.

**6.4 ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ:** ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯ (ಡಿಸಿಪಿಸಿ) ಸಹಾಯದೊಂದಿಗೆ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಅಥವಾ ಜಿಲ್ಲಾ ದಂಡಾಧಿಕಾರಿಗಳು, ಡಿಸಿಪಿಯು ಹಾಗೂ ಐಸಿಪಿಎಸ್ ಅನುಷ್ಠಾನದ ಒಟ್ಟಾರೆ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುತ್ತಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರು ಅಥವಾ ಜಿಲ್ಲಾ ದಂಡಾಧಿಕಾರಿಗಳ ಅಧ್ಯಕ್ಷತೆಯಡಿ ಇರುವಂತಹ ಈ ಸಮಿತಿಯಲ್ಲಿ ಆರೋಗ್ಯ, ಶಿಕ್ಷಣ, ಕಾರ್ಮಿಕ, ವಸತಿ, ನ್ಯಾಯಾಂಗ, ಗೃಹ, ರೈಲ್ವೆಯಂತಹ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳ ಸದಸ್ಯರು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು, ಯುಎಲ್‌ಬಿಗಳಂತಹ ಸ್ಥಳೀಯ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳ ಸದಸ್ಯರು ಹಾಗೂ ನಾಗರಿಕ ಸಮಾಜದ ಸದಸ್ಯರನ್ನು ಒಳಗೊಂಡಿರುತ್ತದೆ. ಡಿಸಿಪಿಸಿಯು, ಯೋಜನೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಅಭಿವೃದ್ಧಿಪಡಿಸಲಾದಂತಹ ಜಿಲ್ಲಾ–ನಿರ್ದಿಷ್ಟವಾದ ಸೂಚಕಗಳನ್ನು ಆಧರಿಸಿ ಐಸಿಪಿಎಸ್‌ನ ಅನುಷ್ಠಾನದ ಉಸ್ತುವಾರಿಯನ್ನು ಮಾಡಬೇಕು.

**6.5 ಬ್ಲಾಕ್ ಮಟ್ಟದ ಮಕ್ಕಳ ರಕ್ಷಣಾ ಸಮಿತಿ:** ಪ್ರತಿ ಬ್ಲಾಕ್ (ನಗರದಲ್ಲಿರುವ ಒಂದು ವಾರ್ಡ್), ಬ್ಲಾಕ್ ಮಟ್ಟದಲ್ಲಿ ಮಕ್ಕಳ ರಕ್ಷಣಾ ಸೇವೆಗಳ ಅನುಷ್ಠಾನದ ಉಸ್ತುವಾರಿಯನ್ನು ಮಾಡಲು ಹಾಗೂ ಶಿಫಾರಸ್ಸುಗಳನ್ನು ನೀಡಲು ಸದಸ್ಯ ಕಾರ್ಯದರ್ಶಿಗಳಾಗಿ ಬ್ಲಾಕ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ

(ಬಿಡಿಒಗಳು), ಬ್ಲಾಕ್/ವಾರ್ಡ್ ಮಟ್ಟದ ಚುನಾಯಿತ ಪ್ರತಿನಿಧಿಯವರ ಅಡಿಯಲ್ಲಿ ಮಕ್ಕಳ ರಕ್ಷಣಾ ಸಮಿತಿಯನ್ನು ಹೊಂದಿರಬೇಕು. ಈ ಸಮಿತಿಯು ಡಿಸಿಪಿಯುನ ಓರ್ವ ಸದಸ್ಯರು, ಓರ್ವ ಐಸಿಡಿಸಿ ಕಾರ್ಯಕರ್ತರು, ಶಿಕ್ಷಣ ಹಾಗೂ ಆರೋಗ್ಯ ಇಲಾಖೆಗಳ ಪ್ರತಿನಿಧಿಗಳು, ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಗಳ ಅಧ್ಯಕ್ಷರು ಹಾಗೂ ಸಮುದಾಯದ ಗೌರವಾನ್ವಿತ ಸದಸ್ಯರು ಹಾಗೂ ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

**6.6 ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿ:** ಪ್ರತಿ ಗ್ರಾಮವು, ಗ್ರಾಮ ಮಟ್ಟದಲ್ಲಿ ಮಕ್ಕಳ ರಕ್ಷಣಾ ಸೇವೆಗಳ ಅನುಷ್ಠಾನದ  ಉಸ್ತುವಾರಿ ಮಾಡಲು ಹಾಗೂ ಶಿಫಾರಸ್ಸುಗಳನ್ನು ಮಾಡಲು, ಗ್ರಾಮ ಮಟ್ಟದ ಚುನಾಯಿತ ಪ್ರತಿನಿಧಿಯವರ (ಗ್ರಾಮ ಪಂಚಾಯಿತಿ ಮುಖ್ಯಸ್ಥರು) ಅಧ್ಯಕ್ಷತೆಯಡಿಯಲ್ಲಿ ಮಕ್ಕಳ ರಕ್ಷಣಾ ಸಮಿತಿಯನ್ನು ಹೊಂದಿರಬೇಕು. ಈ ಸಮಿತಿಯು ಇಬ್ಬರು ಮಕ್ಕಳ ಪ್ರತಿನಿಧಿಗಳು, ಡಿಸಿಪಿಯುನ ಓರ್ವ ಸದಸ್ಯರು, ಅಂಗನವಾಡಿ ಕಾರ್ಯಕರ್ತರು, ಶಾಲಾ ಶಿಕ್ಷಕರು, ಆಕ್ಸಿಲರಿ ನರ್ಸ್ ಮಿಡ್‌ವೈಫ್‌ಗಳು, ಹಾಗೂ ಗೌರವಾನ್ವಿತ ಗ್ರಾಮ ಪಂಚಾಯತ್ ಸದಸ್ಯರು ಹಾಗೂ ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಒಳಗೊಂಡಿರಬೇಕು.

ರಾಜ್ಯ, ಜಿಲ್ಲೆ, ಬ್ಲಾಕ್ ಹಾಗೂ ಗ್ರಾಮ ಮಟ್ಟದಲ್ಲಿನ ಮಕ್ಕಳ ರಕ್ಷಣಾ ವಿವಿಧ ವ್ಯವಸ್ಥೆಗಳು ಮತ್ತು ಉಸ್ತುವಾರಿ ಸಮಿತಿಗಳು ತಮ್ಮ ಜವಾಬ್ದಾರಿಯುತ ಪ್ರದೇಶಗಳಲ್ಲಿ ಈ ಕೆಳಕಂಡ ಅಂಶಗಳ ಉಸ್ತುವಾರಿಯನ್ನು ಮಾಡುತ್ತವೆ:

**i. ವ್ಯವಸ್ಥೆ ರಚನೆ ಹಾಗೂ ಮೂಲಭೂತ ಸೌಕರ್ಯ:**

ಶಾಸನಬದ್ಧ ಹಾಗೂ ಪೋಷಣೆ ಹಾಗೂ ಪುನರ್ವಸತಿ ಸೇವೆಗಳನ್ನು ಒದಗಿಸುವ ಮಕ್ಕಳ ರಕ್ಷಣಾ ಸೇವೆ ಒದಗಿಸುವವರ ಸಂಪರ್ಕಜಾಲದ ಕುರಿತು ಮಾಹಿತಿಯನ್ನು ಒದಗಿಸುವುದು ಇದರ ಉದ್ದೇಶವಾಗಿದೆ. ಜಿಲ್ಲೆಯ ಜೆಜೆಬಿಗಳು, ಸಿಡಬ್ಲ್ಯೂಸಿಗಳು, ಎಸ್‌ಜೆಪಿಯುಗಳು, ಸಲಹಾ ಮಂಡಳಿಗಳು, ಆಯ್ಕೆ ಸಮಿತಿಗಳು, ಡಿಸಿಪಿಸಿ, ಇತ್ಯಾದಿಗಳೂ ಒಳಗೊಡಂತೆ ಮಕ್ಕಳ ರಕ್ಷಣಾ ಸೇವೆಗಳ ಹಂಚಿಕೆ ರಚನೆಗಳಿಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನೂ ಸಹ ಡಿಸಿಪಿಯು ಡೇಟಾಬೇಸ್‌ನಲ್ಲಿ (ಡಿಸಿಪಿಯು ಸ್ವತಃ ಒಳಗೊಂಡಂತೆ) ದಾಖಲಿಸಬೇಕು. ಈ ಮಾಹಿತಿಯು ಸಂಸ್ಥೆಯ ಹೆಸರು ಹಾಗೂ ವಿಧ, ವಿಳಾಸ, ಕಾನೂನು ಸ್ಥಿತಿಗತಿ, ಜವಾಬ್ದಾರಿಯುತ ವ್ಯಕ್ತಿ, ಭೌತಿಕ ಸ್ಥಳದ ವಿವರಗಳು (ಸೌಲಭ್ಯ) ಹಾಗೂ ಉಪಕರಣಗಳು, ಪರವಾನಗಿ ಸ್ಥಿತಿಗತಿ, ಸಿಬ್ಬಂದಿ (ಸಂಖ್ಯೆ ಹಾಗೂ ಶಿಕ್ಷಣ, ಅರ್ಹತೆ/ಕೆಲಸ ನಿಯೋಜನೆ ಹಾಗೂ ಲಿಂಗ), ಆಯವ್ಯಯ (ಹಣಕಾಸು ಹಾಗೂ ವೆಚ್ಚ ವಿಭಾಗಗಳೊಂದಿಗೆ), ಒದಗಿಸುವ ಸೇವೆಗಳ ವಿಧ, ಫಲಾನುಭವಿಗಳು, ಇತ್ಯಾದಿ ವಿವರಗಳನ್ನು ಒಳಗೊಂಡಿರಬೇಕು. ಸಂಸ್ಥೆಗಳ ನೆಟ್‌ವರ್ಕ್, ಒದಗಿಸುವ ಸೇವೆಗಳು, ಮಾನವ ಸಂಪನ್ಮೂಲ, ಹಣಕಾಸು ಸಂಪನ್ಮೂಲಗಳು ಹಾಗೂ ಫಲಾನುಭವಿಗಳಿಗೆ ಸಂಬಂಧಪಟ್ಟ ನಿಖರವಾದ ಮಾಹಿತಿಯನ್ನು ಇದು ಒದಗಿಸುತ್ತದೆ.

### ii. ಸೇವೆಗಳ ಬೇಡಿಕೆ (ಜನಸಂಖ್ಯಾಶಾಸ್ತ್ರ ಹಾಗೂ ಸಾಮಾಜಿಕ, ಆರ್ಥಿಕ ಸನ್ನಿವೇಶಗಳು)

ಪೋಷಣೆಯಡಿ ಇರುವ ಮತ್ತು ಮಕ್ಕಳ ರಕ್ಷಣಾ ಸೇವೆಗಳ ಅಗತ್ಯ ಎದುರಾಗಬಹುದಾದಂತಹ, ಸಂಕಷ್ಟಕ್ಕೀಡಾಗುವ ಸಂಭವವಿರುವ ಮಕ್ಕಳು ಹಾಗೂ ಕುಟುಂಬಗಳಿಗೆ ಸಂಬಂಧಪಟ್ಟ ದತ್ತಾಂಶವನ್ನು ಕ್ರಮಬದ್ಧವಾಗಿ ಅಪ್‌ಡೇಟ್ ಮಾಡುತ್ತಿರಬೇಕು.

### iii. ಸೇವೆ ಹಂಚಿಕೆ

ಗುರಿ ಗುಂಪುಗಳ ಕುರಿತು ಹಾಗೂ ಒದಗಿಸಲಾಗುವ ಸೇವೆಗಳ ಕುರಿತು ನಿಖರವಾದ ಮಾಹಿತಿಯನ್ನು ಒದಗಿಸುವುದು ಇದರ ಉದ್ದೇಶ. ಪೋಷಣೆಯಡಿ ಇರುವಂತಹ ಪ್ರತಿ ಮಗುವಿಗೆ (ಅಥವಾ ಇತರೆ ಯಾವುದಾದರೂ ರೀತಿಯ ಸೇವೆಗಳನ್ನು ಪಡೆಯುತ್ತಿರುವ ಮಗು), **ವೈಯಕ್ತಿಕ ಪೋಷಣಾ ಯೋಜನೆ** (ಅನ್ವಯವಾಗುವ ಕಡೆ) ಒಳಗೊಂಡಂತೆ ವಿವರವಾದ ಮಾಹಿತಿಯನ್ನು ಸೇವೆ ಒದಗಿಸುವವರ ಬಳಿ ಇಟ್ಟಿರಲಾಗುತ್ತದೆ; ಈ ಮಾಹಿತಿಯನ್ನು ಡಿಸಿಪಿಯು ಬಳಿ ತುಂಬಲಾಗುವುದು ಹಾಗೂ ಕ್ರಮಬದ್ಧವಾಗಿ ಅಪ್‌ಡೇಟ್ ಮಾಡಲಾಗುವುದು. ಮಗುವಿನ ಕಡತವು ಆತನ/ಆಕೆಯ ಗುರುತು, ಜನನ, ಪೋಷಕರು ಹಾಗೂ ನಿಕಟ ಸಂಬಂಧಿಗಳು, ವಿಳಾಸ, ಶೈಕ್ಷಣಿಕ ಸ್ಥಿತಿಗತಿ, ಪ್ರಕರಣ/ಸನ್ನಿವೇಶದ ವಿವರ, ಪ್ರಕರಣದ ಚರಿತ್ರೆ, ಮೌಲ್ಯಮಾಪನ/ಅಂದಾಜಿಸುವಿಕೆ, ಸಿಡಬ್ಲ್ಯೂಸಿ/ಜೆಜೆಬಿಯ ನಿರ್ಧಾರಗಳು ಹಾಗೂ ಒದಗಿಸಿರುವ ಸೇವೆಗಳ ಕುರಿತಾದ ಮಾಹಿತಿಯನ್ನು ಒಳಗೊಂಡಿರಬೇಕು.

### iv. ವ್ಯವಸ್ಥೆಯ ಕಾರ್ಯಕ್ಷಮತೆ: ಫಲಿತಾಂಶಗಳು

ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮಕ್ಕಳ ರಕ್ಷಣೆಯ ಕುರಿತು ಅಳತೆ ಮಾಡಬಹುದಾದ ಸೂಚಕಗಳನ್ನು ಅಭಿವೃದ್ಧಿಪಡಿಸುತ್ತವೆ. ಉದಾಹರಣೆಗೆ, ರಾಷ್ಟ್ರದ ಒಳಗಿನ ಮಕ್ಕಳ ದತ್ತು ಪ್ರಮಾಣದಲ್ಲಿ 50% ಹೆಚ್ಚಳ, ಇಂತಹ ಒಂದು ಸೂಚಕವಾಗಿದೆ. ಮುಂದುವರೆದು, ಈ ಯೋಜನೆಯ ಅನುಷ್ಠಾನ ಪ್ರಕ್ರಿಯೆ ನಡೆಯುವ ಸಮಯದಲ್ಲಿ, ಸಲಹಾ ಪ್ರಕ್ರಿಯೆಯ ಮೂಲಕ ಸೇವೆಗಳ ಗುಣಮಟ್ಟಕ್ಕೆ ಸಂಬಂಧಪಟ್ಟ ವ್ಯವಸ್ಥೆಯ ಕಾರ್ಯಕ್ಷಮತೆಯ ಸೂಚಕಗಳನ್ನು ಅಭಿವೃದ್ಧಿಪಡಿಸಲಾಗುವುದು.

## 7. ಲೆಕ್ಕಪರಿಶೋಧನೆ

ಲೆಕ್ಕಪರಿಶೋಧನೆಯನ್ನು ಭಾರತದ ಕಂಪಟ್ರೋಲರ್ ಮತ್ತು ಆಡಿಟರ್ ಜನರಲ್ ಅವರ ನಿಯಮಾವಳಿಗಳ ಪ್ರಕಾರ ನಡೆಸಬೇಕು ಹಾಗೂ ಅದನ್ನು ಕೇಂದ್ರ ಹಾಗೂ ರಾಜ್ಯ/ಕೇಂದ್ರಾಡಳಿತ ಪ್ರದೇಶ ಎರಡೂ ಹಂತಗಳಲ್ಲಿ ಅನುಸರಿಸಲಾಗುವುದು.

## 8. ಮೌಲ್ಯಮಾಪನ

ಐಸಿಪಿಎಸ್ XI ಯೋಜನೆಯ ಮುಂದುವರಿಕೆ ಯೋಜನೆಯಾಗಿದೆ ಹಾಗೂ ಈ ಯೋಜನೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಲು, XII ಯೋಜನೆ ಅಂತ್ಯವಾಗುವುದಕ್ಕೆ ಮುಂಚೆ, ಈ ಯೋಜನೆಯ ಮಧ್ಯಂತರ ಮೌಲ್ಯಮಾಪನವನ್ನು ನಡೆಸುವುದು. ಎಂಡಬ್ಲ್ಯೂಸಿಡಿ ಸ್ವತಂತ್ರವಾದ ಮೂರನೆ ಏಜೆನ್ಸಿಯ ಮೂಲಕ ಮೌಲ್ಯಮಾಪನ ನಡೆಸುತ್ತದೆ.

# ಭಾಗ V- ಅನುಬಂಧಗಳು

# ಅನುಬಂಧ I – ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (ಡಿಸಿಪಿಯು) & ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್)

## 1. ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ (ಡಿಸಿಪಿಯು) ಪಾತ್ರಗಳು ಹಾಗೂ ಜವಾಬ್ದಾರಿಗಳು

**1.1 ಜಿಲ್ಲಾ ಮ್ಯಾಜಿಸ್ಟ್ರೇಟ್/ದಂಡಾಧಿಕಾರಿಗಳು** (ಜಿಲ್ಲಾಧಿಕಾರಿಗಳು): ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (ಡಿಸಿಪಿಯು), ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರ ಒಟ್ಟಾರೆ ಆಡಳಿತ ನಿಯಂತ್ರಣ ಹಾಗೂ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುತ್ತವೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ಜಿಲ್ಲಾ ಮಟ್ಟದಲ್ಲಿ ಐಸಿಪಿಎಸ್ ಹಾಗೂ ಇತರೆ ಎಲ್ಲಾ ಮಕ್ಕಳ ರಕ್ಷಣಾ ನೀತಿಗಳು ಹಾಗೂ ಕಾರ್ಯಕ್ರಮಗಳ ಪರಿಣಾಮಕಾರಿಯಾದ ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ. ಜೊತೆಗೆ ಆತ/ಆಕೆ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯ (ಡಿಸಿಪಿಸಿ) ಸಹ–ಅಧ್ಯಕ್ಷರೂ ಸಹ ಆಗಿರುತ್ತಾರೆ. ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು ಡಿಸಿಪಿಸಿಯ ಅಧ್ಯಕ್ಷತೆಯನ್ನು ವಹಿಸುತ್ತಾರೆ.

**1.2 ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಒ):** ಜಿಲ್ಲಾ ಮಕ್ಕಳ ರಕ್ಷಣ ಅಧಿಕಾರಿ (ಡಿಸಿಪಿಒ) ಅವರು ಡಿಸಿಪಿಯುನ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ ಹಾಗೂ ಜಿಲ್ಲಾ ಮಟ್ಟದಲ್ಲಿ ಡಿಸಿಪಿಯುನ ಎಲ್ಲಾ ದೈನಂದಿನ ಕಾರ್ಯನಿರ್ವಹಣೆಗಳನ್ನು ನಡೆಸಲು ಜವಾಬ್ದಾರರಾಗಿರುತ್ತಾರೆ. ಡಿಸಿಪಿಒ ಅವರನ್ನು ನಿಯೋಜನೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಬಹುದು. ಐಸಿಪಿಎಸ್ ಅನುಷ್ಠಾನಗೊಳಿಸುವ ಇಲಾಖೆಯ (ಸಮಾಜ ಕಲ್ಯಾಣ/ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ) ಜಿಲ್ಲಾ ಮಟ್ಟದ ಅಧಿಕಾರಿ ಲಭ್ಯವಿರುವಂತಹ ಜಿಲ್ಲೆಗಳಲ್ಲಿ ಆತ/ಆಕೆ ಡಿಸಿಪಿಒ ಆಗಿ ಕಾರ್ಯನಿರ್ವಹಿಸುತ್ತಾರೆ. ಇಂತಹ ವ್ಯವಸ್ಥೆ ಇಲ್ಲದಿರುವಂತಹ ಜಿಲ್ಲೆಗಳಲ್ಲಿ ನಿಯೋಜನೆ/ ಗುತ್ತಿಗೆ ಆಧಾರದ ಮೇಲೆ ಡಿಸಿಪಿಒ ಅವರನ್ನು ನೇಮಕ ಮಾಡಿಕೊಳ್ಳಬಹುದು.

**1.2.1 ಡಿಸಿಪಿಒ, ಜಿಲ್ಲಾ ಮಟ್ಟದಲ್ಲಿ ಎಲ್ಲಾ ಸಂಸ್ಥೆಗಳು/ ಏಜೆನ್ಸಿಗಳು/ ಯೋಜನೆಗಳು/** ಕಾರ್ಯಕ್ರಮಗಳು/ ಎನ್‌ಜಿಒಗಳ ನಿಗಾವಣೆ ಹಾಗೂ ಮೇಲ್ವಿಚಾರಣೆ ಒಳಗೊಂಡಂತೆ ಐಸಿಪಿಎಸ್ ಹಾಗೂ ಇತರೆ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳ ಅನುಷ್ಠಾನದ ಸಂಯೋಜನೆ ಹಾಗೂ ಮೇಲ್ವಚಾರಣೆಯ ಜವಾಬ್ದಾರಿಯನ್ನು ವಹಿಸಬೇಕು. ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕೇತರ ಪೋಷಣೆ ಕಾರ್ಯಕ್ರಮದ ಸಂಯೋಜನೆಗಾಗಿ ಆತ/ಆಕೆ ರಾಜ್ಯಮಟ್ಟದಲ್ಲಿ ಎಸ್‌ಎಆರ್‌ಎ ಗೆ ವರದಿ ಮಾಡಬಹುದು. ವಾರ್ಷಿಕ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ, ಮಕ್ಕಳ ಸಂಬಂಧಿತ ಸೇವೆಗಳ ಕೈಪಿಡಿ ಸಂಪನ್ಮೂಲ ಹಾಗೂ ಜಿಲ್ಲಾ ಮಟ್ಟದಲ್ಲಿ ಮಕ್ಕಳ ನಿಗಾವಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಡಿಸಿಪಿಒ ಜವಾಬ್ದಾರರಾಗಿರುತ್ತಾರೆ.

**1.2.2.ಆತ/ಆಕೆ ಈ ಕೆಳಕಂಡವರೂ ಒಳಗೊಂಡಂತೆ ಎಲ್ಲಾ ಪೂರಕ ಇಲಾಖೆಗಳು/ ಅಧಿಕಾರಿಗಳೊಂದಿಗೆ ಸಂಯೋಜನೆ ಹಾಗೂ ಸಂಪರ್ಕವನ್ನು ಹೊಂದಿರುತ್ತಾರೆ:**

(i) ಜಿಲ್ಲಾ ಮ್ಯಾಜಿಸ್ಟ್ರೇಟ್/ದಂಡಾಧಿಕಾರಿಗಳು (ಜಿಲ್ಲಾಧಿಕಾರಿಗಳು)

(ii) ಜಿಲ್ಲಾ ನ್ಯಾಯಾಧೀಶರು

(iii) ಪೊಲೀಸ್ ವರಿಷ್ಠಾಧಿಕಾರಿ

(iv) ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (ಸಿಡಿಪಿಒ)

(v) ಕಾರ್ಮಿಕ ಅಧಿಕಾರಿ, ಶಿಕ್ಷಣಾಧಿಕಾರಿ

(vi) ಮುಖ್ಯ ವೈದ್ಯಾಧಿಕಾರಿ (ಸಿಎಂಒ)

(vii) ಮುನಿಸಿಪಲ್ ಪ್ರಾಧಿಕಾರಿಗಳು ಹಾಗೂ

(viii) ಜಿಲ್ಲಾ ಪರಿಷತ್ ಹಾಗೂ ಸ್ಥಳೀಯ ಸಂಸ್ಥೆಗಳ ಸದಸ್ಯರು

**1.2.3 ಇದಲ್ಲದೆ, ಆತ/ಆಕೆ ಈ ಕೆಳಕಂಡ ಸಂಸ್ಥೆಗಳೊಂದಿಗೆ ಸಂಯೋಜನೆಯನ್ನೂ ಹೊಂದಿರುತ್ತಾರೆ:**

(i) ಸ್ವಯಂಸೇವಾ ಸಂಸ್ಥೆಗಳು

(ii) ಆಸ್ಪತ್ರೆಗಳು/ ನರ್ಸಿಂಗ್ ಹೋಂಗಳು

(iii) ಮಕ್ಕಳ ಕಲ್ಯಾಣ ಸಮಿತಿ

(iv) ಮಕ್ಕಳ ನ್ಯಾಯ ಮಂಡಳಿ

(v) ಮಕ್ಕಳ ಸಹಾಯವಾಣಿ ಸೇವೆಗಳು

(vi) ಮಕ್ಕಳ ರಕ್ಷಣಾ ಕಾರ್ಯಕ್ರಮಗಳು/ ಸೇವೆಗಳ ಮೇಲೆ ನೇರ ಅಥವಾ ಪರೋಕ್ಷ ಪರಿಣಾಮವನ್ನು ಹೊಂದಿರುವಂತಹ ಜಿಲ್ಲಾ ಮಟ್ಟದ ಇತರೆ ಅಧಿಕಾರಿಗಳು

**1.2.4 ಆತ/ಆಕೆ ಜಿಲ್ಲೆಯಲ್ಲಿರುವ ಪ್ರತಿ ಸಂಸ್ಥೆಯ ಗೃಹ ನಿರ್ವಹಣಾ ಸಮಿತಿಯ ಮುಖ್ಯಸ್ಥರ** ಜವಾಬ್ದಾರಿಯನ್ನೂ ನಿರ್ವಹಿಸುತ್ತಾರೆ ಹಾಗೂ ಎಸ್‌ಸಿಪಿಎಸ್‌ನಿಂದ ಅನುದಾನ ಬಿಡುಗಡೆಗಾಗಿ ಸೂಕ್ತವಾಗಿರುವಂತಹ ಸಂಸ್ಥೆಗಳನ್ನು ಶಿಫಾರಸ್ಸು ಮಾಡುತ್ತಾರೆ. ಆತ/ಆಕೆ, ಸಮುದಾಯದ ಪ್ರತಿನಿಧಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಹಾಗೂ ಮಾಧ್ಯಮಗಳ ಪ್ರತಿನಿಧಿಗಳು ಒಳಗೊಂಡಂತೆ ಎಲ್ಲಾ ಭಾಗೀದಾರರೊಂದಿಗೆ ಮಾಸಿಕ ಪುನರ್‌ಮನನ ಸಭೆಯನ್ನು ಆಯೋಜಿಸುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ.

**1.3 ರಕ್ಷಣಾ ಅಧಿಕಾರಿ (ಸಾಂಸ್ಥಿಕ ಪೋಷಣೆ ):** ಡಿಸಿಪಿಒ ಅವರ ಮೇಲ್ವಿಚಾರಣೆಯಡಿ, ರಕ್ಷಣಾ ಅಧಿಕಾರಿ (ಸಾಂಸ್ಥಿಕ ಪೋಷಣೆ) ಇವರು ಜಿಲ್ಲಾ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಪಟ್ಟಂತಹ ಮಕ್ಕಳ ರಕ್ಷಣಾ ಕಾರ್ಯಕ್ರಮಗಳು ಹಾಗೂ ನೀತಿಗಳ ಪರಿಣಾಮಕಾರಿಯಾದ ಅನುಷ್ಠಾನವನ್ನು ಖಾತ್ರಿಪಡಿಸುತ್ತಾರೆ. ಆತ/ಆಕೆ ಜಿಲ್ಲಾ ಮಟ್ಟದಲ್ಲಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವುಳ್ಳ ಎಲ್ಲಾ ಮಕ್ಕಳ ಪರಿಣಾಮಕಾರಿಯಾದಂತಹ ಸಾಂಸ್ಥಿಕ/ ವಸತಿ ಪೋಷಣಾ ಸೇವೆಗಳನ್ನು ಖಾತ್ರಿಪಡಿಸಲು ಜವಾಬ್ದಾರರಾಗಿರುತ್ತಾರೆ. ಪ್ರತಿ ಜಿಲ್ಲೆಯಲ್ಲಿಯೂ ಸಹ, ಆ ಜಿಲ್ಲೆಯ ಭೌಗೋಳಿಕ ವ್ಯಾಪ್ತಿ ಹಾಗೂ ಜಿಲ್ಲೆಯ ಮಕ್ಕಳ ಸಂಖ್ಯೆಯನ್ನು ಆಧರಿಸಿ ಗರಿಷ್ಠ ಮೂರು ರಕ್ಷಣಾ ಅಧಿಕಾರಿಗಳಿರುತ್ತಾರೆ (ಸಾಂಸ್ಥಿಕ ಪೋಷಣೆ). ಒಂದು ವೇಳೆ ಮಕ್ಕಳ ಕಲ್ಯಾಣ ಸಮಿತಿಗೆ ನಿರ್ವಹಿಸಲಾಗದಿರುವಷ್ಟು ಹೊರೆಯಿದ್ದರೆ, ರಾಜ್ಯ ಸರ್ಕಾರವು ಸಮಿತಿಗೆ ಪೂರ್ಣಾವಧಿ ರಕ್ಷಣಾ ಅಧಿಕಾರಿಯೊಬ್ಬರನ್ನು ನೇಮಕ ಮಾಡಬಹುದು.

**1.3.1 ರಕ್ಷಣಾ ಅಧಿಕಾರಿಯ (ಸಾಂಸ್ಥಿಕ ಪೋಷಣೆ) ನಿರ್ಧಿಷ್ಟವಾದ ಪಾತ್ರಗಳು ಹಾಗೂ ಜವಾವ್ದಾರಿಗಳು ಇವುಗಳನ್ನು ಒಳಗೊಂಡಿರುತ್ತವೆ:**

(i) ಮಕ್ಕಳು ನಿರ್ಗತಿಕರಾಗುವುದನ್ನು ತಡೆಗಟ್ಟಲು ಗಂಡಾಂತರದಲ್ಲಿರುವಂತಹ ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸುವುದು ಹಾಗೂ ಅವರ ಕೆಳಗೆ ಕಾರ್ಯನಿರ್ವಹಿಸುತ್ತಿರುವಂತಹ ಔಟ್‌ರೀಚ್ ಕಾರ್ಯಕರ್ತರ ಬೆಂಬಲದೊಂದಿಗೆ, ಗಂಡಾಂತರದಲ್ಲಿರುವಂತಹ ಕುಟುಂಬಗಳು ಹಾಗೂ ಮಕ್ಕಳಿಗೆ ಆಪ್ತಸಮಾಲೋಚನೆ, ಆರೋಗ್ಯ ರಕ್ಷಣೆ, ಶಿಕ್ಷಣ, ವೃತ್ತಿಪರ ಕೌಶಲ್ಯಗಳು, ಇತ್ಯಾದಿಗಳನ್ನು ಒದಗಿಸುವುದು;

(ii) ಸಂಕಷ್ಟದ ಪರಿಸ್ಥಿತಿಯಲ್ಲಿರುವಂತಹ ಮಕ್ಕಳ ಪರಿಸ್ಥಿತಿಯನ್ನು ವಿಶ್ಲೇಷಿಸುವುದು, ಬೆಂಬಲದ ಅಗತ್ಯವಿರುವ ಮಕ್ಕಳ ಸಂಖ್ಯೆ, ಸಂಸ್ಥೆಗಳಲ್ಲಿರುವಂತಹ ಮಕ್ಕಳ ಸಂಖ್ಯೆ ಹಾಗೂ ಅವರಿಗೆ ಅಗತ್ಯವಿರುವಂತಹ ಸೇವೆಗಳು, ಮಕ್ಕಳ ರಕ್ಷಣೆಯ ಸಮಸ್ಯೆಗಳಂತಹ ಮಕ್ಕಳ ವಿವಿಧ ಆಯಾಮಗಳ ದತ್ತಾಂಶವನ್ನು ಸಂಗ್ರಹಿಸುವುದು ಹಾಗೂ ಕ್ರೋಢೀಕರಿಸುವುದು;

(iii) ಸಂಗ್ರಹಿಸಿರುವಂತಹ ದತ್ತಾಂಶವನ್ನು ಆಧರಿಸಿ, ಜಿಲ್ಲಾ ಮಟ್ಟದಲ್ಲಿ ಮಕ್ಕಳಿಗೆ ಸಂಬಂಧಪಟ್ಟಂತಹ ಸೇವೆಗಳ ಸಂಪನ್ಮೂಲ ಕೈಪಿಡಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು ಹಾಗೂ ಸಂಪನ್ಮೂಲ ಮ್ಯಾಪ್ಪಿಂಗ್ ಚಟುವಟಿಕೆಯನ್ನು ನಡೆಸುವುದು;

(iv) ಜಿಲ್ಲೆಯಲ್ಲಿರುವ ಮುಕ್ತ ಆಶ್ರಯಗಳು ಒಳಗೊಂಡಂತೆ ಎಲ್ಲಾ ಸಾಂಸ್ಥಿಕ ಪೋಷಣೆ ಕಾರ್ಯಕ್ರಮಗಳ ಮಕ್ಕಳ ನಿಗಾವಣಾ ವ್ಯವಸ್ಥೆಯ ಸ್ಥಾಪನೆ ಹಾಗೂ ನಿರ್ವಹಣೆಯನ್ನು ಖಾತ್ರಿಪಡಿಸುವುದು;

(v) ಮಕ್ಕಳ ವಿಚಾರಣೆ ಹಾಗೂ ಪುನರ್‌ಸ್ಥಾಪನೆಯ ಪ್ರಕ್ರಿಯೆಗಳಲ್ಲಿ ಸಿಡಬ್ಲ್ಯೂಸಿಗೆ ಬೆಂಬಲ ನೀಡುವುದು;

(vi) ಮಕ್ಕಳ ನ್ಯಾಯ ಕಾಯ್ದೆ, 2000 ಹಾಗೂ ಅದರ ತಿದ್ದುಪಡಿ ಕಾಯ್ದೆ, 2006ರಡಿ ಎಲ್ಲಾ ಮಕ್ಕಳ ಪೋಷಣೆ ಸಂಸ್ಥೆಗಳು/ ಮಕ್ಕಳಿಗೆ ಆಶ್ರಯ ನೀಡಿರುವಂತಹ ಏಜೆನ್ಸಿಗಳ ನೊಂದಣಿಯನ್ನು ಖಾತ್ರಿಪಡಿಸುವುದು;

(vii) ಮಕ್ಕಳಿಗೆ ಆಶ್ರಯ ನೀಡಿರುವಂತಹ ಸರ್ಕಾರ ಹಾಗೂ ಎನ್‌ಜಿಒ ಎರಡರ ಬೆಂಬಲದಲ್ಲಿ ನಡೆಯುತ್ತಿರುವಂತಹ (ಬೆಂಬಲದೊಂದಿಗೆ ಅಥವಾ ಇಲ್ಲದೇ) ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳು/ ಏಜೆನ್ಸಿಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ;

(viii) ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವಂತಹ ಇತರೆ ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ;

(ix) ರಾಜ್ಯ ಮಕ್ಕಳ ರಕ್ಷಣಾ ಘಟಕದ ಸಂಯೋಜನೆಯೊಂದಿಗೆ ಜಿಲ್ಲಾ ಮಟ್ಟದಲ್ಲಿ, ಸಾಂಸ್ಥಿಕ ಪೋಷಣೆಯಲ್ಲಿ ತೊಡಗಿರುವಂತಹ ಸಿಬ್ಬಂದಿಗಳ (ಸರ್ಕಾರಿ ಹಾಗೂ ಸರ್ಕಾರೇತರ ಎರಡೂ ಸಂಸ್ಥೆಗಳ) ತರಬೇತಿ ಅಗತ್ಯಗಳನ್ನು ಗುರುತಿಸುವುದು ಹಾಗೂ ಅವರ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿಯ ವ್ಯವಸ್ಥೆಯನ್ನು ನೋಡಿಕೊಳ್ಳುವುದು;

(x) ಮಾಸಿಕ ವರದಿಯನ್ನು ಸಿದ್ಧಪಡಿಸಿ, ಅದನ್ನು ಡಿಸಿಪಿಒಗೆ ಸಲ್ಲಿಸುವುದು

**1.4. ರಕ್ಷಣಾ ಅಧಿಕಾರಿ (ಸಾಂಸ್ಥಿಕೇತರ ಪೋಷಣೆ):** ರಕ್ಷಣಾ ಅಧಿಕಾರಿಯು (ಸಾಂಸ್ಥಿಕೇತರ ಪೋಷಣೆ), ಡಿಸಿಪಿಒ ಅವರ ಮೇಲ್ವಿಚಾರಣೆಯಡಿ, ಪ್ರಾಯೋಜಕತ್ವ, ಅನಾಥಾಲಯ, ದತ್ತು, ಆಫ್ಟರ್ ಕೇರ್ ಹಾಗೂ ಜನಿಸಿದ ಶಿಶು ಯೋಜನೆಗೆ ಸಂಬಂಧಪಟ್ಟಂತಹ ಐಸಿಪಿಎಸ್‌ನ ಸಾಂಸ್ಥಿಕೇತರ ಅಂಶಗಳ ಪರಿಣಾಮಕಾರಿಯಾದ ಅನುಷ್ಠಾನವನ್ನು ಖಾತ್ರಿಪಡಿಸುತ್ತಾರೆ. ಜಿಲ್ಲೆಯ ಭೌಗೋಳಿಕ ಪ್ರದೇಶ ವ್ಯಾಪ್ತಿ ಹಾಗೂ ಮಕ್ಕಳ ಸಂಖ್ಯೆಯನ್ನು ಆಧರಿಸಿ ಪ್ರತಿ ಜಿಲ್ಲೆಯಲ್ಲಿಯೂ ಸಹ ಗರಿಷ್ಠ ಮೂರು ರಕ್ಷಣಾ ಅಧಿಕಾರಿಗಳಿರುತ್ತಾರೆ (ಸಾಂಸ್ಥಿಕೇತರ ಪೋಷಣೆ). ರಕ್ಷಣಾ ಅಧಿಕಾರಿಯ (ಸಾಂಸ್ಥಿಕೇತರ ಪೋಷಣೆ) ನಿರ್ಧಿಷ್ಟವಾದ ಪಾತ್ರಗಳು ಹಾಗೂ ಜವಾಬ್ದಾರಿಗಳು ಇವುಗಳನ್ನು ಒಳಗೊಂಡಿರುತ್ತವೆ:

(i) ಮಕ್ಕಳು ನಿರ್ಗತಿಕರಾಗುವುದನ್ನು ತಡೆಯಲು ಗಂಡಾಂತರದಲ್ಲಿರುವಂತಹ ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸುವುದು ಹಾಗೂ ಅಗತ್ಯವಿರುವ ಕಡೆ ಸಾಂಸ್ಥಿಕೇತರ ಪೋಷಣೆಗಾಗಿ ಅಗತ್ಯ ಬೆಂಬಲದ ವ್ಯವಸ್ಥೆಯನ್ನು ಮಾಡುವುದು/ಒದಗಿಸುವುದು;

(ii) ಜಿಲ್ಲೆಯಲ್ಲಿ ದತ್ತು ತೆಗೆದುಕೊಳ್ಳಲು ಅರ್ಹವಾಗಿರುವಂತಹ ಮಕ್ಕಳನ್ನು ಗುರುತಿಸಲು ಹಾಗೂ ಅಂತಹ ಮಕ್ಕಳ ಜಿಲ್ಲಾ ಮಟ್ಟದ ದತ್ತಾಂಶವನ್ನು ಸಿದ್ಧಪಡಿಸಲು ಎಸ್‌ಎಆರ್‌ಎಗೆ ಅಗತ್ಯ ಬೆಂಬಲ ನೀಡುವುದು;

(iii) ಈ ಕೆಳಕಂಡ ಕೆಲಸಗಳ ಮೂಲಕ ಎಸ್‌ಎಎ ನೆರವಿನೊಂದಿಗೆ ಜಿಲ್ಲೆಯಲ್ಲಿ ದತ್ತು ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಸುಗಮಗಾರಿಕೆ ಮಾಡುವುದು:

a) ದತ್ತು ಪಡೆಯಲು ಅರ್ಹತೆಯುಳ್ಳ ಮಕ್ಕಳ ಹಾಗೂ ದತ್ತುಗಾಗಿ ದೇಶದ ಒಳಗೆ ಪಿಎಪಿ ಗಳ ದತ್ತಾಂಶ ನಿರ್ವಹಣೆ ಹಾಗೂ ನೊಂದಣಿ;

b) ಜಿಲ್ಲೆಯೊಳಗೆ ದೇಶದ ಒಳಗಿನ ದತ್ತುವನ್ನು ಪ್ರೋತ್ಸಾಹಿಸುವುದು;

c) ದತ್ತು ನೀಡುವ ಮಕ್ಕಳು ಸರಿಯಾದ ಸ್ಥಳಕ್ಕೆ ಸರಿಯಾದ ರೀತಿಯಲ್ಲಿ ತಲುಪುವುದನ್ನು ನಿಗಾವಣೆ ಮಾಡುವುದು ಹಾಗೂ ಮಕ್ಕಳು ದತ್ತು ಪ್ರಕ್ರಿಯೆ ಪೂರ್ಣಗೊಂಡ ನಂತರದಲ್ಲಿ ಅಗತ್ಯವುಳ್ಳ ಬೆಂಬಲ ಹಾಗೂ ಅನುಸರಣೆಯನ್ನು ಒದಗಿಸುವ ಕೆಲಸಗಳನ್ನು ಎಸ್‌ಎಎಗಳು ಸರಿಯಾಗಿ ಮಾಡುತ್ತಿರುವುದನ್ನು ಖಾತ್ರಿಪಡಿಸುವುದು;

(iv) ಎಲ್ಲಾ ಮಕ್ಕಳ ರಕ್ಷಣಾ ಸಂಸ್ಥೆಗಳಲ್ಲಿರುವ (ಸಿಸಿಐ ಗಳು) ಎಲ್ಲಾ ದತ್ತು ನೀಡುವ ಅರ್ಹತೆಯುಳ್ಳ ಮಕ್ಕಳನ್ನೂ ಸಹ ದತ್ತು ವ್ಯವಸ್ಥೆಯಡಿ ಬರುವುದನ್ನು ಖಾತ್ರಿಪಡಿಸುವುದು;

(v) ಅನಾಥಾಲಯ, ಪ್ರಾಯೋಜಕತ್ವ ಹಾಗೂ ಆಫ್ಟರ್‌ಕೇರ್ ಕಾರ್ಯಕ್ರಮಗಳ ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಯನ್ನು ಕೈಗೊಳ್ಳುವುದು;

(vi)ಸಂಪನ್ಮೂಲ ಮ್ಯಾಪ್ಪಿಂಗ್ ಅನ್ನು ಕೈಗೊಳ್ಳುವುದು ಹಾಗೂ ಸಂಗ್ರಹಿಸಿರುವಂತಹ ದತ್ತಾಂಶವನ್ನು ಅಧರಿಸಿ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕೇತರ ಪೋಷಣೆಗಾಗಿ ಮಕ್ಕಳಿಗೆ ಸಂಬಂಧಪಟ್ಟ ಸೇವೆಗಳ ಸಂಪನ್ಮೂಲ ಕೈಪಿಡಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆಯನ್ನು ಅಭಿವೃದ್ಧಿಪಡಿಸಲು ಕೊಡುಗೆ ನೀಡುವುದು;

(vii)ಜಿಲ್ಲೆಯಲ್ಲಿ ಮಕ್ಕಳ ನಿಗಾವಣಾ ವ್ಯವಸ್ಥೆಗಾಗಿ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು;

(viii) ಮಕ್ಕಳ ವಿಚಾರಣೆ ಹಾಗೂ ಪುನಃಸ್ಥಾಪನೆಯ ಪ್ರಕ್ರಿಯೆಯಲ್ಲಿ ಸಿಡಬ್ಲ್ಯೂಸಿ ಅನ್ನು ಬೆಂಬಲಿಸುವುದು;

(ix) ಜಿಲ್ಲೆಯಲ್ಲಿ ಎಸ್‌ಎಎಗಳು ಒಳಗೊಂಡಂತೆ ಎಲ್ಲಾ ಮಕ್ಕಳ ಪೋಷಣೆ ಸಂಸ್ಥೆಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ;

(x) ಮಕ್ಕಳಿಗಾಗಿ ಸಾಂಸ್ಥಿಕೇತರ ಸೇವೆಗಳಲ್ಲಿ ಒಳಗೊಂಡಿರುವಂತಹ ಎಲ್ಲಾ ಸಿಬ್ಬಂದಿಗಳಿಗಾಗಿ (ಸರ್ಕಾರ ಹಾಗೂ ಸರ್ಕಾರೇತರ) ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿಗಳಿಗೆ ಎಸ್‌ಎಆರ್‌ಎ ಹಾಗೂ ಎಸ್‌ಸಿಪಿಯುದೊಂದಿಗೆ ಸಂಯೋಜಿಸುವುದು;

(xi) ಜಿಲ್ಲೆಯಲ್ಲಿ ದತ್ತು ಕಾರ್ಯಕ್ರಮದ ಸ್ಥಿತಿಗತಿಯ ಕುರಿತಂತೆ ಎಸ್‌ಎಆರ್‌ಎಗೆ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು.

**1.5 ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಗಳು:** ಡಿಸಿಪಿಓ ಅವರ ಮೇಲ್ವಿಚಾರಣೆಯಡಿ, ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಯು[4] ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳ ಸಂಯೋಜನೆ ಹಾಗೂ ಮೇಲ್ವಿಚಾರಣೆಯನ್ನು ಮಾಡಬೇಕು. ಆತ/ಆಕೆ ಜಿಲ್ಲಾ ಮಟ್ಟದಲ್ಲಿ ಜೆಜೆಬಿಗಳಿಗೆ ಬೆಂಬಲವನ್ನು ಒದಗಿಸುತ್ತಾರೆ. ಜಿಲ್ಲೆಯ ಭೌಗೋಳಿಕ ಪ್ರದೇಶ ವ್ಯಾಪ್ತಿ ಹಾಗೂ ಮಕ್ಕಳ ಸಂಖ್ಯೆಯನ್ನು ಆಧರಿಸಿ ಪ್ರತಿ ಜಿಲ್ಲೆಯಲ್ಲಿ ಗರಿಷ್ಠ ಮೂರು ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಗಳಿರುತ್ತಾರೆ[4]. ಒಂದು ವೇಳೆ ಜಿಲ್ಲೆಯ ಮಕ್ಕಳ ನ್ಯಾಯ ಮಂಡಳಿಗೆ ಹೆಚ್ಚು ಹೊರೆ ಇದ್ದರೆ, ರಾಜ್ಯ ಸರ್ಕಾರವು ಮಂಡಳಿಗೆ ಪೂರ್ಣಾವಧಿ ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಯೊಬ್ಬರನ್ನು ನೇಮಕ ಮಾಡಬಹುದು. ಅವರ ನಿರ್ಧಿಷ್ಟವಾದ ಪಾತ್ರಗಳು ಹಾಗೂ ಜವಾಬ್ದಾರಿಗಳು ಇವುಗಳನ್ನು ಒಳಗೊಂಡಿರುತ್ತವೆ:

(i) ಜಿಲ್ಲೆಯಲ್ಲಿನ ಮಕ್ಕಳ ಮೇಲಿನ ಆರೋಪದ ಆಯಾಮಗಳಿಗೆ ಸಂಬಂಧಪಟ್ಟ ದತ್ತಾಂಶವನ್ನು ಸಂಗ್ರಹಿಸುವುದು ಹಾಗೂ ಕ್ರೋಢೀಕರಿಸುವುದು;

(ii) ಕ್ರಮಬದ್ಧವಾಗಿ ಜೆಜೆಬಿಯ ಸಭೆಗಳಿಗೆ ಹಾಜರಾಗುವುದು;

(iii) ಜೆಜೆಬಿಗೆ ವಿಚಾರಣೆಗಳನ್ನು ನಡೆಸಲು ಬೆಂಬಲಿಸುವುದು;

---

4 *ಲಭ್ಯವಿರುವ ಕಡೆ ಪ್ರೊಬೇಷನ್ ಆಫ್ ಅಫೆಂಡರ್ಸ್ ಕಾಯ್ದೆಯಡಿ ನೇಮಕವಾಗಿರುವಂತಹ ಪ್ರೊಬೇಷನ್ ಅಧಿಕಾರಿಗಳು ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಗಳ ಕೆಲಸವನ್ನೂ ಸಹ ನಿರ್ವಹಿಸಬಹುದು.*

(iv) ಸಾಮಾಜಿಕ ತಪಾಸಣಾ ವರದಿಗಳನ್ನು ಸಿದ್ಧಪಡಿಸುವುದು ಹಾಗೂ ಸಲ್ಲಿಸುವುದು;

(v) ಪ್ರಕರಣಗಳ ಕಡತಗಳು ಹಾಗೂ ಇತರೆ ರಿಜಿಸ್ಟರ್‌ಗಳ ನಿರ್ವಹಣೆ;

(vi) ಜೆಜೆಬಿಯಿಂದ ಮನೆಗೆ/ ಫಿಟ್ ವ್ಯಕ್ತಿ/ ಫಿಟ್ ಸಂಸ್ಥೆಗೆ ಮಕ್ಕಳಿಗೆ ಬೆಂಗಾವಲನ್ನು ಒದಗಿಸುವುದು;

(vii) ಮೇಲ್ವಿಚಾರಣೆಯಡಿ ಬಿಡುಗಡೆಯಾಗಿರುವಂತಹ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಹಾಗೂ ಬಿಡುಗಡೆಯ ನಂತರದ ಅನುಸರಣಾ ಭೇಟಿಗಳನ್ನು ಕೈಗೊಳ್ಳುವುದು;

(viii) ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಪುನರ್ವಸತಿ ಹಾಗೂ ಸಾಮಾಜಿಕ ಮರುಏಕೀಕರಣ ಸುಗಮಗಾರಿಕೆಗಾಗಿ ಸ್ವಯಂಸೇವಾ ಕ್ಷೇತ್ರದೊಂದಿಗೆ ಸಂಪರ್ಕಗಳನ್ನು ಸ್ಥಾಪಿಸುವುದು.

ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಯು ಕಾನೂನು ಹಿನ್ನೆಲೆಯನ್ನು ಹೊಂದಿರಬೇಕು ಹಾಗೂ ಮಕ್ಕಳ ಹಕ್ಕುಗಳು ಹಾಗೂ ರಕ್ಷಣಾ ವಿಷಯಗಳ ಬಗ್ಗೆ ಆಳವಾದ ಅರಿವನ್ನು ಹೊಂದಿರಬೇಕು. ಆತ/ಆಕೆ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಉಚಿತವಾಗಿ ಕಾನೂನು ನೆರವಿನ ಸೇವೆಗಳನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ. ಜೊತೆಗೆ ಆತ/ಆಕೆ, ಅಗತ್ಯವಿರುವಾಗ, ಮಕ್ಕಳ ನ್ಯಾಯ ಕಾಯ್ದೆಯ ವ್ಯಾಪ್ತಿ ಅಡಿಗೆ ಬರುವಂತಹ ಎಲ್ಲಾ ಮಕ್ಕಳಿಗೆ ಸಂಬಂಧಿಸಿದಂತಹ ಕಾನೂನು ವಿಷಯಗಳಲ್ಲಿ ಸಿಡಬ್ಲ್ಯೂಸಿ ಹಾಗೂ ಜೆಜೆಬಿಗೆ ಅಗತ್ಯ ಬೆಂಬಲವನ್ನು ಒದಗಿಸಬೇಕು.

**1.6. ಆಪ್ತಸಮಾಲೋಚಕ:** ಜಿಲ್ಲಾಮಟ್ಟದಲ್ಲಿ ಪ್ರತಿ ಮಕ್ಕಳ ರಕ್ಷಣಾ ಘಟಕವೂ ಸಹ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತಹ ಮಕ್ಕಳು, ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳು ಹಾಗೂ ಅವರ ಪೋಷಕರು ಮತ್ತು ಕುಟುಂಬಗಳಿಗೆ ಆಪ್ತಸಮಾಲೋಚನೆ ಒದಗಿಸಲು ಓರ್ವ ಆಪ್ತಸಮಾಲೋಚಕರನ್ನು ಹೊಂದಿರಬೇಕು. ಈ ಆಪ್ತಸಮಾಲೋಚಕರು ಜಿಲ್ಲಾ ಮಟ್ಟದಲ್ಲಿ ಅಗತ್ಯದ ಪ್ರಕಾರ ಸಿಡಬ್ಲ್ಯೂಸಿ ಹಾಗೂ ಜೆಜೆಬಿಯೊಂದಿಗೂ ಕೆಲಸ ನಿರ್ವಹಿಸಬೇಕು.

**1.7. ಸಾಮಾಜಿಕ ಕಾರ್ಯಕರ್ತ:** ಪ್ರತಿ ಮಕ್ಕಳ ರಕ್ಷಣಾ ಘಟಕವೂ ಸಹ ಇಬ್ಬರು ಸಾಮಾಜಿಕ ಕಾರ್ಯಕರ್ತರನ್ನು (ಓರ್ವ ಮಹಿಳೆ) ಹೊಂದಿರಬೇಕು. ಇವರು ಡಿಸಿಪಿಓ ನಿಯೋಜಿಸಿದ ಪ್ರಕಾರ ಉಪ ವಿಭಾಗಗಳ ಸಂಬಂಧಪಟ್ಟ ತಮ್ಮ ಕ್ಲಸ್ಟರ್‌ನಲ್ಲಿನ ಕ್ಷೇತ್ರಮಟ್ಟದ ಚಟುವಟಿಕೆಗಳ ಸಂಯೋಜನೆಗೆ ಜವಾಬ್ದಾರರಾಗಿರುತ್ತಾರೆ. ಈ ಸಾಮಾಜಿಕ ಕಾರ್ಯಕರ್ತರಿಗೆ ಕ್ಷೇತ್ರಮಟ್ಟದ ಮಧ್ಯಸ್ಥಿಕೆಗಳನ್ನು ನಡೆಸಲು ಔಟ್‌ರೀಚ್ ಕಾರ್ಯಕರ್ತರ ಸಹಾಯವಿರುತ್ತದೆ. ಓರ್ವ ಮಹಿಳೆಯನ್ನು ಒಳಗೊಂಡಂತೆ ಎರಡು ಸಾಮಾಜಿಕ ಕಾರ್ಯಕರ್ತರು ಎಸ್‌ಜೆಪಿಯುಗೆ ಅಗತ್ಯವಿರುವಾಗ ಕರ್ತವ್ಯ ನಿರ್ವಹಿಸಲು ಅಗತ್ಯ ಸಹಾಯ ಒದಗಿಸುತ್ತಾರೆ.

**1.8 ಔಟ್‌ರೀಚ್ ಕಾರ್ಯಕರ್ತರು:** ಜಿಲ್ಲಾಮಟ್ಟದಲ್ಲಿರುವ ಪ್ರತಿ ಮಕ್ಕಳ ರಕ್ಷಣಾ ಘಟಕವು ಮೂರು ಔಟ್‌ರೀಚ್ ಕಾರ್ಯಕರ್ತರನ್ನು ಹೊಂದಿರುತ್ತವೆ. ಇವರು ರಕ್ಷಣಾ ಅಧಿಕಾರಿಗಳು ಹಾಗೂ ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಗಳಿಗೆ ವರದಿ ಮಾಡಿಕೊಳ್ಳುತ್ತಾರೆ. ಪ್ರತಿ ಔಟ್‌ರೀಚ್ ಕಾರ್ಯಕರ್ತರೂ ಸಹ ತಮ್ಮ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಅಧಿಕಾರಿಗೆ ಅಗತ್ಯ ನೆರವನ್ನು ಒದಗಿಸುತ್ತಾರೆ.

ಅವರು ಮಕ್ಕಳ ಜಿಲ್ಲಾ ರಕ್ಷಣಾ ಘಟಕ ಹಾಗೂ ಸಮುದಾಯದ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸಬೇಕು ಹಾಗೂ ಗಂಡಾಂತರದಲ್ಲಿರುವಂತಹ ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸಿ ಅವರಿಗೆ ಅಗತ್ಯ ಬೆಂಬಲ ಸೇವೆಗಳನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ. ಸಮುದಾಯ/ ತಾಲ್ಲೂಕು ಮಟ್ಟಗಳಲ್ಲಿ ಅಂಗನವಾಡಿ ಕಾರ್ಯಕರ್ತರು ಹಾಗೂ ಪಂಚಾಯಿತಿ/ ಸ್ಥಳೀಯ ಸಂಸ್ಥೆಗಳ ಸದಸ್ಯರೊಂದಿಗೆ ಸಂಪರ್ಕಜಾಲ ಹಾಗೂ ಸಂಪರ್ಕವನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಈ ಔಟ್‌ರೀಚ್ ಕಾರ್ಯಕರ್ತರು ಹೊಂದಿರುತ್ತಾರೆ. ಜೊತೆಗೆ ಇವರು ಸ್ಥಳೀಯ ಯುವಜನರಲ್ಲಿ ಸ್ವಯಂಸೇವೆಯನ್ನು ಪ್ರೋತ್ಸಾಹಿಸಿ ಅವರನ್ನು ತಾಲ್ಲೂಕು ಹಾಗೂ ಸಮುದಾಯ ಮಟ್ಟಗಳಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ರಮದ ಚಟುವಟಿಕೆಗಳಲ್ಲಿ ಭಾಗವಹಿಸುವ ಪ್ರಯತ್ನ ಮಾಡಬೇಕು.

## 2.ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ (ಎಸ್‌ಸಿಪಿಸಿ) ಪಾತ್ರಗಳು ಹಾಗೂ ಜವಾಬ್ದಾರಿಗಳು

**2.1 ರಾಜ್ಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ:** ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯು (ಎಸ್‌ಸಿಪಿಎಸ್),ರಾಜ್ಯ ಸರ್ಕಾರ/ ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಸ್ತುತ ಮಕ್ಕಳ ಕಲ್ಯಾಣ/ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ನೋಡಿಕೊಳ್ಳುತ್ತಿರುವಂತಹ ರಾಜ್ಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರ ಒಟ್ಟಾರೆ ಆಡಳಿತ ನಿಯಂತ್ರಣ ಹಾಗೂ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುತ್ತದೆ. ಆತ/ಆಕೆ, ರಾಜ್ಯ ಮಕ್ಕಳ ರಕ್ಷಣಾ ನೀತಿ ಹಾಗೂ ರಾಜ್ಯ ಮಕ್ಕಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಐಸಿಪಿಎಸ್ ಹಾಗೂ ಇತರೆ ಎಲ್ಲಾ ಮಕ್ಕಳ ರಕ್ಷಣ ನೀತಿಗಳು ಹಾಗೂ ಕಾರ್ಯಕ್ರಮಗಳ ಪರಿಣಾಮಕಾರಿಯಾದ ಅನುಷ್ಠಾನದ ಕಾರ್ಯಗಳನ್ನು ಮುನ್ನಡೆಸುತ್ತಾರೆ. ಆತ/ಆಕೆ, ಪ್ರತಿ ಜಿಲ್ಲೆಯಲ್ಲಿಯೂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎಸ್‌ಸಿಪಿಸಿಆರ್), ಮಕ್ಕಳ ಕಲ್ಯಾಣ ಸಮಿತಿಗಳು (ಸಿಡಬ್ಲ್ಯೂಸಿಗಳು), ಮಕ್ಕಳ ನ್ಯಾಯ ಮಂಡಳಿಗಳು (ಜೆಜೆಬಿಗಳು) ಹಾಗೂ ಮಕ್ಕಳ ವಿಶೇಷ ಪೊಲೀಸ್ ಘಟಕಗಳ (ಎಸ್‌ಜೆಪಿಯುಗಳು) ಸ್ಥಾಪನೆಯನ್ನು ಖಾತ್ರಿಪಡಿಸಬೇಕು. ಮಕ್ಕಳಿಗೆ ಆಶ್ರಯ ನೀಡಿರುವಂತಹ ಎಲ್ಲಾ ಸ್ವಯಂಸೇವಾ/ ದತ್ತಿ ಸಂಸ್ಥೆಗಳೂ ಸಹ ಮಕ್ಕಳ ನ್ಯಾಯ ಕಾಯ್ದೆ, 2000 ರಡಿ ಕಡ್ಡಾಯವಾಗಿ ಪರವಾನಗಿ ಪಡೆಯುವುದನ್ನು ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು ಖಾತ್ರಿಪಡಿಸಬೇಕು. ಆತ/ ಆಕೆ ಗೃಹ, ಆರೋಗ್ಯ, ಕಾರ್ಮಿಕ, ಶಿಕ್ಷಣ, ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಯುವಜನ ಸೇವೆಗಳು ಒಳಗೊಂಡಂತೆ ಇತರೆ ಎಲ್ಲಾ ಪೂರಕ ಇಲಾಖೆಗಳೊಂದಿಗೆ ಅಂತರ–ಕ್ಷೇತ್ರೀಯ ಸಹಭಾಗಿತ್ವಗೊಳಿಸುವಿಕೆ, ಸುಗಮಗಾರಿಕೆಯನ್ನು ಒದಗಿಸಬೇಕು. ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು, ಐಸಿಪಿಎಸ್ ಅನುಷ್ಠಾನ ಹಾಗೂ ಪೂರಕ ನಿಧಿ ಹಂಚಿಕೆಗೆ ಸಂಬಂಧಪಟ್ಟಂತಹ ಎಲ್ಲಾ ಆಡಳಿತ ನಿರ್ಧಾರಗಳನ್ನು ಕೈಗೊಳ್ಳಲು ಸಶಕ್ತರರಾಗಿರುತ್ತಾರೆ.

ರಾಜ್ಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರು, ಐಸಿಪಿಎಸ್‌ನ ವಿವಿಧ ಕಾರ್ಯಕ್ರಮ ಅಂಶಗಳಡಿ ಸ್ವಯಂಸೇವಾ ಸಂಸ್ಥೆಗಳು ಸಲ್ಲಿಸುವಂತಹ ಪ್ರಸ್ತಾವನೆಗಳು/ ಯೋಜನೆಗಳ ಪರಿಶೀಲನೆ ಹಾಗೂ ತಿಳುವಳಿಕೆ ನೀಡುವ ಸಲುವಾಗಿ ಸ್ಥಾಪಿಸಲ್ಪಟ್ಟಿರುವಂತಹ ಯೋಜನಾ ಮಂಜೂರಾತಿ ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ಹಣಕಾಸಿನ ಅಧಿಕಾರವನ್ನು ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರು ಹೊಂದಿದ್ದು, ಆತ/ಆಕೆ ರಾಜ್ಯ/ ಕೇಂದ್ರಾಡಳಿತ ಪ್ರದೇಶ ಮಟ್ಟದಲ್ಲಿ ಐಸಿಪಿಎಸ್ ಅಡಿ ಅಧಿಕೃತ ಹಣ ಹಂಚಿಕೆಗೆ ಅಂತಿಮ ಪ್ರಾಧಿಕಾರವಾಗಿರುತ್ತಾರೆ.

**2.2 ಮಕ್ಕಳ ರಕ್ಷಣಾ ನಿರ್ದೇಶಕರು/ ಆಯುಕ್ತರು:** ಆತ/ಆಕೆ ರಾಜ್ಯಮಟ್ಟದಲ್ಲಿ ಸೊಸೈಟಿಯ ಆಡಳಿತ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಬೇಕು ಹಾಗೂ ಐಸಿಪಿಎಸ್‌ನ ಅನುಷ್ಠಾನದ ಜೊತೆಗೆ ಸೊಸೈಟಿಯ ಒಟ್ಟಾರೆ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಹಾಗೂ ನಿಗಾವಣೆಗೆ ಜವಾಬ್ದಾರರಾಗಿರುತ್ತಾರೆ. ಆತ/ಆಕೆ ರಾಜ್ಯ/ ಕೇಂದ್ರಾಡಳಿತದ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ (ಎಸ್‌ಸಿಪಿಎಸ್), ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ (ಎಸ್‌ಎಆರ್‌ಎ) ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ (ಡಿಸಿಪಿಯುಗಳು) ಕೆಲಸಗಳ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ನಿರ್ದೇಶಕ/ ಆಯುಕ್ತರು, ಎಸ್‌ಸಿಪಿಎಸ್‌ನ ಸಿಬ್ಬಂದಿಗಳ ಸಹಾಯದೊಂದಿಗೆ, ರಾಜ್ಯ, ಜಿಲ್ಲಾ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಐಸಿಪಿಎಸ್‌ನ ಪರಿಣಾಮಕಾರಿಯಾದ ಅನುಷ್ಠಾನ ಹಾಗೂ ಇತರೆ ಮಕ್ಕಳ ರಕ್ಷಣಾ ನೀತಿಗಳು ಹಾಗೂ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮಕ್ಕಳ ರಕ್ಷಣಾ ನಿರ್ದೇಶಕ/ ಆಯುಕ್ತರು ಐಸಿಪಿಎಸ್ ಅನುಷ್ಠಾನಗೊಳಿಸುವ ಏಜೆನ್ಸಿಗಳು/ ಸಂಸ್ಥೆಗಳು ಹಾಗೂ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಇತರೆ ಎಲ್ಲಾ ಮಕ್ಕಳ ರಕ್ಷಣಾ ಕಾರ್ಯಕ್ರಮಗಳಿಗೆ ಸಮಯೋಚಿತವಾಗಿ ಅಗತ್ಯವಿರುವಂತಹ ಹಣ ಬಿಡುಗಡೆಯಾಗುವುದನ್ನು ಖಾತ್ರಿಪಡಿಸಬೇಕು.

**2.3 ಕಾರ್ಯಕ್ರಮ ವ್ಯವಸ್ಥಾಪಕರು (ಮಕ್ಕಳ ರಕ್ಷಣೆ):** ಕಾರ್ಯಕ್ರಮ ವ್ಯವಸ್ಥಾಪಕರು, ಮಕ್ಕಳ ರಕ್ಷಣೆ, ಇವರು ರಾಜ್ಯ ಮಟ್ಟಗಳಲ್ಲಿ, ಕಾರ್ಯಕ್ರಮ ಅಧಿಕಾರಿ (ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳು (ಸಿಎನ್‌ಸಿಪಿ), ಕಾರ್ಯಕ್ರಮ ಅಧಿಕಾರಿ (ಕಾನೂನಿನೊಂದಿಗೆ ಸಂಘರ್ಷದಲ್ಲಿರುವ (ಜೆಸಿಎಲ್) ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ನೆರವಿನೊಂದಿಗೆ ಅಗತ್ಯವುಳ್ಳ ಮಕ್ಕಳ ಕಾರ್ಯಕ್ರಮಗಳು ಹಾಗೂ ಸೇವೆಗಳನ್ನು ಸಂಯೋಜಿಸುವುದು ಹಾಗೂ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆತ/ ಆಕೆ, ಮಕ್ಕಳ ಕಲ್ಯಾಣ ಸಮಿತಿಗಳು, ಮಕ್ಕಳ ನ್ಯಾಯ ಮಂಡಳಿಗಳು, ಎಸ್‌ಜೆಪಿಯು, ರಾಜ್ಯ ಸಲಹಾ ಮಂಡಳಿ, ಇತ್ಯಾದಿಗಳಂತಹ ಮಕ್ಕಳ ನ್ಯಾಯ ಕಾಯ್ದೆಯಡಿ ಬರುವ ಶಾಸಕಾಂಗ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಅಗತ್ಯ ಸುಗಮಗಾರಿಕೆ ಹಾಗೂ ಬೆಂಬಲವನ್ನು ನೀಡಬೇಕು. ಜೊತೆಗೆ ಕಾರ್ಯಕ್ರಮ ವ್ಯವಸ್ಥಾಪಕರು (ಮಕ್ಕಳ ರಕ್ಷಣೆ) ರಾಜ್ಯದಲ್ಲಿರುವ ಮಕ್ಕಳಿಗೆ ಆಶ್ರಯವನ್ನು ನೀಡಿರುವಂತಹ ಎಲ್ಲಾ ಸಂಸ್ಥೆಗಳು/ ಏಜೆನ್ಸಿಗಳ ಮೇಲ್ವಿಚಾರಣೆ ಹಾಗೂ ನಿಗಾವಣೆಯನ್ನೂ ಸಹ ಖಾತ್ರಿಪಡಿಸಬೇಕು. ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳು ಹಾಗೂ ರಾಜ್ಯಮಟ್ಟದಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತಹ ಮಕ್ಕಳ ಕಾರ್ಯಕ್ರಮಗಳು ಹಾಗೂ ಸೇವೆಗಳ ಅನುಷ್ಠಾನಕ್ಕಾಗಿ ಅಗತ್ಯವಿರುವ ಹಣವನ್ನು ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಮಕ್ಕಳ ರಕ್ಷಣಾ ನಿರ್ದೇಶಕರು/ ಆಯುಕ್ತರಿಗೆ ಅಗತ್ಯ ಬೆಂಬಲವನ್ನೂ ಒದಗಿಸಬೇಕು.

**2.4 ಕಾರ್ಯಕ್ರಮ ವ್ಯವಸ್ಥಾಪಕರು (ತರಬೇತಿ, ಐಇಸಿ & ವಕಾಲತ್ತು):** ಆತ/ಆಕೆ ರಾಜ್ಯಮಟ್ಟದಲ್ಲಿ ಐಸಿಪಿಎಸ್ ಅಡಿ ಬರುವ ಕಾಯನಿರ್ವಾಹಕರಿಗಾಗಿ ನಡೆಸಲಾಗುವ ಎಲ್ಲಾ ತರಬೇತಿ ಮತ್ತು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳ ಸಂಯೋಜನೆ ಹಾಗೂ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುತ್ತಾರೆ. ಕಾರ್ಯಕ್ರಮ ಅಧಿಕಾರಿಯ (ತರಬೇತಿ) ಸಹಾಯದೊಂದಿಗೆ, ಆತ/ ಆಕೆ, ಎಲ್ಲಾ ಕಾರ್ಯನಿರ್ವಾಹಕರ (ಸರ್ಕಾರಿ & ಸರ್ಕಾರೇತರ) ಹಾಗೂ ಪೂರಕ ವ್ಯವಸ್ಥೆಗಳು (ಪೊಲೀಸ್, ನ್ಯಾಯಾಂಗ, ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು, ಸ್ವಯಂಸೇವಾ ಸಂಸ್ಥೆ ಹಾಗೂ ಸಾರ್ವಜನಿಕರು) ತರಬೇತಿ ಅಗತ್ಯಗಳನ್ನು ಅಂದಾಜಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆತ/ಆಕೆ, ರಾಜ್ಯಮಟ್ಟದಲ್ಲಿ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿಯ ಉದ್ದೇಶಗಳಿಗಾಗಿ ಎನ್‌ಐಪಿಸಿಸಿಡಿ ಹಾಗೂ ಅದರ ಕೇಂದ್ರ/ ರಾಜ್ಯ ಸರ್ಕಾರಗಳ ಪ್ರಾದೇಶಿಕ ಕೇಂದ್ರಗಳು ಹಾಗೂ ಇತರೆ ತರಬೇತಿ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಹೊಂದಿರತಕ್ಕದ್ದು.

ಕಾರ್ಯಕ್ರಮ ವ್ಯವಸ್ಥಾಪಕರು (ತರಬೇತಿ, ಐಇಸಿ & ವಕಾಲತ್ತು) ಇವರು ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ ಎಲ್ಲಾ ಐಇಸಿ ಹಾಗೂ ವಕಾಲತ್ತು ಕಾರ್ಯಕ್ರಮಗಳಿಗೆ ಜವಾಬ್ದಾರರಾಗಿರುತ್ತಾರೆ. ಆತ/ ಆಕೆ, ಕಾರ್ಯಕ್ರಮ ಅಧಿಕಾರಿ (ಐಇಸಿ ಹಾಗೂ ವಕಾಲತ್ತು) ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಬೆಂಬಲದೊಂದಿಗೆ, ಬಾಲ್ಯವಿವಾಹ ಹೆಣ್ಣು ಭ್ರೂಣಹತ್ಯೆ, ಹೆಣ್ಣು ಮಗುವಿನ ವಿರುದ್ಧ ತಾರತಮ್ಯತೆ, ಇತ್ಯಾದಿಗಳಂತಹ ಸಾಮಾಜಿಕ ನಡವಳಿಕೆಗಳು ಹಾಗೂ ಸಾಂಪ್ರದಾಯಿಕ ಅಭ್ಯಾಸಗಳನ್ನು ಬದಲಾಯಿಸುವಂತಹ ಮಕ್ಕಳ ರಕ್ಷಣಾ ವಿಷಯಗಳಿಗೆ ಸಂಬಂಧಪಟ್ಟ ಎಲ್ಲಾ ಅರಿವು ಮೂಡಿಸುವ ಚಟುವಟಿಕೆಗಳನ್ನು ಸಂಯೋಜಿಸಬೇಕು. ಕಾರ್ಯಕ್ರಮ ವ್ಯವಸ್ಥಾಪಕರು (ತರಬೇತಿ, ಐಇಸಿ & ವಕಾಲತ್ತು) ಇವರು, ಕಾರ್ಯಕ್ರಮ ಅಧಿಕಾರಿಯೊಂದಿಗೆ (ಐಇಸಿ & ವಕಾಲತ್ತು) ಮಕ್ಕಳ ಹಕ್ಕುಗಳ ಕುರಿತು ಸಾರ್ವಜನಿಕರಲ್ಲಿ ಅರಿವನ್ನು ಹೆಚ್ಚಿಸುವ ಸಲುವಾಗಿ, ರಾಜ್ಯ ಐಇಸಿ ಅಗತ್ಯಗಳನ್ನು ಅಂದಾಜಿಸುವ ಹಾಗೂ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟಂತೆ ಸೂಕ್ತವಾದ ವಕಾಲತ್ತು ಯೋಜನೆ ಹಾಗೂ ಮಾಧ್ಯಮ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ.

15ಕ್ಕಿಂತ ಕಡಿಮೆ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಲ್ಲಿ ಕೇವಲ ಓರ್ವ ಕಾರ್ಯಕ್ರಮ ಅಧಿಕಾರಿಯ ಹುದ್ದೆಯಿರುತ್ತದೆ. ಇಂತಹ ರಾಜ್ಯಗಳಲ್ಲಿ ಮಕ್ಕಳ ರಕ್ಷಣೆ ಹಾಗೂ ತರಬೇತಿ, ಐಇಸಿ ಹಾಗೂ ವಕಾಲತ್ತಿನ ಕೆಲಸಗಳನ್ನು ಇವರೇ ನೋಡಿಕೊಳ್ಳಬೇಕು ಹಾಗೂ ಇವರನ್ನು ಕಾರ್ಯಕ್ರಮ ವ್ಯವಸ್ಥಾಪಕ ಎಂದು ಕರೆಯಬಹುದು.

**2.5 ಕಾರ್ಯಕ್ರಮ ಅಧಿಕಾರಿ (ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳು, ಸಿಎನ್‌ಸಿಪಿ):** ಆತ/ಆಕೆ ಕಾರ್ಯಕ್ರಮ ವ್ಯವಸ್ಥಾಪಕರು (ಮಕ್ಕಳ ರಕ್ಷಣೆ) ಇವರ ಒಟ್ಟಾರೆ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸಬೇಕು ಹಾಗೂ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ (ಎಸ್‌ಸಿಪಿಎಸ್) ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳಲ್ಲಿ ಅವರಿಗೆ ಅಗತ್ಯ ಸಹಾಯವನ್ನು ಒದಗಿಸಬೇಕು. ಜೊತಗೆ ಆತ/ಆಕೆ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ನಿಗಾವಣೆಗಾಗಿ ಡಿಸಿಪಿಯು ಅವರೊಂದಿಗೆ ಸಂಯೋಜಿಸುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ.

**2.6 ಕಾರ್ಯಕ್ರಮ ಅಧಿಕಾರಿ (ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು, ಜೆಸಿಎಲ್):** ಆತ/ಆಕೆ ಕಾರ್ಯಕ್ರಮ ವ್ಯವಸ್ಥಾಪಕರು (ಮಕ್ಕಳ ರಕ್ಷಣೆ) ಇವರ ಒಟ್ಟಾರೆ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುವರು ಹಾಗೂ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ (ಎಸ್‌ಸಿಪಿಎಸ್), ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳಲ್ಲಿ ಇವರಿಗೆ ಅಗತ್ಯ ಸಂಯೋಜನೆ ನೀಡುವರು. ಜೊತೆಗೆ ಆತ/ ಆಕೆ, ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತಹ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ನಿಗಾವಣೆಗಾಗಿ ಡಿಸಿಪಿಯುಗಳೊಂದಿಗೆ ಸಂಯೋಜಿಸುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ.

**2.7 ಕಾರ್ಯಕ್ರಮ ಅಧಿಕಾರಿ (ತರಬೇತಿ):** ಆತ/ಆಕೆ, ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಐಸಿಪಿಎಸ್ ಕಾರ್ಯಕ್ರಮದಡಿ ಕಾರ್ಯನಿರ್ವಸಹಿಸುತ್ತಿರುವಂತಹ ಕಾರ್ಯಕರ್ತರಿಗೆ ಅಗತ್ಯ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಸಂಯೋಜಿಸಲು ಕಾರ್ಯಕ್ರಮ ವ್ಯವಸ್ಥಾಪಕರೊಂದಿಗೆ (ತರಬೇತಿ, ಐಇಸಿ & ವಕಾಲತ್ತು) ಬೆಂಬಲ ಒದಗಿಸಬೇಕು. ಆತ/ಆಕೆ ರಾಜ್ಯ ಮಟ್ಟಗಳಲ್ಲಿ ಎಲ್ಲಾ ಕಾರ್ಯಕರ್ತರು (ಸರ್ಕಾರಿ & ಸರ್ಕಾರೇತರ) ಹಾಗೂ ಪೂರಕ ವ್ಯವಸ್ಥೆಗಳ ತರಬೇತಿ ಅಗತ್ಯಗಳನ್ನು ಅಂದಾಜಿಸಲು, ಯೋಜನೆ ರೂಪಿಸುವಲ್ಲಿ ನೆರವಾಗುವುದು, ಎಲ್ಲಾ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ರೂಪಿಸುವಿಕೆ, ಸಂಯೋಜನೆ ಹಾಗೂ ಅನುಷ್ಠಾನಗೊಳಿಸುವಲ್ಲಿ ಅಗತ್ಯ ಬೆಂಬಲವನ್ನು ಒದಗಿಸುವರು.

**2.8. ಕಾರ್ಯಕ್ರಮ ಅಧಿಕಾರಿ (ಐಇಸಿ ಹಾಗೂ ವಕಾಲತ್ತು):** ಆತ/ಆಕೆ ಕಾರ್ಯಕ್ರಮ ವ್ಯವಸ್ಥಾಪಕರಿಗೆ (ತರಬೇತಿ, ಐಇಸಿ ಹಾಗೂ ವಕಾಲತ್ತು), ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಎಲ್ಲಾ ಐಇಸಿ ಹಾಗೂ ವಕಾಲತ್ತು ಉಪಕ್ರಮಗಳ ಸಂಯೋಜನೆ ಹಾಗೂ ಮೇಲ್ವಿಚಾರಣೆಯ ಕಾರ್ಯಗಳಿಗೆ ಅಗತ್ಯ ಬೆಂಬಲವನ್ನು ಒದಗಿಸಬೇಕು. ಆತ/ಆಕೆ ಡಿಸಿಪಿಯು ಸಂಯೋಜನೆಯೊಂದಿಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಐಇಸಿ ಸಾಮಗ್ರಿಗಳ ಅಂದಾಜಿಸುವಿಕೆಗೆ ಅಗತ್ಯ ನೆರವನ್ನು ಒದಗಿಸುವುದು ಹಾಗೂ ಎಲ್ಲಾ ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ನಿಗಾವಣೆ ಹಾಗೂ ಮೌಲ್ಯಮಾಪನಕ್ಕಾಗಿ ಅಗತ್ಯ ಸಾಧನಗಳನ್ನು ಅಂದಾಜಿಸುವ ಕೆಲಸಗಳಲ್ಲಿ ಅಗತ್ಯ ನೆರವನ್ನು ಒದಗಿಸಬೇಕು.

*(ಐಇಸಿ– ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ)–IEC- Information Education and Communication)*

## 3. ಆಯ್ಕೆ ಹಾಗೂ ನೇಮಕಾತಿ ಪ್ರಕ್ರಿಯೆ

**3.1 ಈ ಗಾತ್ರದ ಹಾಗೂ ಸ್ವರೂಪದ ಕಾರ್ಯಕ್ರಮಕ್ಕೆ, ಐಸಿಪಿಎಸ್ ನ್ನು** ಸ್ಥಾಪಿಸಲು ಹಾಗೂ ಯಶಸ್ವಿಯಾಗಿ ನಡೆಸಲು ಸಮರ್ಪಿತ ವೃತ್ತಿಪರರ ತಂಡದ ಅಗತ್ಯವಿದೆ. ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಗುತ್ತಿಗೆ

ಆಧಾರದ ಮೇಲೆ ಸಿಬ್ಬಂದಿಗಳ ಸೇವೆಗಳನ್ನು ಪಡೆದುಕೊಳ್ಳಲು ಈ ಯೋಜನೆಯಡಿ ಅವಕಾಶವಿರುತ್ತದೆ; ಆದಾಗ್ಯೂ ರಾಜ್ಯಗಳು ಈ ಯೋಜನೆಯಡಿ ನಿಗದಿಪಡಿಸಿರುವ ವೇತನಕ್ಕಿಂತ ಹೆಚ್ಚಿನ ವೇತನ ನೀಡಿ ಅಥವಾ ಖಾಯಂ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬಹುದು, ಆದರೆ ಹೆಚ್ಚುವರಿ ವೆಚ್ಚವನ್ನು ಆಯಾ ರಾಜ್ಯಗಳೇ ಭರಿಸಬೇಕು.

**3.2 ಉತ್ತಮ ಹಾಗೂ ವೃತ್ತಿಪರ ಅರ್ಹ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು,** ಈ ಗುತ್ತಿಗೆ ಆಧಾರದ ಹುದ್ದೆಗಳನ್ನು ರಾಷ್ಟ್ರೀಯ ಹಾಗೂ ಸ್ಥಳೀಯ ಸುದ್ದಿಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ಅಭ್ಯರ್ಥಿಯ ವಿದ್ಯಾರ್ಹತೆ, ಅನುಭವವನ್ನು ಆಧರಿಸಿ, ಮಕ್ಕಳ ಕಾಳಜಿಗಳಿಗೆ ಹೆಚ್ಚು ಬದ್ಧತೆ ಹೊಂದುವಂತೆ ಹಾಗೂ ಉತ್ತೇಜನ ಒದಗಿಸಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದು. ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಹುದ್ದೆಗೆ ವೈಯಕ್ತಿಕ ಟಿಒಆರ್ ಅನ್ನು ಸಿದ್ಧಪಡಿಸುವುದು. ಕೇಂದ್ರ ಮಟ್ಟದ ಗುತ್ತಿಗೆ ಸಿಬ್ಬಂದಿಯನ್ನು ಜಂಟಿ ಕಾರ್ಯದರ್ಶಿ (ಐಸಿಪಿಎಸ್) ಇವರು ನೇಮಕ ಮಾಡಿಕೊಳ್ಳುವರು. ರಾಜ್ಯ ಮಟ್ಟದ ಸಿಬ್ಬಂದಿಯನ್ನು, ರಾಜ್ಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರೊಂದಿಗೆ ಸಮಾಲೋಚನೆ ನಡೆಸಿ ಐಸಿಪಿಎಸ್ ನಿರ್ದೇಶಕರು ನೇಮಕ ಮಾಡಬಹುದು. ಜಿಲ್ಲಾ ಮಟ್ಟದಲ್ಲಿ ಸಿಬ್ಬಂದಿಗಳ ನೇಮಕಾತಿಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ನೋಡಿಕೊಳ್ಳುವುದು. ಎಲ್ಲಾ ನೇಮಕಾತಿಗಳನ್ನೂ ಸಹ ಸಂಬಂಧಪಟ್ಟ ರಾಜ್ಯ ಸರ್ಕಾರಗಳ ಮಾರ್ಗಸೂಚಿಗಳ ಪ್ರಕಾರ ಮಾಡಿಕೊಳ್ಳುವುದು.

**3.3 ಐಸಿಪಿಎಸ್ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಕೆಲಸ ನಿರ್ವಹಿಸುತ್ತಿರುವಂತಹ** ರಾಜ್ಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರಿಂದ ರಚಿಸಲ್ಪಟ್ಟಿರುವಂತಹ ಆಯ್ಕೆ ಸಮಿತಿಯು ಎಸ್‌ಸಿಪಿಎಸ್ ಹಾಗೂ ಎಸ್‌ಎಆರ್‌ಎನ ತಾಂತ್ರಿಕ ಹಾಗೂ ಬೆಂಬಲ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದು. ಡಿಸಿಪಿಯು ಸಿಬ್ಬಂದಿ ನೇಮಕಾತಿಗಾಗಿ; ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ಆಯ್ಕೆ ಸಮಿತಿಯ ಮುಂದಾಳತ್ವವನ್ನು ವಹಿಸುವುದು. ಈ ಆಯ್ಕೆ ಸಮಿತಿಯ ಇತರೆ ಸದಸ್ಯರ ಪೈಕಿ ಜಿಲ್ಲಾ ಮಟ್ಟದ ಅಧಿಕಾರಿಗಳಿರುವರು ಉದಾಹರಣೆಗೆ: ಜಿಲ್ಲಾ ಕಾರ್ಯಕ್ರಮ ಅಧಿಕಾರಿ (ಐಸಿಡಿಎಸ್), ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಅಧ್ಯಕ್ಷರು/ ಸಿಡಬ್ಲ್ಯೂಸಿ ಸದಸ್ಯರು, ಜೆಜೆಬಿ ಸದಸ್ಯರು, ಇತ್ಯಾದಿ.

**3.4 ಗುತ್ತಿಗೆ ಆಧಾರದ ಮೇಲೆ ನೇಮಕವಾಗುವ ಪ್ರತಿ ಸಿಬ್ಬಂದಿಯ ಅವಧಿ 3 ವರ್ಷಗಳವರೆಗೆ ಇರುತ್ತದೆ,** ಕೆಲಸ ನಿರ್ವಹಣೆಯ ವರದಿಗಳನ್ನು ಆಧರಿಸಿ 2 ವರ್ಷಗಳವರೆಗೆ ವಿಸ್ತರಿಸುವಂತಿರುತ್ತದೆ. ಪ್ರತಿ ಸಿಬ್ಬಂದಿಯ ಕೆಲಸದ ಕ್ಷಮತೆಯ ಕುರಿತಾದ ಪುನರ್‌ಮನನವನ್ನು ಐಸಿಪಿಎಸ್ ಚಟುವಟಿಕೆಗಳೊಂದಿಗೆ ಗುರುತಿಸಿಕೊಂಡಿರುವಂತಹ ರಾಜ್ಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರು ರಾಜ್ಯ ಮಟ್ಟದಲ್ಲಿ ಪ್ರತಿ ವರ್ಷ ನಡೆಸುವರು ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ನಡೆಸುವುದು. ಡಿಸಿಪಿಒ ನೇಮಕಾತಿಯ ನಂತರ, ಗುತ್ತಿಗೆ ಅಥವಾ ನಿಯೋಜನೆ ಮೇರೆಗೆ, ಆತ/ಆಕೆ ಡಿಸಿಪಿಯುನ ಇತರೆ ಸಿಬ್ಬಂದಿಗಳ ನೇಮಕಾತಿಗಾಗಿ ಇರುವ ಆಯ್ಕೆ ಸಮಿತಿಯ ಭಾಗವೂ ಆಗುತ್ತಾರೆ.

## 4. ಕಟ್ಟಡ ಹಾಗೂ ಮೂಲಭೂತಸೌಕರ್ಯ:

ಎಸ್‌ಸಿಪಿಎಸ್ ಹಾಗೂ ಡಿಸಿಪಿಯುಗಳಿಗೆ ಅವರ ಜವಾಬ್ದಾರಿಗಳು ಹಾಗೂ ಕರ್ತವ್ಯಗಳನ್ನು ನಿರ್ವಹಿಸಲು ರಾಜ್ಯಗಳು/ ರಾಜ್ಯದಲ್ಲಿ ಕೇಂದ್ರಾಡಳಿತ ಪ್ರದೇಶಗಳು/ ಕೇಂದ್ರಾಡಳಿತ ಪ್ರದೇಶ ಹಾಗೂ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಸೂಕ್ತ ಸ್ಥಳಾವಕಾಶ ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು. ಎಸ್‌ಸಿಪಿಎಸ್ ರಾಜ್ಯದಲ್ಲಿರುವ ಮಕ್ಕಳ ರಕ್ಷಣೆ/ ಕಲ್ಯಾಣ ವಿಷಯಗಳಿಗೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುತ್ತಿರುವ ರಾಜ್ಯ ಇಲಾಖಾ ಕಚೇರಿಯ ಆವರಣದಿಂದ ಕಾರ್ಯನಿರ್ವಹಿಸಬಹುದು. ಡಿಸಿಪಿಯುಗಳು ಜಿಲ್ಲಾ ಮಟ್ಟದಲ್ಲಿ ಸಂಬಂಧಪಟ್ಟ ಇಲಾಖೆಯ ಆವರಣಗಳಲ್ಲಿ ಎಸ್‌ಪಿಎಸ್ ಅಥವಾ ಡಿಸಿಪಿಯುಗೆ ಸ್ಥಳಾವಕಾಶ ನೀಡುವುದು ಸಾಧ್ಯವಾಗದೇ ಇದ್ದರೆ ಬಾಡಿಗೆ ಕಟ್ಟಡದಿಂದ ಕೆಲಸ ನಿರ್ವಹಿಸಬಹುದು.

## 5. ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು) ಹಾಗೂ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್)ಗೆ ಹಣಕಾಸಿನ ನೆರವು

### 5.1 ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು)

| ಕ್ರಮ ಸಂ | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| **A.** | **ಅನಾವರ್ತಕ ವೆಚ್ಚ (ಐದು ವರ್ಷಕ್ಕೊಮ್ಮೆ)** | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಕುರ್ಚಿಗಳು, ಕಪಾಟುಗಳು, ಇತ್ಯಾದಿ) | 3,00,000 |
| 2. | ವೆಬ್‌ಕ್ಯಾಂನೊಂದಿಗೆ ಐದು ಕಂಪ್ಯೂಟರ್‌ಗಳು ಹಾಗೂ ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿಯ ವೆಚ್ಚವೂ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು | 2,25,000 |
| | **ಒಟ್ಟು (ಎ)** | **5,25,000** |
| **B.** | **ಆವರ್ತಕ ವೆಚ್ಚ (ವಾರ್ಷಿಕ)** | |
| **ಸಿಬ್ಬಂದಿಗಳ ಗೌರವ ಧನ** | | |
| 3. | ಓರ್ವ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಒ) @ ರೂ.33,250/– ಮಾಸಿಕ ವೇತನದೊಂದಿಗೆ (1)<br>ಓರ್ವ ರಕ್ಷಣಾ ಅಧಿಕಾರಿ, ಸಾಂಸ್ಥಿಕ ಪೋಷಣೆ @ ರೂ.21,000/– ಮಾಸಿಕ ವೇತನದೊಂದಿಗೆ<br>ಓರ್ವ ರಕ್ಷಣಾ ಅಧಿಕಾರಿ, ಸಾಂಸ್ಥಿಕೇತರ ಪೋಷಣೆ @ ರೂ.21,000/– ಮಾಸಿಕ ವೇತನದೊಂದಿಗೆ<br>ಓರ್ವ ಕಾನೂನು ಕಂ ಪ್ರೊಬೇಷನ್ ಅಧಿಕಾರಿ @ ರೂ.21,000/– ಮಾಸಿಕ ವೇತನದೊಂದಿಗೆ<br>ಓರ್ವ ಆಪ್ತಸಮಾಲೋಚಕರು @ ರೂ.14,000/– ಮಾಸಿಕ ವೇತನ<br>ಇಬ್ಬರು ಸಾಮಾಜಿಕ ಕಾರ್ಯಕರ್ತರು @ ರೂ.14,000/– ಮಾಸಿಕ ವೇತನ<br>ಓರ್ವ ಲೆಕ್ಕಾಧಿಕಾರಿ @ ರೂ.14,000/– ಮಾಸಿಕ ವೇತನ<br>ಡೇಟಾ ಅನ್ಯಾಲಿಸ್ಟ್ @ ರೂ.14,000/–<br>ಸಹಾಯಕ ಕಂ ಡೇಟಾ ಎಂಟ್ರಿ ಆಪರೇಟರ್ @ ರೂ.10,000/– ಮಾಸಿಕ ವೇತನ<br>ಇಬ್ಬರು ಔಟ್‌ರೀಚ್ ಕಾರ್ಯಕರ್ತರು @ ರೂ.8,000/– ಮಾಸಿಕ ವೇತನದೊಂದಿಗೆ (2) | 3,99,000<br>2,52,000<br>2,52,000<br>2,52,000<br>1,68,000<br>3,36,000<br>1,68,000<br>1,68,000<br>1,20,000<br>1,92,000 |
| | **ಒಟ್ಟು ವೇತನ** | **23,07,000** |
| **4.** | **ಜಿಲ್ಲಾ ಮಟ್ಟದಲ್ಲಿ ಬಾಡಿಗೆ ಕಟ್ಟಡ** *(ಜಿಲ್ಲಾಡಳಿತದಿಂದ ಒದಗಿಸುವುದು ಸಾಧ್ಯವಾಗದಿದ್ದಲ್ಲಿ) @ ರೂ.15,000/– ಮಾಸಿಕ ಬಾಡಿಗೆ x 12 ತಿಂಗಳು (ವಾಸ್ತವಗಳ ಪ್ರಕಾರ)* (3) | 1,80,000 |
| 5. | ರಾಜ್ಯ/ ಕೇಂದ್ರಾಡಳಿತ ಸರ್ಕಾರಗಳ ದರಗಳ ಪ್ರಕಾರ ಡಿಸಿಪಿಯುಗೆ ಪ್ರಯಾಣ ಭತ್ಯೆ | 4,50,000 |
| 6. | ಮಕ್ಕಳನ್ನು ವಾಪಸ್ ಮನೆಗೆ ಕಳುಹಿಸಿಕೊಡುವುದು (ವಾಸ್ತವ ಖರ್ಚುಗಳ ಪ್ರಕಾರ) | 4,00,000 |
| 7. | ಜಿಲ್ಲಾ ಪ್ರಾಯೋಜಕತ್ವ ಹಾಗೂ ಪೋಷಣಾ ನಿಧಿ | 10,00,000 |
| 8. | ವಕಾಲತ್ತು ಹಾಗೂ ಅರಿವು ಮೂಡಿಸುವಿಕೆ – ಅರಿವು ಮೂಡಿಸುವುದು ಹಾಗೂ ಸಂವೇದನಾಶೀಲನತೆಯನ್ನು ಮೂಡಿಸಲು ಶಿಬಿರಗಳು, ಮೇಳಗಳ ಆಯೋಜನೆ | 2,00,000 |
| 9. | ಪೊಲೀಸ್, ಪಿಆರ್‌ಐ ಸದಸ್ಯರು, ಇತ್ಯಾದಿಗಳಂತಹ ಎಲ್ಲಾ ಭಾಗೀದಾರರ ಸಂವೇದನಾಶೀಲಗೊಳಿಸುವಿಕೆ ಹಾಗೂ ಸಾಮರ್ಥ್ಯ ಅಭಿವೃದ್ಧಿ | 4,00,000 |
| 10. | ಆಡಳಿತ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ವ್ಯವಸ್ಥೆಯೊಂದಿಗೆ ದೂರವಾಣಿ ಸೌಲಭ್ಯ, ಜೆರಾಕ್ಸ್, ಇತ್ಯಾದಿ ವೆಚ್ಚಗಳು) | 1,80,000 |
| 11. | ಇಂಟರ್‌ನೆಟ್ ಸಂಪರ್ಕ, ಭದ್ರತಾ ಸಿಬ್ಬಂದಿಗಳ ವೆಚ್ಚಗಳು, ವಸತಿಗಳಲ್ಲಿ ವೃತ್ತಿಪರ ತರಬೇತಿ, ಇತ್ಯಾದಿಗಳಿಗಾಗಿ ಆಕಸ್ಮಿಕ ವೆಚ್ಚಗಳು | 6,00,000 |
| 12. | **ಒಟ್ಟು (ಬಿ)** | **58,17,000** |
| 13. | **ಒಟ್ಟು ವೆಚ್ಚ (ಎ+ಬಿ)** | **62,42,000** |

*[(1)] ನಿಯೋಜನೆ ಅಥವಾ ಕರಾರು ಒಪ್ಪಂದದ (ಗುತ್ತಿಗೆ) ಆಧಾರದ ಮೇಲೆ, ನಿಯೋಜನೆ ಮೇರೆಗೆ ಬರುವ ಅಧಿಕಾರಿಯು ರಾಜ್ಯ ಸರ್ಕಾರದ ನಿಯಮಗಳು/ ಪ್ರಕಾರ ವೇತನ ಪಡೆಯುವರು.*
*[(2)] ಔಟ್‌ರೀಚ್ ಕಾರ್ಯಕರ್ತರ ಸಂಖ್ಯೆಯನ್ನು ಜಿಲ್ಲೆಯ ಜನಸಂಖ್ಯೆ ಹಾಗೂ ಭೌಗೋಳಿಕ ಪ್ರದೇಶವ್ಯಾಪ್ತಿಯನ್ನು ಆಧರಿಸಿ ಗರಿಷ್ಠ ಐದರವರೆಗೆ ಹೆಚ್ಚಿಸಬಹುದು.*
*[(3)] ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.30,000 ಮಾಸಿಕ ಬಾಡಿಗೆ*
*ಗಮನಿಸಿ: ಮಧ್ಯಂತರ ಅವಧಿಯಲ್ಲಿ ಅನಾವರ್ತಕ ವೆಚ್ಚಕ್ಕೆ ಸಂಬಂಧಪಟ್ಟ ಯಾವುದೇ ಅಂಶದ ಕೋರಿಕೆಯನ್ನು, ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದಿಸಿದರೆ ಸಲ್ಲಿಸಬಹುದು.*

## 5.2 ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್)

## 15 ಅಥವಾ 15ಕ್ಕಿಂತ ಕಡಿಮೆ ಜಿಲ್ಲೆಗಳಿರುವ ರಾಜ್ಯಗಳಿಗೆ ಹಣಕಾಸಿನ ಬೆಂಬಲ

| ಕ್ರಮ ಸಂ | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| **A.** ಅನಾವರ್ತಕ ವೆಚ್ಚ (ಐದು ವರ್ಷಕ್ಕೊಮ್ಮೆ) | | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಕುರ್ಚಿಗಳು, ಕಪಾಟುಗಳು, ಇತ್ಯಾದಿ) | 5,00,000 |
| 2. | ವೆಬ್ ಕ್ಯಾಂ ನೊಂದಿಗೆ ಏಳು ಕಂಪ್ಯೂಟರ್‌ಗಳು ಹಾಗೂ ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿಯ ವೆಚ್ಚವೂ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು | 3,15,000 |
| | **ಒಟ್ಟು** | 8,15,000 |
| **B.** ಆವರ್ತಕ ವೆಚ್ಚ (ವಾರ್ಷಿಕ) | | |
| **3.** | **ಸಿಬ್ಬಂದಿ ವೇತನ**<br>1. ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು @ ರೂ.35,000/– ಮಾಸಿಕ ವೇತನದೊಂದಿಗೆ<br>2. ಇಬ್ಬರು ಕಾರ್ಯಕ್ರಮ ಅಧಿಕಾರಿಗಳು @ ರೂ.26,250/– ಮಾಸಿಕ ವೇತನ<br>3. ಓರ್ವ ಲೆಕ್ಕಾಧಿಕಾರಿ @ ರೂ.17,500/– ಮಾಸಿಕ ವೇತನ<br>4. ಓರ್ವ ಲೆಕ್ಕಾಧಿಕಾರಿ @ ರೂ.14,000/– ಮಾಸಿಕ ವೇತನ<br>5. ಇಬ್ಬರು ಸಹಾಯಕರು ಕಂ ಡೇಟಾ ಎಂಟ್ರಿ ಆಪರೇಟರ್ @ ರೂ.10,000/– ಮಾಸಿಕ ವೇತನ | 4,20,000<br>6,30,000<br>2,10,000<br>1,68,000<br>2,40,000 |
| | **ಒಟ್ಟು** | **16,68,000** |
| 4. | ಎಸ್‌ಸಿಪಿಎಸ್ ಸಿಬ್ಬಂದಿಗೆ ರಾಜ್ಯ/ ಕೇಂದ್ರಾಡಳಿತ ಸರ್ಕಾರದ ದರಗಳ ಪ್ರಕಾರ ಪ್ರಯಾಣ ಭತ್ಯೆ | 8,00,000 |
| 5. | ಕಚೇರಿ ಕಟ್ಟಡಕ್ಕೆ ಬಾಡಿಗೆ @ ರೂ.20,000 ಮಾಸಿಕ (ವಾಸ್ತವ ದರಗಳ ಪ್ರಕಾರ)[1] | 2,40,000 |
| 6. | ಆಡಳಿತ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ವ್ಯವಸ್ಥೆಯೊಂದಿಗೆ ದೂರವಾಣಿ, ಜೆರಾಕ್ಸ್, ಇತ್ಯಾದಿ) ವಾಸ್ತವ ದರಗಳ ಪ್ರಕಾರ | 2,00,000 |
| 7. | ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟಗಳಲ್ಲಿ ವಿವಿಧ ವರ್ಗಗಳ ಉದ್ಯೋಗಿಗಳಿಗೆ ಕಾರ್ಯಕ್ರಮಗಳನ್ನು ಆಯೋಜಿಸಲು ತರಬೇತಿ ನಿಧಿ | 10,00,000 |
| 8. | ಸಂಶೋಧನೆ ಹಾಗೂ ದಾಖಲೆ ನಿರ್ವಹಣೆ | 5,00,000 |
| 9. | ಐಇಸಿ ಹಾಗೂ ಮುದ್ರಣ ಮತ್ತು ಐಇಸಿ ಸಾಮಗ್ರಿಗಳ ಹಂಚಿಕೆ ಒಳಗೊಂಡಂತೆ ಅರಿವು ಮೂಡಿಸುವ ಚಟುವಟಿಕೆಗಳು (ವಾಸ್ತವ ವೆಚ್ಚಗಳ ಪ್ರಕಾರ) | 10,00,000 |
| 10. | ನವೀನ ಯೋಜನೆಗಳು ಹಾಗೂ ಐಸಿಪಿಎಸ್‌ನ ಕ್ರಮಬದ್ಧವಾದ ಕಾರ್ಯಕ್ರಮ ಅಂಶಗಳ ಅಡಿ ವ್ಯಾಪಿಸದೇ ಇರುವಂತಹ ಅಂಶಗಳಿಗೆ ಸಾಮಾನ್ಯ ಗ್ರ್ಯಾಂಟ್–ಇನ್–ಏಡ್ | 15,00,000 |
| 11. | ಇಂಟರ್‌ನೆಟ್ ಸಂಪರ್ಕ, ವಾಹನ ಬಾಡಿಗೆ, ಭದ್ರತಾ ಸಿಬ್ಬಂದಿ, ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ವೆಚ್ಚ | 4,00,000 |
| 12. | ಆಫ್ಟರ್ ಕೇರ್ ನಿಧಿ | 15,00,000 |
| 13. | ಜಿಲ್ಲೆಗಳ ಪರಿಸ್ಥಿತಿ ವಿಶ್ಲೇಷಣೆ ಹಾಗೂ ಮ್ಯಾಪ್ಪಿಂಗ್: ಸಂಪನ್ಮೂಲ ಕೈಪಿಡಿಯ ಸಂಪನ್ಮೂಲ ಮ್ಯಾಪ್ಪಿಂಗ್ ಹಾಗೂ ಸಿದ್ಧಪಡಿಸುವುದು, ಇತ್ಯಾದಿ | 15,00,000 |
| | **ಒಟ್ಟು** | **1,03,08,000** |
| | **ಒಟ್ಟು ವೆಚ್ಚ (ಎ+ಬಿ)** | **1,11,23,000** |

*1 ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.50,000 ಮಾಸಿಕ ಬಾಡಿಗೆ*

*ಗಮನಿಸಿ: ಮಧ್ಯಂತರ ಅವಧಿಯಲ್ಲಿ ಅನಾವರ್ತಕ ವೆಚ್ಚದ ಯಾವುದಾದರೂ ಅಂಶಕ್ಕೆ ಕೋರಿಕೆಯನ್ನು, ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯಿದ್ದರೆ ಒದಗಿಸಬಹುದು.*

## ii) 15 ಜಿಲ್ಲೆಗಳಿಗಿಂತ ಹೆಚ್ಚಿನ ಜಿಲ್ಲೆಗಳಿರುವ ರಾಜ್ಯಗಳಿಗೆ ಅಂದಾಜು ಆಯವ್ಯಯ

| ಕ್ರಮ ಸಂ | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| **A.** | **ಅನಾವರ್ತಕ ವೆಚ್ಚ (ಐದು ವರ್ಷಕ್ಕೊಮ್ಮೆ)** | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಕುರ್ಚಿಗಳು, ಕಪಾಟುಗಳು, ಇತ್ಯಾದಿ) | 6,00,000 |
| 2. | ವೆಬ್ ಕ್ಯಾಂ ನೊಂದಿಗೆ 13 ಕಂಪ್ಯೂಟರ್‌ಗಳು ಹಾಗೂ ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿಯ ವೆಚ್ಚವೂ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು | 5,85,000 |
| | **ಒಟ್ಟು** | 11,85,000 |
| **B** | **ಆವರ್ತಕ ವೆಚ್ಚ (ವಾರ್ಷಿಕ)** | |
| **3.** | **ಸಿಬ್ಬಂದಿ ವೇತನ**<br>ಇಬ್ಬರು ಕಾರ್ಯಕ್ರಮ ವ್ಯವಸ್ಥಾಪಕರು @ ರೂ.35,000/– ಮಾಸಿಕ ವೇತನದ ಪ್ರಕಾರ<br>ನಾಲ್ಕು ಕಾರ್ಯಕ್ರಮ ಅಧಿಕಾರಿಗಳು @ ರೂ.26,250/– ಮಾಸಿಕ ವೇತನದೊಂದಿಗೆ | 8,40,000<br>12,60,000 |
| **4.** | ಓರ್ವ ಲೆಕ್ಕಾಧಿಕಾರಿ @ ರೂ17,500/– ಮಾಸಿಕ ವೇತನದೊಂದಿಗೆ<br>ಓರ್ವ ಅಕೌಂಟೆಂಟ್ @ ರೂ14,000/– ಮಾಸಿಕ ವೇತನ<br>ನಾಲ್ವರು ಸಹಾಯಕರು ಕಂ ಡೇಟಾ ಎಂಟ್ರಿ ಆಪರೇಟರ್‌ಗಳು @ ರೂ.10,000/– ಮಾಸಿಕ ವೇತನ<br>ಓರ್ವ ಲೆಕ್ಕ ಸಹಾಯಕರು @ ರೂ.10,000/– ಮಾಸಿಕ ವೇತನ | 2,10,000<br>1,68,000<br>4,80,000<br>1,20,000 |
| | **ಒಟ್ಟು** | **30,78,000** |
| 5. | ಎಸ್‌ಸಿಪಿಎಸ್ ಸಿಬ್ಬಂದಿಗಳಿಗೆ ರಾಜ್ಯ/ ಕೇಂದ್ರಾಡಳಿತ ಸರ್ಕಾರದ ದರಗಳ ಪ್ರಕಾರ ಪ್ರಯಾಣ ಭತ್ಯೆ | 15,00,000 |
| 6. | ಕಚೇರಿ ಕಟ್ಟಡದ ಬಾಡಿಗೆಗೆ @ ರೂ.25,000/– ಮಾಸಿಕ (ವಾಸ್ತವ ಬಾಡಿಗೆ ಪ್ರಕಾರ)[1] | 3,00,000 |
| 7. | ಆಡಳಿತ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿಯೊಂದಿಗೆ ದೂರವಾಣಿ, ಜೆರಾಕ್ಸ್, ಇತ್ಯಾದಿ) ವಾಸ್ತವ ದರಗಳ ಪ್ರಕಾರ | 2,50,000 |
| 8. | ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟಗಳಲ್ಲಿ ವಿವಿಧ ವರ್ಗಗಳ ಸಿಬ್ಬಂದಿಗಳಿಗಾಗಿ ಕಾರ್ಯಕ್ರಮಗಳ ಆಯೋಜನೆಗಾಗಿ ತರಬೇತಿ ನಿಧಿ | 20,00,00 |
| 9. | ಸಂಶೋಧನೆ ಹಾಗೂ ದಾಖಲೆ ನಿರ್ವಹಣೆ | 7,50,000 |
| 10. | ಐಇಸಿ ಮೂಲಕ ಹಾಗೂ ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಅರಿವು ಮೂಡಿಸುವಿಕೆ (ವಾಸ್ತವ ದರಗಳನ್ನು ಅಧರಿಸಿ) | 20,00,000 |
| 11. | ನವೀನ ಯೋಜನೆಗಳು ಹಾಗೂ ಐಸಿಪಿಎಸ್‌ನಡಿ ಕ್ರಮಬದ್ಧವಾದ ಅಂಶಗಳಲ್ಲಿ ಇಲ್ಲದೇ ಇರುವಂತಹ ಅಂಶಗಳಿಗಾಗಿ ಸಾಮಾನ್ಯ ಗ್ರ್ಯಾಂಟ್–ಇನ್–ಏಡ್ | 30,00,000 |
| 12. | ಆಕಸ್ಮಿಕ ನಿಧಿ (ಇಂಟರ್‌ನೆಟ್ ಸಂಪರ್ಕ, ವಾಹನ ಬಾಡಿಗೆ, ಭದ್ರತಾ ಸಿಬ್ಬಂದಿ, ಇತ್ಯಾದಿ) | 8,00,000 |
| 13. | ಆಫ್ಟರ್ ಕೇರ್ ನಿಧಿ[2] | 30,00,000 |
| 14 | ಜಿಲ್ಲಾ ಮಟ್ಟದಲ್ಲಿ ಮಕ್ಕಳ ಸ್ಥಿತಿಗತಿಗಳ ಅಧ್ಯಯನ ಮತ್ತು ಜಿಲ್ಲಾ ಸಂಪನ್ಮೂಲಗಳ/ಸಂಪರ್ಕಗಳ ಕೈಪಿಡಿ ತಯಾರಿಕೆ3 | 30,00,000 |
| | **ಒಟ್ಟು** | **1,96,78,000** |
| | **ಒಟ್ಟು ವೆಚ್ಚ (ಎ+ಬಿ)** | **2,08,63,000** |

*1. ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.50,000 ಮಾಸಿಕ ಬಾಡಿಗೆ*
*2. 30 ಜಿಲ್ಲೆಗಳಿಗಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳು ಇರುವ ರಾಜ್ಯಗಳಿಗೆ, ಆಫ್ಟರ್‌ಕೇರ್ ನಿಧಿಯನ್ನು ರೂ.45 ಲಕ್ಷಗಳವರೆಗೆ ಒದಗಿಸಲಾಗುವುದು*
*3. 30 ಜಿಲ್ಲೆಗಳಿಗಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಿಗೆ, ಸನ್ನಿವೇಶ ವಿಶ್ಲೇಷಣೆಗಾಗಿ ರೂ.45 ಲಕ್ಷ ನಿಧಿ ಒದಗಿಸಲಾಗುವುದು*

*ಗಮನಿಸಿ: ಮಧ್ಯಂತರ ಅವಧಿಯಲ್ಲಿ ಆವರ್ತಕ ವೆಚ್ಚದಡಿ ಯಾವುದಾದರೂ ಅಂಶಕ್ಕೆ ಕೋರಿಕೆಯನ್ನು, ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆ ಮೇರೆಗೆ ಒದಗಿಸಲಾಗುವುದು.*

# ಅನುಬಂಧ II – ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ

## 1. ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಯ (ಎಸ್‌ಎಆರ್‌ಎ) ಪಾತ್ರಗಳು ಹಾಗೂ ಜವಾಬ್ದಾರಿಗಳು:

**1.1 ಕಾರ್ಯಕ್ರಮ ವ್ಯವಸ್ಥಾಪಕರು (ದತ್ತು, ಫಾಸ್ಟರ್ ಕೇರ್ ಹಾಗೂ ಪ್ರಾಯೋಜಕತ್ವ):** ಆತ/ಆಕೆ, ರಾಜ್ಯಮಟ್ಟದಲ್ಲಿನ ಎಲ್ಲಾ ಸಾಂಸ್ಥಿಕೇತರ ಪೋಷಣಾ ಕಾರ್ಯಕ್ರಮಗಳ ಸಂಯೋಜನೆ ಹಾಗೂ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುತ್ತಾರೆ. ಆತ/ಆಕೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಮಕ್ಕಳ ಕಲ್ಯಾಣ ಸಮಿತಿಗಳು ಹಾಗೂ ಎಸ್‌ಎಎ ಗಳ ನೆರವಿನೊಂದಿಗೆ ದತ್ತು ಕಾರ್ಯಕ್ರಮ, ಹಾಗೂ ರಕ್ಷಣೆಯ ಅಗತ್ಯವಿರುವ ಫಾಸ್ಟರ್ ಕೇರ್ ಹಾಗೂ ಪ್ರಾಯೋಜಕತ್ವ ಸೇವೆಗಳ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸಬೇಕು. ಆತ/ಆಕೆ ಈ ಕೆಳಕಂಡವು ಒಳಗೊಂಡಂತೆ ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಯ ಎಲ್ಲಾ ಕರ್ತವ್ಯಗಳು, ಪಾತ್ರಗಳು ಹಾಗೂ ಜವಾಬ್ದಾರಿಗಳ ಅನುಷ್ಠಾನವನ್ನು ಖಾತ್ರಿಪಡಿಸಬೇಕು:

(i) ರಾಜ್ಯದಲ್ಲಿ ದತ್ತು ಕಾರ್ಯಕ್ರಮದ ಸಂಯೋಜನೆ, ನಿಗಾವಣೆ ಹಾಗೂ ಅಭಿವೃದ್ಧಿಪಡಿಸುವುದು;

(ii) ಇಲ್ಲದಿರುವ ಕಡೆ ಎಸ್‌ಎಎಗಳನ್ನು ಸ್ಥಾಪಿಸಲು ಸುಗಮಗಾರಿಕೆ ವಹಿಸುವುದು ಹಾಗೂ ನೊಂದಣಿಗಾಗಿ ಸಿಎಆರ್‌ಎಗೆ ಶಿಫಾರಸ್ಸು ಮಾಡುವುದು;

(iii) ಎಸ್‌ಎಎ ಗಳನ್ನು ಸ್ಥಾಪಿಸಲು ಸುಗಮಗಾರಿಕೆ ಮಾಡುವುದು, ಎಸ್‌ಎಎ ಗಳಿಗೆ ಕಾನೂನು ಗುರುತನ್ನು ಒದಗಿಸುವುದು ಹಾಗೂ ಇಂತಹ ಏಜೆನ್ಸಿಗಳ ವಿಸ್ತೃತ ಪಟ್ಟಿಯನ್ನು ನಿರ್ವಹಿಸುವುದು;

(iv) ಎಲ್ಲಾ ಮಕ್ಕಳ ದತ್ತುಗಳು/ ಶಾಶ್ವತ ನಿಯೋಜನೆಗಳನ್ನೂ ಸಹ ಭಾರತ ಸರ್ಕಾರ ಹಾಗೂ ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕಾನೂನುಗಳು ಹಾಗೂ ಮಾರ್ಗಸೂಚಿಗಳ ಪ್ರಕಾರ ಮಾಡುವುದನ್ನು ಖಾತ್ರಿಪಡಿಸುವುದು;

(v) ಸಿಎಆರ್‌ಎ ದೊಂದಿಗೆ ದೇಶದ ಒಳಗಿನ ಹಾಗೂ ಅಂತರ–ದೇಶಿಯ ದತ್ತು ಪ್ರಕ್ರಿಯೆಗಳನ್ನು ಪ್ರೋತ್ಸಾಹಿಸುವುದು;

(vi) ಮಕ್ಕಳ ನಿಗಾವಣಾ ವ್ಯವಸ್ಥೆಯ ಭಾಗವಾಗಿ ಮಕ್ಕಳ ಜಿಲ್ಲಾ ರಕ್ಷಣಾ ಘಟಕಗಳ ನೆರವಿನೊಂದಿಗೆ ದತ್ತುಗೆ ಲಭ್ಯವಿರುವ ಮಕ್ಕಳ ಕೇಂದ್ರೀಯ ಅಂತರ್ಜಾಲ ಆಧಾರಿತ ದತ್ತಾಂಶವನ್ನು ನಿರ್ವಹಿಸುವುದು;

(vii) ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ನೆರವಿನೊಂದಿಗೆ ದತ್ತು ಪಡೆಯುವ ಸಂಭವನೀಯ ಪೋಷಕರ ಕೇಂದ್ರೀಯ (ರಾಜ್ಯ–ನಿರ್ಧಿಷ್ಟ) ಅಂತರ್ಜಾಲ ಆಧಾರಿತ ಡೇಟಾಬೇಸ್ ಅನ್ನು ನಿರ್ವಹಿಸುವುದು;

(viii) ಎಸ್‌ಎಎ ಗಳ ಕೆಲಸದ ಮೇಲ್ವಿಚಾರಣೆ ಮಾಡುವುದು ಹಾಗೂ ರಾಜ್ಯದೊಳಗೆ ಅವರ ನಡುವೆ ಸಂಯೋಜನೆಯನ್ನು ಖಾತ್ರಿಪಡಿಸುವುದು;

(ix) ಎಲ್ಲಾ ಪಿಎಪಿ ಗಳು ಡಿಸಿಪಿಯು/ ಎಸ್‌ಎಎ/ ಎಸ್‌ಎಆರ್‌ಎದಲ್ಲಿ ನೊಂದಣಿಯಾಗುವಂತೆ ಖಾತ್ರಿಪಡಿಸುವುದು;

(x) ಮಾಸಿಕ ಆಧಾರದ ಮೇಲೆ ಸಿಎಆರ್‌ಎ ಗೆ ಸಮಗ್ರ ದತ್ತು ದತ್ತಾಂಶವನ್ನು ಒದಗಿಸುವುದು;

(xi) ಎಲ್ಲಾ ಏಜೆನ್ಸಿಗಳು ಹಾಗೂ ಪೂರಕ ವ್ಯವಸ್ಥೆಗಳ ಸಂವೇದನಾಶೀಲತೆಯನ್ನು ಖಾತ್ರಿಪಡಿಸುವುದು;

(xii) ದತ್ತು ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಾಮರ್ಥ್ಯ ಅಭಿವೃದ್ಧಿ ಮಾಡುವುದು;

(xiii) ಪರವಾನಗಿಯುಳ್ಳ/ ಗುರುತಿಸಲ್ಪಟ್ಟಿರುವ ದತ್ತು ಏಜೆನ್ಸಿಗಳಾಗಲೀ ಅಥವಾ ಪರವಾನಗಿ ಇರದ ವ್ಯಕ್ತಿಗಳು ಅಥವಾ ಸಂಸ್ಥೆಗಳಿಂದ ನಡೆಯುವ ದತ್ತು ಪ್ರಕ್ರಿಯೆ ಕಾರ್ಯಕ್ರಮದಲ್ಲಿ ಯಾವುದಾದರೂ ಲೋಪಗಳು ದುಷ್ಕೃತ್ಯಗಳು ಉಂಟಾದರೆ ಕಾನೂನು ಪ್ರಕಾರವಾಗಿ ಶಿಕ್ಷಾ ಕ್ರಮವನ್ನು ತೆಗೆದುಕೊಳ್ಳುವುದು;

(xiv) ರಾಜ್ಯದಲ್ಲಿ ದತ್ತು ಪ್ರಕ್ರಿಯೆಗಳನ್ನು ಪ್ರೋತ್ಸಾಹಿಸಲು ವಕಾಲತ್ತು ಹಾಗೂ ಅರಿವು ಮೂಡಿಸುವುದು;

(xv) ಐಇಸಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಹಂಚಿಕೆ ಮಾಡುವುದು.

**1.2 ಕಾರ್ಯಕ್ರಮ ಅಧಿಕಾರಿ:** ಆತ/ ಆಕೆ ಕಾರ್ಯಕ್ರಮ ವ್ಯವಸ್ಥಾಪಕರ (ದತ್ತು, ಫಾಸ್ಟರ್ ಕೇರ್ ಹಾಗೂ ಪ್ರಾಯೋಜಕತ್ವ) ಒಟ್ಟಾರೆ ಮೇಲ್ವಿಚಾರಣೆಯಡಿ, ರಾಜ್ಯದಲ್ಲಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ನಡೆಯುವ ದತ್ತು ಕಾರ್ಯಕ್ರಮಗಳು ಫಾಸ್ಟರ್ ಕೇರ್ ಹಾಗೂ ಪ್ರಾಯೋಜಕತ್ವ ಸೇವೆಗಳ ಮೇಲ್ವಿಚಾರಣೆ ಕೆಲಸಗಳಲ್ಲಿ ಅವರಿಗೆ ಅಗತ್ಯ ನೆರವನ್ನು ಒದಗಿಸುವುದು.

## 2. ಕಟ್ಟಡ ಹಾಗೂ ಮೂಲಭೂತ ಸೌಕರ್ಯ

ಎಸ್‌ಸಿಪಿಎಸ್ ವತಿಯಿಂದ ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಗೆ ತನ್ನ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸಲು ಬೇಕಾಗುವ ಸ್ಥಳ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಯು ಎಸ್‌ಸಿಪಿಎಸ್ ಆವರಣದಿಂದ ಕಾರ್ಯನಿರ್ವಹಿಸುವುದು. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಎಸ್‌ಎಆರ್‌ಎಗಳ ಸ್ಥಾಪನೆ ಹಾಗೂ ಕಾರ್ಯನಿರ್ವಹಣೆಗಾಗಿ ಹಣಕಾಸಿನ ಬೆಂಬಲ ಒದಗಿಸುತ್ತದೆ.

## 3. ಹಣಕಾಸಿನ ಬೆಂಬಲ

| **ಕ್ರ. ಸಂ.** | **ವಿಷಯ** | **ಮೊತ್ತ ರೂ.ಗಳಲ್ಲಿ** | |
|---|---|---|---|
| | | **15 ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳು** | **15ಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳು** |
| **A. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | | |
| 1. | ಪೀಠೋಪಕರಣಗಳು ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಕುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಣ ಉಪಕರಣ, ಕಪಾಟುಗಳು, ಇತ್ಯಾದಿ) | 2,00,000 | 2,00,000 |
| 2. | ಪ್ರತಿ ಕಂಪ್ಯೂಟರ್‌ಗೆ ಯುಪಿಎಸ್ & ವೆಬ್ ಕ್ಯಾಂನೊಂದಿಗೆ (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಮೂರು ಕಂಪ್ಯೂಟರ್‌ಗಳು ಹಾಗೂ ಪ್ರಿಂಟರ್‌ಗಳು ಮತ್ತು ಸ್ಕ್ಯಾನರ್‌ಗಳು 1,35,000/– | 1,35,000 | 1,35,000 |
| | **ಒಟ್ಟು** | **3,35,000** | **3,35,000** |
| **B. ಆವರ್ತಕ ವೆಚ್ಚ (ವಾರ್ಷಿಕ)** | | | |
| 3. | ಸಿಬ್ಬಂದಿ ವೇತನ | | |

| | | | |
|---|---|---|---|
| | ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು1 @ ರೂ.35,000/– ಮಾಸಿಕ ವೇತನದೊಂದಿಗೆ ರೂ.4,20,000/–<br>ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು @ ರೂ.26,250/– ಮಾಸಿಕ ವೇತನದೊಂದಿಗೆ ರೂ.3,15,000/–<br>ಓರ್ವ ಕಾರ್ಯಕ್ರಮ ಸಹಾಯಕ @ ರೂ.10,000/– ಮಾಸಿಕ ವೇತನದೊಂದಿಗೆ ರೂ.1,20,000/– | 4,20,000<br>3,15,000<br>1,20,000 | 4,20,000<br>3,15,000<br>1,20,000 |
| | **ಒಟ್ಟು** | **8,55,000** | **8,55,000** |
| | ಎಸ್ಎಆರ್ಎ ಸಿಬ್ಬಂದಿಗೆ ರಾಜ್ಯ/ ಕೇಂದ್ರಾಡಳಿತ ಸರ್ಕಾರಿ ದರಗಳ ಪ್ರಕಾರ ಪ್ರಯಾಣ ಭತ್ಯೆ | 2,00,000 | 5,00,000 |
| 4. | ಐಇಸಿ ಮೂಲಕ ಹಾಗೂ ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಮೂಲಕ ಅರಿವು ಮೂಡಿಸುವಿಕೆ | 3,00,000 | 5,00,000 |
| 5. | ಆಡಳಿತ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ವ್ಯವಸ್ಥೆಯೊಂದಿಗೆ ದೂರವಾಣಿ, ಜೆರಾಕ್ಸ್, ಇತ್ಯಾದಿ) | 1,20,000 | 2,00,000 |
| 6. | ಆಕಸ್ಮಿಕ ನಿಧಿ (ಇಂಟರ್‌ನೆಟ್ ಸಂಪರ್ಕ, ವಾಹನ ಬಾಡಿಗೆ, ಭದ್ರತಾ ಸಿಬ್ಬಂದಿ, ಇತ್ಯಾದಿ) | 1,00,000 | 1,50,000 |
| 7. | **ಒಟ್ಟು** | **15,75,000** | **22,05,000** |
| | **ಒಟ್ಟು ವೆಚ್ಚ** (ಎ+ಬಿ) | **19,10,000** | **25,40,000** |

*[1] ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಭೌಗೋಳಿಕ ಪ್ರದೇಶ ವ್ಯಾಪ್ತಿ ಹಾಗೂ ಜನಸಂಖ್ಯೆಯನ್ನು ಆಧರಿಸಿ ಕಾರ್ಯಕ್ರಮ ಅಧಿಕಾರಿಗಳ ಸಂಖ್ಯೆಯನ್ನು ಗರಿಷ್ಠ ಎರಡಕ್ಕೆ ಹೆಚ್ಚಿಸಬಹುದು.*

ಗಮನಿಸಿ:

*a) ಎಸ್‌ಸಿಪಿಎಸ್ ನಂತೆ ಎಸ್ಎಆರ್ಎ ಅದೇ ಆವರಣದಿಂದ ಕಾರ್ಯನಿರ್ವಹಿಸಬೇಕು. ಆದ್ದರಿಂದ ಬಾಡಿಗೆ ನೀಡಲಾಗುವುದಿಲ್ಲ.*

*b) ಮಧ್ಯಂತರ ಅವಧಿಯಲ್ಲಿ ಅನಾವರ್ತಕ ಅಂಶದ ಬೇಡಿಕೆಯನ್ನು, ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯೊಂದಿಗೆ ಒದಗಿಸಲಾಗುವುದು.*

# ಅನುಬಂಧ III – ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರವನ್ನು ಬಲಪಡಿಸುವಿಕೆ

## 1. ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್‌ಎ) ಪಾತ್ರಗಳು ಹಾಗೂ ಜವಾಬ್ದಾರಿಗಳು:

**ಸಿಎಆರ್‌ಎ ಪಾತ್ರಗಳು ಹಾಗೂ ಜವಾಬ್ದಾರಿಗಳು ಈ ಕೆಳಗಿನಂತಿವೆ:**

### 1.1 ಒಟ್ಟಾರೆ

(i) ದೇಶದಲ್ಲಿರುವ ಪ್ರತಿಯೊಂದು ದತ್ತು ಸ್ವೀಕಾರಾರ್ಹ ಮಗುವಿಗೂ ಸಹ ಸುಗಮಗಾರಿಕೆ ಒದಗುವುದನ್ನು ಖಾತ್ರಿಪಡಿಸುವುದು;

(ii) ರಾಷ್ಟ್ರೀಯ ದತ್ತು ನೀತಿಯ ರೂಪಿಸುವಿಕೆ ಹಾಗೂ ಅನುಷ್ಠಾನಕ್ಕೆ ಬೆಂಬಲ;

(iii) ದೇಶದಲ್ಲಿ ಶೀಘ್ರ, ಪಾರದರ್ಶಕ ಹಾಗೂ ಮಕ್ಕಳ–ಸ್ನೇಹಿ ದತ್ತು ವ್ಯವಸ್ಥೆಯ ಒಟ್ಟಾರೆ ಅಭಿವೃದ್ಧಿಯನ್ನು ಕೈಗೊಳ್ಳುವುದು;

(iv) ಎಸ್‌ಎಆರ್‌ಎ ಗಳ ನೆರವಿನೊಂದಿಗೆ ಮಕ್ಕಳ ಕಾನೂನುಬಾಹಿರ ನಿಯೋಜನೆಗಳನ್ನು ತಡೆಗಟ್ಟಲು ತಾತ್ವಿಕ ಅಭ್ಯಾಸಗಳು ಹಾಗೂ ಹೆಚ್ಚಿನ ಪಾರದರ್ಶಕತೆಯನ್ನು ಖಾತ್ರಿಪಡಿಸುವುದು;

(v) ತಪಾಸಣೆ ಮೂಲಕ ದತ್ತು ಪ್ರಕ್ರಿಯೆಯಲ್ಲಿರುವ ದುಷ್ಕೃತ್ಯಗಳನ್ನು ಪರಿಶೀಲಿಸುವುದು ಹಾಗೂ ಸೂಕ್ತ ಕ್ರಮವನ್ನು ಕೈಗೊಳ್ಳುವುದು;

(vi) ದತ್ತು ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಸಂಸ್ಥೆಗಳ ಮೇಲ್ವಿಚಾರಣೆ ಹಾಗೂ ನಿಗಾವಣೆಗೆ ಮಕ್ಕಳ ಪೋಷಣೆ ಹಾಗೂ ಸೂಚಕಗಳ ಗುಣಮಟ್ಟದ ಮಾನಕಗಳನ್ನು ಅಭಿವೃದ್ಧಿಪಡಿಸುವುದು;

(vii) ಭಾರತದ ಮಕ್ಕಳ ದತ್ತುವಿನ ನಿಗಾವಣೆಗಾಗಿ ಶಾಸನಗಳು, ನಿಯಮಗಳು ಹಾಗೂ ಮಾರ್ಗಸೂಚಿಗಳ ಅನುಷ್ಠಾನವನ್ನು ಪುನರ್‌ಮನನ ಮಾಡುವುದು ಹಾಗೂ ಖಾತ್ರಿಪಡಿಸುವುದು;

(viii) ಅಗತ್ಯಕ್ಕಿಂತ ಹೆಚ್ಚಿನ ಸಮಯದವರೆಗೆ ಮಕ್ಕಳನ್ನು ಸಾಂಸ್ಥೀಕರಣಗೊಳಿಸುವಾಗ ಪ್ರತಿ ಹಂತದಲ್ಲಿಯೂ ಬದ್ಧತೆಯನ್ನು ಸ್ಥಾಪಿಸುವುದು ಹಾಗೂ ಮಧ್ಯಸ್ಥಿಕೆ ವಹಿಸುವುದು;

(ix) ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್‌ಗಳಂತಹ ಇತರೆ ಸಾಂಸ್ಥಿಕೇತರ ಕುಟುಂಬ ಆಧಾರಿತ ಪೋಷಣೆಗಳ ಅಭಿವೃದ್ಧಿಗೆ ಬೆಂಬಲ;

(x) ಅನುಸರಣೆ ಹಾಗೂ ಬೇರುಮಟ್ಟದ ಹುಡುಕಾಟಕ್ಕಾಗಿ ದೇಶದ ಒಳಗೆ ಹಾಗೂ ಅಂತರ–ದೇಶೀಯ ಎರಡೂ ದತ್ತು ಪ್ರಕ್ರಿಯೆಗಳಿಗೆ ಸಂಬಂಧಪಟ್ಟ ಎಲ್ಲಾ ಪೋಷಕರು/ ಮಕ್ಕಳ ಮಾಹಿತಿ ನಿರ್ವಹಣೆ;

(xi) ದತ್ತು ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಏಕರೂಪತೆಯನ್ನು ಖಾತ್ರಿಪಡಿಸಲು ಅಗತ್ಯವಿರುವ ಗುಣಮಟ್ಟದ ದಾಖಲಾತಿಗಳು ಹಾಗೂ ವಿಧಾನಗಳ ವಿಕಸನ (ತಯಾರಿಸುವುದು);

(xii) ಮಕ್ಕಳ ನಿಗಾವಣಾ ವ್ಯವಸ್ಥೆಯ ಭಾಗವಾಗಿ ದತ್ತು ಸ್ವೀಕಾರಾರ್ಹ ಎಲ್ಲಾ ಮಕ್ಕಳು, ದೇಶದೊಳಗೆ ಹಾಗೂ ಇತರೆ ದೇಶಗಳಿಗೆ ದತ್ತು ನೀಡುವಂತಹ ಮಕ್ಕಳ ಪ್ರತ್ಯೇಕಗೊಳಿಸಿರುವ ಡೇಟಾಬೇಸ್ (ರಾಜ್ಯವಾರು/ ಏಜೆನ್ಸಿವಾರು/ ಲಿಂಗವಾರು/ ವಯಸ್ಸುವಾರು, ಇತ್ಯಾದಿ) ಅಭಿವೃದ್ಧಿಪಡಿಸುವುದು ಹಾಗೂ ನಿರ್ವಹಿಸುವುದು;

(xiii) ನೊಂದಾಯಿತ ಭಾರತೀಯ ಹಾಗೂ ವಿದೇಶಿ ಪಿಎಪಿ ಗಳ ಡೇಟಾಬೇಸ್ ಅಭಿವೃದ್ಧಿ ಹಾಗೂ ನಿರ್ವಹಣೆ;

(xiv) ದತ್ತು ವ್ಯವಸ್ಥೆಯ ನಿರಂತರ ಸುಧಾರಣೆಗಾಗಿ ದತ್ತು ಹಾಗೂ ಇತರೆ ಸಾಂಸ್ಥಿಕೇತರ ಮತ್ತು ಪರ್ಯಾಯ ಪೋಷಣೆಯ ಕುರಿತು ಸಂಶೋಧನೆ ನಿರ್ವಹಣೆ ಹಾಗೂ ದಾಖಲಾತಿಗಳ ನಿರ್ವಹಣೆ;

(xv) ದೇಶದ ಒಳಗಿನ ದತ್ತುಗಳನ್ನು ಪ್ರೋತ್ಸಾಹಿಸಲು ವಕಾಲತ್ತು ವಹಿಸುವಿಕೆ, ಅರಿವು ಮೂಡಿಸುವಿಕೆ ಹಾಗೂ ಐಇಸಿ ಚಟುವಟಿಕೆಗಳ ಕೈಗೊಳ್ಳುವಿಕೆ ಮತ್ತು ದೇಶದ ಒಳಗೆ ದತ್ತುವನ್ನು ಪ್ರೋತ್ಸಾಹಿಸಲು ಸಮರ್ಪಕವಾದಂತಹ ಪರಿಸರವನ್ನು ಸೃಷ್ಟಿಸುವುದು;

(xvi) ದತ್ತು ಪ್ರಕ್ರಿಯೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯನಿರ್ವಾಹಕರಿಗೆ ಟಿಒಟಿ (ತರಬೇತಿದಾರರ ತರಬೇತಿ) ಒಳಗೊಂಡಂತೆ ವಿಶೇಷ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಕೈಗೊಳ್ಳುವುದು.

## 1.2 ದೇಶದ ಒಳಗೆ ದತ್ತು

(i) ಅರಿವು ಮೂಡಿಸುವಿಕೆ ಹಾಗೂ ವಕಾಲತ್ತು ಉಪಕ್ರಮಗಳ ಮೂಲಕ ದೇಶದ ಒಳಗಿನ ದತ್ತು ಪ್ರಕ್ರಿಯೆಗಳನ್ನು ಪ್ರೋತ್ಸಾಹಿಸುವುದು;

(ii) ಸ್ಥಳೀಯ ದತ್ತು ಪ್ರಕ್ರಿಯೆಗಳಿಗಾಗಿ ಗರಿಷ್ಠ ಪ್ರಯತ್ನಗಳನ್ನು ಹಾಕಲು ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಗಳೊಂದಿಗೆ (ಎಸ್‌ಎಆರ್‌ಎಗಳು) ಸಂಯೋಜನೆ ಮಾಡುವುದು ಹಾಗೂ ಸಾಂಸ್ಥಿಕೇತರ ಕುಟುಂಬ ಆಧಾರಿತ ಪೋಷಣೆಯ ಕುರಿತು ಸಲಹೆ ನೀಡುವುದು;

(iii) ಎಸ್‌ಎಆರ್‌ಎ ಗಳ ನೆರವಿನೊಂದಿಗೆ, ರಾಜ್ಯದ ಒಳಗೆ ದತ್ತು ಹೋಗಲು ಸೂಕ್ತವಾದ ಕುಟುಂಬ ದೊರೆಯದೇ ಇರುವಂತಹ ಮಕ್ಕಳಿಗೆ ಸಂಬಂಧಪಟ್ಟಂತೆ ಅಂತರ–ರಾಜ್ಯ ನಿಯೋಜನೆಯನ್ನು ಖಾತ್ರಿಪಡಿಸುವುದು;

(iv) ಮಕ್ಕಳ ಪುನರ್ವಸತಿಗೆ ಸಂಬಂಧಿಸಿದಂತೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಎಸ್‌ಎಆರ್‌ಎ ಗಳಿಗೆ ಸಲಹೆ ನೀಡುವುದು ಹಾಗೂ ಬೆಂಬಲ ಒದಗಿಸುವುದು.

## 1.3 ಅಂತರ–ದೇಶೀಯ ದತ್ತು

(i) ಅಂತರ–ದೇಶೀಯ ದತ್ತುವಿಗೆ ಸಂಬಂಧಪಟ್ಟಂತೆ ಹೇಗ್ ಸಮಾವೇಶದಡಿ ದತ್ತು ಪ್ರಕ್ರಿಯೆಗಾಗಿ ಹಾಗೂ ಅಂತರ–ದೇಶೀಯ ದತ್ತು ನಿರ್ಬಂಧನೆಗಾಗಿ ಕೇಂದ್ರೀಯ ಪ್ರಾಧಿಕಾರದಂತೆ ಕಾರ್ಯನಿರ್ವಹಿಸುವುದು;

(ii) ಸಮರ್ಪಕವಾಗಿರುವ ಭಾರತದ ಏಜೆನ್ಸಿಗಳಿಗೆ (ಎಸ್‌ಎಎ ಗಳು) ಮಾನ್ಯತೆಯನ್ನು ನೀಡುವುದು ಹಾಗೂ ವಿದೇಶಿ ದತ್ತು ಏಜೆನ್ಸಿಗಳಿಗೆ ದೃಢೀಕರಣವನ್ನು ನೀಡುವುದು;

(iii) ಅಧಿಕೃತ ವಿದೇಶಿ ದತ್ತು ಏಜೆನ್ಸಿಗಳ ಮೂಲಕ ವಿದೇಶಿ ಪೋಷಕರ ಅರ್ಜಿಗಳ ನೊಂದಣಿ;

(iv) ದೇಶದ ಒಳಗಿನ ದತ್ತು ಪ್ರಕ್ರಿಯೆಯಲ್ಲಿನ ಮಗುವಿನ ನಿಯೋಜನೆಯನ್ನು ಪುನರ್‌ಮನನ ಮಾಡುವುದು ಹಾಗೂ ಅನುಮೋದನೆ ನೀಡುವುದು ಮತ್ತು ಅಂತರ–ದೇಶೀಯ ದತ್ತು ಸಮಿತಿ (ಐಸಿಎಸಿ) ನೆರವಿನೊಂದಿಗೆ ಎನ್‌ಒಸಿ ನೀಡುವುದು.

## 2. ಹಣಕಾಸಿನ ಬೆಂಬಲ

| ಕ್ರ. ಸಂ. | ವಿಷಯ | ಮೊತ್ತ ರೂ.ಗಳಲ್ಲಿ |
|---|---|---|
| **A. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | 1. ಭೂಮಿ & ನಿರ್ಮಾಣ ವೆಚ್ಚ/ ಕಚೇರಿ ಕಟ್ಟಡದ ಖರೀದಿ | 50,00,000 |
| **B. ವಾರ್ಷಿಕ ಆವರ್ತಕ ವೆಚ್ಚ** | | |
| 2. | ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ | 10,00,000 |
| 2. | ಸಂಶೋಧನೆ ಹಾಗೂ ದಾಖಲಾತಿಗಳ ನಿರ್ವಹಣೆ | 5,00,000 |
| 4. | ಐಇಸಿ ಮೂಲಕ ಅರಿವು ಮೂಡಿಸುವಿಕೆ ಹಾಗೂ ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಒಳಗೊಂಡಂತೆ ಮಾಧ್ಯಮ ಅಭಿಯಾನ (ವಾಸ್ತವ ದರಗಳಿಗೆ ಅನುಗುಣವಾಗಿ) | 50,00,000 |
| 5. | ಇತರೆ | 4,00,000 |
| | **ಒಟ್ಟು** | **69,00,900** |
| | **ಒಟ್ಟು ವೆಚ್ಚ (ಎ+ಬಿ)** | **5,69,00,900** |

# ಅನುಬಂಧ IV – ರಾಜ್ಯ ಯೋಜನಾ ಬೆಂಬಲ ಘಟಕಗಳು

## 1. ಕೇಂದ್ರೀಯ ಯೋಜನಾ ಬೆಂಬಲ ಘಟಕ (ಸಿಪಿಎಸ್‌ಯು)

### 1.1 ಸಿಬ್ಬಂದಿ ಬಲ

| ಕ್ರ. ಸಂ. | ಹುದ್ದೆ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಇಬ್ಬರು ಉಪ ಮಿಷನ್ ನಿರ್ದೇಶಕರು @ ಮಾಸಿಕ 70,000/– ವೇತನದೊಂದಿಗೆ | 16,80,000 |
| 2. | ನಾಲ್ವರು ಯೋಜನಾ ಅನುಷ್ಠಾನ ಅಧಿಕಾರಿಗಳೂ @ ರೂ.55,000/– ಮಾಸಿಕ ವೇತನದೊಂದಿಗೆ | 26,40,000 |
| 3. | ಓರ್ವ ಆಡಳಿತ ಅಧಿಕಾರಿ @ ರೂ.35,000/– ಮಾಸಿಕ ವೇತನ | 4,20,000 |
| 4. | ಓರ್ವ ಲೆಕ್ಕಾಧಿಕಾರಿ @ ರೂ.35,000/– ಮಾಸಿಕ ವೇತನ | 4,20,000 |
| 5. | ಓರ್ವ ಅಕೌಂಟೆಂಟ್ @ ರೂ.19,000/– ಮಾಸಿಕ ವೇತನ | 2,28,000 |
| 6. | ಇಬ್ಬರು ಸಹಾಯಕ ಕಂ ಕಂಪ್ಯೂಟರ್ ಆಪರೇಟರ್‌ಗಳು @ ರೂ.19,000/– ಮಾಸಿಕ ವೇತನದೊಂದಿಗೆ | 4,56,000 |
| 7. | ಮಿಷನ್ ನಿರ್ದೇಶಕರಿಗೆ ಓರ್ವ ಸ್ಟೆನೊಗ್ರಾಫರ್ @ ರೂ.19,000/– ಮಾಸಿಕ ವೇತನದೊಂದಿಗೆ | 2,28,000 |
| | ಒಟ್ಟು | 60,72,000 |

*ಗಮನಿಸಿ: ಎಲ್ಲಾ ಹುದ್ದೆಗಳನ್ನು ಕರಾರು ಒಪ್ಪಂದದ (ಗುತ್ತಿಗೆ) ಆಧಾರದ ಮೇಲೆ ತುಂಬುವುದು*

### 1.2 ಕೇಂದ್ರ ಯೋಜನಾ ಬೆಂಬಲ ಘಟಕಕ್ಕೆ (ಸಿಪಿಎಸ್‌ಯು) ಹಣಕಾಸಿನ ನೆರವು

| ಕ್ರ. ಸಂ. | ಹುದ್ದೆ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಖುರ್ಚಿಗಳು, ಕಪಾಟುಗಳು, ಜೆರಾಕ್ಸ್ ಯಂತ್ರ, ಇತ್ಯಾದಿ) | 20,00,000 |
| 2. | ಯುಪಿಎಸ್ ಜೊತೆಗೆ 12 ಕಂಪ್ಯೂಟರ್‌ಗಳು (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು, ಫ್ಯಾಕ್ಸ್ ಯಂತ್ರ | 5,10,000 |
| 3. | ಸ್ವತಂತ್ರ ಮೂರನೇ ಪಾರ್ಟಿಯೊಬ್ಬರಿಂದ ಯೋಜನೆಯ ಮೌಲ್ಯಮಾಪನ1 | 10,00,000 |
| | **ಒಟ್ಟು** | **1,25,10,000** |
| **B. ಆವರ್ತಕ ವೆಚ್ಚ (ವಾರ್ಷಿಕ)** | | |
| 3. | ಕಚೇರಿ ಕಟ್ಟಡದ ಬಾಡಿಗೆ @ ರೂ.1.00 ಮಾಸಿಕ | 12,00,000 |
| 4. | ಸಿಬ್ಬಂದಿ ವೇತನ (ಮೇಲೆ ಕೋಷ್ಟಕ 1.1 ರಲ್ಲಿ ನೀಡಿರುವಂತೆ) | 60,72,000 |
| 5. | ಪ್ರಯಾಣ ಭತ್ಯೆ | 15,00,000 |
| 6. | ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ | 25,00,000 |
| 7. | ವಕಾಲತ್ತು ಹಾಗೂ ಅರಿವು ಮೂಡಿಸುವ ಚಟುವಟಿಕೆಗಳಿಗೆ | 25,00,000 |
| 8. | ವೆಬ್ ಪೋರ್ಟಲ್ 'ಟ್ರ್ಯಾಕ್‌ಚೈಲ್ಡ್' ನಿರ್ವಹಣೆಗೆ | 2,50,00,000 |
| 9. | ಪ್ರಾದೇಶಿಕ ಸಲಹಾಗಾರರು (ಐವರು) | 10,00,000 |
| 10. | ಏಕಕಾಲೀನ ನಿಗಾವಣೆ | 25,00,000 |

| | | |
|---|---|---|
| 11. | ವಿದೇಶ ಪ್ರಯಾಣ, ಅಧ್ಯಯನ ಪ್ರವಾಸಗಳು ಹಾಗೂ ವಿದೇಶದಲ್ಲಿ ಅತ್ಯುತ್ತಮ ಅಭ್ಯಾಸಗಳ ಕಲಿಕೆ | 50,00,000 |
| 12. | ಟ್ಯಾಕ್ಸಿ ಹಾಗೂ ಸಿಬ್ಬಂದಿ/ ಸಲಹಾಗಾರರ ಸೇವೆಗಳನ್ನು ಪಡೆಯುವುದು ಒಳಗೊಂಡಂತೆ ಆಡಳಿತ ವೆಚ್ಚಗಳು | 25,00,000 |
| 13. | ಸಭೆಗಳು, ವಾಹನ ಬಾಡಿಗೆಗೆ, ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ವೆಚ್ಚಗಳು | 5,00,000 |
| | **ಒಟ್ಟು** | **5,50,00,000** |
| | **ಒಟ್ಟು ವೆಚ್ಚ (ಎ+ಬಿ)** | **7,35,82,000** |

***1 ಅಗತ್ಯದ ಪ್ರಕಾರ ಸಚಿವಾಲಯದಿಂದ ಹಣವನ್ನು ಹಂಚಿಕೆ ಮಾಡಲಾಗುವುದು***

*ಗಮನಿಸಿ: ಮಧ್ಯಂತರ ಅವಧಿಯಲ್ಲಿ ಯಾವುದೇ ಅನಾವರ್ತ ವೆಚ್ಚದ ಅಂಶದ ಕೋರಿಕೆಯನ್ನು, ಯೋಜನೆ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯೊಂದಿಗೆ ಒದಗಿಸಲಾಗುವುದು.*

## 2. ರಾಜ್ಯ ಯೋಜನಾ ಬೆಂಬಲ ಘಟಕ (ಎಸ್‌ಪಿಎಸ್‌ಯು)

### 2.1 ಸಿಬ್ಬಂದಿ ಬಲ

| ಕ್ರ. ಸಂ. | ಹುದ್ದೆ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು @ ರೂ.35,000 ಮಾಸಿಕ ವೇತನದೊಂದಿಗೆ | 4,20,000 |
| 2. | ಇಬ್ಬರು ಯೋಜನಾ ಅಧಿಕಾರಿಗಳು @ ರೂ.26,250 ಮಾಸಿಕ ವೇತನದೊಂದಿಗೆ | 6,30,000 |
| 3. | ಓರ್ವ ಆಡಳಿತ ಅಧಿಕಾರಿ @ ರೂ.17,500 ಮಾಸಿಕ ವೇತನದೊಂದಿಗೆ | 2,10,000 |
| 4. | ಓರ್ವ ಸಹಾಯಕರು ಕಂ ಕಂಪ್ಯೂಟರ್ ಆಪರೇಟರ್ @ ರೂ.10,000 ಮಾಸಿಕ ವೇತನದೊಂದಿಗೆ | 1,20,000 |
| | **ಒಟ್ಟು** | **13,80,000** |

*ಗಮನಿಸಿ: ಎಲ್ಲಾ ಹುದ್ದೆಗಳನ್ನು ಕರಾರು ಒಪ್ಪಂದದ (ಗುತ್ತಿಗೆ) ಆಧಾರದ ಮೇಲೆ ತುಂಬುವುದು*

## 2.2 ರಾಜ್ಯ ಯೋಜನಾ ಬೆಂಬಲ ಘಟಕಕ್ಕಾಗಿ (ಎಸ್‌ಪಿಎಸ್‌ಯು) ಹಣಕಾಸಿನ ಬೆಂಬಲ

| ಕ್ರ. ಸಂ. | ಹುದ್ದೆ | ಮೊತ್ತ (ರೂ.ಗಳಲ್ಲಿ) |
|---|---|---|
| **A.** | **ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | |
| 1. | ಪೀಠೋಪಕರಣ ಹಾಗೂ ಕಚೇರಿ ಉಪಕರಣಗಳು (ಮೇಜುಗಳು, ಕುರ್ಚಿಗಳು, ಕಪಾಟುಗಳು, ಜೆರಾಕ್ಸ್ ಯಂತ್ರ, ಇತ್ಯಾದಿ) | 6,00,000 |
| 2. | ಯುಪಿಎಸ್ ಜೊತೆ ಐದು ಕಂಪ್ಯೂಟರ್‌ಗಳು (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು–ಕಂ–ಫ್ಯಾಕ್ಸ್ ಯಂತ್ರ | 2,25,000 |
| | **ಒಟ್ಟು** | **8,25,000** |
| **B.** | **ಆವರ್ತಕ ವೆಚ್ಚ (ವಾರ್ಷಿಕ)** | |
| 3. | ಕಚೇರಿ ಸ್ಥಳದ ಬಾಡಿಗೆ @ ರೂ.25,000 ತಿಂಗಳಿಗೆ1 | 3,00,000 |
| 4. | ಸಿಬ್ಬಂದಿ ವೇತನ (ಮೇಲೆ ಕೋಷ್ಠಕ 2.1ರಲ್ಲಿ ನೀಡಿರುವಂತೆ) | 13,80,000 |
| 5. | ಪ್ರಯಾಣ ಭತ್ಯೆ | 7,00,000 |
| 6. | ಟ್ಯಾಕ್ಸಿ ಹಾಗೂ ಸಿಬ್ಬಂದಿ/ ಸಲಹಾಗಾರರ ಬಾಡಿಗೆ ಒಳಗೊಂಡಂತೆ ಆಡಳಿತ ವೆಚ್ಚಗಳು | 7,00,000 |
| 7. | ತರಬೇತಿ, ಸಾಮರ್ಥ್ಯಾಭಿವೃದ್ಧಿ, ಐಇಸಿ ಹಾಗೂ ವಕಾಲತ್ತು, ನಿಗಾವಣೆ | 12,00,000 |
| 8. | ಸಭೆಗಳು, ವಾಹನ ಬಾಡಿಗೆ ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ವೆಚ್ಚಗಳು | 2,00,000 |
| | **ಒಟ್ಟು** | **31,00,000** |
| | **ಒಟ್ಟು ವೆಚ್ಚ (ಎ+ಬಿ)** | **53,05,000** |

*1 ಒಂದು ವೇಳೆ ರಾಜ್ಯ ಸರ್ಕಾರಗಳು ಕಚೇರಿ ಸ್ಥಳಾವಕಾಶ ಒದಗಿಸದಿದ್ದರೆ*

*ಗಮನಿಸಿ: ಮಧ್ಯಂತರ ಅವಧಿಯಲ್ಲಿ ಯಾವುದಾದರೂ ಅನಾವರ್ತಕ ವೆಚ್ಚದ ಅಂಶಕ್ಕೆ ಸಂಬಂಧಿಸಿದ ಬೇಡಿಕೆ ಇದ್ದರೆ, ಯೋಜನೆ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯೊಂದಿಗೆ ಒದಗಿಸಲಾಗುವುದು.*

## ಅನುಬಂಧ V – ಸಹಭಾಗಿತ್ವ

**1**. ಮಕ್ಕಳಿಗೆ ರಕ್ಷಣಾತ್ಮಕ ಪರಿಸರವನ್ನು ಒದಗಿಸಲು ಐಸಿಪಿಎಸ್, ಇತರೆ ಪೂರಕ ಇಲಾಖೆಗಳು, ಏಜೆನ್ಸಿಗಳು, ಸಂಸ್ಥೆಗಳು ಹಾಗೂ ಭಾಗೀದಾರರೊಂದಿಗೆ ಸಹಭಾಗಿತ್ವವನ್ನು ಸಾಧಿಸಲು ಪ್ರೋತ್ಸಾಹಿಸುತ್ತದೆ. ಉದಾಹರಣೆಗೆ, ರೈಲ್ವೆ ನಿಲ್ದಾಣದಲ್ಲಿ ಮನೆಯಿಂದ ಓಡಿ ಬಂದಿರುವ ಒಂದು ಮಗು ದೊರೆತರೆ ಆ ಮಗುವಿಗೆ ಈ ಕೆಳಕಂಡ ಸೇವೆಗಳ ಅಗತ್ಯವಿರುತ್ತದೆ:

(i) ರೈಲ್ವೆ ಪೊಲೀಸರು/ ಕಾರ್ಮಿಕ ಇಲಾಖೆ/ ಚೈಲ್ಡ್‌ಲೈನ್ ಸೇವೆ ವತಿಯಿಂದ ರಕ್ಷಣೆ

(ii) ಚೈಲ್ಡ್‌ಲೈನ್‌ನ ಸಾಮಾಜಿಕ ಕಾರ್ಯಕರ್ತರೊಬ್ಬರಿಂದ ಮೊದಲ ಹಂತದ ಮಧ್ಯಸ್ಥಿಕೆ

(iii) ಜಿಲ್ಲಾ ಆರೋಗ್ಯ ಇಲಾಖೆಯಿಂದ ವೈದ್ಯಕೀಯ ತಪಾಸಣೆ

(iv) ಪೊಲೀಸರ ನೆರವಿನೊಂದಿಗೆ ಕುಟುಂಬವನ್ನು ಪತ್ತೆ ಹಚ್ಚುವುದು

(v) ಸಿಡಬ್ಲ್ಯೂಸಿ ಮುಂದೆ ಹಾಜರುಪಡಿಸುವುದು

(vi) ನಾಗರಿಕ ಸಮಾಜದ ಓರ್ವ 'ಅರ್ಹ ವ್ಯಕ್ತಿ' ಯೊಂದಿಗೆ ಅಥವಾ 'ಅರ್ಹ ಸಂಸ್ಥೆ' ಯೊಂದಿಗೆ ಮಗುವನ್ನು ನಿಯೋಜಿಸುವುದು;

a) ಅರ್ಹ ಸಂಸ್ಥೆ ವತಿಯಿಂದ **ವೈಯಕ್ತಿಕ ಪೋಷಣಾ ಯೋಜನೆ**ಯನ್ನು ಅಭಿವೃದ್ಧಿಪಡಿಸುವುದು ಹಾಗೂ ನಾಗರಿಕ ಸಮಾಜದ ಸದಸ್ಯರಿಂದ ರಚಿಸಲ್ಪಟ್ಟಿರುವಂತಹ ಗೃಹ ನಿರ್ವಹಣಾ ಸಮಿತಿ ವತಿಯಿಂದ ಕ್ರಮಬದ್ಧವಾದ ಅನುಸರಣೆ ಮತ್ತು ನಿಗಾವಣೆ

b) ಮಗುವಿನ ನಿಜವಾದ ಪೋಷಕರು ಸಿಗದೇ ಹೋದ ಸಂದರ್ಭದಲ್ಲಿ, ಎಸ್‌ಎಎ, ಸಿಡಬ್ಲ್ಯೂಸಿ, ಎಸ್‌ಎಆರ್‌ಎ, ಸಿಎಆರ್‌ಎ ಹಾಗೂ ಜಿಲ್ಲಾ ನ್ಯಾಯಾಲಯಗಳ ನೆರವಿನೊಂದಿಗೆ ದತ್ತು/ಫಾಸ್ಟರ್ ಕೇರ್ ಮೂಲಕ ಮಗುವಿಗೆ ಕುಟುಂಬ ಪರಿಸರದಲ್ಲಿ ಇರಿಸುವುದು;

c) ಶಿಕ್ಷಣ ಇಲಾಖೆ ವತಿಯಿಂದ ವಿಶೇಷವಾಗಿ ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯ ನೆರವಿನೊಂದಿಗೆ ಶಿಕ್ಷಣ ಒದಗಿಸುವುದು (ಸೇತುಬಂಧ ಶಿಕ್ಷಣ ಒಳಗೊಂಡಂತೆ)

d) ಆರೋಗ್ಯ ಇಲಾಖೆಯಿಂದ ಕ್ರಮಬದ್ಧವಾದ ಆರೋಗ್ಯ ತಪಾಸಣೆ

e) ಕಾನೂನು ಇಲಾಖೆ ಹಾಗೂ ಸಿಡಬ್ಲ್ಯೂಸಿ ವತಿಯಿಂದ ಕಾನೂನು ಬೆಂಬಲ


f) ಸಾಮಾಜಿಕ ಕಾರ್ಯಕರ್ತರ ಆಪ್ತಸಮಾಲೋಚನೆ ಹಾಗೂ ಮಾರ್ಗದರ್ಶನ

g) ಐಟಿಐ ಗಳು, ಜನ ಶಿಕ್ಷಣ ಸಂಸ್ಥಾನ ಹಾಗೂ ಪಾಲಿಟೆಕ್ನಿಕ್‌ಗಳ ನೆರವಿನೊಂದಿಗೆ ವೃತ್ತಿಪರ ತರಬೇತಿ;

h) ಮಗುವನ್ನು ಕುಟುಂಬದೊಂದಿಗೆ ಸೇರ್ಪಡೆ ಮಾಡಲಾಗದಿದ್ದಂತಹ ಸಂದರ್ಭದಲ್ಲಿ ಆಫ್ಟರ್ ಕೇರ್ ಸೇವೆ ನೀಡುವುದು.

**(vii) ಪೊಲೀಸ್/ ಕಾರ್ಮಿಕ ಇಲಾಖೆ/ ಪಿಆರ್ಐ (ಪಂಚಾಯತ್ ರಾಜ್ ಸಂಸ್ಥೆ)ಗಳ ನೆರವಿನೊಂದಿಗೆ ಮಗುವಿನ ವಾಪಸಾತಿ**


**2**. ಮೇಲಿನ ಉದಾಹರಣೆಯಿಂದ ಕಂಡು ಬರುವಂತೆ, ಮಗುವಿನ ರಕ್ಷಣೆಗೆ ಸಂಬಂಧಪಟ್ಟ ಯಾವುದೇ ಮಧ್ಯಸ್ಥಿಕೆ ಯಶಸ್ವಿಯಾಗಲು ವಿವಿಧ ಇಲಾಖೆಗಳ ಸೇವೆಗಳು ಸಹಭಾಗಿತ್ವಗೊಳ್ಳುವಿಕೆ ಅಗತ್ಯ. ಆದಾಗ್ಯೂ, ಒಳಗೊಂಡಿರುವ ವಿವಿಧ ಇಲಾಖೆಗಳಿಗೆ ಈ ವಿವಿಧ ಸೇವೆಗಳು ಸಹಭಾಗಿತ್ವವಾಗಲು ಒಂದು ವೇದಿಕೆಯ ಅಗತ್ಯವಿದೆ. ಐಸಿಪಿಎಸ್ ಈ ದೇಶದ ಮಕ್ಕಳ ಅಗತ್ಯಗಳ ಸಮಗ್ರ ಪರಿಹಾರಕ್ಕಾಗಿ, ಈ ರೀತಿ ಅಗತ್ಯ ಸೇವೆಗಳು ಸಹಭಾಗಿತ್ವಗೊಳ್ಳುವುದಕ್ಕೆ ವೇದಿಕೆಯನ್ನು ಕಲ್ಪಿಸುತ್ತದೆ. ಈ ಅಗತ್ಯಗಳನ್ನು ಪೂರೈಸಲು ಅಗತ್ಯವಿರುವ ವಿವಿಧ ಸೇವೆಗಳನ್ನು ಒದಗಿಸಲು ಅಗತ್ಯವುಳ್ಳ ವಿವಿಧ ಇಲಾಖೆಗಳು ಹಾಗೂ ಮಕ್ಕಳ ಅಗತ್ಯಗಳ ವಿವರಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ:



**ಮಕ್ಕಳಿಗಾಗಿ ಸೇವೆಗಳ ಸಹಭಾಗಿತ್ವ** (ಮೇಲಿನ ಚಾರ್ಟನ ವಿವರ)

- **ಪೋಷಣೆ, ರಕ್ಷಣೆ, & ಪುನರ್ವಸತಿ:** ಡಬ್ಲ್ಯೂಸಿಡಿ ರೈಲ್ವೆ, ಕಾರ್ಮಿಕ, ಪೊಲೀಸ್, ಎನ್‌ಜಿಒ ಗಳು, ಸಿಡಬ್ಲ್ಯೂಸಿ ಗಳು, ಜೆಜೆಬಿ ಗಳು, ಪಿಆರ್‌ಐ ಗಳು, ಯುಎಲ್‌ಬಿ ಗಳು, ಸಮುದಾಯ ಹಾಗೂ ಕುಟುಂಬ
- ಸಿಪಿ **ಸೇವೆಗಳು:** ಎಸ್‌ಸಿಪಿಎಸ್, ಡಿಸಿಪಿಯು, ಸರ್ಕಾರಿ ಸಂಸ್ಥೆಗಳು, ಚೈಲ್ಡ್‌ಲೈನ್ & ಎನ್‌ಜಿಒ ಗಳು
- **ತರಬೇತಿ & ಸಾಮರ್ಥ್ಯಾಭಿವೃದ್ಧಿ:** ಎಸ್‌ಸಿಪಿಎಸ್, ಡಿಸಿಪಿಯು, ಎನ್‌ಐಪಿಸಿಸಿಡಿ, ಎನ್‌ಐಎಸ್‌ಡಿ, ಆಡಳಿತ ಕಾಲೇಜುಗಳು, ಪೊಲೀಸ್ ಹಾಗೂ ನ್ಯಾಯಾಂಗ ಅಕಾಡೆಮಿಗಳು
- **ನಿಗಾವಣೆ:** ಪಿಆರ್‌ಐ ಗಳು, ಯುಎಲ್‌ಬಿ ಗಳು, ಜಿಲ್ಲಾಡಳಿತ, ಐಸಿಪಿಎಸ್ ಅಡಿ ಎಸ್‌ಸಿಪಿಸಿ & ಡಿಸಿಪಿಸಿ
- **ವೃತ್ತಿಪರ ತರಬೇತಿ:** ಐಟಿಐ ಗಳು ಹಾಗೂ ಪಾಲಿಟೆಕ್ನಿಕ್
- **ಮಕ್ಕಳ ಸಹಾಯವಾಣಿ:** ಡಬ್ಲ್ಯೂಸಿಡಿ, ರೈಲ್ವೆ, ಡಿಒಟಿ, ಕಾರ್ಮಿಕ, ಆರೋಗ್ಯ, ಗೃಹ, ಪೊಲೀಸ್
- **ಸಾಂಸ್ಥಿಕೇತರ ಪೋಷಣೆ:** ಸಿಎಆರ್‌ಎ ಮೂಲಕ ಡಬ್ಲ್ಯೂಸಿಡಿ, ಸಿಎಆರ್‌ಎ, ಎಸ್‌ಎಎಗಳು ಹಾಗೂ ಡಿಸಿಪಿಯು
- **ಅಭಿವೃದ್ಧಿ:** ಐಸಿಡಿಎಸ್ ಮೂಲಕ ಡಬ್ಲ್ಯೂಸಿಡಿ, ಆಹಾರ ಹಾಗು ಪೋಷಣಾ ಮಂಡಳಿ
- **ಕಾನೂನು ಬೆಂಬಲ:** ರಾಜ್ಯ ಕಾನೂನು ನೆರವು ಬೆಂಬಲ ಸೇವೆಗಳು, ಐಸಿಪಿಎಸ್ ಅಡಿ ಡಿಸಿಪಿಯುದಲ್ಲಿರುವ ಕಾನೂನು ಅಧಿಕಾರಿಗಳು
- **ಕಾನೂನು ನ್ಯಾಯ ಹಾಗೂ ಪುನರ್ವಸತಿ:** ಸಿಡಬ್ಲ್ಯೂಸಿ, ಜೆಜೆಬಿ, ಉಚ್ಛ ನ್ಯಾಯಾಲಯಗಳು ಹಾಗೂ ಜಿಲ್ಲಾ ನ್ಯಾಯಾಲಯಗಳು
- **ಆರೋಗ್ಯ:** ಎನ್‌ಆರ್‌ಹೆಚ್‌ಎಂ, ಎನ್‌ಎಸಿಡಿ, ಎಸ್‌ಎಸಿಎಸ್ ಅಡಿ ಜಿಲ್ಲಾ ಆರೋಗ್ಯ ಸೊಸೈಟಿ
- **ಶಿಕ್ಷಣ:** ಸರ್ವ ಶಿಕ್ಷಣ ಅಭಿಯಾನ, ನ್ಯಾಷನಲ್ ಓಪನ್ ಸ್ಕೂಲ್, ಐಸಿಡಿಎಸ್ & ಐಸಿಪಿಎಸ್ ಮೂಲಕ ಡಬ್ಲ್ಯೂಸಿಡಿ

**3. ಐಸಿಪಿಎಸ್, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ಹಾಗೂ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಅಗತ್ಯಗಳನ್ನು ಗುರುತಿಸುತ್ತದೆ** ಹಾಗೂ ಸಮಯೋಚಿತ ಹಾಗೂ ಸೂಕ್ತ ಮಧ್ಯಸ್ಥಿಕೆಗಳಿಗಾಗಿ ಸಂಬಂಧಪಟ್ಟ ಇತರೆ ಪೂರಕ ಇಲಾಖೆಗಳೊಂದಿಗೆ ಪಾರ್ಶ್ವ ಸಂಪರ್ಕಗಳನ್ನು ಒದಗಿಸುವ ಮೂಲಕ ಅವರ ಅಗತ್ಯಗಳನ್ನು ಪೂರೈಸುತ್ತದೆ. ಇದಕ್ಕೆ ಪ್ರತಿಯಾಗಿ, ಅಗತ್ಯವಿರುವ ಕಡೆ, ಐಸಿಪಿಎಸ್ ಮಕ್ಕಳ ಹಾಲಿ ಕಾರ್ಯಕ್ರಮಗಳಡಿ ಸೂಚಿಸಲಾಗಿರುವ ಸೇವೆಗಳನ್ನು ಒದಗಿಸಲು ಇತರೆ ಇಲಾಖೆಗಳಿಗೆ ಒಂದು ವೇದಿಕೆಯನ್ನು ಕಲ್ಪಿಸುತ್ತದೆ. ಉದಾಹರಣೆಗೆ, ಐಸಿಪಿಎಸ್, ಹೆಚ್‌ಐವಿ/ಏಡ್ಸ್ ಸೋಂಕಿತ ಮಕ್ಕಳು ಒಳಗೊಂಡಂತೆ ವಿಶೇಷ ಅಗತ್ಯಗಳಿರುವಂತಹ ಮಕ್ಕಳಿಗೆ ಬೆಂಬಲವನ್ನು ಒದಗಿಸುತ್ತದೆ. ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳನ್ನು ತಲುಪಲು ಹಾಗೂ ಅವರಿಗೆ ಅಗತ್ಯ ಸೇವೆಗಳನ್ನು ಒದಗಿಸಲು ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತದೆ. ಈ ಯೋಜನೆಯು ಇಂತಹ ಮಕ್ಕಳಿಗೆ ಸಾಂಸ್ಥಿಕ ಹಾಗೂ ಸಾಂಸ್ಥಿಕೇತರ ಅವಕಾಶದೊಂದಿಗೆ ಹೆಚ್ಚುವರಿ ಪೌಷ್ಠಿಕತೆ ಅಥವಾ ವೈದ್ಯಕೀಯ ಅಗತ್ಯಗಳ ಬೆಂಬಲವನ್ನು ಒದಗಿಸುತ್ತದೆ. ಈ ಕೆಳಗಿರುವ ಚಿತ್ರವು ಜಿಲ್ಲಾಮಟ್ಟದಲ್ಲಿ ಸೇವೆ/ ಇಲಾಖೆಗಳ ಸಹಭಾಗಿತ್ವವನ್ನು ಸೂಚಿಸುತ್ತದೆ:



# ಅನುಬಂಧ VI (ಎ) – 'ತುರ್ತು ಔಟ್‌ರೀಚ್ ಸೇವೆಗಳನ್ನು ಒದಗಿಸುವ 'ಮದರ್ ಎನ್‌ಜಿಒ'

## 1. 'ಮದರ್ ಎನ್‌ಜಿಒ – ಪಾತ್ರಗಳು ಹಾಗೂ ಜವಾಬ್ದಾರಿಗಳು

### 1.1 ಕಾರ್ಯನಿರ್ವಾಹಕ ನಿರ್ದೇಶಕ

i. ಇವರು ಇಡೀ ಸಂಸ್ಥೆಯ ಸಮರ್ಥವಾದ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ;

ii. ಆತ/ಅಕೆ ಯೋಜನಾ ಮಂಜೂರಾತಿ ಸಮಿತಿಯ ಸಭೆಯ ಆಯೋಜನೆಗೆ ಬೇಕಾದ ಅನುಕೂಲಗಳನ್ನು ಒದಗಿಸುತ್ತಾರೆ;

iii. ಆತ/ಆಕೆ **'ಮದರ್ ಎನ್‌ಜಿಒ'** ನ ಹಣಕಾಸು ಸಮಿತಿಯ ಅನುಮೋದನೆಯ ಪ್ರಕಾರ ಎಲ್ಲಾ ಹಣಕಾಸು ವೆಚ್ಚಗಳನ್ನು ಅನುಮೋದಿಸುತ್ತಾರೆ ಹಾಗೂ ಸಮಯೋಚಿತ ನಿಧಿ ಹಂಚಿಕೆಯನ್ನು ಖಾತ್ರಿಪಡಿಸುತ್ತಾರೆ;

iv. ಆತ/ಆಕೆ **'ಮದರ್ ಎನ್‌ಜಿಒ'** ನ ಎಲ್ಲಾ ವಿಷಯಗಳ ಕುರಿತು ಆಡಳಿತ ಮಂಡಳಿಗೆ ವರದಿ ಮಾಡಿಕೊಳ್ಳಲು ಹಾಗೂ ಕಾಲಕಾಲಕ್ಕೆ ಅವರು ನೀಡುವ ನಿರ್ದೇಶನಗಳನ್ನು ಪರಿಗಣಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ;

v. ಆತ/ಆಕೆ ಇಡೀ ದೇಶದಲ್ಲಿನ ಚೈಲ್ಡ್‌ಲೈನ್ (ಮಕ್ಕಳ ಸಹಾಯವಾಣಿ) ಸೇವೆಗಗಳ ಸಂಯೋಜನೆ ಹಾಗೂ ಎಂಡಬ್ಲ್ಯೂಸಿಡಿಗೆ ನಿಯತಕಾಲಿಕ (ಕಾಲ ಕಾಲಕ್ಕೆ) ವರದಿಗಳನ್ನು ಕಳುಹಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ;

vi. ಆತ/ಆಕೆ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿವಿಧ ವೇದಿಕೆಗಳಲ್ಲಿ ಸಂಸ್ಥೆಯನ್ನು ಪ್ರತಿನಿಧಿಸಲು ಜವಾಬ್ದಾರರಾಗಿರುತ್ತಾರೆ;

vii. ಆತ/ಆಕೆ ಕೇಂದ್ರ ಸರ್ಕಾರ, ಕಾರ್ಪೊರೇಟ್ ಹಾಗೂ ಇತರೆ ದಾನಿಗಳೊಂದಿಗೆ ಸಂಬಂಧಗಳನ್ನು ಬೆಸೆಯುವ ಹಾಗೂ ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುವ ರಾಯಭಾರಿಯಾಗಿರುತ್ತಾರೆ.

### 1.2 ಉಪ ಕಾರ್ಯನಿರ್ವಾಹಕ ನಿರ್ದೇಶಕ/ ಜನರಲ್ ಮ್ಯಾನೇಜರ್ (ಕಾರ್ಯಕ್ರಮಗಳು ಹಾಗೂ ಸೇವೆಗಳು)

i. ಆತ/ಆಕೆ ಕಾರ್ಯನಿರ್ವಾಹಕ ನಿರ್ದೇಶಕರಿಗೆ ವರದಿ ಮಾಡಿಕೊಳ್ಳಬೇಕು;

ii. ಆತ/ಆಕೆ **'ಮದರ್ ಎನ್‌ಜಿಒ'** ನ ಎಲ್ಲಾ ಪ್ರಾದೇಶಿಕ ಕಚೇರಿಗಳ ಸಮರ್ಥ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ;

iii. ಆತ/ಆಕೆ ಎಲ್ಲಾ ಪ್ರದೇಶಗಳಲ್ಲಿಯೂ ಚೈಲ್ಡ್‌ಲೈನ್ ಸೇವೆಗಳ (ಮಕ್ಕಳ ಸಹಾಯವಾಣಿ) ವಿಸ್ತರಣೆ ಹಾಗೂ ಉಸ್ತುವಾರಿಯ ಎಲ್ಲಾ ಗುರಿಗಳ ಪೂರೈಕೆಯನ್ನು ಖಾತ್ರಿಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ;

iv. ಆತ/ಆಕೆ ಪ್ರತಿ ಪ್ರಾದೇಶಿಕ ಕಚೇರಿಯ ಗುಣಮಟ್ಟ ನಿಯಂತ್ರಣವನ್ನು ಖಾತ್ರಿಪಡಿಸುವುದು ಕಾರ್ಯಕ್ಷಮತೆಯನ್ನು ಖಾತ್ರಿಪಡಿಸುವುದು ಹಾಗೂ ಚೈಲ್ಡ್‌ಲೈನ್‌ನ ಪಾಲುದಾರರು ಒದಗಿಸುವ ಸೇವೆಗಳ ಗುಣಮಟ್ಟವನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ;

v. ಆತ/ಆಕೆ 'ಮದರ್ ಎನ್‌ಜಿಒ' ಸಿಬ್ಬಂದಿಗಳು ಹಾಗೂ ನಗರ/ಜಿಲ್ಲೆಯಲ್ಲಿರುವ ಇತರೆ ಬೆಂಬಲ ನೀಡುವ ರಚನೆಗಳ (ಪೂರಕ ವ್ಯವಸ್ಥೆಗಳು) ಸಿಬ್ಬಂದಿಗಳ ತರಬೇತಿ ಅಗತ್ಯಗಳನ್ನು ಗುರುತಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ;

vi. ಆತ/ಆಕೆ ಯೋಜನಾ ಮಂಜೂರಾತಿ ಸಮಿತಿಯ ಸಭೆಗಳನ್ನು ಆಯೋಜಿಸಲು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಹಾಯವನ್ನು ಒದಗಿಸಬೇಕು;

vii. ಆತ/ಆಕೆ ಪ್ರಾದೇಶಿಕ ಮುಖ್ಯಸ್ಥರಿಗೆ ಮಾರ್ಗದರ್ಶನ ನೀಡುವುದು ಹಾಗೂ ಅವರು ನೀಡಿರುವ ಗುರಿಗಳನ್ನು ತಲುಪುವುದನ್ನು ಖಾತ್ರಿಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ;

viii. ಆತ/ಅಕೆ 'ಮದರ್ ಎನ್‌ಜಿಒ' ದಿಂದ ಪ್ರಾದೇಶಿಕ ಕಚೇರಿಗೆ ಹಾಗೂ ಪ್ರತಿಕ್ರಮವಾಗಿ ಮಾಹಿತಿ ಹಾಗೂ ಸಂವಹನೆಯ ಸಮಯೋಚಿತ ಹರಿವನ್ನು ಖಾತ್ರಿಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ;

ix. ಆತ/ಆಕೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವೇದಿಕೆಗಳಲ್ಲಿ ಸಂಸ್ಥೆಯನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

## 1.3. ಮುಖ್ಯಸ್ಥರು: ಆಡಳಿತ ಹಾಗೂ ಹಣಕಾಸು

i. ಸುಸ್ಥಿರ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸುವುದು

ii. ಯಾವುದೇ ಸಮಯದಲ್ಲಿಯೂ ಹಣಕಾಸಿನ ಮಾಹಿತಿಯ ಲಭ್ಯತೆಯನ್ನು ಖಾತ್ರಿಪಡಿಸಲು ಸಂಸ್ಥೆಯಲ್ಲಿ ಬಲಿಷ್ಠವಾದ ಎಂಐಎಸ್ ಅಭಿವೃದ್ಧಿಪಡಿಸಿವುದು;

iii. ಎಲ್ಲಾ ಹಣಕಾಸು ಪ್ರಕ್ರಿಯೆಗಳ ಕುರಿತು ಸಂಪೂರ್ಣವಾದ ಸ್ಪಷ್ಟತೆಯೊಂದಿಗೆ ಸಮಗ್ರವಾದ ಪ್ರಕ್ರಿಯಾ ಕೈಪಿಡಿ ಅಭಿವೃದ್ಧಿಯನ್ನು ಖಾತ್ರಿಪಡಿಸುವುದು;

iv. ಹಣಕಾಸು ಶಿಫಾರಸ್ಸುಗಳು, ಲೆಕ್ಕಗಳ ಪರಿಶೀಲನೆ, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರಕ್ಕೆ ಕಳುಹಿಸಿರುವಂತಹ ಅರ್ಜಿಗಳ ನಿರ್ವಹಣೆಯಲ್ಲಿ ಸೇವಾ ಇಲಾಖೆಗೆ ಅಗತ್ಯ ನೆರವನ್ನು ಒದಗಿಸುವುದು;

v. ಭಾರತ ಸರ್ಕಾರ, ಸಾಂಸ್ಥಿಕ ನಿಧಿ ಒದಗಿಸುವವರು, ಕಾರ್ಪೊರೇಟ್, ಇತ್ಯಾದಿಗಳಂತಹ ವಿವಿಧ ದಾನಿಗಳಿಂದ ಪಡೆಯವಂತಹ ನಿಧಿಗಳ ಮೇಲೆ ಸಂಪೂರ್ಣ ಆಯವ್ಯಯ ನಿಯಂತ್ರಣ ಹೊಂದಲು ವೆಚ್ಚಗಳ ಮೇಲೆ ನಿಕಟವಾದ ನಿಗಾವಹಿಸುವಿಕೆಯನ್ನು ನಿರೀಕ್ಷಿಸಲಾಗಿದೆ;

vi. ನಿಧಿಯ ಸಮಯೋಚಿತ ಮಂಜೂರಾತಿ ಹಾಗೂ ಬಳಕೆ ಪ್ರಮಾಣಪತ್ರಗಳನ್ನು ಕಳುಹಿಸುವುದನ್ನು ಖಾತ್ರಿಪಡಿಸಲು ಭಾರತ ಸರ್ಕಾರದೊಂದಿಗೆ ನಿರಂತರ ಅನುಸರಣೆ;

vii. 'ಮದರ್ ಎನ್‌ಜಿಒ'ನ ಕಾರ್ಯಾಚರಣೆಗಳನ್ನು ಮುಖ್ಯವಾಹಿನಿಗೊಳಿಸುವುದು ಹಾಗೂ ಆಯವ್ಯಯಗಳ ಮೇಲೆ ಬಿಗಿಯಾದ ಹಣಕಾಸಿನ ನಿಯಂತ್ರಣವನ್ನು ಹೊಂದುವುದು;

viii. ತೆರಿಗೆ ಇಲಾಖೆಗಳು, ಸೊಸೈಟಿಗಳ ರಿಜಿಸ್ಟ್ರಾರ್/ಚಾರಿಟಿ ಆಯುಕ್ತರು, ಇತ್ಯಾದಿ ಕಚೇರಿಗಳಿಗೆ ಸಲ್ಲಿಸುವ ಲೆಕ್ಕಗಳು ಹಾಗೂ ರಿಟರ್ನ್‌ಗಳ ಸಲ್ಲಿಕೆಯ ಅನುವರ್ತನೆ;

ix. 'ಮದರ್ ಎನ್‌ಜಿಒ' ದ ಮಾನವ ಸಂಪನ್ಮೂಲಗಳ ನೀತಿಯ ಅನುಷ್ಠಾನ;

x. ಕಾರ್ಯಾಗಾರಗಳ ಆಯೋಜನೆಗೆ ಬೇಕಾಗುವಂತಹ ವ್ಯವಸ್ಥೆಗಳು, ವಿಮಾ ದಾಖಲೆ ಪತ್ರಗಳು ಹಾಗೂ ಎಎಂಸಿಎಸ್ (AMCS) ಗಳಂತಹ ಆಸ್ತಿಗಳಿಗೆ ಸಂಬಂಧಪಟ್ಟ ನಿರ್ವಹಣೆ, ಆಸ್ತಿಗಳ ಖರೀದಿ, ದುರಸ್ತಿ ಹಾಗೂ ನಿರ್ವಹಣೆ, ಪ್ರಯಾಣದ ಬುಕ್ಕಿಂಗ್‌ಗಳು, ಇತ್ಯಾದಿಗಳಂತಹ ಕೆಲಸಗಳಿಗೆ ಬೇಕಾಗುವ ವ್ಯವಸ್ಥೆಗೆ ಸಂಬಂಧಪಟ್ಟಂತೆ ಅಗತ್ಯ ಆಡಳಿತ ಬೆಂಬಲವನ್ನು ಒದಗಿಸುವುದು.

## 1.4. ಮುಖ್ಯಸ್ಥರು: ಸಂಶೋಧನೆ, ದಾಖಲೆ ನಿರ್ವಹಣೆ ಹಾಗೂ ತರಬೇತಿ

i. ಸಂಸ್ಥೆಯ ಒಳಗೆ ಹಾಗೂ ನೆಟ್‌ವರ್ಕ್ ಒಳಗೆ **ಮಕ್ಕಳ ಹಕ್ಕುಗಳ** ಆಧಾರಿತ ಕಾರ್ಯಕ್ರಮ ನಿರ್ವಹಣೆ ಹಾಗೂ ಅನುಷ್ಠಾನ ವ್ಯವಸ್ಥೆಗಳನ್ನು ವಿನ್ಯಾಸಪಡಿಸುವುದು ಹಾಗೂ ಸಾಂಸ್ಥೀಕರಣಗೊಳಿಸುವುದು;

ii. ಮದರ್ ಎನ್‌ಜಿಒ ದ ಇತರೆ ಇಲಾಖೆಗಳ ಕಾರ್ಯನಿರ್ವಹಣೆಗೆ ಅನುಕೂಲವನ್ನು ಒದಗಿಸುವುದು ಹಾಗೂ ಅವುಗಳನ್ನು ಮಕ್ಕಳ ಹಕ್ಕು ಆಧಾರಿತ ಕಾರ್ಯಕ್ರಮ ವಿಶ್ಲೇಷಣೆ ಮತ್ತು ನಂತರದಲ್ಲಿ ವಿವಿಧ ಹಂತಗಳಲ್ಲಿ ವಕಾಲತ್ತು ಉಪಕ್ರಮಗಳನ್ನು ಕೈಗೊಳ್ಳುವಂತೆ ಸಿದ್ಧಪಡಿಸುವುದು;

iii. 'ಮದರ್ ಎನ್‌ಜಿಒ' ದ ಸೇವೆಗಳ ಇಲಾಖೆಗೆ, ಕರೆ ವಿಶ್ಲೇಷಣೆ, ಮಾಧ್ಯಮಿಕ ದತ್ತಾಂಶ ಮತ್ತು ಸಂಶೋಧನೆಯ ಪರಿಣಾಮಗಳ ಆಧಾರಿತ ಕಾರ್ಯಕ್ರಮ ಉಪಕ್ರಮಗಳ ಕುರಿತು ಪ್ರಮುಖ ಮಾಹಿತಿಯನ್ನು ಒದಗಿಸುವುದು;

iv. 'ಮದರ್ ಎನ್‌ಜಿಒ' ನ ಪ್ರಮುಖ ಸಮಿತಿಯ ಓರ್ವ ಸದಸ್ಯನಾಗಿ ರಾಷ್ಟ್ರ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳುವಿಕೆಗೆ ಅನುಕೂಲವನ್ನು ಒದಗಿಸುವುದು;

v. ಆರ್‌ಡಿಟಿ (ಗ್ರಾಮೀಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿ) ಇಲಾಖೆಯಲ್ಲಿಯ ತಜ್ಞರು/ವೃತ್ತಿಪರರ ತಂಡವನ್ನು ಮುನ್ನಡೆಸುವುದು ಹಾಗೂ ಕಾರ್ಯಕ್ರಮದ ತಲುಪುವಿಕೆ ಹಾಗೂ ಇತರೆ ಉಪಕ್ರಮಗಳಿಗೆ ಗುರಿಗಳನ್ನು ನಿಗದಿಪಡಿಸುವುದು;

vi. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವೇದಿಕೆಗಳಲ್ಲಿ ಸಂಸ್ಥೆಯನ್ನು ಪ್ರತಿನಿಧಿಸುವುದು.

## 1.5. ಮುಖ್ಯಸ್ಥರು: ಅರಿವು ಹಾಗೂ ವಕಾಲತ್ತು

ಆಡಳಿತ ಮಂಡಳಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು ನಿಗದಿಪಡಿಸಿದಂತಹ ವಾರ್ಷಿಕ ಗುರಿಗಳ ಪ್ರಕಾರ ಸಂಪನ್ಮೂಲ ಕ್ರೋಢೀಕರಣ;

i. ದಾನಿ ಸಂಬಂಧಿತ ಕಾರ್ಯಕ್ರಮಗಳ ವಿನ್ಯಾಸ ಹಾಗೂ ಆಯೋಜನೆ;

ii. ಮದರ್ ಎನ್‌ಜಿಒದ ಇತರೆ ಇಲಾಖೆಗಳ ಸಹಕಾರದೊಂದಿಗೆ ದಾನಿ ಸಂವೇದನಾಶೀಲ ಕಾರ್ಯಕ್ರಮಗಳ ಆಯೋಜನೆ;

iii. 1098 ದೂರವಾಣಿ ಕರೆ ಸೇವೆಯ ಕುರಿತು ಹಾಗೂ 'ಮದರ್ ಎನ್‌ಜಿಒ' ದ ಕಾರಣ ಹಾಗೂ ವಿಶ್ವಾಸಾರ್ಹತೆಯ ಕುರಿತು ಅರಿವನ್ನು ಮೂಡಿಸುವುದು;

iv. ಬಾಹ್ಯ ಏಜೆನ್ಸಿಗಳಿಗೆ ಸಂಕ್ಷಿಪ್ತವಾದ ಮಾಹಿತಿ ಒದಗಿಸುವುದು ಹಾಗೂ ಸಂವಹನಾ ಸಾಧನಗಳು ಹಾಗೂ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು;

v. ರಾಷ್ಟ್ರೀಯ ಸಂವಹನಾ ಅಭಿಯಾನಗಳ ಆಯೋಜನೆ ಹಾಗೂ ಸಂಯೋಜನೆ;

vi. 'ಮದರ್ ಎನ್‌ಜಿಒ' ನ ವೆಬ್‌ಸೈಟ್ ಅನ್ನು ಅಭಿವೃದ್ಧಿಪಡಿಸುವುದು ಹಾಗೂ ನಿರ್ವಹಿಸುವುದು ಮತ್ತು ದಾನಿ ಏಜೆನ್ಸಿಗಳು ಹಾಗೂ ಸಾರ್ವಜನಿಕರೊಂದಿಗಿನ ಸಂವಹನೆಯನ್ನು ವೃದ್ಧಿಸಲು ಅಂತರ್ಜಾಲ ಆಧಾರಿತ ಅಭಿಯಾನಗಳನ್ನು ಕೈಗೊಳ್ಳುವುದು;

vii. ಸ್ವಯಂಸೇವಾ ನಿರ್ವಹಣಾ ಕಾರ್ಯಕ್ರಮ ಅಭಿವೃದ್ಧಿ ಹಾಗೂ ಆಯೋಜನೆ;

viii. 'ಮದರ್ ಎನ್‌ಜಿಒ'ನ ಮಧ್ಯಸ್ಥಿಕೆಗಳಿಗೆ ಸಂಬಂಧಪಟ್ಟ ವಿಷಯವಸ್ತುವಿನ ಬಗ್ಗೆ ಮಾಧ್ಯಮ ಪ್ರತಿನಿಧಿಗಳನ್ನು ಸಂವೇದನಾಶೀಲರನ್ನಾಗಿಸಲು ಕಾರ್ಯಕ್ರಮಗಳ ಆಯೋಜನೆ;

ix. 'ಮದರ್ ಎನ್‌ಜಿಒ'ದ ಗುರುತನ್ನು ಹೆಚ್ಚಿಸಲು ಸಾರ್ವಜನಿಕ ಸಂಪರ್ಕಗಳ ನಿರ್ವಹಣೆ ಹಾಗೂ ಮಾಧ್ಯಮ ಪ್ರತಿನಿದಿಗಳೊಂದಿಗೆ ಸಂವಾದ.

## 2. ಮದರ್ ಎನ್‌ಜಿಓಗೆ ಒದಗಿಸುವ ಹಣಕಾಸಿನ ಬೆಂಬಲ

| ಕ್ರ. ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| ಎ. | **ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | |
| | ಪೀಠೋಪಕರಣಗಳು, ಉಪಕರಣಗಳು, ನೇಮಕಾತಿ | 30,00,000 |
| ಬಿ. | **ಆವರ್ತಕ ವೆಚ್ಚ (ವಾರ್ಷಿಕ)** | |
| **1.** | **ವೇತನಗಳು** | |
| | ಕಾರ್ಯನಿರ್ವಾಹಕ ನಿರ್ದೇಶಕ @ ರೂ.80,000/– ಮಾಸಿಕ ವೇತನ | 9,60,000 |
| | ಜನರಲ್ ಮ್ಯಾನೇಜರ್/ ಉಪ ಕಾರ್ಯನಿರ್ವಾಹಕ ನಿರ್ದೇಶಕ @ ರೂ.60,000/– ಮಾಸಿಕ | 7,20,000 |
| | ನಾಲ್ಕು ಮುಖ್ಯಸ್ಥರು ಮಾಸಿಕ @ ರೂ.50,000/– | 24,00,000 |
| | ಆರು ಹಿರಿಯ ಕಾರ್ಯಕ್ರಮ ಸಂಯೋಜಕರು @ ರೂ.35,000/– | 25,20,000 |
| | ಏಳು ಕಾರ್ಯಕ್ರಮ ಸಂಯೋಜಕರು @ ರೂ.25,000/– ಮಾಸಿಕ | 21,00,000 |
| | ಮೂರು ಕಾರ್ಯಕ್ರಮ ಸಹಾಯಕರು @ ರೂ.18,000/– ಮಾಸಿಕ | 6,48,000 |
| | ಓರ್ವ ಆಡಳಿತ ಅಧಿಕಾರಿ @ ರೂ.25,000/– ಮಾಸಿಕ | 3,00,000 |
| | ಓರ್ವ ಲೆಕ್ಕಾಧಿಕಾರಿ @ ರೂ.25,000/– ಮಾಸಿಕ | 3,00,000 |
| | ಓರ್ವ ಅಕೌಂಟೆಂಟ್ @ ರೂ.18,000/– ಮಾಸಿಕ | 2,16,000 |
| | ಓರ್ವ ಆಡಳಿತ ಸಹಾಯಕ @ ರೂ.18,000/– ಮಾಸಿಕ | 2,16,000 |
| | ಓರ್ವ ಲೆಕ್ಕ ಸಹಾಯಕರು @ ರೂ.18,000/– ಮಾಸಿಕ | 2,16,000 |
| | ಇಬ್ಬರು ಕಚೇರಿ ಸಹಾಯಕರು @ ರೂ.6,000/– ಮಾಸಿಕ | 1,44,000 |
| **2.** | **ಆಡಳಿತ ವೆಚ್ಚಗಳು** | |
| | ಮಾಸಿಕ ರೂ. 8,75,000/– ಬಾಡಿಗೆ (ವಾಸ್ತವದ ಪ್ರಕಾರ) | 1,05,00,000 |
| | ಸಾದಿಲ್ವಾರು (ದೂರವಾಣಿ, ವಿದ್ಯುತ್, ಅಂಚೆ, ಸ್ಟೇಷನರಿ, ಇತ್ಯಾದಿ) @ ರೂ.40,000 ಮಾಸಿಕ | 4,80,000 |
| | ಭತ್ಯೆ @ ರೂ.35,000/– ಮಾಸಿಕ | 4,20,000 |
| | ದುರಸ್ತಿ ಮತ್ತು ನಿರ್ವಹಣೆ | 7,00,000 |
| | ಸಿಬ್ಬಂದಿ ಅಭಿವೃದ್ಧಿ | 1,05,000 |
| | ಇತರೆ | 87,500 |
| | **ಸಬ್ ಟೋಟಲ್** | **1,22,92,500** |
| **3.** | **ಕಾರ್ಯಕ್ರಮ ಸಂಬಂಧಿತ ವೆಚ್ಚ (ಚೈಲ್ಡ್‌ಲೈನ್ ಸೇವೆಗಳು)** | |
| | ನೆಟವರ್ಕಿಂಗ್ ಹಾಗೂ ಸಿದ್ಧತಾ ಭೇಟಿಗಳು/ವೆಚ್ಚಗಳು | 15,00,000 |
| | ಸಲಹಾ ಭೇಟಿಗಳು ಹಾಗೂ ದೇಶದಾದ್ಯಂತ ಚೈಲ್ಡ್‌ಲೈನ್ ಸೇವೆಗಳಲ್ಲಿ ಒಳಗೊಂಡಿರುವ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ | 25,00,000 |
| | ಕ್ಷೇತ್ರ ಕಾರ್ಯ ಸಂಶೋಧನೆ ಹಾಗೂ ಚೈಲ್ಡ್‌ನೆಟ್ ವಿಶ್ಲೇಷಣೆ | 10,00,000 |

| | | |
|---|---|---|
| | ಪ್ರಕಾಶನಗಳು ಹಾಗೂ ಐಇಸಿ | 10,00,000 |
| | ಕೇಂದ್ರೀಕೃತ ಕಾಲ್ ಸೆಂಟರ್ | 5,00,00,000 |
| | ವಕಾಲತ್ತು, ಅರಿವು ಹಾಗೂ ನೆಟ್‌ವರ್ಕಿಂಗ್ | 50,00,000 |
| | **ಸಬ್ ಟೋಟಲ್** | **6,10,00,000** |
| | **ಒಟ್ಟು** | **8,70,32,500** |

ಗಮನಿಸಿ: ಸಿಬ್ಬಂದಿಗಳ ವೇತನಕ್ಕೆ ಅಥವಾ ಮತ್ಯಾವುದಾದರೂ ಅಂಶಕ್ಕೆ ತಮ್ಮ ಸ್ವಂತ ಸಂಪನ್ಮೂಲಗಳನ್ನು ಹೆಚ್ಚುವರಿ ನಿಧಿಯಾಗಿ ಸೇರಿಸಿಕೊಳ್ಳಲು ಮದರ್ ಎನ್‌ಜಿಒ ಗೆ ಸ್ವಾತಂತ್ರ್ಯವಿರುತ್ತದೆ.

# ಅನುಬಂಧ VI (ಬಿ) – ತುರ್ತು ಔಟ್‌ರೀಚ್ ಸೇವೆಗಳನ್ನು ಒದಗಿಸಲು 'ಮದರ್ ಎನ್‌ಜಿಒ' ನ ಪ್ರಾದೇಶಿಕ ಕೇಂದ್ರಗಳು

## 2.1 ಪ್ರಾದೇಶಿಕ ಕೇಂದ್ರಗಳು – ಪಾತ್ರಗಳು ಹಾಗೂ ಜವಾಬ್ದಾರಿಗಳು

### 1.1 ಪ್ರಾದೇಶಿಕ ಮುಖ್ಯಸ್ಥರು

i. ಪ್ರದೇಶದಲ್ಲಿನ ಸೇವೆಗಳಿಗಾಗಿ ಕಾರ್ಯತಂತ್ರ ಅಭಿವೃದ್ಧಿಪಡಿಸುವುದು;

ii. ಪ್ರಾದೇಶಿಕ ತಂಡದ ಗುರುತಿಸುವ ಸಮಯೋಚಿತ ಸಾಧನೆ;

iii. ಪ್ರಾದೇಶಿಕ ಕೇಂದ್ರಗಳ ಅನುಕೂಲವಿರುವ ಜಿಲ್ಲೆಗಳಲ್ಲಿ ಟ್ರಬಲ್‌ಶೂಟಿಂಗ್ ಹಾಗೂ ಸಂಕಷ್ಟ ನಿವಾರಣೆ;

iv. ಪ್ರಾದೇಶಿಕ ಕಾರ್ಯಾಗಾರಗಳು, ಕಾರ್ಯಾಗಾರ ವರದಿಗಳು ಹಾಗೂ ಆಯವ್ಯಯ ನಿಯಂತ್ರಣಗಳ ಮೂಲಕ ಪ್ರದೇಶ ನಿರ್ಧಿಷ್ಟ ವಿಷಯಗಳ ಪರಿಣಾಮಕಾರಿ ಪ್ರತಿಕ್ರಿಯೆಗಾಗಿ ಪ್ರದೇಶದ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ಹಾಗೂ ತರಬೇತಿ;

v. ಪ್ರಾದೇಶಿಕ ತಂಡದ ಮಾರ್ಗದರ್ಶನ;

vi. ರಾಜ್ಯ ವೇದಿಕೆಗಳಲ್ಲಿ ಚೈಲ್ಡ್‌ಲೈನ್ ಸೇವೆಗಳಿಗೆ ಅನುಕೂಲ ಒದಗಿಸುವುದು;

vii. ರಾಜ್ಯ ಸರ್ಕಾರದೊಂದಿಗೆ ಚೈಲ್ಡ್‌ಲೈನ್ ಸೇವೆಗಳ ವಕಾಲತ್ತಿಗೆ ಅನುಕೂಲ ಒದಗಿಸುವುದು;

viii. ಪ್ರಾದೇಶಿಕ ಮಟ್ಟದಲ್ಲಿ ವಕಾಲತ್ತಿಗಾಗಿ ವಿವಿಧ ಭಾಗೀದಾರರೊಂದಿಗೆ ಕಾರ್ಯತಾಂತ್ರಿಕ ಪಾಲುದಾರಿಕೆಗಳ ಗುರುತಿಸುವಿಕೆ ಹಾಗೂ ಪರಿಶೋಧನೆ;

ix. ರಾಷ್ಟ್ರೀಯ ನಿಯತಕಾಲಿಕೆ, ಚೈಲ್ಡ್‌ನೆಟ್, ವಕಾಲತ್ತು ಉಪಕ್ರಮಗಳು, ಪ್ರಾದೇಶಿಕ ನೆಟ್‌ವರ್ಕ್‌ಗಳು ಹಾಗೂ ಅಭಿಯಾನಗಳ ಅಪ್‌ಡೇಟ್‌ಗಳಲ್ಲಿ ಸೇರ್ಪಡೆಗೊಳಿಸಲು ಪ್ರಾದೇಶಿಕ ದತ್ತಾಂಶದ ಸಮಯೋಚಿತ ಹರಿವು;

x. ನ್ಯಾಯೋಚಿತ ವೆಚ್ಚ ಹಾಗೂ ಸಮಯೋಚಿತ ನಿಧಿ ಬಳಕೆಗಳೊಂದಿಗೆ ಕಾರ್ಯಕ್ರಮದ ಗುರಿಯನ್ನು ಖಾತ್ರಿಪಡಿಸಲು ಎನ್‌ಜಿಒಗಳ ಹಣಕಾಸು ಹಾಗೂ ಆಡಳಿತ ಇಲಾಖೆಯೊಂದಿಗೆ ಸಂಯೋಜನೆ;

### 1.2 ಹಿರಿಯ ಕಾರ್ಯಕ್ರಮ ಸಂಯೋಜಕರು – ಕಾರ್ಯಕ್ರಮಗಳು ಇವರ ಪಾತ್ರ

i. ಒಪ್ಪಿಕೊಂಡಿರುವ ಗುರಿಯಾಗಿಸಿರುವ ಹೊಸ ಜಿಲ್ಲೆಗಳಲ್ಲಿ ಚೈಲ್ಡ್‌ಲೈನ್ ಸೇವೆಗಳ ಸ್ಥಾಪನೆ;

ii. ಪ್ರದೇಶದಲ್ಲಿ ಚೈಲ್ಡ್‌ಲೈನ್ ಸೇವೆಗಾಗಿ ಒಂದು ದೃಷ್ಟಿ ಹಾಗೂ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸುವುದು;

iii. ಪ್ರದೇಶದಲ್ಲಿನ 5 ನಗರಗಳಲ್ಲಿ ಚೈಲ್ಡ್‌ಲೈನ್ ಸೇವೆಗಳ ಕಾರ್ಯನಿರ್ವಹಣೆಗೆ ಅಗತ್ಯ ಅನುಕೂಲ ಒದಗಿಸುವುದು;

iv. ಸೇವಾ ಉತ್ಕೃಷ್ಟತೆಗಾಗಿ ನಗರಗಳಿಗೆ ಪ್ರಮಾಣೀಕೃತ ಮೌಲ್ಯವರ್ಧಿತ ಹೂಡುವಳಿಗಳನ್ನು ಖಾತ್ರಿಪಡಿಸುವುದು;

v. ನಿಯತಕಾಲಿಕ ಭೇಟಿಗಳ ಸಂದರ್ಭದಲ್ಲಿ ನಗರ ಮಟ್ಟದ ತಂಡಗಳ ಸಾಮರ್ಥ್ಯಾಭಿವೃದ್ಧಿ;

vi. ಚೈಲ್ಡ್‌ಲೈನ್ ಸೇವೆಗಳನ್ನು ಒದಗಿಸುವವರಿಗೆ ಇನ್–ಹೌಸ್ ತರಬೇತಿಗಳ ಆಯೋಜನೆ;

vii. ರಾಜ್ಯ ಸರ್ಕಾರದೊಂದಿಗೆ ನೆಟ್‌ವರ್ಕಿಂಗ್ ಹಾಗೂ ವಕಾಲತ್ತು ವಹಿಸುವಿಕೆ;

viii. ಪ್ರಾದೇಶಿಕ ನೆಟ್‌ವರ್ಕ್‌ಗಳು ಹಾಗೂ ಅಭಿಯಾನಗಳಲ್ಲಿ ಚೈಲ್ಡ್‌ಲೈನ್ ಸೇವೆಯನ್ನು ಪ್ರತಿನಿಧಿಸುವುದು;

ix. ಪ್ರಾದೇಶಿಕ ಎಂಐಎಸ್‌ಗಾಗಿ ಪ್ರಾದೇಶಿಕ ಕೇಂದ್ರಗಳ 'ಮದರ್ ಎನ್‌ಜಿಒ' ಗೆ ಮಾಹಿತಿಯ ಬೆಂಬಲ;

x. ನಿಧಿ ಸ್ಥಿತಿಗತಿ ಕುರಿತು ಪ್ರಾದೇಶಿಕ ಅಪ್‌ಡೇಟ್‌ಗಳನ್ನು ಮಂಡಿಸುವುದು;

xi. ನಿಯತಕಾಲಿಕೆ (ನ್ಯೂಸ್‌ಲೆಟರ್), ಚೈಲ್ಡ್‌ನೆಟ್ ವಕಾಲತ್ತು ಉಪಕ್ರಮಗಳು, ಪ್ರಾದೇಶಿಕ ನೆಟ್‌ವರ್ಕ್‌ಗಳು ಹಾಗೂ ಅಭಿಯಾನಗಳ ಅಪ್‌ಡೇಟ್‌ಗಳಿಗಾಗಿ ಪ್ರಾದೇಶಿಕ ದತ್ತಾಂಶವನ್ನು ಒದಗಿಸುವುದು;

xii. ಅನುಕೂಲ ಒದಗಿಸಿರುವ ನಗರಗಳಲ್ಲಿನ ಎಲ್ಲಾ ಪಾಲುದಾರರ ನೆರವಿನೊಂದಿಗೆ ಗ್ರ್ಯಾಂಟ್–ಇನ್–ಏಡ್‌ನ ಸಮಯೋಚಿತ ಹರಿವನ್ನು ಖಾತ್ರಿಪಡಿಸುವುದು;

xiii. ಪ್ರದೇಶ ನಿರ್ದಿಷ್ಟ ವಿಷಯಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ಪ್ರಾದೇಶಿಕ ಚೈಲ್ಡ್‌ಲೈನ್ ಸೇವಾ ತಂಡದ ಸಾಮರ್ಥ್ಯಾಭಿವೃದ್ಧಿ, ಪ್ರಾದೇಶಿಕ ಮುಖ್ಯಸ್ಥರೊಂದಿಗೆ ಸಹ–ಅನುಕೂಲ ಒದಗಿಸುವಿಕೆ;

xiv. ಗೋಚರತೆಯನ್ನು ವೃದ್ಧಿಸಲು ಹಾಗೂ ಚೈಲ್ಡ್‌ಲೈನ್ ಸೇವೆಗಳನ್ನು ಮರುಕಳಿಸಲು ನಗರಗಳು/ಜಿಲ್ಲೆಗಳಲ್ಲಿ ಸ್ಥಳೀಯ ಆಡಳಿತ ಹಾಗೂ ಪೂರಕ ವ್ಯವಸ್ಥೆಗಳೊಂದಿಗೆ ಸಂಯೋಜನೆ.

## 1.3 ಕಾರ್ಯಕ್ರಮ ಸಂಯೋಜನೆ/ಸಹಾಯಕರ ಪಾತ್ರ:

**i.** ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಮುಖ್ಯಸ್ಥರ (ಆರ್‌ಆರ್‌ಸಿಹೆಚ್) ಸಮಾಲೋಚನೆಯೊಂದಿಗೆ, ಪಿಆರ್‌ಎಡಿ ವತಿಯಿಂದ ಕ್ರೋಢೀಕರಿಸಲಾಗಿರುವ ದೂರವಾಣಿ ಕರೆಗಳ ಪ್ರವೃತ್ತಿಗಳ ವಿಶ್ಲೇಷಣೆ ಹಾಗೂ ಇತರೆ ಗುಣಾತ್ಮಕ ದತ್ತಾಂಶಗಳ ಆಧಾರದ ಮೇಲೆ ನೆಟ್‌ವರ್ಕ್ ಹಾಗೂ ಅನುಕೂಲ ಒದಗಿಸಲು ಆತ/ಆಕೆ ನೇರವಾಗಿ ಜವಾಬ್ದಾರಿಯನ್ನು ಹೊಂದಿರುವ ನಗರಗಳಿಗೆ ದೃಷ್ಟಿ ಹಾಗೂ ಕಾರ್ಯತಂತ್ರ ಅಭಿವೃದ್ಧಿ; **(RRCH-Regional Resources Centre Head-ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಮುಖ್ಯಸ್ಥರು) (PRDA- Program Research and Development Announcement)**

ii. ಆರು ನಗರಗಳಿಗೆ ಅನುಕೂಲ ಒದಗಿಸುವುದು– ನೇರ ಜವಾಬ್ದಾರಿ;

iii. ಸೇವಾ ಉತ್ಕೃಷ್ಟತೆಗಳಿಗಾಗಿ ನಗರಗಳಿಗೆ ಪ್ರಮಾಣೀಕೃತ ಮೌಲ್ಯವರ್ಧಿತ ಹೂಡುವಳಿಗಳನ್ನು ಖಾತ್ರಿಪಡಿಸುವುದು;

iv. ಭೇಟಿಗಳ ಸಮಯದಲ್ಲಿ ನಗರ ಮಟ್ಟದ ತಂಡಗಳ ಸಾಮರ್ಥ್ಯಾಭಿವೃದ್ಧಿ;

v. ಅನುಕೂಲ ಒದಗಿಸುತ್ತಿರುವ ನಗರಗಳಲ್ಲಿ ವಕಾಲತ್ತು ವಹಿಸಲು ಸ್ಥಳೀಯ ಆಡಳಿತದೊಂದಿಗೆ ಸಂಯೋಜಿಸುವುದು;

vi. ನಗರ ಮಟ್ಟದಲ್ಲಿ ಪೂರಕ ವ್ಯವಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಮಕ್ಕಳ ಹಕ್ಕುಗಳನ್ನು ಸಾಂಸ್ಥೀಕರಣಗೊಳಿಸುವ ನಿಟ್ಟಿನಲ್ಲಿ ವಿವಿಧ ನಗರಗಳು ಕೈಗೊಂಡಿರುವ ಉಪಕ್ರಮಗಳ ಕುರಿತು ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಮುಖ್ಯಸ್ಥರಿಗೆ (ಆರ್‌ಆರ್‌ಸಿಹೆಚ್‌ಗೆ) ದತ್ತಾಂಶವನ್ನು ಒದಗಿಸುವುದು;

vii. ಪ್ರಾದೇಶಿಕ ಎಂಐಎಸ್‌ಗಾಗಿ ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಮುಖ್ಯಸ್ಥರಿಗೆ ಮಾಹಿತಿಯ (ಆರ್‌ಆರ್‌ಸಿಹೆಚ್) ಬೆಂಬಲವನ್ನು ಒದಗಿಸುವುದು;

viii. ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಮುಖ್ಯಸ್ಥರ (ಆರ್‌ಆರ್‌ಸಿಹೆಚ್‌ನ) ಸಮಾಲೋಚನೆಯೊಂದಿಗೆ ಲಿಖಿತ ಕೋರಿಕೆಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ನಗರ ಮಟ್ಟದ ನಿಧಿ ಬೆಂಬಲಕ್ಕಾಗಿ ಸ್ವಂತ ನಗರಗಳ ಅಗತ್ಯಗಳ ಅಂದಾಜಿಸುವಿಕೆ;

ix. ನಿಯತಕಾಲಿಕೆ, ಚೈಲ್ಡ್‌ನೆಟ್, ವಕಾಲತ್ತು ಉಪಕ್ರಮಗಳು, ಪ್ರಾದೇಶಿಕ ನೆಟ್‌ವರ್ಕ್‌ಗಳು ಹಾಗೂ ಅಭಿಯಾನಗಳಿಗೆ ಒದಗಿಸುವ ವಿಷಯವಸ್ತುಗಳಂತಹ ಮಾಹಿತಿಯನ್ನು ಪಿಆರ್‌ಎಡಿ ಗೆ ಒದಗಿಸಲು ಪ್ರಾದೇಶಿಕ ದತ್ತಾಂಶ;

x. ಸಂಪನ್ಮೂಲ ಕ್ರೋಢೀಕರಣ ಹಾಗೂ ಅರಿವು ಮೂಡಿಸುವ ಅಭಿಯಾನಗಳಿಗಾಗಿ ಅರಿವು ಹಾಗೂ ವಕಾಲತ್ತಿಗೆ ಪ್ರಾದೇಶಿಕ ದತ್ತಾಂಶ;

xi. ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಮುಖ್ಯಸ್ಥರಿಗೆ (ಆರ್‌ಆರ್‌ಸಿಹೆಚ್‌ಗೆ) ಪ್ರಾದೇಶಿಕ ಎಂಐಎಸ್‌ಗಾಗಿ ಕಾರ್ಯಕ್ರಮ ಸಂಯೋಜಕರಿಗೆ ಮಾಹಿತಿಯ ಬೆಂಬಲ;

xii. ಅರ್ಜಿ ಸ್ಥಿತಿಗತಿ ಹಾಗೂ ಎನ್‌ಐಸಿಪಿ (NICP-**National Initiative for Child Protection (India)**) ಕುರಿತು ಪ್ರಾದೇಶಿಕ ವಿಭಾಗಕ್ಕೆ ಅಪ್‌ಡೇಟ್;

xiii. ನಗರಗಳಿಗೆ ಅನುಕೂಲ ಒದಗಿಸುವ ಭೇಟಿಗಳು ಹಾಗೂ ನೆಟ್‌ವರ್ಕ್ ಹಾಗೂ ನಗರಗಳಲ್ಲಿ ವರದಿಗಳ ಸಮಯೋಚಿತ ಪೂರ್ಣಗೊಳಿಸುವಿಕೆ;

xiv. ಅನುಕೂಲ ಒದಗಿಸುವ ನಗರಗಳಲ್ಲಿ, ಎಲ್ಲಾ ಪಾಲುದಾರರ ತಪಾಸಣಾ ವರದಿಗಳು ಹಾಗೂ ಅರ್ಜಿಗಳ ಸಮಯೋಚಿತ ಹರಿವನ್ನು ಸಚಿವಾಲಯಕ್ಕೆ ಒದಗಿಸುವುದು;

xv. ಕಾರ್ಯಕ್ರಮ ಸಂಯೋಜಕರೊಂದಿಗೆ ಪ್ರಾದೇಶಿಕ ಕಾರ್ಯಾಗಾರಗಳ ಸಂಯೋಜನಗಾಗಿ ಸಾಗಣೆಯ ಬೆಂಬಲವನ್ನು ಒದಗಿಸುವುದು;

xvi. ಮುಂದುವರಿಕೆ ಆಧಾರದ ಮೇಲೆ ಎಲ್ಲಾ ಪೂರಕ ವ್ಯವಸ್ಥೆಗಳಲ್ಲಿ ಚೈಲ್ಡ್‌ಲೈನ್ ಸೇವೆಗಳನ್ನು ಮರಳಿ ತರಲು ಹಾಗೂ ಗೋಚರತೆಯನ್ನು ವೃದ್ಧಿಸಲು ನಗರಗಳಲ್ಲಿ ಸ್ಥಳೀಯ ಆಡಳತದೊಂದಿಗೆ ಸಂಪರ್ಕ ಹೊಂದುವುದು;

xvii. ನಿರ್ಧಿಷ್ಟವಾಗಿ ನಗರಗಳಲ್ಲಿ ಒಂದು ವಕಾಲತ್ತು ಉಪಕ್ರಮವನ್ನು ಕೈಗೊಳ್ಳಲು ಅನುಕೂಲವನ್ನು ಒದಗಿಸುವುದು.

## 2. 'ಮದರ್ ಎನ್‌ಜಿಒ'ದ ಪ್ರಾದೇಶಿಕ ಕೇಂದ್ರಗಳಿಗೆ ಹಣಕಾಸಿನ ಬೆಂಬಲವನ್ನು ಒದಗಿಸಲಾಗಿದೆ

| ಕ್ರ. ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ** | | |
| ಬಿ. | ಪೀಠೋಪಕರಣ, ಉಪಕರಣ, ನೇಮಕಾತಿ (ಐದು ವರ್ಷಗಳಿಗೊಮ್ಮೆ) | 4,00,000 |
| **1.** | **ವೇತನ** | |
| | ಓರ್ವ ಪ್ರಾದೇಶಿಕ ಮುಖ್ಯಸ್ಥ @ ರೂ.50,000/– ಮಾಸಿಕ ವೇತನ | 6,00,000 |
| | ಮೂರು ಹಿರಿಯ ಕಾರ್ಯಕ್ರಮ ಸಂಯೋಜಕರು @ ರೂ.35,000/– ಮಾಸಿಕ ವೇತನ | 12,60,000 |
| | ಒಂಬತ್ತು ಕಾರ್ಯಕ್ರಮ ಸಂಯೋಜಕರು @ ರೂ.25,000/– ಮಾಸಿಕ ವೇತನ | 27,00,000 |
| | ಮೂರು ಕಾರ್ಯಕ್ರಮ ಸಹಾಯಕರು @ ರೂ.18,000/– ಮಾಸಿಕ ವೇತನ | 6,48,000 |
| | ಓರ್ವ ಲೆಕ್ಕಾಧಿಕಾರಿ @ ರೂ.25,000/– ಮಾಸಿಕ ವೇತನ | 3,00,000 |
| | **ಸಬ್ ಟೋಟಲ್** | **55,08,000** |
| **2.** | **ಆಡಳಿತ** | |
| | ಬಾಡಿಗೆ @ರೂ.1,41,667/– ಮಾಸಿಕ (ವಾಸ್ತವಿಕ ಬಾಡಿಗೆಗೆ ಒಳಪಟ್ಟಿರುವಂತೆ) | 17,00,000 |
| | ಸಿದ್ಧತೆ ಹಾಗೂ ಉಸ್ತುವಾರಿಗಾಗಿ ಕ್ಷೇತ್ರ ಭೇಟಿಗಳು | 15,00,000 |
| | ದುರಸ್ತಿಗಳು ಮತ್ತು ನಿರ್ವಹಣೆ | 1,00,000 |
| | ಸಿಬ್ಬಂದಿ ಅಭಿವೃದ್ಧಿ | 87,500 |
| | ಸಾದಿಲ್ವಾರು (ದೂರವಾಣಿ, ವಿದ್ಯುತ್, ಅಂಚೆ, ಸ್ಟೇಷನರಿ, ಇತ್ಯಾದಿ) | 2,00,000 |
| | ಸಬ್ ಟೋಟಲ್ | 35,87,500 |
| | **ಪ್ರತಿ ಪ್ರದೇಶಕ್ಕೆ ಒಟ್ಟು ವೆಚ್ಚ** | **94,95,500** |
| **4 ಪ್ರಾದೇಶಿಕ ಕೇಂದ್ರಗಳ ಒಟ್ಟು ವೆಚ್ಚ (ರೂ.94,95,500/– x 4)** | | **3,79,82,000** |

ಗಮನಿಸಿ:

(i) ವೇತನ ಅಥವಾ ಮತ್ಯಾವುದಾದರೂ ವಿಷಯಕ್ಕೆ ತನ್ನ ಸ್ವಂತ ಸಂಪನ್ಮೂಲಗಳಿಂದ ಹೆಚ್ಚುವರಿ ವೆಚ್ಚವನ್ನು ಸೇರ್ಪಡೆ ಮಾಡಿಕೊಳ್ಳಲು 'ಮದರ್ ಎನ್‌ಜಿಒ'ಗೆ ಸ್ವಾತಂತ್ರ್ಯವಿರುತ್ತದೆ;

(ii) ಹೊಸ ನಗರಗಳಿಗೆ ವಿಸ್ತರಣೆಯಾಗುವುದನ್ನು ಆಧರಿಸಿ ಮುಂಬರುವ ವರ್ಷಗಳಲ್ಲಿ ಪ್ರಾದೇಶಿಕ ಕೇಂದ್ರಗಳಲ್ಲಿರುವ ಸಿಬ್ಬಂದಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

# ಅನುಬಂಧ VII – ನೋಡಲ್, ಸಹಭಾಗಿತ್ವ, ಬೆಂಬಲ ಸಂಸ್ಥೆಗಳು ಹಾಗೂ 'ಮದರ್ ಎನ್‌ಜಿಒ'ನ ಜಿಲ್ಲಾ ಉಪ ಕೇಂದ್ರಗಳು

## 1. ನೋಡಲ್ ಸಂಸ್ಥೆ

| ಕ್ರ. ಸಂ. | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಒಂದು ಕಂಪ್ಯೂಟರ್ ವೆಬ್ ಕ್ಯಾಂ ಹಾಗೂ ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿ ವೆಚ್ಚವೂ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್ ಕಂ ಸ್ಕ್ಯಾನ್ನರ್ ಕಂ ಫ್ಯಾಕ್ಸ್‌ನೊಂದಿಗೆ | 45,000 |
| 2. | ಪೀಠೋಪಕರಣ ಹಾಗೂ ಉಪಕರಣಗಳು | 15,000 |
| | **ಒಟ್ಟು** | **60,000** |
| **ಬಿ. ಅನಾವರ್ತಕ ವೆಚ್ಚ** | | |
| 3. | ಓರ್ವ ನಗರ ಸಂಯೋಜಕರಿಗೆ ವೇತನ @ ರೂ.17,500/– ಪ್ರತಿ ತಿಂಗಳಿಗೆ ಪ್ರತಿ ನಗರ/ಜಿಲ್ಲೆಗೆ | 2,10,000 |
| 4. | ಕಂಪ್ಯೂಟರ್ ನಿರ್ವಹಣೆ, ಸಂವಹನೆ, ದೂರವಾಣಿ/ಮೊಬೈಲ್, ಪ್ರಯಾಣ ಭತ್ಯೆ, ಸ್ಟೇಷನರಿ, ಅರಿವು ಮೂಡಿಸುವ ಸಾಮಗ್ರಿಗಳು, ಇಂಟರ್‌ನೆಟ್ ಸಂಪರ್ಕ, ಲೆಕ್ಕ ಪರಿಶೋಧಕರ ಶುಲ್ಕ, ತರಬೇತಿ ಹಾಗೂ ಪುನರ್‌ಮನನ ಕಾರ್ಯಕ್ರಮಗಳ ವೆಚ್ಚಗಳು ಒಳಗೊಂಡಂತೆ ಆಡಳಿತ ವೆಚ್ಚ @ ಮಾಸಿಕ ರೂ.17,500/– | 2,10,000 |
| | **ಒಟ್ಟು** | **4,20,000** |
| | **ಒಟ್ಟು ವೆಚ್ಚ (ಎ+ಬಿ)** | **4,80,000** |

ಗಮನಿಸಿ: ಪಾಲುದಾರಿಕೆ ಸಂಸ್ಥೆಯು ವೇತನ ಅಥವಾ ಮತ್ಯಾವುದಾದರೂ ಅಂಶಕ್ಕಾಗಿ ತನ್ನ ಸಂಪನ್ಮೂಲಗಳಿಗೆ ಹೆಚ್ಚುವರಿ ವೆಚ್ಚವನ್ನು ಸೇರ್ಪಡೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ.

## 2. ಸಹಭಾಗಿತ್ವ ಸಂಸ್ಥೆ

| ಕ್ರ. ಸಂ. | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಒಂದು ಕಂಪ್ಯೂಟರ್ ವೆಬ್ ಕ್ಯಾಂ ಹಾಗೂ ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿ ವೆಚ್ಚವೂ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್ ಕಂ ಸ್ಕ್ಯಾನ್ನರ್ ಕಂ ಫ್ಯಾಕ್ಸ್‌ನೊಂದಿಗೆ | 45,000 |
| 2. | ಪೀಠೋಪಕರಣ ಹಾಗೂ ಉಪಕರಣಗಳು | 25,000 |
| | **ಒಟ್ಟು** | **70,000** |
| **ಬಿ. ಅನಾವರ್ತಕ ವೆಚ್ಚ** | | |
| **3.** | **ಸಿಬ್ಬಂದಿ ವೇತನ** | |
| | ಓರ್ವ ನಗರ ಸಂಯೋಜಕರಿಗೆ ವೇತನ @ ರೂ.14,000/– ಪ್ರತಿ ತಿಂಗಳಿಗೆ | 1,68,000 |
| | ಏಳು ತಂಡ ಸದಸ್ಯರು @ ರೂ.8,000/– ಮಾಸಿಕ ವೇತನ | 6,72,000 |
| | ಓರ್ವ ಆಪ್ತಸಮಾಲೋಚಕರು ಅಲ್ಪಾವಧಿ @ ರೂ.8,000/– ಮಾಸಿಕ | 96,000 |
| | ಮೂರು ಸ್ವಯಂಸೇವಕರು @ ರೂ.6,000/– ಮಾಸಿಕ | 2,16,000 |
| 4. | ವೈದ್ಯಕೀಯ, ಸೂರು, ಪುನರ್‌ಸ್ಥಾಪನೆ, ಪೌಷ್ಠಿಕತೆಯ ವೆಚ್ಚಗಳು ಒಳಗೊಂಡಂತೆ ಗ್ರಾಹಕ ಸಂಬಂಧಿತ ಸಾದಿಲ್ವಾರು ನಿಧಿ | 2,00,000 |
| 5. | ಆಡಳಿತ ವೆಚ್ಚಗಳು @ ರೂ.15,000/– ಪ್ರತಿ ತಿಂಗಳು (ಕಂಪ್ಯೂಟರ್ ನಿರ್ವಹಣೆ, ಸಂವಹನೆ, ದೂರವಾಣಿ/ಮೊಬೈಲ್, ಸ್ಟೇಷನರಿ, ಅರಿವು ಮೂಡಿಸುವ ಸಾಮಗ್ರಿಗಳು, ಇಂಟರ್‌ನೆಟ್ ಸಂಪರ್ಕ, ಲೆಕ್ಕಪರಿಶೋಧಕರ ಶುಲ್ಕ, ತರಬೇತಿ ಹಾಗೂ ಪುನರ್‌ಮನನ ಕಾರ್ಯಕ್ರಮಗಳ ವೆಚ್ಚಗಳು ಒಳಗೊಂಡಂತೆ) | 1,80,000 |
| 6. | ಪ್ರಯಾಣ ಭತ್ಯೆ @ ರೂ.12,000/– ಮಾಸಿಕ | 1,44,000 |
| | **ಒಟ್ಟು** | **16,76,000** |
| | **ಒಟ್ಟು ವೆಚ್ಚ (ಎ+ಬಿ)** | **17,46,000** |

ಗಮನಿಸಿ: ಪಾಲುದಾರಿಕೆ ಸಂಸ್ಥೆಯು ವೇತನ ಅಥವಾ ಮತ್ಯಾವುದಾದರೂ ಅಂಶಕ್ಕಾಗಿ ತನ್ನ ಸಂಪನ್ಮೂಲಗಳಿಗಾಗಿ ಹೆಚ್ಚುವರಿ ವೆಚ್ಚವನ್ನು ಸೇರ್ಪಡೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ.

## 3. ಬೆಂಬಲ ಸಂಸ್ಥೆ

| ಕ್ರ. ಸಂ. | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಉಪಕರಣಗಳು | 7,500 |
| | **ಒಟ್ಟು** | **7,500** |
| **ಬಿ. ಅನಾವರ್ತಕ ವೆಚ್ಚ** | | |
| 2. | ಗೌರವಧನ | |
| | ಓರ್ವ ಸಂಯೋಜಕರು @ ರೂ.7,000/– ಮಾಸಿಕ | 84,000 |
| | ಇಬ್ಬರು ಸ್ವಯಂಸೇವಕರು @ ರೂ.6,000/– ಮಾಸಿಕ | 1,44,000 |
| 3. | ವೈದ್ಯಕೀಯ, ವಸತಿ, ಪುನರ್‌ಸ್ಥಾಪನೆ, ಪೌಷ್ಠಿಕತೆ ವೆಚ್ಚಗಳು ಒಳಗೊಂಡಂತೆ ಗ್ರಾಹಕ ಸಂಬಂಧಿತ ಸಾದಿಲ್ವಾರು ನಿಧಿ. | 75,000 |
| 4. | ಪ್ರಯಾಣ ಭತ್ಯೆ, ಸ್ಟೇಷನರಿ, ಔಟ್‌ರೀಚ್ ಕಾರ್ಯಕ್ರಮಗಳು, ಹಾಗೂ ಸಂವಹನೆ ವೆಚ್ಚಗಳು ಒಳಗೊಂಡಂತೆ ಮಾಸಿಕ ರೂ.6,500/– ಆಡಳಿತ ವೆಚ್ಚಗಳು. | 78,000 |
| | **ಒಟ್ಟು** | **3,81,000** |
| | **ಒಟ್ಟು ವೆಚ್ಚ (ಎ+ಬಿ)** | **3,88,500** |

ಗಮನಿಸಿ: ಪಾಲುದಾರಿಕೆ ಸಂಸ್ಥೆಯು ವೇತನ ಅಥವಾ ಮತ್ಯಾವುದಾದರೂ ಅಂಶಕ್ಕಾಗಿ ತನ್ನ ಸಂಪನ್ಮೂಲಗಳಿಗಾಗಿ ಹೆಚ್ಚುವರಿ ವೆಚ್ಚವನ್ನು ಸೇರ್ಪಡೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ.

## 4. ಜಿಲ್ಲಾ ಉಪ–ಕೇಂದ್ರ

| ಕ್ರ. ಸಂ. | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಉಪಕರಣಗಳು | 10,000 |
| | **ಒಟ್ಟು** | **10,000** |
| **ಬಿ. ಅನಾವರ್ತಕ ವೆಚ್ಚ** | | |
| 2. | ಗೌರವಧನ | |
| | ಓರ್ವ ಉಪ ಕೇಂದ್ರ ಮುಖ್ಯಸ್ಥ @ ರೂ.7,500/– ಮಾಸಿಕ | 90,000 |
| | ನಾಲ್ವರು ಉಪ ಕೇಂದ್ರ ತಂಡ ಸದಸ್ಯರು @ ರೂ.6,000/– ಮಾಸಿಕ ವೇತನ | 2,88,000 |
| 3. | ಪ್ರಯಾಣ, ಔಟ್‌ರೀಚ್ ಕಾರ್ಯಕ್ರಮಗಳು ಹಾಗೂ ಸಂವಹನೆ ವೆಚ್ಚಗಳು ಒಳಗೊಂಡಂತೆ ಆಡಳಿತ ವೆಚ್ಚಗಳು | 75,000 |
| 4. | ವೈದ್ಯಕೀಯ, ವಸತಿ, ಪುನರ್‌ಸ್ಥಾಪನೆ, ಪೌಷ್ಠಿಕತೆ ವೆಚ್ಚಗಳು ಒಳಗೊಂಡಂತೆ ಗ್ರಾಹಕ/ಮಕ್ಕಳ ಸಂಬಂಧಿತ ಸಾದಿಲ್ವಾರು ನಿಧಿ | 75,000 |
| 5. | ಅಗತ್ಯಗಳ ಅಂದಾಜಿಸುವಿಕೆ, ಸಂಯೋಜನೆ, ಸಭೆಗಳು, ಪ್ರಯಾಣ, ಇತ್ಯಾದಿ ಒಳಗೊಂಡಂತೆ ಜಿಲ್ಲಾ ಮಟ್ಟದ ಅನುಕೂಲ ಒದಗಿಸುವ ವೆಚ್ಚಗಳು | 75,000 |
| | **ಒಟ್ಟು** | **6,03,000** |
| | **ಒಟ್ಟು ವೆಚ್ಚ (ಎ+ಬಿ)** | **6,13,000** |

ಗಮನಿಸಿ: ಪಾಲುದಾರಿಕೆ ಸಂಸ್ಥೆಯು ವೇತನ ಅಥವಾ ಮತ್ಯಾವುದಾದರೂ ಅಂಶಕ್ಕಾಗಿ ತನ್ನ ಸಂಪನ್ಮೂಲಗಳಿಗಾಗಿ ಹೆಚ್ಚುವರಿ ವೆಚ್ಚವನ್ನು ಸೇರ್ಪಡೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ.

## ಅನುಬಂಧ VIII – ನಗರ ಮತ್ತು ಭಾಗಶಃ ನಗರ ಪ್ರದೇಶಗಳಲ್ಲಿ ಅಗತ್ಯವಿರುವ ಮಕ್ಕಳಿಗಾಗಿ ತೆರೆದ ತಂಗುದಾಣಗಳು.

1. **25 ಮಕ್ಕಳ ಒಂದು ಘಟಕಕ್ಕೆ ಹಣಕಾಸಿನ ಬೆಂಬಲ**

| ಕ್ರ. ಸಂ. | ವಿಷಯ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಮಕ್ಕಳಿಗೆ ಹಾಸಿಗೆಗಳು, 25 ಸ್ಟೀಲ್ ಲಾಕರ್‌ಗಳು, ಕಪ್‌ಬೋರ್ಡ್‌ಗಳು, ಮೇಜುಗಳು ಹಾಗೂ ಕುರ್ಚಿಗಳು, ಇತ್ಯಾದಿ ಒಳಗೊಂಡಂತೆ ಪೀಠೋಪಕರಣಗಳು | 1,50,000 |
| 2. | ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಹಾಗೂ ಪ್ರಿಂಟರ್ ಕಂ ಸ್ಕ್ಯಾನ್ನರ್ ಜೊತೆಗೆ ಎರಡು ಕಂಪ್ಯೂಟರ್‌ಗಳು | 90,000 |
| 3. | ಒಂದು ಬಣ್ಣದ ಟಿವಿ | 15,000 |
| 4. | ಕ್ರೀಡೆಗಳು, ಮನರಂಜನೆ, ವೃತ್ತಿಪರ ತರಬೇತಿ ಹಾಗೂ ಪಾತ್ರೆಗಳು, ಗ್ಯಾಸ್ ಸ್ಟೌವ್, ನೀರಿನ ಫಿಲ್ಟರ್, ಇತ್ಯಾದಿಗಳ ಜೊತೆಗೆ ಅಡುಗೆ ಮನೆಗೆ ಬೇಕಾಗುವಂತಹ ಉಪಕರಣಗಳು | 2,50,000 |
| | **ಒಟ್ಟು** | **5,05,000** |
| **ಬಿ. ಆವರ್ತಕ ವೆಚ್ಚ (ವಾರ್ಷಿಕ)** | | |
| 5. | ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ.2,000/– ನಿರ್ವಹಣಾ ವೆಚ್ಚ (ಆಹಾರ @ ರೂ.1400/– ಹಾಗೂ ಬಟ್ಟೆ, ಔಷಧಗಳು, ಸೋಪು, ಎಣ್ಣೆ, ಇತ್ಯಾದಿಗಳಿಗೆ ರೂ.600/–) – (ರೂ.2000/–x25 ಮಕ್ಕಳು x12 ತಿಂಗಳು) | 6,00,000 |
| 6. | ಬಾಡಿಗೆ ಕಟ್ಟಡಕ್ಕೆ ತಿಂಗಳ ಬಾಡಿಗೆ ಅಥವಾ ಸ್ವಂತ ಕಟ್ಟಡಕ್ಕೆ ನಿರ್ವಹಣಾ ವೆಚ್ಚಗಳು: | |
| | (ಎ) ಮಾಸಿಕ ರೂ.17,500/–ದೊಂದಿಗೆ ಮುಕ್ತ ಆಶ್ರಯಗಳು (ವಾಸ್ತವ ದರಗಳಿಗೆ ಅನುಗುಣವಾಗಿ)*1 | 2,10,000 |
| | (ಬಿ) ಮಾಸಿಕ ರೂ.2,600/–ದೊಂದಿಗೆ ಮೂರು ಸಂಪರ್ಕ ಕೇಂದ್ರಗಳು (ವಾಸ್ತವ ದರಗಳಿಗೆ ಅನುಗುಣವಾಗಿ)*2 | 93,600 |
| 7. | ನೀರು ಹಾಗೂ ವಿದ್ಯುತ್ ಶುಲ್ಕಗಳಿಗೆ ಮಾಸಿಕ ರೂ.2,600/– | 31,200 |
| 8. | ಸಾದಿಲ್ವಾರು (ಅಂಚೆ, ಸ್ಟೇಷನರಿ, ದೂರವಾಣಿ, ಜೆರಾಕ್ಸ್, ಇತ್ಯಾದಿ) @ ರೂ.2,600/– ಮಾಸಿಕ | 31,200 |
| 9. | ಸಾರಿಗೆ ವೆಚ್ಚಗಳು @ ರೂ.2,600/– ಮಾಸಿಕ | 31,200 |
| 10. | ಹೊರಗಿನ ಭೇಟಿಗಳು, ಗ್ರಂಥಾಲಯಕ್ಕೆ ಪುಸ್ತಕಗಳು, ಆಟದ ಸಾಮಗ್ರಿಗಳು, ಶೈಕ್ಷಣಿಕ/ಕ್ರೀಡಾ ಉಪಕರಣಗಳು, ಇತ್ಯಾದಿಗಳಂತಹ ಇತರೆ ವೆಚ್ಚಗಳಿಗೆ @ ರೂ.4,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 48,000 |

| | | |
|---|---|---|
| **11.** | **ವೇತನ:** | |
| | ಓರ್ವ ಯೋಜನಾ ಸಂಯೋಜಕರು ಕಂ ಆಪ್ತಸಮಾಲೋಚಕರು @ ರೂ.17,500/- ಮಾಸಿಕ ವೇತನ | 2,10,000 |
| | ಓರ್ವ ಸಾಮಾಜಿಕ ಕಾರ್ಯಕರ್ತ @ ರೂ.14,000/- | 1,68,000 |
| | ಇಬ್ಬರು ಪಾಲಕರು ಕಂ ಸೇತು ಬಂಧ ಕೋರ್ಸ್ ಶಿಕ್ಷಕರು @ ರೂ.9,000/- ಮಾಸಿಕ | 2,16,000 |
| | ಮೂರು ಔಟ್‌ರೀಚ್ ಕಾರ್ಯಕರ್ತರು *3 @ ರೂ.8,000/- ಮಾಸಿಕ | 2,88,000 |
| | ಸ್ವಚ್ಛಗೊಳಿಸಲು ಹಾಗೂ ಅಡುಗೆ ಮಾಡಲು ಓರ್ವ ಸಹಾಯಕರು @ ರೂ.6,000/- ಮಾಸಿಕ ವೇತನದೊಂದಿಗೆ | 72,000 |
| | **ಒಟ್ಟು** | **19,99,200** |
| | **ಒಟ್ಟು (ಎ+ಬಿ)** | **25,04,200** |

*[1]ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.35,000/- ಮಾಸಿಕ.*

*[2]ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.5,000/- ಮಾಸಿಕ. ಡಿಸಿಪಿಯು ಬೆಂಬಲದೊಂದಿಗೆ ಈ ಸಂಪರ್ಕ ಕೇಂದ್ರಗಳನ್ನು ನಡೆಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸಂಪರ್ಕ ಕೇಂದ್ರಗಳ ಉಚಿತ ವಸತಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಲು ಪ್ರಯತ್ನಿಸಬೇಕು.*

*[3]ಭೌಗೋಳಿಕ ಪ್ರದೇಶ ವ್ಯಾಪ್ತಿ ಹಾಗೂ ಕಾರ್ಯಕ್ರಮದಿಂದ ತಲುಪುವಂತಹ ಮಕ್ಕಳ ಸಂಖ್ಯೆಯನ್ನು ಅವಲಂಭಿಸಿ ಔಟ್‌ರೀಚ್ ಕಾರ್ಯಕರ್ತರು ಹಾಗೂ ಸಂಪರ್ಕ ಕೇಂದ್ರಗಳ ಸಂಖ್ಯೆಯನ್ನು ಗರಿಷ್ಠ ಐದಕ್ಕೆ ಹೆಚ್ಚಿಸಬಹುದು.*

***ಗಮನಿಸಿ:***

*ಎ) ರಾತ್ರಿಯ ವೇಳೆಯೂ ಸೇವೆಗಳನ್ನು ಬಳಸಿಕೊಳ್ಳುತ್ತಿರುವಂತಹ 25 ಮಕ್ಕಳಿಗೆ ಹಣಕಾಸಿನ ನೆರವನ್ನು ಒದಗಿಸಲಾಗುವುದು. ಮಧ್ಯಂತರ ಅವಧಿಗಳಲ್ಲಿ, ಬೆಳಗಿನ ಸಮಯದಲ್ಲಿ ಮುಕ್ತ ಆಶ್ರಯಗಳ ಸೇವೆಗಳನ್ನು ಹೆಚ್ಚಿನ ಸಂಖ್ಯೆಯ ಮಕ್ಕಳಿರಬಹುದು. ಹೀಗೆ ಬೆಳಗಿನ ಹೊತ್ತು ಮಾತ್ರ ಈ ಸೇವೆಗಳನ್ನು ಬಳಸಿಕೊಳ್ಳುವ ಮಕ್ಕಳಿಗೆ, ಪ್ರತಿ ಮಗುವಿಗೆ ರೂ.1,000/- ದಂತೆ ನಿರ್ವಹಣಾ ನಿಧಿಯನ್ನು ಒದಗಿಸಲಾಗುವುದು. ಇದಲ್ಲದೆ ಸ್ವಯಂಸೇವಕರ ಬೆಂಬಲವನ್ನು ಪಡೆದುಕೊಳ್ಳಲು ಹಾಗೂ ಮುಕ್ತ ಆಶ್ರಯಗಳನ್ನು ನಡೆಸಲು ಇತರೆ ಮೂಲಗಳಿಂದ ನಿಧಿಯನ್ನು ಕ್ರೋಢೀಕರಿಸಲು ಪ್ರೋತ್ಸಾಹಿಸಬೇಕು.*

*ಬಿ) ಮಧ್ಯಂತರ ಅವಧಿಯಲ್ಲಿ ಅನಾವರ್ತಕ ವೆಚ್ಚದ ಅಂಶಕ್ಕೆ ಸಂಬಂಧಪಟ್ಟ ಯಾವುದೇ ಕೋರಿಕೆಯನ್ನು ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದಿಸಿದರೆ ಒದಗಿಸಲಾಗುವುದು.*

# ಅನುಬಂಧ IX – ದತ್ತು ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆ

## 1. ವಿಶೇಷ ದತ್ತು ಏಜೆನ್ಸಿ (ಎಸ್‌ಎಎ)

### 1.1 ಸಿಬ್ಬಂದಿ ಬಲ

| ಕ್ರ. ಸಂ. | ಸಿಬ್ಬಂದಿಗಳ ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಓರ್ವ ವ್ಯವಸ್ಥಾಪಕರು/ ಸಂಯೋಜಕರು @ ರೂ.17,500/– ಮಾಸಿಕ | 2,10,000 |
| 2. | ಓರ್ವ ಸಾಮಾಜಿಕ ಕಾರ್ಯಕರ್ತ ಕಂ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕ @ ರೂ.14,000/– ಮಾಸಿಕ | 1,68,000 |
| 3. | ಓರ್ವ ದಾದಿ (ಶುಶ್ರೂಕಿ/ನರ್ಸ್) @ ರೂ.9,000/– ಮಾಸಿಕ | 1,08,000 |
| 4. | ಓರ್ವ ವೈದ್ಯರು (ಅಲ್ಪಾವಧಿ) @ ರೂ.7,500/– ಮಾಸಿಕ | 90,000 |
| 5. | ಆರು ಆಯಾಗಳು @ ರೂ.6,000/– ಮಾಸಿಕ | 4,32,000 |
| 6. | ಓರ್ವ ಚೌಕಿದಾರ್ @ ರೂ.6,000/– ಮಾಸಿಕ | 72,000 |
| | **ಒಟ್ಟು** | **10,80,000** |

### 1.2 . 10 ಮಕ್ಕಳ ಒಂದು ಘಟಕದ ಅಂದಾಜು ವೆಚ್ಚ:

| ಕ್ರ. ಸಂ. | ಸಿಬ್ಬಂದಿಗಳ ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಯುಪಿಎಸ್ ಹಾಗೂ ವೆಬ್‌ಕ್ಯಾಂ (ಸಾಫ್ಟ್‌ವೇರ್ ಪರವಾನಗಿ ದರ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್ ಕಂ ಸ್ಕ್ಯಾನ್ನರ್ ಜೊತೆಗೆ ಒಂದು ಕಂಪ್ಯೂಟರ್ | 45,000 |
| 2. | 10 ತೊಟ್ಟಿಲುಗಳು ಒಳಗೊಂಡಂತೆ ಪೀಠೋಪಕರಣ | 1,50,000 |
| 3. | ಅಡುಗೆ ಮನೆಗೆ ಅಗತ್ಯವಿರುವ ಉಪಕರಣಗಳು (ಸಂಪರ್ಕದೊಂದಿಗೆ ಗ್ಯಾಸ್ ಸ್ಟೌವ್, ಪಾತ್ರೆಗಳು, ಕುಡಿಯುವ ನೀರಿನ ಫಿಲ್ಟರ್, ಇತ್ಯಾದಿ) | 40,000 |
| | **ಒಟ್ಟು** | **2,35,000** |
| **ಬಿ. ಆವರ್ತಕ ವೆಚ್ಚ** | | |
| 4. | ಸಿಬ್ಬಂದಿ ವೇತನ (ಮೇಲಿನ ಕೋಷ್ಟಕ 1 ರಲ್ಲಿ ನೀಡಿರುವಂತೆ) | 10,80,000 |
| 5. | ಆಹಾರ, ಹಾಲು ಪುಡಿ, ಫೀಡಿಂಗ್ ಬಾಟಲ್‌ಗಳು, ಬಟ್ಟೆ, ಸೋಪು, ಎಣ್ಣೆ, ಔಷಧಗಳು, ಆಟದ ಸಾಮಗ್ರಿಗಳು, ಇತ್ಯಾದಿಗಳ ವೆಚ್ಚಗಳಿಗೆ, ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ.2,000/– ದಂತೆ 10 ಮಕ್ಕಳಿಗೆ ನಿರ್ವಹಣಾ ನಿಧಿ | 2,40,000 |
| 6. | ಬಾಡಿಗೆ (ಮಾಸಿಕ ರೂ.12,000/– ದವರೆಗೆ)[1] | 1,44,000 |
| 7. | ದತ್ತು ಪ್ರಕರಣಗಳಿಗೆ ಸಂಬಂಧಪಟ್ಟಂತೆ, ಒಂದು ವೇಳೆ ದತ್ತು ನಿಡುವ | 26,000 |

| | | |
|---|---|---|
| | ಭಾರತೀಯ ಪೋಷಕರು ಪಾವತಿಸುವ ಶಕ್ತಿಯಿಲ್ಲದಿದ್ದರೆ, ಇಂತಹ ಪ್ರಕರಣಗಳಲ್ಲಿ ಕೆಲಸ ನಿರ್ವಹಿಸುವ ವಕೀಲರಿಗೆ ಪಾವತಿಸುವ ಕಾನೂನು ವೆಚ್ಚಗಳು @ ರೂ.2,600/– ಪ್ರತಿ ಮಗುವಿಗೆ, ಗರಿಷ್ಠ 10 ಮಕ್ಕಳಿಗೆ ಮಾತ್ರ. ಈ ನಿಧಿಯು ವಾಸ್ತವ ದತ್ತುಗಳ ಸಂಖ್ಯೆ ಹಾಗೂ ವಕೀಲರ ರಸೀದಿಯನ್ನು ಸಲ್ಲಿಸುವ ಆಧಾರದ ಮೇಲೆ ಮಾಡಲಾಗುತ್ತದೆ. | |
| 8. | ಸಾದಿಲ್ವಾರು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಇತ್ಯಾದಿ) @ ರೂ.5,000/– ಮಾಸಿಕ | 60,000 |
| | **ಒಟ್ಟು** | **15,50,000** |
| | **ಒಟ್ಟು (ಎ+ಬಿ)** | **17,85,000** |

*[1]ಸ್ವಂತ ಕಟ್ಟಡಕ್ಕೆ ಮಾಸಿಕ ಗರಿಷ್ಠ ರೂ.42,500/– ವರೆಗೆ ಬಾಡಿಗೆ ಶುಲ್ಕಗಳು, ರಸೀದಿಗಳನ್ನು ಸಲ್ಲಿಸಿದರೆ;*

*ಗಮನಿಸಿ: ಮಧ್ಯಂತರ ಅವಧಿಯಲ್ಲಿ ಯಾವುದೇ ಅನಾವರ್ತಕ ಅಂಶದ ಕೋರಿಕೆಗೆ, ಯೋಜನಾ ಅನುಮೋದನಾ ಮಂಡಳಿಯ (ಪಿಎಬಿ) ಅನುಮೋದನೆ ನೀಡಿದರೆ ಒದಗಿಸಲಾಗುವುದು.*

# ಅನುಬಂಧ X – ಸಾಂಸ್ಥಿಕ ಪೋಷಣೆ

## ಮಾರ್ಗಸೂಚಿಗಳು

ಈ ಅನುಬಂಧದಲ್ಲಿ ಒದಗಿಸಿರುವ ಬೆಂಬಲ ಮಕ್ಕಳ ಪಾಲನಾ ಸಂಸ್ಥೆಗಳು , ಆಶ್ರಯತಾಣಗಳು, ವೀಕ್ಷಣಾಲಯಗಳು, ವಿಶೇಷ ಗೃಹಗಳು, ವಿಶೇಷ ಮಕ್ಕಳ ಪಾಲನಾ ಸಂಸ್ಥೆಗಳು , ಸುರಕ್ಷತಾ ಸ್ಥಳಗಳು ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳ ಪಾಲನಾ ಸಂಸ್ಥೆಗಳ ಘಟಕಗಳಿಗೆ ಮೀಸಲು. ಸಾಂಸ್ಥಿಕ ಪೋಷಣೆಯ ವಿವಿಧ ಮಾದರಿಗಳಿಗೆ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಅನುಕೂಲವನ್ನು ಒದಗಿಸಲಾಗುತ್ತದೆ. ಉದಾಹರಣೆಗೆ, ರಾಜ್ಯಗಳಲ್ಲಿರುವ ಅನೇಕ ಮಕ್ಕಳ ಪಾಲನಾ ಸಂಸ್ಥೆಗಳು ವಿವಿಧ ರೀತಿಯ ವಸತಿಗೃಹಗಳ ಗುಚ್ಛಗಳಾಗಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಕೆಲವು ಹಾಲಿ ನಿಗದಿಪಡಿಸಿರುವ ಮಾದರಿಯಂತಲ್ಲದೆ **'ಗುಂಪು ಗೃಹ'** ಪರಿಕಲ್ಪನೆಯನ್ನೂ ಅಳವಡಿಸಿಕೊಂಡಿವೆ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000ರಡಿ, ಹೊಸ ಗೃಹ ಹಾಗೂ ಹಾಲಿ ಇರುವ ಗೃಹದ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಒದಗಿಸಲಾಗುವ ಹಣಕಾಸಿನ ಬೆಂಬಲದ ವಿವರಗಳನ್ನು ಈ ಕೆಳಗೆ ವಿವರಿಸಿದೆ:

### 1. 50 ಮಕ್ಕಳಿರುವ ಸಂಸ್ಥೆಯ ಸಿಬ್ಬಂದಿ ವಿಧಾನ

| ಕ್ರ. ಸಂ. | ಸಿಬ್ಬಂದಿ ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಓರ್ವ ಪ್ರಭಾರ ಅಧಿಕಾರಿ (ಮೇಲ್ವಿಚಾರಕರು) @ ರೂ.25,000/– ಮಾಸಿಕ ವೇತನ | 3,00,000 |
| 2. | ಓರ್ವ ಆಪ್ತಸಮಾಲೋಚಕರು @ ರೂ.17,500/– ಮಾಸಿಕ ವೇತನ | 2,10,000 |
| 3. | ಓರ್ವ ಪ್ರೊಬೇಷನ್ ಅಧಿಕಾರಿ/ ಮಕ್ಕಳ ಕಲ್ಯಾಣ ಅಧಿಕಾರಿ/ ಪ್ರಕರಣ ಕಾರ್ಯಕರ್ತ @ ರೂ.17,500/– ಮಾಸಿಕ ವೇತನ | 2,10,000 |
| 4. | ಇಬ್ಬರು ಗೃಹ ತಾಯಿ ಅಥವಾ ಗೃಹ ತಂದೆ @ ರೂ.11,000/– ಮಾಸಿಕ ವೇತನದೊಂದಿಗೆ | 2,64,000 |
| 5. | ಓರ್ವ ಪ್ಯಾರಾಮೆಡಿಕಲ್ ಸಿಬ್ಬಂದಿ @ ರೂ.9,000/– ಮಾಸಿಕ ವೇತನದೊಂದಿಗೆ | 1,08,000 |
| 6. | ಓರ್ವ ಸ್ಟೋರ್‌ಕೀಪರ್–ಕಂ–ಅಕೌಂಟೆಂಟ್ @ ರೂ.14,000/– ಮಾಸಿಕ ವೇತನದೊಂದಿಗೆ | 1,68,000 |
| 7. | ಓರ್ವ ಅಡುಗೆ ತಯಾರಕರು @ ರೂ.7,500/– ಮಾಸಿಕ ವೇತನ | 90,000 |
| 8. | ಓರ್ವ ಸಹಾಯಕ @ ರೂ.6,000/– ಮಾಸಿಕ ವೇತನ | 72,000 |
| 9. | ಓರ್ವ ಹೌಸ್‌ಕೀಪರ್ @ ರೂ.6,000/– ಮಾಸಿಕ ವೇತನ | 72,000 |
| 10. | ಓರ್ವ ಶಿಕ್ಷಕ (ಸ್ವಯಂಸೇವಕ/ಅಲ್ಪಾವಧಿ) | ಇತರೆ ಇಲಾಖೆಗಳು/ ನಾಗರಿಕ ಸಮಾಜದೊಂದಿಗೆ ಒಮ್ಮುಖವಾಗುವ ಮೂಲಕ ಹೊರಗುತ್ತಿಗೆ |
| 11. | ಓರ್ವ ಎಂಬಿಬಿಎಸ್ ವೈದ್ಯ (ಸ್ವಯಂ ಸೇವಕರು/ಅಲ್ಪಾವಧಿ) | |

| | | |
|---|---|---|
| 12. | ಓರ್ವ ಕಲೆ ಮತ್ತು ಕರಕುಶಲ–ಕಂ–ಸಂಗೀತದ ಶಿಕ್ಷಕರು (ಸ್ವಯಂ ಸೇವಕರು/ಅಲ್ಪಾವಧಿ) | ಮಾಡಬೇಕು ಅಥವಾ ಇಂತಹ ಸೇವೆಗಳನ್ನು ಒದಗಿಸುವ ಸಂಸ್ಥೆಗಳಿಗೆ ಹೊರಗುತ್ತಿಗೆ ನೀಡಬೇಕು. ಒಂದು ವೇಳೆ ಒಮ್ಮುಖಗೊಳಿಸುವುದು ಸಾಧ್ಯವಾಗದಿದ್ದಲ್ಲಿ, ರಾಜ್ಯ/ ಕೇಂದ್ರಾಡಳಿತ ಪ್ರದೇಶಕ್ಕೆ ಯೋಜನೆಯಡಿ ಒದಗಿಸಿರುವ ಅನಿರ್ಬಂಧಿತ ನಿಧಿ/ ಫ್ಲೆಕ್ಸಿ ನಿಧಿಯನ್ನು ಈ ವೆಚ್ಚಕ್ಕೆ ಭರಿಸಬಹುದು. |
| 13. | ಓರ್ವ ದೈಹಿಕ ಶಿಕ್ಷಕರು ಕಂ ಯೋಗಾ ತರಬೇತುದಾರರು (ಸ್ವಯಂಸೇವಕರು/ಅಲ್ಪಾವಧಿ) | |
| | **ಒಟ್ಟು (14 ಸಿಬ್ಬಂದಿ)** | **14,94,000** |

**ಗಮನಿಸಿ:**

ಎ) ಯೋಜನೆಯಡಿ ಬೆಂಬಲವಿರುವ ಹಾಲಿ ರಾಜ್ಯ/ಕೇಂದ್ರಾಡಳಿತ ನಡೆಸುತ್ತಿರುವ ಸಂಸ್ಥೆಗಳಿಗೆ ಸರ್ಕಾರಿ ಶ್ರೇಣಿ ವೇತನ ಅನ್ವಯಿಸುತ್ತದೆ;

ಬಿ) ಈ ಯೋಜನೆಯಡಿ ಬೆಂಬಲವಿರುವ ಹಾಲಿ ಕಾರ್ಯನಿರ್ವಹಿಸುತ್ತಿರುವ ಎನ್‌ಜಿಓಗಳಿಗೆ, ಮೇಲ್ಕಂಡ ವೇತನ ನಿಯಮಾವಳಿಗಳು ಅನ್ವಯಿಸುತ್ತದೆ. ಎನ್‌ಜಿಓ ತನ್ನ ಸ್ವಂತ ಸಂಪನ್ಮೂಲಗಳಿಂದ ಹೆಚ್ಚಿನ ವೇತನವನ್ನು ನೀಡಬಹುದು.

ಸಿ) ರಾಜ್ಯ/ಕೇಂದ್ರಾಡಳಿತ ಪ್ರದೇಶವು ಗುರುತಿಸಿರುವಂತಹ, ಸ್ವಂತವಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ಎನ್‌ಜಿಓದಿಂದ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೊಸ ಗೃಹಗಳಿಗೆ, ಮೇಲಿನ ವೇತನ ನಿಯಮಾವಳಿಗಳು ಅನ್ವಯಿಸುತ್ತವೆ. ರಾಜ್ಯ/ ಕೇಂದ್ರಾಡಳಿತ ಪ್ರದೇಶ ಅಥವಾ ಎನ್‌ಜಿಓ ತನ್ನ ಸ್ವಂತ ಸಂಪನ್ಮೂಲಗಳಿಂದ ಹೆಚ್ಚಿನ ವೇತನವನ್ನು ನೀಡಬಹುದು.

ಡಿ) ಅಗತ್ಯದ ಪ್ರಕಾರ ಸಾದಿಲ್ವಾರು ನಿಧಿಯಿಂದ ವಾಹನ ಚಾಲಕರ ಸೇವೆಯನ್ನು ಪಡೆದುಕೊಳ್ಳಬಹುದು.

## 2. ಹೊಸ ಗೃಹದ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಹಣಕಾಸಿನ ಬೆಂಬಲ

| ಕ್ರ.ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ, ನಿರ್ಮಾಣ ಹೊರತುಪಡಿಸಿ)** | | |
| 1. | ನಿರ್ಮಾಣ ವೆಚ್ಚ – 8745 ಚ.ಅಡಿ @ ರೂ. 1,000/– ಪ್ರತಿ ಚ.ಅಡಿಗೆ[1] | 87,45,000 |
| 2. | ಮಕ್ಕಳಿಗೆ 60 ಹಾಸಿಗೆಗಳೊಂದಿಗೆ (10 ಮಕ್ಕಳಿಗೆ ರೋಗ ಕೊಠಡಿ ಒಳಗೊಂಡಂತೆ), ಕಪ್‌ಬೋರ್ಡ್‌ಗಳು/ ಸ್ಟೀಲ್ ಲಾಕರ್‌ಗಳು, ಡೈನಿಂಗ್ ಹಾಗೂ ತರಗತಿ ಕೊಠಡಿಗಳಿಗೆ ಮೇಜುಗಳು ಹಾಗೂ ಕುರ್ಚಿಗಳು, ಗ್ರಂಥಾಲಯ ಮತ್ತು ಗೃಹ ಸಿಬ್ಬಂದಿಗಳಿಗೆ, ಗ್ರಂಥಾಲಯಕ್ಕೆ ಕಪ್‌ಬೋರ್ಡ್‌ಗಳು ಮತ್ತು ಸಿಬ್ಬಂದಿ, ಇತ್ಯಾದಿ | 9,00,000 |
| 3. | ಗ್ರಂಥಾಲಯಕ್ಕೆ ಪುಸ್ತಕಗಳು/ ಶ್ರವಣ–ದೃಶ್ಯ ಸಾಧಗಳ ಖರೀದಿಗೆ | 75,000 |
| 4. | ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿ ದರದೊಂದಿಗೆ) ಮೂರು ಕಂಪ್ಯೂಟರ್‌ಗಳು, ಪ್ರಿಂಟರ್–ಕಂ–ಸ್ಕ್ಯಾನ್ನರ್–ಕಂ–ಫ್ಯಾಕ್ಸ್ | 1,35,000 |
| 5. | ಎರಡು ಟಿವಿಗಳು (ಪ್ರತಿ 25 ಮಕ್ಕಳಿಗೆ ಒಂದರಂತೆ) | 30,000 |
| 6. | ಗ್ಯಾಸ್ ಸಂಪರ್ಕದೊಂದಿಗೆ ಗ್ಯಾಸ್ ಸ್ಟೌ ಒಳಗೊಂಡಂತೆ ಅಡುಗೆ ಮನೆಗೆ ಅಗತ್ಯವಿರುವ ಉಪಕರಣಗಳು ಹಾಗೂ ಪಾತ್ರೆಗಳು, ಕುಡಿಯುವ ನೀರಿನ ಫಿಲ್ಟರ್, ಇತ್ಯಾದಿ.[2] | 50,000 |
| | **ಒಟ್ಟು** | **99,35,000** |
| **ಬಿ. ಆವರ್ತಕ ವೆಚ್ಚ (ವಾರ್ಷಿಕ)** | | |
| 7. | ಪ್ರತಿ ತಿಂಗಳಿಗೆ ಪ್ರತಿ ಮಗುವಿಗೆ ರೂ.2,000/– ನಿರ್ವಹಣಾ ವೆಚ್ಚ (ಆಹಾರ, @ ರೂ.1,400/– ಹಾಗೂ ಬಟ್ಟೆ, ಔಷಧ, ಸೋಪು, ಎಣ್ಣೆ, ಇತ್ಯಾದಿಗಳಿಗಾಗಿ ರೂ.600/–) | 12,00,000 |
| 8. | ಹಾಸಿಗೆಗಳು, ಬೆಡ್ ಶೀಟ್‌ಗಳು, ತಲೆದಿಂಬು, ಬ್ಲ್ಯಾಂಕೆಟ್, ದರಿ/ಮ್ಯಾಟ್‌ಗಳು, ಇತ್ಯಾದಿ ಒಳಗೊಂಡಂತೆ ಬೆಡ್ಡಿಂಗ್ ವೆಚ್ಚವಾಗಿ ಪ್ರತಿ ಮಗುವಿಗೆ/ಪ್ರತಿ ವರ್ಷಕ್ಕೆ ರೂ.800/– | 40,000 |

| | | |
|---|---|---|
| 9. | ನೀರು ಹಾಗೂ ವಿದ್ಯುತ್ ಶುಲ್ಕಗಳು @ ರೂ.10,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 1,20,000 |
| 10. | ಸಿಬ್ಬಂದಿ ವೇತನ (ಮೇಲೆ ಕೋಷ್ಠಕ 1.1 ರಲ್ಲಿ ನೀಡಿರುವಂತೆ) | 14,94,000 |
| 11. | ಸಾರಿಗೆ[2] | 80,000 |
| 12. | ಔಟಿಂಗ್‌ಗಳು, ಗ್ರಂಥಾಲಯಕ್ಕೆ ಮ್ಯಾಗಜಿನ್‌ಗಳು/ಪುಸ್ತಕಗಳು, ಕ್ರೀಡಾ ಉಪಕರಣಗಳು, ಇತ್ಯಾದಿ ಒಳಗೊಂಡಂತೆ ಇತರೆ ವೆಚ್ಚಗಳು @ ರೂ.5,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 60,000 |
| 13. | ಸಾದಿಲ್ವಾರು (ಇಂಟರ್‌ನೆಟ್ ಸಂಪರ್ಕ, ವಾಚ್‌ಮನ್ ಸೇವೆ ಹಾಗೂ/ಅಥವಾ ಡಾಟಾ ಎಂಟ್ರಿ ಅಪರೇಟರ್‌ಗಳು ಒಳಗೊಂಡಂತೆ) | 2,00,000 |
| | **ಒಟ್ಟು** | **30,50,000** |
| | **ಒಟ್ಟು ವೆಚ್ಚ (ಎ+ಬಿ)** | **1,29,85,000** |

*[1]ಇದು ಕೇವಲ ಸೂಚಕ ಮಾತ್ರ. ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಂದಾಜುಗಳ ಪ್ರಕಾರ ಅಥವಾ ರಾಜ್ಯದಲ್ಲಿರುವ ನಿಗಧಿತ ದರಗಳ ಪ್ರಕಾರ, ಯಾವುದು ಕಡಿಮೆಯೋ ಅದನ್ನು ಆಧರಿಸಿ, ವಾಸ್ತವದಲ್ಲಿ ಬಿಡುಗಡೆ ಮಾಡುವ ಮೊತ್ತ ಅವಲಂಭಿಸಿರುತ್ತದೆ.*

*[2]ಸಾರಿಗೆ ವೆಚ್ಚ, ಮಕ್ಕಳ ವೃತ್ತಿಪರ ತರಬೇತಿ/ಶಾಲೆಗಳು, ಕ್ಷೇತ್ರ ಭೇಟಿಗಳು, ವಿಚಾರಣೆಗಳು, ಹಾಗೂ ಮಕ್ಕಳನ್ನು ಸಿಡಬ್ಲ್ಯೂಸಿಗಳು, ಜೆಜೆಬಿಗಳು, ಇತ್ಯಾದಿಗಳ ಮುಂದೆ ಹಾಜರುಪಡಿಸುವ ವೆಚ್ಚಗಳಂತಹ ಉದ್ದೇಶಕ್ಕಾಗಿ ಮಾಡುವ ಪ್ರಯಾಣದ ವೆಚ್ಚಗಳನ್ನು ಒಳಗೊಂಡಿವೆ.*

***ಗಮನಿಸಿ:*** *ಮಧ್ಯಂತರ ಅವಧಿಯಲ್ಲಿ ಯಾವುದೇ ರೀತಿ ಅನಾವರ್ತಕ ಅಂಶದ ವೆಚ್ಚದ ಕೋರಿಕೆಯನ್ನು, ಯೋಜನಾ ಅನುಮೋದನಾ ಮಂಡಳಿಯ (ಪಿಎಬಿ) ಅನುಮೋದನೆಯನ್ನು ಅವಲಂಭಿಸಿ ಒದಗಿಸಲಾಗುವುದು.*

## 3. ಹಾಲಿ ಗೃಹದ ನಿರ್ವಹಣೆಗಾಗಿ ಹಣಕಾಸಿನ ಬೆಂಬಲ

| **ಕ್ರ. ಸಂ.** | **ಅಂಶ** | **ಮೊತ್ತ (ರೂ.ಗಳಲ್ಲಿ)** |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ, ನಿರ್ಮಾಣ ಹೊರತುಪಡಿಸಿ)** | | |
| 1. | ರಚನೆ ಬದಲಾವಣೆಗಳು ವಸತಿ ಸೌಕರ್ಯಗಳು ಹಾಗೂ ನಿರ್ವಹಣೆಯ ಉನ್ನತೀಕರಣ (ವಾಸ್ತವ ದರಗಳಿಗೆ ಅನುಗುಣವಾಗಿ) | 7,50,000 |
| 2. | ಟಿವಿ, ಕಂಪ್ಯೂಟರ್‌ಗಳು, ಪುಸ್ತಕಗಳು ಹಾಗೂ ಪೀಠೋಪಕರಣ, ಅಡುಗೆ ಉಪಕರಣಗಳು, ಇತ್ಯಾದಿಗಳ ಖರೀದಿ/ನಿರ್ವಹಣೆಯಂತಹ ಸೌಕರ್ಯಗಳ ಉನ್ನತೀಕರಣಕ್ಕಾಗಿ | 11,90,000 |
| | **ಒಟ್ಟು** | **19,40,000** |
| **ಬಿ. ಆವರ್ತಕ ವೆಚ್ಚ (ವಾರ್ಷಿಕ)** | | |
| 3. | ನಿರ್ವಹಣಾ ವೆಚ್ಚ ಪ್ರತಿ ಮಗುವಿಗೆ, ಪ್ರತಿ ತಿಂಗಳಿಗೆ ರೂ.2,000/– (ಆಹಾರಕ್ಕೆ ರೂ.1,400/– ಹಾಗೂ ಬಟ್ಟೆ, ಔಷಧಗಳು, ಸೋಪು, ಎಣ್ಣೆ, ಇತ್ಯಾದಿಗಳಿಗೆ ರೂ.600/–) | 12,00,000 |
| 4. | ಹಾಸಿಗೆ, ಬೆಡ್‌ಶೀಟುಗಳು, ತಲೆದಿಂಬು, ಬ್ಲ್ಯಾಂಕೆಟ್, ದರಿ/ಮ್ಯಾಟ್‌ಗಳು, ಇತ್ಯಾದಿಗಳು ಒಳಗೊಂಡಂತೆ ಬೆಡ್ಡಿಂಗ್ ವೆಚ್ಚ @ ರೂ.800/– ಪ್ರತಿ ಮಗುವಿಗೆ, ಪ್ರತಿ ವರ್ಷಕ್ಕೆ | 40,000 |

| | | |
|---|---|---|
| 5. | ಮಕ್ಕಳ ಗೃಹಗಳನ್ನು ನಡೆಸಲು ಬಾಡಿಗೆ ಕಟ್ಟಡದ ಬಾಡಿಗೆ ವೆಚ್ಚಕ್ಕೆ @ ರೂ.35,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ)[1] | 4,20,000 |
| 6. | ನೀರು ಹಾಗೂ ವಿದ್ಯುತ್ ಶುಲ್ಕಗಳು @ ರೂ.10,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 1,20,000 |
| 7. | ಸಿಬ್ಬಂದಿ ವೇತನ (ಮೇಲೆ ಕೋಷ್ಠಕ 1.1ರಲ್ಲಿ ವಿವರಿಸಿರುವಂತೆ) | 14,94,000 |
| 8. | ಸಾರಿಗೆ[2] | 80,000 |
| 9. | ಔಟಿಂಗ್‌ಗಳು, ಗ್ರಂಥಾಲಯಕ್ಕೆ ಮ್ಯಾಗಜಿನ್‌ಗಳು/ಪುಸ್ತಕಗಳು, ಕ್ರೀಡಾ ಉಪಕರಣಗಳು, ಇತ್ಯಾದಿಯಂತಹ ಇತರೆ ವೆಚ್ಚಗಳಿಗೆ @ ರೂ.5,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 60,000 |
| 10. | ಸಾದಿಲ್ವಾರು (ಇಂಟರ್‌ನೆಟ್ ಸಂಪರ್ಕ, ವಾಚ್‌ಮನ್ ಹಾಗೂ/ಅಥವಾ ಡಾಟಾ ಎಂಟ್ರಿ ಅಪರೇಟರ್‌ಗಳ ಸೇವೆಗಳು | 2,00,000 |
| | **ಒಟ್ಟು** | **36,14,000** |
| | **ಒಟ್ಟು ವೆಚ್ಚ** (ಎ+ಬಿ_ | **55,54,000** |

*[1] ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.42,500/– ಪ್ರತಿ ತಿಂಗಳು. ಸ್ವಂತ ಕಟ್ಟಡಕ್ಕೆ ಗರಿಷ್ಠ ರೂ.50,000/– ವಾರ್ಷಿಕ ನಿರ್ವಹಣಾ ಶುಲ್ಕಗಳು, ರಸೀದಿಗಳ ಸಲ್ಲಿಕೆಯನ್ನು ಆಧರಿಸಿ.*

*[2] ಸಾರಿಗೆ ವೆಚ್ಚಗಳು, ಮಕ್ಕಳ ವೃತ್ತಿಪರ ತರಬೇತಿ/ಶಾಲೆಗಳು, ಕ್ಷೇತ್ರ ಭೇಟಿಗಳು, ವಿಚಾರಣೆಗಳು, ಮಕ್ಕಳನ್ನು ಸಿಡಬ್ಲ್ಯೂಸಿಗಳು, ಜೆಜೆಬಿಗಳು, ಇತ್ಯಾದಿಗಳ ಮುಂದೆ ಹಾಜರುಪಡಿಸಲು ತಗಲುವ ವೆಚ್ಚಗಳ ಉದ್ದೇಶಕ್ಕಾಗಿ ಪ್ರಯಾಣದ ವೆಚ್ಚಗಳನ್ನು ಒಳಗೊಂಡಿದೆ. ವಿಶೇಷ ಅಗತ್ಯವುಳ್ಳ ಮಕ್ಕಳ ಸಾರಿಗೆ ಅಗತ್ಯಗಳನ್ನು ಭರಿಸಲು ಆದ್ಯತೆಯನ್ನು ನೀಡಬೇಕು.*

***ಗಮನಿಸಿ:***

*ಎ) ಮಧ್ಯಂತರ ಅವಧಿಯಲ್ಲಿ, ವಸತಿ ಸೌಕರ್ಯಗಳ ನಿರ್ವಹಣೆಗಾಗಿ ಅಥವಾ ಅನಾವರ್ತಕ ರೂಪದ ಉನ್ನತೀಕರಣದ ಕೋರಿಕೆಗಳನ್ನು, ಯೋಜನಾ ಅನುಮೋದನಾ ಮಂಡಳಿಯ (ಪಿಎಬಿ) ಅನುಮೋದನೆಯ ಮೇರೆಗೆ ಒದಗಿಸಲಾಗುವುದು.*

*ಬಿ) ಆಪ್ತಸಮಾಲೋಚಕ, ಮಕ್ಕಳ ಕಲ್ಯಾಣ ಅಧಿಕಾರಿ, ಪ್ರೊಬೇಷನ್ ಅಧಿಕಾರಿ, ಗೃಹ ತಂದೆ ಅಥವಾ ಗೃಹ ಮಾತೆಯಂತಹ ಹುದ್ದೆಗಳ ಸಂಖ್ಯೆಯನ್ನು, ಗೃಹದ ಸಾಮರ್ಥ್ಯವನ್ನು ಆಧರಿಸಿ ಹೆಚ್ಚಿಸಬಹುದು/ಕಡಿಮೆಗೊಳಿಸಬಹುದು.*

*ಸಿ) ಹೆಣ್ಣು ಮಕ್ಕಳ ಗೃಹದ ಸಿಬ್ಬಂದಿಗಳನ್ನು ಆಯ್ಕೆ ಮಾಡುವಾಗ, ಸಾಧ್ಯವಾದಷ್ಟೂ ಮಹಿಳಾ ಸಿಬ್ಬಂದಿಗಳನ್ನೇ ನೇಮಕ ಮಾಡುವುದನ್ನು ಖಾತ್ರಿಪಡಿಸಬೇಕು, ವಿಶೇಷವಾಗಿ ನಾಯಕತ್ವ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವ ಹಂತಗಳಲ್ಲಿ ಹಾಗೂ ಹೆಣ್ಣು ಮಕ್ಕಳೊಂದಿಗೆ ಸಂವಾದ ನಡೆಸುವ ಸಂದರ್ಭಗಳಿಗಾಗಿ.*

**4. ವಿಶೇಷ ಅಗತ್ಯವುಳ್ಳ ಮಕ್ಕಳ ವಿಶೇಷ ಘಟಕಕ್ಕೆ ಹಣಕಾಸಿನ ಬೆಂಬಲ**

| ಕ್ರ. ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಅನಾವರ್ತಕ ವೆಚ್ಚ (ವಾರ್ಷಿಕ)** | | |
| 1. | ಮನೋವೈಜ್ಞಾನಿಕ ತಪಾಸಣಾ ಸಾಮಗ್ರಿಗಳು, ವಾಕ್ ಮತ್ತು ಭಾಷೆಗಾಗಿ ತರಬೇತಿ ಸಾಮಗ್ರಿಗಳು, ಬೋಧನಾ ಸಾಮಗ್ರಿಗಳು, ಗಾಲಿ ಕುರ್ಚಿಗಳು, ಬಾಲವಾಡಿಗಳು ಇತ್ಯಾದಿಗಳಿಗೆ ವಿಶೇಷ ಉಪಕರಣಗಳು ಹಾಗೂ ಸಾಮಗ್ರಿಗಳು @ ಪ್ರತಿ ಮಗುವಿಗೆ ರೂ.10,000/– 10 ಮಕ್ಕಳಿಗೆ | 1,00,000 |
| 2. | ಪೌಷ್ಠಿಕ ಆಹಾರದ ಮೇಲಿನ ವೆಚ್ಚಗಳನ್ನು ಭರಿಸಲು ಪ್ರತಿ ತಿಂಗಳಿಗೆ ಪ್ರತಿ ಮಗುವಿಗೆ ರೂ.400/–, ಹತ್ತು (10) ಮಕ್ಕಳಿಗೆ ಹೆಚ್ಚುವರಿ ಅನುದಾನ | 48,000 |
| 3. | 10 ಮಕ್ಕಳಿಗೆ ಆ್ಯಂಟಿರೆಟ್ರೊವೈರಲ್ ಥೆರಿಪಿ (ಎಆರ್‌ಟಿ)[1] ಇತರೆ ವೈದ್ಯಕೀಯ ಅಗತ್ಯಗಳು, ನಿವಿರ್ಶೀಕರಣ ಹಾಗೂ ಚಿಕಿತ್ಸೆಗಾಗಿ[2] ವಿಶೇಷ ವೈದ್ಯಕೀಯ ಸಹಾಯ ಪ್ರತಿ ಮಗುವಿಗೆ, ಪ್ರತಿ ತಿಂಗಳಿಗೆ @ ರೂ. 4,000/– (ವಾಸ್ತವ ದರಗಳಿಗೆ ಅನುಗುಣವಾಗಿ)[3] | 4,80,000 |
| 4. | ಸಿಬ್ಬಂದಿ ವೇತನ | |
| | ಓರ್ವ ವಿಶೇಷ ಬೋಧಕರು/ ಥೆರಪಿಸ್ಟ್ @ ರೂ.17,500/– ಪ್ರತಿ ತಿಂಗಳು | 2,10,000 |
| | ಓರ್ವ ಶುಶ್ರೂಷಕಿ (ಮಹಿಳೆ) @ ರೂ.10,000/– ಮಾಸಿಕ | 1,20,000 |
| | ಓರ್ವ ಕೇರ್ ಟೇಕರ್–ಕಂ–ವೃತ್ತಿಪರ ತರಬೇತುದಾರ @ ರೂ.7,500/– ಮಾಸಿಕ | 90,000 |
| | **ಒಟ್ಟು** | **10,48,000** |

*[1] ಸಂಬಂಧಪಟ್ಟ ಸ್ಥಳದಲ್ಲಿರುವ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಗಳಿಂದ ಆ್ಯಂಟಿರೆಟ್ರೊವೈರಲ್ ಥೆರಪಿ (ಎಆರ್‌ಟಿ) ಸೇವೆಗಳನ್ನು ಪಡೆದುಕೊಳ್ಳಲು ಪ್ರಯತ್ನಗಳನ್ನು ಮಾಡಬೇಕು. ಒಂದು ವೇಳೆ ಇದು ಲಭ್ಯವಿಲ್ಲದಿದ್ದಲ್ಲಿ, ಕ್ರ. ಸಂ. 3ರ ಶೀರ್ಷಿಕೆಯಡಿ ಒದಗಿಸಿರುವ ನಿಧಿಯನ್ನು ಬಳಸಿಕೊಳ್ಳಬಹುದು.*

*[2] ಮಾದಕ ವ್ಯಸನಕ್ಕೆ ಈಡಾಗಿರುವ ಮಕ್ಕಳಿಗಾಗಿ ರಾಜ್ಯ ಸರ್ಕಾರ ನಡೆಸುತ್ತಿರುವ, ನಿವಿರ್ಶೀಕರಣ (Detoxification) ಹಾಗೂ ಚಿಕಿತ್ಸಾ ಕೇಂದ್ರಗಳಿಗೆ ಮಕ್ಕಳನ್ನು ಕಳುಹಿಸಲು ಮೊದಲ ಆದ್ಯತೆಯನ್ನು ನೀಡಬೇಕು, ಒಂದು ವೇಳೆ ಇಂತಹ ಸೌಕರ್ಯ ಲಭ್ಯವಿಲ್ಲದಿದ್ದರೆ, ಕ್ರ. ಸಂ. 3ರ ಶೀರ್ಷಿಕೆಯಡಿ ಒದಗಿಸಿರುವ ಹಣವನ್ನು ಬಳಸಿಕೊಳ್ಳಬಹುದು.*

*[3] ಗೃಹದಲ್ಲಿರುವ ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯಗಳ ಪ್ರಕಾರ, ಕ್ರ. ಸಂ. 1 ಹಾಗೂ 3ರಡಿ ನೀಡಿರುವ ನಿಧಿಯನ್ನು ಬಳಸಿಕೊಳ್ಳಲು ಡಿಸಿಪಿಓಗೆ ಅವಕಾಶವನ್ನು ಕಲ್ಪಿಸಿರುತ್ತದೆ.*

# ಅನುಬಂಧ XI - ಮಕ್ಕಳ ಕಲ್ಯಾಣ ಸಮಿತಿಗಳು (ಸಿಡಬ್ಲ್ಯೂಸಿ)

**ಮಾರ್ಗಸೂಚಿಗಳು**

ಈ ಯೋಜನೆಯು ಸಿಡಬ್ಲ್ಯೂಸಿಗಳನ್ನು ಸ್ಥಾಪಿಸಲು ಎರಡು ರೀತಿಯ ಅನುದಾನಗಳನ್ನು ಒದಗಿಸುತ್ತದೆ, **1) ನಿರ್ಮಾಣ ಹಾಗೂ ನಿರ್ವಹಣಾ ಅನುದಾನ; ಹಾಗೂ 2) ನಿರ್ವಹಣಾ ಅನುದಾನ. ನಿರ್ಮಾಣ ಹಾಗೂ ನಿರ್ವಹಣಾ** ಅನುದಾನಗಳಡಿ ಯೋಜನೆಯು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ಹೊಸ ವಸತಿಯ ನಿರ್ಮಾಣಕ್ಕೆ ಬೆಂಲವನ್ನು ಕಲ್ಪಿಸಿದರೆ, ನಿರ್ವಹಣಾ ಅನುದಾನವನ್ನು ಕೇವಲ ಸಿಡಬ್ಲ್ಯೂಸಿಗಳ ದೈನಂದಿನ ಕಾರ್ಯನಿರ್ವಹಣೆಗಾಗಿ ಮಾತ್ರ ಒದಗಿಸಲಾಗುತ್ತದೆ. ಎರಡೂ ರೀತಿಯ ಅನುದಾನಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

1. **ನಿರ್ಮಾಣ ಹಾಗೂ ನಿರ್ವಹಣಾ ಅನುದಾನ**

| ಕ್ರ.ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ** | | |
| 1. | 300 ಚದರಡಿಯ ಎರಡು ಕೊಠಡಿಗಳ ನಿರ್ಮಾಣಕ್ಕೆ @ ರೂ.1000/– ಪ್ರತಿ ಚದರಡಿಗೆ, ಅಗತ್ಯದ ಪ್ರಕಾರ (ರೂ.1,000/–x600 ಚದರಡಿ)[1] | 6,00,000 |
| 2. | ಪೀಠೋಪಕರಣ ಹಾಗೂ ಉಪಕರಣಗಳು | 50,000 |
| 3. | ವೆಬ್ ಕ್ಯಾಂ ಹಾಗೂ ಯುಪಿಎಸ್ ಜೊತೆ ಒಂದು ಕಂಪ್ಯೂಟರ್ (ಸಾಫ್ಟ್‌ವೇರ್ ಪರವಾನಗಿ ದರವನ್ನೂ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್–ಕಂ–ಸ್ಕ್ಯಾನ್ನರ್ | 45,000 |
| 4. | ಮಕ್ಕಳ–ಸ್ನೇಹಿ ಪರಿಸರದ ನಿರ್ಮಾಣ ಹಾಗೂ ನಿರ್ವಹಣೆ ಒಳಗೊಂಡಂತೆ ಕೊಠಡಿಗಳ ಬಣ್ಣ ಬಳಿಯುವಿಕೆ, ಒಳಾಂಗಣ ಕ್ರೀಡೆಗಳು, ಇತ್ಯಾದಿಗಾಗಿ | 7,500 |
| | **ಒಟ್ಟು** | **7,02,400** |
| **ಬಿ. ಆವರ್ತಕ ವೆಚ್ಚ** | | |
| 5. | ಪ್ರಯಾಣ/ಸಭೆ ಭತ್ಯೆ ಅಥವಾ ಗೌರವಧನ @ ರೂ.1,000/– ಪ್ರತಿ ಸಭೆಗೆ ಅಧ್ಯಕ್ಷರಿಗೆ (ರೂ.1,000/– x 12 ಸಭೆಗಳು ಮಾಸಿಕ x 12 ತಿಂಗಳು) | 1,44,000 |
| 6. | ಪ್ರಯಾಣ/ಸಭೆ ಭತ್ಯೆ ಅಥವಾ ಗೌರವಧನ @ ರೂ.1,000/– ಪ್ರತಿ ಸಭೆಗೆ ಪ್ರತಿ ಸದಸ್ಯರಿಗೆ, ಒಟ್ಟು 4 ಸದಸ್ಯರಿಗೆ (ರೂ.1,000/– x 12 ಸಭೆಗಳು ಮಾಸಿಕ x 12 ತಿಂಗಳು) | 5,76,000 |
| 7. | ಓರ್ವ ಸಹಾಯಕರು ಕಂ ಡಾಟಾ ಎಂಟ್ರಿ ಅಪರೇಟರ್ ವೇತನ @ ರೂ.9,000/– | 1,08,000 |
| 8. | ಸಮಿತಿಯ ಮುಂದೆ ಮಗುವನ್ನು ಹಾಜರುಪಡಿಸುವ ಪ್ರಕ್ರಿಯೆ ಸಂದರ್ಭದಲ್ಲಿ ಔಷಧಗಳು, ಸಾರಿಗೆ, ಆಹಾರ, ಇತ್ಯಾದಿಗಳು ಒಳಗೊಂಡಂತೆ ಮಗುವಿಗೆ ಸಂಬಂಧಿತ ವೆಚ್ಚಗಳಿಗೆ @ ರೂ.6,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 72,000 |
| 9. | ಸಾದಿಲ್ವಾರು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಸ್ಥಳೀಯ ಪ್ರಯಾಣ, ಇತ್ಯಾದಿ). @ ರೂ. 5,000/– ಪ್ರತಿ ತಿಂಗಳು (ವಾಸ್ತವ ದರಗಳಿಗೆ ಅನುಗುಣವಾಗಿ) | 60,000 |
| | **ಒಟ್ಟು** | **9,60,000** |
| | **ಒಟ್ಟು ವೆಚ್ಚ (ಎ+ಬಿ)** | **16,62,500** |

[1] *ಇದು ಕೇವಲ ಸೂಚಕ ಮಾತ್ರ. ವಾಸ್ತವ ಬಿಡುಗಡೆ, ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಂದಾಜುಗಳ ಪ್ರಕಾರ ಅಥವಾ ರಾಜ್ಯದಲ್ಲಿರುವ ನಿಗದಿತ ದರಗಳ ಪ್ರಕಾರ, ಯಾವುದು ಕಡಿಮೆಯೋ ಅದರ ಪ್ರಕಾರ ಒದಗಿಸಲಾಗುವುದು.*

***ಗಮನಿಸಿ:*** *ಮಧ್ಯಂತರ ಅವಧಿಯಲ್ಲಿ, ಯಾವುದೇ ಅನಾವರ್ತಕ ಅಂಶದ ವೆಚ್ಚಗಳ ಕೋರಿಕೆಯನ್ನು ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯನ್ನು ಆಧರಿಸಿ ಒದಗಿಸಲಾಗುವುದು.*

## 2. ನಿರ್ವಹಣಾ ಅನುದಾನ

| ಕ್ರ. ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣಗಳು | 50,000 |
| 2. | ವೆಬ್‌ಕ್ಯಾಂ ಹಾಗೂ ಯುಪಿಎಸ್ ಜೊತೆಗೆ ಒಂದು ಕಂಪ್ಯೂಟರ್ (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್–ಕಂ–ಸ್ಕ್ಯಾನ್ನರ್ | 45,000 |
| 3. | ಮಕ್ಕಳ–ಸ್ನೇಹಿ ಪರಿಸರದ ನಿರ್ಮಾಣ ಹಾಗೂ ನಿರ್ವಹಣೆ ಒಳಗೊಂಡಂತೆ ಕೊಠಡಿಗಳ ಬಣ್ಣ ಬಳಿಯುವಿಕೆ, ಒಳಾಂಗಣ ಕ್ರೀಡೆಗಳು, ಇತ್ಯಾದಿಗಾಗಿ | 7,500 |
| | **ಒಟ್ಟು** | **1,02,500** |
| **ಬಿ. ಆವರ್ತಕ ವೆಚ್ಚ** | | |
| 4. | ಮಕ್ಕಳ ಗೃಹವನ್ನು ನಡೆಸಲು ಬಾಡಿಗೆ ಕಟ್ಟಡಕ್ಕೆ ಅಗತ್ಯವಿರುವ ಬಾಡಿಗೆ @ ರೂ.10,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ)1 | 1,20,000 |
| 5. | ಪ್ರಯಾಣ/ಸಭಾ ಭತ್ಯೆ ಅಥವಾ ಗೌರವಧನ @ ರೂ.1,000/– ಪ್ರತಿ ಸಭೆಗೆ ಅಧ್ಯಕ್ಷ (ರೂ.1,000/– x 12 ಸಭೆಗಳು ಪ್ರತಿ ತಿಂಗಳು x 12 ತಿಂಗಳು)[2] | 1,44,000 |
| 6. | ಪ್ರಯಾಣ/ಸಭಾ ಭತ್ಯೆ ಅಥವಾ ಗೌರವಧನ @ ರೂ.1,000/– ಪ್ರತಿ ಸಭೆಗೆ ಪ್ರತಿ ಸಭೆಗೆ, 4 ಸದಸ್ಯರಿಗೆ (ರೂ.1,000 x 12 ಸಭೆಗಳು ಪ್ರತಿ ತಿಂಗಳು x 12 ತಿಂಗಳು)[2] | 5,76,000 |
| 7. | ಓರ್ವ ಸಹಾಯಕರು ಕಂ ಡಾಟಾ ಎಂಟ್ರಿ ಆಪರೇಟರ್ @ ರೂ.9,000/– ವೇತನ | 1,08,000 |
| 8. | ಮಗುವನ್ನು ಸಮಿತಿಯ ಮುಂದೆ ಹಾಜರು ಪಡಿಸುವ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ತಗಲುವ ಔಷಧಗಳು, ಸಾರಿಗೆ, ಆಹಾರ, ಇತ್ಯಾದಿಗಳಂತಹ ಮಕ್ಕಳಿಗೆ ಸಂಬಂಧಿಸಿದ ವೆಚ್ಚಗಳಿಗೆ @ರೂ.6,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 72,000 |
| 9. | ಸಾದಿಲ್ವಾರು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಸ್ಥಳೀಯ ಪ್ರಯಾಣ, ಇತ್ಯಾದಿ). @ ರೂ.5,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 60,000 |

| | | |
|---|---|---|
| | **ಒಟ್ಟು** | **10,80,000** |
| | **ಒಟ್ಟು ವೆಚ್ಚ (ಎ+ಬಿ)** | **11,82,500** |

*[1] ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.20,000/– ಪ್ರತಿ ತಿಂಗಳು.*

*[2] ಸಿಡಬ್ಲ್ಯೂಸಿ ಕನಿಷ್ಠ ವಾರದಲ್ಲಿ ಕನಿಷ್ಠ ಮೂರು ಸಭೆ ಸೇರಬೇಕು ಹಾಗೂ ಈ ರೀತಿ ಸೇರುವ ಸಭೆಯ ಅವಧಿ ಕನಿಷ್ಠ ನಾಲ್ಕು ತಾಸುಗಳಿರಬೇಕು.*

***ಗಮನಿಸಿ:***

*ಎ) ಮಧ್ಯಂತರ ಅವಧಿಯಲ್ಲಿ, ವಸತಿ ಸೌಕರ್ಯಗಳ ನಿರ್ವಹಣೆ ಅಥವಾ ಅನಾವರ್ತಕ ಸ್ವರೂಪದ ಉನ್ನತೀಕರಣದ ಕೋರಿಕೆಗಳನ್ನು, ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯನ್ನು ಆಧರಿಸಿ ಒದಗಿಸಲಾಗುವುದು.*

*ಬಿ) ಸಿಡಬ್ಲ್ಯೂಸಿ ವಿಚಾರಣೆಗಳನ್ನು ನಡೆಸುವ ಮಕ್ಕಳ ಗೃಹಗಳಿಗೆ, ವಿಚಾರಣೆಗಳು ನಡೆಯುವ ದಿನಗಳಂದು ಆಪ್ತಸಮಾಲೋಚಕರು ಹಾಗೂ ಸಹಾಯಕರ ಸಹಾಯವನ್ನು ಒದಗಿಸಲಾಗುವುದು. ಡಿಸಿಪಿಯು ಸಹ ಅಗತ್ಯವಿರುವಾಗ ಕಾನೂನು ಹಾಗೂ ಆಪ್ತಸಮಾಲೋಚನೆ ಬೆಂಬಲವನ್ನು ಒದಗಿಸುತ್ತದೆ.*

# ಅನುಬಂಧ XII – ಮಕ್ಕಳ ನ್ಯಾಯ ಮಂಡಳಿ (ಜೆಜೆಬಿ)

## ಮಾರ್ಗಸೂಚಿಗಳು

ಈ ಯೋಜನೆಯು ಜೆಜೆಬಿಗಳನ್ನು ಸ್ಥಾಪಿಸಲು ಎರಡು ರೀತಿಯ ಅನುದಾನಗಳನ್ನು ಒದಗಿಸುತ್ತದೆ, 1) ನಿರ್ಮಾಣ ಹಾಗೂ ನಿರ್ವಹಣಾ ಅನುದಾನ; ಹಾಗೂ 2) ನಿರ್ವಹಣಾ ಅನುದಾನ. ನಿರ್ಮಾಣ ಹಾಗೂ ನಿರ್ವಹಣಾ ಅನುದಾನದಡಿ ಯೋಜನೆಯು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಜೆಜೆಬಿಗಳಿಗೆ ಹೊಸ ಸೂರನ್ನು ನಿರ್ಮಿಸಲು ಬೆಂಬಲ ಒದಗಿಸಿದರೆ; ನಿರ್ವಹಣಾ ಅನುದಾನದಡಿ ಕೇವಲ ಜೆಜೆಬಿಗಳ ದೈನಂದಿನ ಕಾರ್ಯನಿರ್ವಹಣೆಗಾಗಿ ಮಾತ್ರ ಈ ಕೆಳಗಿನಂತೆ ಒದಗಿಸಲಾಗುವುದು:

### 1. ನಿರ್ಮಾಣ ಹಾಗೂ ನಿರ್ವಹಣಾ ಅನುದಾನ

| ಕ್ರ.ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ, ನಿರ್ಮಾಣಕ್ಕೆ ಹೊರತುಪಡಿಸಿ)** | | |
| 1. | 300 ಚದರಡಿಯ ಎರಡು ಕೊಠಡಿಗಳ ನಿರ್ಮಾಣಕ್ಕೆ @ ರೂ.1000/– ಪ್ರತಿ ಚದರಡಿಗೆ, ಅಗತ್ಯದ ಪ್ರಕಾರ (ರೂ.1,000/–x600 ಚದರಡಿ)[1] | 6,00,000 |
| 2. | ಪೀಠೋಪಕರಣ ಹಾಗೂ ಉಪಕರಣಗಳು | 50,000 |
| 3. | ವೆಬ್ ಕ್ಯಾಂ ಹಾಗೂ ಯುಪಿಎಸ್ ಜೊತೆ ಒಂದು ಕಂಪ್ಯೂಟರ್ (ಸಾಫ್ಟ್‌ವೇರ್ ಪರವಾನಗಿ ದರವನ್ನೂ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್–ಕಂ–ಸ್ಕ್ಯಾನ್ನರ್ | 45,000 |
| 4. | ಮಕ್ಕಳ–ಸ್ನೇಹಿ ಪರಿಸರದ ನಿರ್ಮಾಣ ಹಾಗೂ ನಿರ್ವಹಣೆ ಒಳಗೊಂಡಂತೆ ಕೊಠಡಿಗಳ ಬಣ್ಣ ಬಳಿಯುವಿಕೆ, ಒಳಾಂಗಣ ಕ್ರೀಡೆಗಳು, ಇತ್ಯಾದಿಗಾಗಿ | 7,500 |
| | **ಒಟ್ಟು** | **7,02,400** |
| **ಬಿ. ಆವರ್ತಕ ವೆಚ್ಚ** | | |
| 5. | ಪ್ರಯಾಣ/ಸಭೆ ಭತ್ಯೆ ಅಥವಾ ಗೌರವಧನ @ ರೂ.1,000/– ಪ್ರತಿ ಸಭೆಗೆ 2 ಸಾಮಾಜಿಕ ಕಾರ್ಯಕರ್ತರಿಗೆ ಪ್ರತಿ ಬಾರಿಗೆ (ರೂ.1,000/– x 20 ಸಭೆಗಳು ಮಾಸಿಕ x 2 ಸಾಮಾಜಿಕ ಕಾರ್ಯಕರ್ತರಿಗೆ) | 4,80,000 |
| 6. | ಓರ್ವ ಸಹಾಯಕರು–ಕಂ–ಡಾಟಾ ಎಂಟ್ರಿ ಅಪರೇಟರ್ ವೇತನ @ ರೂ.9,000/– | 1,08,000 |
| 7. | ಸಮಿತಿಯ ಮುಂದೆ ಮಗುವನ್ನು ಹಾಜರುಪಡಿಸುವ ಪ್ರಕ್ರಿಯೆ ಸಂದರ್ಭದಲ್ಲಿ ಔಷಧಗಳು, ಸಾರಿಗೆ, ಆಹಾರ, ಇತ್ಯಾದಿಗಳು ಒಳಗೊಂಡಂತೆ ಮಗುವಿಗೆ ಸಂಬಂಧಿತ ವೆಚ್ಚಗಳಿಗೆ @ ರೂ.6,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 72,000 |
| 9. | ಸಾದಿಲ್ವಾರು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಸ್ಥಳೀಯ ಪ್ರಯಾಣ, ಇತ್ಯಾದಿ). @ ರೂ. 5,000/– ಪ್ರತಿ ತಿಂಗಳು (ವಾಸ್ತವ ದರಗಳಿಗೆ ಅನುಗುಣವಾಗಿ) | 60,000 |
| | **ಒಟ್ಟು** | **7,20,000** |
| | **ಒಟ್ಟು ವೆಚ್ಚ** (ಎ+ಬಿ) | **14,22,500** |

*[1] ಇದು ಕೇವಲ ಸೂಚಕ ಮಾತ್ರ. ವಾಸ್ತವ ಬಿಡುಗಡೆ, ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಂದಾಜುಗಳ ಪ್ರಕಾರ ಅಥವಾ ರಾಜ್ಯದಲ್ಲಿರುವ ನಿಗದಿತ ದರಗಳ ಪ್ರಕಾರ, ಯಾವುದು ಕಡಿಮೆಯೋ ಅದರ ಪ್ರಕಾರ ಒದಗಿಸಲಾಗುವುದು.*

***ಗಮನಿಸಿ:*** *ಮಧ್ಯಂತರ ಅವಧಿಯಲ್ಲಿ, ಯಾವುದೇ ಅನಾವರ್ತಕ ಅಂಶದ ವೆಚ್ಚಗಳ ಕೋರಿಕೆಯನ್ನು ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯನ್ನು ಆಧರಿಸಿ ಒದಗಿಸಲಾಗುವುದು.*

## 1. ನಿರ್ವಹಣಾ ಅನುದಾನ

| ಕ್ರ. ಸಂ. | ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| ಎ. ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ) | | |
| 1. | ಪೀಠೋಪಕರಣಗಳು | 50,000 |
| 2. | ವೆಬ್‌ಕ್ಯಾಂ ಹಾಗೂ ಯುಪಿಎಸ್ ಜೊತೆಗೆ ಒಂದು ಕಂಪ್ಯೂಟರ್ (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್ ಕಂ ಸ್ಕ್ಯಾನ್ನರ್ | 45,000 |
| 3. | ಮಕ್ಕಳ–ಸ್ನೇಹಿ ಪರಿಸರದ ನಿರ್ಮಾಣ ಹಾಗೂ ನಿರ್ವಹಣೆ ಒಳಗೊಂಡಂತೆ ಕೊಠಡಿಗಳ ಬಣ್ಣ ಬಳಿಯುವಿಕೆ, ಒಳಾಂಗಣ ಕ್ರೀಡೆಗಳು, ಇತ್ಯಾದಿಗಾಗಿ | 7,500 |
| | **ಒಟ್ಟು** | **1,02,500** |
| ಬಿ. ಆವರ್ತಕ ವೆಚ್ಚ | | |
| 4. | ಮಕ್ಕಳ ಗೃಹವನ್ನು ನಡೆಸಲು ಬಾಡಿಗೆ ಕಟ್ಟಡಕ್ಕೆ ಅಗತ್ಯವಿರುವ ಬಾಡಿಗೆ @ ರೂ.10,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 1,20,000 |
| 5. | ಪ್ರಯಾಣ/ಸಭಾ ಭತ್ಯೆ ಅಥವಾ ಗೌರವಧನ 2 ಸಾಮಾಜಿಕ ಕಾರ್ಯಕರ್ತರಿಗೆ @ ರೂ.1000/– ಪ್ರತಿ ಬಾರಿಗೆ (ರೂ.1,000/– x 20 ಸಭೆಗಳು ಪ್ರತಿ ತಿಂಗಳು x 12 ತಿಂಗಳು x 2 ಸಾಮಾಜಿಕ ಕಾರ್ಯಕರ್ತರು)[2] | 4,80,000 |
| 7. | ಓರ್ವ ಸಹಾಯಕರು–ಕಂ–ಡಾಟಾ ಎಂಟ್ರಿ ಆಪರೇಟರ್ @ ರೂ.9,000/– ವೇತನ | 1,08,000 |
| 8. | ಮಗುವನ್ನು ಸಮಿತಿಯ ಮುಂದೆ ಹಾಜರು ಪಡಿಸುವ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ತಗಲುವ ಔಷಧಗಳು, ಸಾರಿಗೆ, ಆಹಾರ, ಇತ್ಯಾದಿಗಳಂತಹ ಮಕ್ಕಳಿಗೆ ಸಂಬಂಧಿಸಿದ ವೆಚ್ಚಗಳಿಗೆ @ರೂ.6,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 72,000 |
| 9. | ಸಾದಿಲ್ವಾರು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಸ್ಥಳೀಯ ಪ್ರಯಾಣ, ಇತ್ಯಾದಿ). @ ರೂ.5,000/– ಮಾಸಿಕ (ವಾಸ್ತವ ದರಗಳಿಗೆ ಅನುಗುಣವಾಗಿ) | 60,000 |
| | **ಒಟ್ಟು** | **8,40,000** |
| | **ಒಟ್ಟು ವೆಚ್ಚ (ಎ+ಬಿ)** | **9,42,500** |

*[1] ಮೆಟ್ರೊ ನಗರಗಳಲ್ಲಿ (ದೆಹಲಿ, ಕೋಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು ಹಾಗೂ ಹೈದ್ರಾಬಾದ್) @ ರೂ.20,000/– ಪ್ರತಿ ತಿಂಗಳು.*
*[2] ಜೆಜೆಬಿಯು ವಾರದ ಎಲ್ಲಾ ದಿನಗಳು ಸಭೆ ಸೇರಬೇಕು ಹಾಗೂ ಈ ರೀತಿ ಸೇರುವ ಸಭೆಯ ಅವಧಿ ಕನಿಷ್ಠ ಐದು ತಾಸುಗಳಿರಬೇಕು.*

***ಗಮನಿಸಿ:***

*ಎ) ಮಧ್ಯಂತರ ಅವಧಿಯಲ್ಲಿ, ವಸತಿ ಸೌಕರ್ಯಗಳ ನಿರ್ವಹಣೆ ಅಥವಾ ಅನಾವರ್ತಕ ಸ್ವರೂಪದ ಉನ್ನತೀಕರಣದ ಕೋರಿಕೆಗಳನ್ನು, ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯನ್ನು ಆಧರಿಸಿ ಒದಗಿಸಲಾಗುವುದು.*

*ಬಿ) ಜೆಜೆಬಿ ವಿಚಾರಣೆಗಳನ್ನು ನಡೆಸುವ ಮಕ್ಕಳ ಗೃಹಗಳಿಗೆ, ವಿಚಾರಣೆಗಳು ನಡೆಯುವ ದಿನಗಳಂದು ಆಪ್ತಸಮಾಲೋಚಕರು ಹಾಗೂ ಸಹಾಯಕರ ಸಹಾಯವನ್ನು ಒದಗಿಸಲಾಗುವುದು. ಡಿಸಿಪಿಯು ಸಹ ಅಗತ್ಯವಿರುವಾಗ ಕಾನೂನು ಹಾಗೂ ಆಪ್ತಸಮಾಲೋಚನೆ ಬೆಂಬಲವನ್ನು ಒದಗಿಸುತ್ತದೆ.*

# ಅನುಬಂಧ XIII ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಪಿಐಸಿಸಿಡಿ) ಮತ್ತು ಪ್ರಾದೇಶಿಕ ಕೇಂದ್ರಗಳು

ಐಸಿಪಿಎಸ್, ಎನ್‌ಐಪಿಸಿಸಿಡಿಯ ಕೇಂದ್ರ ಕಛೇರಿಯಲ್ಲಿ ಹಾಗೂ ತನ್ನ ಪ್ರತಿಯೊಂದು ಪ್ರಾದೇಶಿಕ ಕೇಂದ್ರಗಳಲ್ಲಿ ಗುತ್ತಿಗೆ ಸಿಬ್ಬಂದಿಗಳನ್ನು ನೇಮಕ ಮಾಡುವ ಮೂಲಕ ಮಕ್ಕಳ ರಕ್ಷಣಾ ವಿಭಾಗವನ್ನು ಸೃಷ್ಟಿಸುವಂತೆ ಪ್ರಸ್ತಾಪಿಸುತ್ತದೆ.

## 1. ಎನ್‌ಐಪಿಸಿಸಿಡಿ ಕೇಂದ್ರಸ್ಥಾನ

ಎನ್‌ಐಪಿಸಿಸಿಡಿ ಮಕ್ಕಳ ರಕ್ಷಣಾ ವಿಷಯಗಳಿಗೆ ಸಂಬಂಧಪಟ್ಟಂತೆ ನೋಡಲ್ ಸಂಸ್ಥೆ ಹಾಗೂ ರಾಷ್ಟ್ರೀಯ ಸಂಪನ್ಮೂಲ ಕೇಂದ್ರದಂತೆ ಕಾರ್ಯನಿರ್ವಹಿಸುತ್ತದೆ. ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಸಾಮರ್ಥ್ಯಾಭಿವೃದ್ಧಿ, ಸಂಶೋಧನೆ ಹಾಗೂ ದಾಖಲೆ ನಿರ್ವಹಣೆಗೆ ಅನುಕೂಲವನ್ನು ಒದಗಿಸುವ ಮೂಲಕ ಐಸಿಪಿಎಸ್‌ನ ಅನುಷ್ಠಾನಕ್ಕೆ ನೆರವಾಗುತ್ತದೆ. ಮಕ್ಕಳ ರಕ್ಷಣೆಗೆ ಸಂಬಂಧಪಟ್ಟಂತೆ ರಾಷ್ಟ್ರೀಯ ಸಂಪನ್ಮೂಲ ಕೇಂದ್ರದಂತೆ ಕಾರ್ಯನಿರ್ವಹಿಸಲು ಹಾಗೂ ಎಂಡಬ್ಲ್ಯೂಸಿಡಿಗೆ ಸಹಾಯ ಮಾಡುವ ಸಲುವಾಗಿ ಐಸಿಪಿಎಸ್ ಎನ್‌ಐಪಿಸಿಸಿಡಿನ ವ್ಯಾಪ್ತಿಯೊಳಗೆ ಮಕ್ಕಳ ರಕ್ಷಣಾ ವಿಭಾಗವನ್ನು ಸ್ಥಾಪಿಸಲು ಬೆಂಬಲವನ್ನು ಒದಗಿಸುತ್ತದೆ:

(i) ಐಸಿಪಿಎಸ್ ಹಾಗೂ ಮಕ್ಕಳ ರಕ್ಷಣೆಯ ವಿಷಯಗಳ ಕುರಿತ ಎಲ್ಲಾ ಐಇಸಿ ಸಮಾಗ್ರಿಗಳ ಅನುಷ್ಠಾನ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು;

(ii) ಮಕ್ಕಳ ರಕ್ಷಣಾ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಸೇವೆ ಒದಗಿಸುವವರಿಗೆ ತರಬೇತಿ ಒದಗಿಸುವುದು ಹಾಗೂ ಸಾಮರ್ಥ್ಯಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಒಳಗೊಂಡಂತೆ:

a) ಮಕ್ಕಳ ರಕ್ಷಣಾ ವಿಷಯಗಳ ಕುರಿತು ಪ್ರದೇಶದಲ್ಲಿ ಮಾಸ್ಟರ್ ಟ್ರೇನರ್‌ಗಳ ಗುಂಪನ್ನು ಸೃಷ್ಟಿಸಲು ರಾಷ್ಟ್ರೀಯ ತರಬೇತುದಾರರ ತರಬೇತಿ (ಟಿಒಟಿ) ಕಾರ್ಯಕ್ರಮಗಳನ್ನು ಆಯೋಜಿಸುವುದು;

b) ಅತ್ಯುತ್ತಮ ಅಭ್ಯಾಸಗಳು (Best Practices) ಹಾಗೂ ಉಪಾಯಗಳನ್ನು ಹಂಚಿಕೊಳ್ಳಲು ವಿನಿಮಯ ಕಾರ್ಯಕ್ರಮಗಳ ಆಯೋಜನೆಗೆ ಅನುಕೂಲ ಒದಗಿಸಲು ವಿಶೇಷ ರಾಷ್ಟ್ರೀಯ ಸಮಾಲೋಚನೆಗಳು ಹಾಗೂ ತರಬೇತಿ ಕಾರ್ಯಕ್ರಮಗಳು;

c) ರಾಜ್ಯ/ಕೇಂದ್ರ ಸರ್ಕಾರದ ಪೊಲೀಸ್, ಕಾರ್ಮಿಕ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಇತ್ಯಾದಿ ಒಳಗೊಂಡಂತೆ ಇತರೆ ಪೂರಕ ಇಲಾಖೆಗಳ ಅಧಿಕಾರಿಗಳಿಗೆ ವಿಶೇಷ ಸಂವೇದನಾಶೀಲತೆ ಕಾರ್ಯಕ್ರಮಗಳು;


d) ಮಕ್ಕಳ ರಕ್ಷಣೆಯ ವಿಷಯಗಳ ಕುರಿತು ತರಬೇತಿ ಪಠ್ಯಕ್ರಮ/ವಿಷಯ ಹಾಗೂ ಮಾದರಿಗಳನ್ನು ಸಿದ್ಧಪಡಿಸುವುದು;

(iii) ಪ್ರಾದೇಶಿಕ ಕೇಂದ್ರಗಳು, ಎಸ್‌ಸಿಪಿಎಸ್ ಗಳು ಹಾಗೂ ಎಸ್‌ಎಆರ್‌ಎಗಳ ಸಂಯೋಜನೆಯೊಂದಿಗೆ ರಾಷ್ಟ್ರ ಮಟ್ಟದಲ್ಲಿ ಸಾಕ್ಷ್ಯಾಧಾರಿತ ಸಂಶೋಧನೆ ಹಾಗೂ ದಾಖಲೆ ನಿರ್ವಹಣೆಗೆ ಅನುಕೂಲವನ್ನು ಒದಗಿಸುವುದು:

(a) ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಅಭ್ಯಾಸಗಳ ಕುರಿತ ದಾಖಲೆಗಳ ನಿರ್ವಹಣೆ;

(b) ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಕುರಿತ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು.

## 1.1. ಎನ್‌ಐಪಿಸಿಸಿಡಿಯಲ್ಲಿ ಮಕ್ಕಳ ರಕ್ಷಣಾ ವಿಭಾಗದ ರಚನೆ




## 1.2. ಎನ್‌ಐಪಿಸಿಸಿಡಿ (NIPCCD) ಕೇಂದ್ರ ಕಚೇರಿಗೆ ಹಣಕಾಸಿನ ಬೆಂಬಲ

| ಕ್ರ..ಸಂ. | ವಿಷಯ | ಮೊತ್ತ (ರೂ.ಗಳಲ್ಲಿ) |
|---|---|---|
| **1.** | **ಅನಾವರ್ತಕ (ಐದು ವರ್ಷಗಳಿಗೊಮ್ಮೆ)** | |
| | ಎಲ್ಲಾ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿ ಸದಸ್ಯರಿಗೆ ಮೇಜು, ಕುರ್ಚಿಗಳು, ಕಪ್‌ಬೋರ್ಡ್‌ಗಳು, ಇತ್ಯಾದಿ | 1,00,000 |
| | ಯುಪಿಎಸ್ ಜೊತೆಗೆ ನಾಲ್ಕು ಕಂಪ್ಯೂಟರ್‌ಗಳು (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನ್ನರ್‌ಗಳು ಕಂ ಫ್ಯಾಕ್ಸ್ | 2,30,000 |
| | ಒಂದು ಜೆರಾಕ್ಸ್ ಯಂತ್ರ | 3,00,000 |
| | **ಒಟ್ಟು** | **6,30,000** |
| ಬಿ. | **ಆವರ್ತಕ ವೆಚ್ಚ** | |
| **2.** | **ವೇತನ:** | |
| | ಓರ್ವ ಉಪ ನಿರ್ದೇಶಕರು (ತರಬೇತಿ) @ ರೂ.55,000/– ಮಾಸಿಕ ವೇತನದೊಂದಿಗೆ | 6,60,000 |
| | ಓರ್ವ ಉಪ ನಿರ್ದೇಶಕರು (ಸಂಶೋಧನೆ ಮತ್ತು ದಸ್ತಾವೇಜು) @ ರೂ.55,000 ಮಾಸಿಕ | 6,60,000 |
| | ಇಬ್ಬರು ಸಂಶೋಧನಾ ಸಹಾಯಕರು @ ರೂ.35,000/– ಮಾಸಿಕ ವೇತನ | 8,40,000 |
| | **ಒಟ್ಟು** | **21,60,000** |
| **3.** | **ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ** | **80,00,000** |
| | ಸಂಶೋಧನೆ ಹಾಗೂ ದಸ್ತಾವೇಜು | 40,00,000 |
| | ಆಡಳಿತ ವೆಚ್ಚಗಳು | 4,00,000 |
| | ಸಭೆಗಳು, ಇಂಟರ್‌ನೆಟ್ ಸಂಪರ್ಕಗಳು, ಕಚೇರಿ ಸಹಾಯಕನ ನೇಮಕಾತಿ, ಇತ್ಯಾದಿ ವೆಚ್ಚಗಳು ಒಳಗೊಂಡಂತೆ ಸಾದಿಲ್ವಾರು ನಿಧಿ | 6,00,000 |
| | **ಒಟ್ಟು** | **1,51,60,000** |
| | **ಒಟ್ಟು** | **1,57,90,000** |

## 2. ಎನ್‌ಐಪಿಸಿಸಿಡಿಯ(NIPCCD) ಪ್ರಾದೇಶಿಕ ಕೇಂದ್ರಗಳು

ಈ ಕೆಳಕಂಡ ಪಾತ್ರಗಳು ಹಾಗೂ ಜವಾಬ್ದಾರಿಗಳ ನಿರ್ವಹಣೆಗಾಗಿ ಎನ್‌ಐಪಿಸಿಸಿಡಿಯ ನಾಲ್ಕು ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯೊಳಗೆ ಐಸಿಪಿಎಸ್ ಮಕ್ಕಳ ರಕ್ಷಣಾ ವಿಭಾಗವನ್ನು ಸ್ಥಾಪಿಸಲು ಅಗತ್ಯ ಬೆಂಬಲವನ್ನು ಒದಗಿಸುತ್ತದೆ:

i. ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ಕೈಗೊಳ್ಳಲು ಎನ್‌ಐಪಿಸಿಸಿಡಿಗೆ ಬೆಂಬಲ ಒದಗಿಸುವುದು;

ii. ಎಸ್‌ಸಿಪಿಎಸ್‌ಗಳಿಗೆ ಅವುಗಳ ಭೌಗೋಳಿಕ ಪ್ರದೇಶ ವ್ಯಾಪ್ತಿಯೊಳಗೆ, ತರಬೇತಿ ಅಗತ್ಯಗಳ ಅಂದಾಜಿಸುವಿಕೆ, ರಾಜ್ಯ–ನಿರ್ದಿಷ್ಟ ತರಬೇತಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು ಹಾಗೂ ಅದರ ಅನುಷ್ಠಾನಕ್ಕಾಗಿ ಬೆಂಬಲವನ್ನು ಒದಗಿಸುವುದು;

iii. ಮಕ್ಕಳ ರಕ್ಷಣಾ ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರದೇಶದಲ್ಲಿ ಮಾಸ್ಟರ್ ಟ್ರೇನರ್‌ಗಳ ಗುಂಪನ್ನು ಸೃಷ್ಟಿಸಲು ಪ್ರಾದೇಶಿಕ ತರಬೇತುದಾರರ ತರಬೇತಿ (ಟಿಒಟಿ) ಕಾರ್ಯಕ್ರಮಗಳನ್ನು ಆಯೋಜಿಸುವುದು;

iv. ಅತ್ಯುತ್ತಮ ಅಭ್ಯಾಸಗಳ (Best Practices) ವಿನಿಮಯಕ್ಕೆ ಅನುಕೂಲ ಒದಗಿಸುವುದು, ಪೂರಕ ವ್ಯವಸ್ಥೆಗಳ ಸದಸ್ಯರಲ್ಲಿ ಸಂವೇದನಾಶೀಲತೆಯನ್ನು ಸೃಷ್ಟಿಸುವುದು, ಉಪಾಯಗಳನ್ನು ಹಂಚಿಕೊಳ್ಳಲು ವಿನಿಮಯ ಕಾರ್ಯಕ್ರಮಗಳ ಆಯೋಜನೆಗೆ ಅನುಕೂಲವನ್ನು ಒದಗಿಸುವುದು, ಇತ್ಯಾದಿಯಂತಹ ವಿಷಯಗಳಿಗೆ ವಿಶೇಷ ಪ್ರಾದೇಶಿಕ ಸಮಾಲೋಚನೆಗಳು ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು;

v. ಪೊಲೀಸ್, ಕಾರ್ಮಿಕ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಇತ್ಯಾದಿ ಒಳಗೊಂಡಂತೆ ಇತರೆ ಪೂರಕ ಸರ್ಕಾರಿ ಇಲಾಖೆಗಳ ಅಧಿಕಾರಿಗಳಿಗೆ ವಿಶೇಷ ಸಂವೇದನಾಶೀಲತಾ ಕಾರ್ಯಕ್ರಮಗಳ ಆಯೋಜನೆ;


vi. ಪ್ರಾದೇಶಿಕ ಭಾಷೆಗಳಲ್ಲಿ ಮಕ್ಕಳ ರಕ್ಷಣೆಯ ವಿಷಯಗಳಿಗೆ ಸಂಬಂಧಪಟ್ಟಂತೆ ತರಬೇತಿ ಪಠ್ಯಕ್ರಮ ಹಾಗೂ ಮಾದರಿಗಳನ್ನು ರೂಪಿಸುವುದು;

vii. ಪ್ರದೇಶದಲ್ಲಿರುವ ಎಸ್‌ಸಿಪಿಎಸ್‌ಗಳು ಹಾಗೂ ಎಸ್‌ಎಆರ್‌ಎಗಳ ಸಹಯೋಗದೊಂದಿಗೆ ಪ್ರಾದೇಶಿಕ ಮಟ್ಟಗಳಲ್ಲಿ ಸಾಕ್ಷ್ಯಾಧಾರಿತ ಸಂಶೋಧನೆ ಹಾಗೂ ದಸ್ತಾವೇಜು ನಿರ್ವಹಣೆಗೆ ಅನುಕೂಲವನ್ನು ಒದಗಿಸುವುದು;

viii. ಪ್ರಾದೇಶಿಕ ಮಟ್ಟದಲ್ಲಿ ಅತ್ಯುತ್ತಮ ಅಭ್ಯಾಸಗಳ ದಸ್ತಾವೇಜು ನಿರ್ವಹಣೆ;

ix. ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಕುರಿತ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು.

## 2.1. ಎನ್‌ಐಪಿಸಿಸಿಡಿಯ ಪ್ರಾದೇಶಿಕ ಕೇಂದ್ರಗಳ ಸಾಂಸ್ಥಿಕ ರಚನೆಗೆ ಸಲಹೆ




## 2.2. ಪ್ರಾದೇಶಿಕ ಕೇಂದ್ರಗಳಿಗೆ ಹಣಕಾಸಿನ ಬೆಂಬಲ

| ಕ್ರ. ಸಂ. | ವಿಷಯ | ಮೊತ್ತ (ರೂ.ಗಳಲ್ಲಿ) |
|---|---|---|
| ಎ. | **ಅನಾವರ್ತಕ (ಐದು ವರ್ಷಗಳಿಗೊಮ್ಮೆ)** | |
| 1. | ಪೀಠೋಪಕರಣಗಳು ಹಾಗೂ ಇತರೆ ಉಪಕರಣಗಳು: | |
| | ಎಲ್ಲಾ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿ ಸದಸ್ಯರುಗಳಿಗೆ ಮೇಜು, ಕುರ್ಚಿಗಳು, ಕಪ್‌ಬೋರ್ಡ್‌ಗಳು ಹಾಗೂ ಕಚೇರಿ ಪೀಠೋಪಕರಣಗಳು | 1,00,000 |
| | ಯುಪಿಎಸ್ (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಜೊತೆಗೆ ಐದು ಕಂಪ್ಯೂಟರ್‌ಗಳು ಹಾಗೂ 2 ಪ್ರಿಂಟರ್–ಕಂ–ಸ್ಕ್ಯಾನ್ನರ್ ಹಾಗೂ 1 ಬಹುಕಾರ್ಯನಿರ್ವಹಣಾ ಸ್ಕ್ಯಾನ್ನರ್ | 2,30,000 |
| | ಒಂದು ಜೆರಾಕ್ಸ್ ಯಂತ್ರ | 3,00,000 |
| | ಒಂದು ಫ್ಯಾಕ್ಸ್ ಯಂತ್ರ | 30,000 |
| | **ಒಟ್ಟು** | **6,60,000** |
| | **4 ಪ್ರಾದೇಶಿಕ ಕೇಂದ್ರಗಳಿಗೆ ಒಟ್ಟು ಪೀಠೋಪಕರಣ ಹಾಗೂ ಇತರೆ ಉಪಕರಣಗಳು (ರೂ.6,60,000/–x4)** | **26,40,000** |

| | | |
|---|---|---|
| ಬಿ. | **ಆವರ್ತಕ ವೆಚ್ಚ** | |
| **2.** | **ವೇತನ: ನಾಲ್ಕು ಪ್ರಾದೇಶಿಕ ಕೇಂದ್ರಗಳಿಗೆ ಸಿಬ್ಬಂದಿಗಳು** | |
| | ಓರ್ವ ಉಪ ನಿರ್ದೇಶಕರು (ಮಕ್ಕಳ ರಕ್ಷಣೆ) @ ರೂ.55,000/- ಮಾಸಿಕ | 6,60,000 |
| | ಓರ್ವ ಸಹಾಯಕ ನಿರ್ದೇಶಕರು (ತರಬೇತಿ) @ ರೂ.55,000/- ಮಾಸಿಕ | 6,60,000 |
| | ಓರ್ವ ಸಹಾಯಕ ನಿರ್ದೇಶಕರು (ಸಂಶೋಧನೆ ಮತ್ತು ದಸ್ತಾವೇಜು ನಿರ್ವಹಣೆ) @ ರೂ.55,000/- ಮಾಸಿಕ | 6,60,000 |
| | ಇಬ್ಬರು ಸಂಶೋಧನಾ ಸಹಾಯಕರು @ ರೂ.35,000/- ಮಾಸಿಕ | 8,40,000 |
| | ಓರ್ವ ಸಹಾಯಕ ಅಕೌಂಟೆಂಟ್ @ರೂ.15,000/- ಮಾಸಿಕ | 1,80,000 |
| | **ಒಟ್ಟು** | **30,00,000** |
| | **ನಾಲ್ಕು ಪ್ರಾದೇಶಿಕ ಕೇಂದ್ರಗಳಿಗೆ ಒಟ್ಟು ವೇತನ (ರೂ.30,00,000/-x4)** | **1,20,00,000** |
| 3. | ಸಿಬ್ಬಂದಿಗಳ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ (ಪ್ರತಿ ಪ್ರಾದೇಶಿಕ ಕೇಂದ್ರಕ್ಕೆ @ರೂ.20.00 ಲಕ್ಷಗಳು x 4) | 80,00,000 |
| 4. | ಸಂಶೋಧನೆ ಹಾಗೂ ದಸ್ತಾವೇಜು ನಿರ್ವಹಣೆ (ಪ್ರತಿ ಪ್ರಾದೇಶಿಕ ಕೇಂದ್ರಕ್ಕೆ @ ರೂ.10 ಲಕ್ಷಗಳು x 4) | 40,00,000 |
| 5. | ಆಡಳಿತ ವೆಚ್ಚಗಳು (ಪ್ರತಿ ಪ್ರಾದೇಶಿಕ ಕಚೇರಿಗೆ ರೂ.5.00 ಲಕ್ಷಗಳು x 4 ಪ್ರಾದೇಶಿಕ ಕೇಂದ್ರಗಳು) | 20,00,000 |
| 6. | ನಾಲ್ಕು ಪ್ರಾದೇಶಿಕ ಕೇಂದ್ರಗಳಿಗೆ ಸಭೆಗಳ ಆಯೋಜನೆ, ಇಂಟರ್‌ನೆಟ್ ಸಂಪರ್ಕಗಳು, ಕಚೇರಿ ಸಹಾಯಕರ ನೇಮಕಾತಿ, ಇತ್ಯಾದಿ ವೆಚ್ಚಗಳು ಒಳಗೊಂಡಂತೆ ಸಾದಿಲ್ವಾರು ನಿಧಿ | 7,10,000 |
| | **ಒಟ್ಟು** | **1,47,10,000** |
| | **ಒಟ್ಟು** | **2,93,50,000** |

## ಅನುಬಂಧ XIV – ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಹಾಗೂ ರಕ್ಷಣೆ) ಕಾಯ್ದೆ, 2000 ಹಾಗೂ ಐಸಿಪಿಎಸ್ ಅಡಿ ಸ್ಥಾಪಿಸಲಾಗಿರುವಂತಹ ಸಂಸ್ಥೆಗಳಲ್ಲಿರುವ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು/ ಪೋಷಣೆ ಮತ್ತು ರಕ್ಷಣೆಗಾಗಿ ದಾಖಲಾಗಿರುವ ಮಕ್ಕಳು ಪಾಲನಾ ಕೇಂದ್ರದ ಕನಿಷ್ಠ ಗುಣಮಟ್ಟದ ಮಾನದಂಡಗಳು.

### 1. ಮಾರ್ಗಸೂಚಿಗಳು

ಸಂಬಂಧಪಟ್ಟ ರಾಜ್ಯಗಳು/ ಕೇಂದ್ರೀಯ ಮಾದರಿ ನಿಯಮಾವಳಿಗಳ ಅಡಿ ಅನುಷ್ಠಾನಗೊಳಿಸಿರುವಂತಹ ವಸತಿಗೆ ಸಂಬಂಧಪಟ್ಟ ಕನಿಷ್ಠ ಮಾನದಂಡಗಳನ್ನು ಪಾಲಿಸಬೇಕು, ಅವುಗಳು ಹೀಗಿವೆ:

(i) ಡಾರ್ಮಿಟರಿ: ಪ್ರತಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಗುವಿಗೆ 40 ಚದರಡಿ

(ii) ತರಗತಿ ಕೊಠಡಿ: 25 ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಗುವಿಗೆ 300 ಚದರಡಿ

(iii) ಕಾರ್ಯಾಗಾರ: ಪ್ರತಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಗುವಿಗೆ 75 ಚದರಡಿ

(iv) ಆಟದ ಮೈದಾನ: ಸಂಸ್ಥೆಯಲ್ಲಿರುವ ಒಟ್ಟು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪ್ರತಿ ಸಂಸ್ಥೆಯಲ್ಲಿಯೂ ಸೂಕ್ತವಾದ ಆಟದ ಮೈದಾನ ಪ್ರದೇಶವನ್ನು ಕಲ್ಪಿಸಬೇಕು.
ಈ ಡಾರ್ಮಿಟರಿಗಳು, ತರಗತಿ ಕೊಠಡಿಗಳು ಹಾಗೂ ಕಾರ್ಯಾಗಾರ ಕೊಠಡಿಗಳು ಸಾಕಷ್ಟು ನೈಸರ್ಗಿಕ ಗಾಳಿ ಹಾಗೂ ಬೆಳಕು ಬರುವಂತಿರಬೇಕು.

### 2. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ 50 ಮಕ್ಕಳ ಒಂದು ಸಂಸ್ಥೆಯ ಕಟ್ಟಡ/ವಸತಿಯ ವಿವರಗಳು:

| ಕ್ರ.ಸಂ. | ಕೊಠಡಿಯ ವಿವರಗಳು | ಪ್ರದೇಶ (ಚದರಡಿಯಲ್ಲಿ) |
|---|---|---|
| (i) | 2 ಡಾರ್ಮಿಟರಿಗಳು – 25 ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಗುವಿಗೆ ಪ್ರತಿ ಡಾರ್ಮಿಟರಿಯು 1,000 ಚದರಡಿ ಇರಬೇಕು | 2,000 |
| (ii) | 2 ತರಗತಿ ಕೊಠಡಿಗಳು – 25 ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಗುವಿಗೆ 300 ಚದರಡಿ | 600 |
| (iii) | ಅನಾರೋಗ್ಯ ಕೊಠಡಿ/ ಪ್ರಥಮ ಚಿಕಿತ್ಸಾ ಕೊಠಡಿ – ಪ್ರತಿ 10 ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಗುವಿಗೆ 75 ಚದರಡಿ | 750 |
| (iv) | ಅಡುಗೆ ಮನೆ | 250 |
| (v) | ಊಟದ ಮನೆ | 800 |
| (vi) | ಸ್ಟೋರ್ | 250 |
| (vii) | ಮನರಂಜನಾ ಕೊಠಡಿ | 300 |
| (viii) | ಗ್ರಂಥಾಲಯ | 500 |
| (ix) | 5 ಶೌಚಾಲಯಗಳು – ಪ್ರತಿ ಶೌಚಾಲಯ 25 ಚದರಡಿ | 125 |
| (x) | 8 ಶೌಚಾಲಯಗಳು/ ಲಟ್ರೀನ್‌ಗಳು – 25 ಚದರಡಿ | 200 |

| | | |
|---|---|---|
| (xi) | ಕಚೇರಿ ಕೊಠಡಿಗಳು – (ಎ) 300 ಚದರಡಿ (ಬಿ) ಮೇಲ್ವಿಚಾರಕರ ಕೊಠಡಿ 200 ಚದರಡಿ | 500 |
| (xii) | ಆಪ್ತಸಮಾಲೋಚನೆ ಹಾಗೂ ಮಾರ್ಗದರ್ಶನ ಕೊಠಡಿ – 120 ಚದರಡಿ | 120 |
| (xiii) | ಕಾರ್ಯಾಗಾರ – ಪ್ರತಿ ಪ್ರಶಿಕ್ಷಣಾರ್ಥಿಗೆ ಒಟ್ಟು 15 ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗುವಿಗೆ/ಪಾಲನಾ ಸಂಸ್ಥೆಯಲ್ಲಿರುವ ಮಗುವಿಗೆ @ 75 ಚದರಡಿ | 1125 |
| (xiv) | ಮೇಲ್ವಿಚಾರಕರ ವಸತಿ[1] (ಎ) 250 ಚದರಡಿಯ ಎರಡು ಕೊಠಡಿಗಳು; (ಬಿ) 75 ಚದರಡಿಯ ಒಂದು ಅಡುಗೆ ಮನೆ; (ಸಿ) ಶೌಚಾಲಯ/ಟಾಯ್ಲೆಟ್ ಕಂ ಸ್ನಾನದ ಮನೆ 50 ಚದರಡಿ | 625 |
| (xv) | ಜೆಜೆಬಿ/ಸಿಡಬ್ಲ್ಯೂಸಿ[2] ಗೆ 2 ಕೊಠಡಿಗಳು – 300 ಚದರಡಿ ಒಂದಕ್ಕೆ | 600 |
| **ಒಟ್ಟು** | | **8495** |

*[1] ಮೇಲ್ವಿಚಾರಕರು ಸಂಸ್ಥೆಯ ಒಳಗೆ ಹಾಗೂ ನೀಡಿರುವ ಕ್ವಾರ್ಟರ್ಸ್ ಒಳಗೆ ಇರಬೇಕು. ಒಂದು ವೇಳೆ ಆತ/ಆಕೆ ಅಲ್ಲಿ ಕಾನೂನಾತ್ಮಕ ಕಾರಣಗಳಿಗಾಗಿ ಇರುವುದು ಸಾಧ್ಯವಾಗದಿದ್ದರೆ (ನಿರ್ದೇಶಕರು, ಮಕ್ಕಳ ರಕ್ಷಣೆಯ ಅನುಮತಿಯ ಮೇರೆಗೆ), ಯಾವುದಾದರೂ ತುರ್ತು ಸಂದರ್ಭಗಳು ಎದುರಾದಾಗ ನಿರ್ಧಾರಗಳನ್ನು ಕೈಗೊಳ್ಳುವ ಹಾಗೂ ಒಟ್ಟಾರೆ ಪೋಷಣೆಯ ಮೇಲ್ವಿಚಾರಣೆಯನ್ನು ನಿರ್ವಹಿಸುವ ಸಾಮರ್ಥ್ಯವಿರುವಂತಹ ಸಂಸ್ಥೆಯ ಮತ್ಯಾವುದಾದರೂ ಹಿರಿಯ ಸಿಬ್ಬಂದಿ ಸದಸ್ಯ (ರು) ಇರಬಹುದು.*
*[2]ಇದನ್ನು ಕೇವಲ ವೀಕ್ಷಣಾಲಯ ಹಾಗೂ ಮಕ್ಕಳ ಪಾಲನಾ ಕೇಂದ್ರಗಳಿಗೆ ಮಾತ್ರ ಒದಗಿಸಬೇಕು.*

## 3. ನಿರ್ಮಲೀಕರಣ ಮತ್ತು ನೈರ್ಮಲ್ಯ (ಆರೋಗ್ಯ ಶಾಸ್ತ್ರ)

ಪ್ರತಿ ಸಂಸ್ಥೆಯು ಈ ಕೆಳಕಂಡ ಸೌಲಭ್ಯಗಳನ್ನು ಹೊಂದಿರಬೇಕು:

(i) ಸಾಕಷ್ಟು ಸ್ವಚ್ಛ ಕುಡಿಯುವ ನೀರು. ಕುಡಿಯುವ ನೀರಿನ ಶುದ್ಧೀಕರಣ ಉಪಕರಣಗಳನ್ನು ಅಳವಡಿಸಿರಬೇಕು;

(ii) ಸ್ನಾನ ಹಾಗೂ ಬಟ್ಟೆಗಳನ್ನು ಒಗೆಯಲು, ಆವರಣದ ನಿರ್ವಹಣೆ ಹಾಗೂ ಸ್ವಚ್ಛತೆಯ ನಿರ್ವಹಣೆಗಾಗಿ ಸಾಕಷ್ಟು ನೀರು;

(iii) ತ್ಯಾಜ್ಯ ವಿಲೇವಾರಿಗಾಗಿ ವ್ಯವಸ್ಥೆಗಳು;

(iv) ಸೊಳ್ಳೆಗಳಿಂದ ರಕ್ಷಣೆ ಒದಗಿಸಲು ಸೊಳ್ಳೆ ಪರದೆಗಳು;

(v) ಏಳು ಮಕ್ಕಳಿಗಾಗಿ ಕನಿಷ್ಠ ಒಂದು ಶೌಚಾಲಯದಂತೆ ಸಾಕಷ್ಟು ಶೌಚಾಲಯಗಳ ವ್ಯವಸ್ಥೆ;

(vi) ಪ್ರತಿ 10 ಮಕ್ಕಳಿಗೆ ಕನಿಷ್ಠ ಒಂದು ಸ್ನಾನದ ಮನೆಯಂತೆ ಸಾಕಷ್ಟು ಸಂಖ್ಯೆಯ ಸ್ನಾನದ ಮನೆಗಳು; ಈ ಸ್ನಾನದ ಮನೆಗಳು ಹಾಗೂ ಶೌಚಾಲಯಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆಯಿರಬೇಕು ಮತ್ತು ನೈಸರ್ಗಿಕವಾಗಿ ಸಾಕಷ್ಟು ಗಾಳಿಯಾಡುವಂತಿರಬೇಕು, ಹಾಗೂ ಸ್ವಚ್ಛವಾಗಿರಬೇಕು.

(vii) ಸ್ವಚ್ಛ ಹಾಗೂ ಫ್ಲೈ–ಪ್ರೂಫ್ ಅಡುಗೆ ಮನೆಯೊಂದಿಗೆ ಪಾತ್ರೆಗಳನ್ನು ತೊಳೆಯಲು ಪ್ರತ್ಯೇಕ ಪ್ರದೇಶ;

(viii) ಹಾಸಿಗೆ ಹಾಗೂ ಬಟ್ಟೆಗಳನ್ನು ಒಣಗಿಸಲು ತೆರೆದ ಸ್ಥಳ; ಹಾಗೂ

(ix) ವೈದ್ಯಕೀಯ ಕೇಂದ್ರದಲ್ಲಿ ಅತ್ಯಂತ ಸ್ವಚ್ಛತೆ

## 4. ಸೇವೆಗಳ ಕನಿಷ್ಠ ಗುಣಮಟ್ಟ

ಈ ಯೋಜನೆಯಡಿ ಸ್ಥಾಪಿಸಲ್ಪಟ್ಟಿರುವ ಪ್ರತಿಯೊಂದು ಸಂಸ್ಥೆಯೂ ಸಹ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2000 ಹಾಗೂ ಅದರಡಿ ರೂಪಿಸಿರುವ ನಿಯಮಾವಳಿಗಳ ಪ್ರಕಾರ ಜಾರಿಗೊಳಿಸಿರುವ ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಮಕ್ಕಳ ಪೋಷಣಾ ಗುಣಮಟ್ಟಗಳನ್ನು ಹಾಗೂ ಸಂಬಂಧಪಟ್ಟ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ನಿಯಮಾವಳಿಗಳನ್ನು ಅನುಸರಿಸಬೇಕು. ಸಂಸ್ಥೆಗಳು ಒದಗಿಸುವ ಸೇವೆಗಳ ಗುಣಮಟ್ಟ ಇವುಗಳನ್ನು ಒಳಗೊಂಡಿರಬೇಕು:

## 4.1. ವೈದ್ಯಕೀಯ ಸೌಲಭ್ಯಗಳು

ಪ್ರತಿ ಸಂಸ್ಥೆಯೂ ಸಹ ಮಗು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳನ್ನು ಆ ಸಂಸ್ಥೆಗೆ ದಾಖಲು ಮಾಡಿಕೊಳ್ಳುವ ಸಮಯದಲ್ಲಿ ವೈದ್ಯಕೀಯ ತಪಾಸಣೆಯನ್ನು ನಡೆಸುವುದನ್ನು ಖಾತ್ರಿಪಡಿಸಬೇಕು ಹಾಗೂ ಪ್ರತಿ ಮಗುವಿಗೂ ಸಹ ವ್ಯಕ್ತಿಗತ ವೈದ್ಯಕೀಯ ದಾಖಲೆಯನ್ನು ನಿರ್ವಹಿಸಬೇಕು. ಸಂಸ್ಥೆಯು ಈ ಕೆಳಕಂಡ ಅಂಶಗಳನ್ನು ಖಾತ್ರಿಪಡಿಸುವಂತಹ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು:

(i) ಕ್ರಮಬದ್ಧವಾಗಿ ಆರೋಗ್ಯ ತಪಾಸಣೆಯನ್ನು ನಡೆಸುವುದು ಹಾಗೂ ಅಗತ್ಯವಿದ್ದಾಗ ಕರೆ ಮಾಡಿದರೆ ಹಾಜರಾಗುವಂತಹ ವೈದ್ಯರ ಸೇವೆಯನ್ನು ಖಾತ್ರಿಪಡಿಸುವುದು ಹಾಗೂ ಆತ/ಆಕೆ ಸಂಸ್ಥೆಗೆ ಪ್ರತಿ ಎರಡು ದಿನಗಳಿಗೊಮ್ಮೆ ಸಂಸ್ಥೆಗೆ ಭೇಟಿ ನೀಡುವುದನ್ನು ಖಾತ್ರಿಪಡಿಸುವುದು. ಸಂಸ್ಥೆಗಳು ಮಕ್ಕಳಿಗೆ ಕ್ರಮಬದ್ಧ ಅವಧಿಯಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಪಿಹೆಚ್‌ಸಿ ಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವುದು;

(ii) ಪ್ರಥಮ ಚಿಕಿತ್ಸಾ ಕಿಟ್‌ಗಳ ಜೊತೆಗೆ ತುರ್ತು ಔಷಧಗಳ ದಾಸ್ತಾನು ಹಾಗೂ ಇನ್ನಿತರೆ ಅಗತ್ಯ ಸಾಮಗ್ರಿಗಳು ದಾಸ್ತಾನು ಇರುವುದನ್ನು ಖಾತ್ರಿಪಡಿಸುವುದು ಒಳಗೊಂಡಂತೆ ಸಣ್ಣ ಆರೋಗ್ಯ ತೊಂದರೆಗಳನ್ನು ನಿರ್ವಹಿಸಲು ಸಾಕಷ್ಟು ವೈದ್ಯಕೀಯ ಉಪಕರಣಗಳಿರುವುದನ್ನು ಖಾತ್ರಿಪಡಿಸುವುದು;

(iii) ಪ್ರತಿರೋಧಕ ವ್ಯಾಪ್ತಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡುವುದು;

(iv) ಕುಂದುತ್ತಿರುವ ಆರೋಗ್ಯ ಅಥವಾ ಗಂಭೀರ ಖಾಯಿಲೆಗಳಿಂದ ಬಳಲುತ್ತಿರುವ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳನ್ನು ಹತ್ತಿರದ ಸಾರ್ವಜನಿಕ ಆಸ್ಪತ್ರೆ ಅಥವಾ ಗುರುತಿಸಲ್ಪಟ್ಟಿರುವ ಕೇಂದ್ರಕ್ಕೆ ಸಮಯೋಚಿತವಾಗಿ ಕರೆದೊಯ್ಯುವುದು; ಹಾಗೂ

(v) ಸಂಸ್ಥೆಯ ಎಲ್ಲಾ ಸಿಬ್ಬಂದಿಗಳಿಗೂ ಪ್ರಥಮ ಚಿಕಿತ್ಸೆಯ ತರಬೇತಿಯನ್ನು ಒದಗಿಸುವುದು.

## 4.2. ಪಥ್ಯ ಮಿತಿ

(i) ಪಥ್ಯದ ಮಿತಿಯು ಪ್ರತಿ ರಾಜ್ಯಕ್ಕೆ ಆಯಾ ರಾಜ್ಯದಲ್ಲಿರುವ ಮಕ್ಕಳ ನ್ಯಾಯ ಕಾಯ್ದೆ, 2000ರ ನಿಯಮಾವಳಿಗಳಡಿ ಆಹಾರ ಹವ್ಯಾಸಗಳನ್ನು ಆಧರಿಸಿ ಕಲ್ಪಿಸಿರುವ ಪ್ರಾವಧಾನಗಳ ಪ್ರಕಾರ ಇರಬೇಕು. ಸಂಸ್ಥೆಗಳು ಈ ನಿಯಮಗಳಿಗೆ ಕಡ್ಡಾಯವಾಗಿ ಬದ್ಧವಾಗಿರಬೇಕು;

(ii) ಪ್ರತಿ ಸಂಸ್ಥೆಯೂ ಸಹ, ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ತಮ್ಮ ದೈನಂದಿನ ಆಹಾರ ಕ್ರಮವನ್ನು ಸ್ವತಃ ಯೋಜಿಸುವ ಹಾಗೂ ನಿರ್ಧರಿಸುವಂತೆ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸದಸ್ಯತ್ವವನ್ನು ಹೊಂದಿರುವ ಒಂದು ಮೆಸ್ ಸಮಿತಿಯನ್ನು ರಚಿಸಬೇಕು. ಓರ್ವ ಪೌಷ್ಠಿಕ ತಜ್ಞರು ಈ ಸಮಿತಿಯ ಸದಸ್ಯರಾಗಿರುವುದು. ಇವರು ಮಕ್ಕಳಿಗೆ ಒದಗಿಸುವ ಆಹಾರದ ಸಮತೋಲನವನ್ನು, ಪೌಷ್ಠಿಕತೆ ಹಾಗೂ ಇತರೆ ಅಂಶಗಳನ್ನು ಖಾತ್ರಿಪಡಿಸಬೇಕು;

(iii) ನಿಗದಿಪಡಿಸುವ ಆಹಾರ ಕ್ರಮವು, ಸ್ಥಳೀಯ ಆಹಾರ ಕ್ರಮದ ಹವ್ಯಾಸಗಳನ್ನು ಆಧರಿಸಿ, ಸಾಕಷ್ಟು ಪ್ರಮಾಣದಲ್ಲಿ ಬೇಳೆ ಕಾಳುಗಳು, ತರಕಾರಿಗಳು, ಹಣ್ಣುಗಳು, ಮೊಟ್ಟೆಗಳು, ಹಾಲು ಹಾಗೂ ಮಾಂಸ ಹಾಗೂ ಮೀನು ಇತ್ಯಾದಿಗಳನ್ನು ಒಳಗೊಂಡಿರಬೇಕು;

(iv) ರಜಾ ದಿನಗಳು, ಹಬ್ಬಗಳಂದು, ಹಾಗೂ ಖಾಯಿಲೆಯಿಂದ ಬಳಲುತ್ತಿರುವ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ, ಅವರವರ ಅಗತ್ಯಗಳ ಪ್ರಕಾರ, ವಿಶೇಷ ಮೆನು ಇರಬೇಕು.

## 4.3. ಬಟ್ಟೆ ಹಾಗೂ ಹಾಸಿಗೆ

ಆಯಾ ಪ್ರದೇಶದ ವಾತಾವರಣದ ಅಗತ್ಯಗಳನ್ನು ಆಧರಿಸಿ ರಾಜ್ಯ ಸರ್ಕಾರ ನಿಗಧಿಪಡಿಸಿರುವ ಪ್ರಮಾಣದ ಪ್ರಕಾರ ಪ್ರತಿ ಮಗು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೂ ಸಹ ಇವುಗಳನ್ನು ಒದಗಿಸಬೇಕು:

| ಬಟ್ಟೆ (ವಾರ್ಷಿಕ) | ಹಾಸಿಗೆ (ವಾರ್ಷಿಕ) | ಇತರೆ (ಅಗತ್ಯದ ಪ್ರಕಾರ) |
|---|---|---|
| i. ನಾಲ್ಕು ಸೆಟ್ ಧಿರಿಸು (ಯಾವುದೇ ನಿಗದಿತ ಸಮಯದಲ್ಲಿ ಪ್ರತಿಯೊಂದು ಮಗುವಿನ ಬಳಿಯೂ ಸಹ ಕನಿಷ್ಠ 3 ಸೆಟ್ ಬಟ್ಟೆಗಳಿರಬೇಕು)<br>ii. ಐದು ಸೆಟ್ ಒಳುಉಡುಪುಗಳು<br>iii. ಎರಡು ಟವಲ್‌ಗಳು<br>iv. ಒಂದು ಜರ್ಸಿ ಹಾಗೂ ಒಂದು ಚಳಿಗಾಲಕ್ಕಾಗಿ ಒಂದು ಸ್ವೆಟರ್<br>v. ಕೇಂದ್ರದಿಂದ ಹೊರಗೆ ಶಾಲೆಗಳಿಗೆ ಹೋಗುವ ಮಕ್ಕಳಿಗೆ ಮೂರು ಸೆಟ್ ಶಾಲಾ ಯೂನಿಫಾರಂ<br>vi. ಒಂದು ಜೊತೆ ಶೂ<br>vii. ನಾಲ್ಕು ಜೊತೆ ಸಾಕ್ಸ್<br>viii. ಒಂದು ಜೊತೆ ಚಪ್ಪಲಿ | i. ಒಂದು ಕಾಟನ್ ಹಾಸಿಗೆ/ ದರಿ/ ಮ್ಯಾಟ್<br>ii. ಎರಡು ಕಾಟನ್ ಬೆಡ್‌ಶೀಟ್‌ಗಳು<br>iii. ಒಂದು ಬ್ಲ್ಯಾಂಕೆಟ್<br>iv. ಒಂದು ತಲೆದಿಂಬು | i. ಟೂತ್‌ಪೌಡರ್/ ಪೇಸ್ಟ್<br>ii. ಟೂತ್ ಬ್ರಷ್<br>iii. ಸೋಪು<br>iv. ಎಣ್ಣೆ<br>v. ಊಟದ ಪಾತ್ರಗಳು |

## 4.4. ದಿನಚರಿ

ಪ್ರತಿ ಸಂಸ್ಥೆಯು ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಮಗು/ಮಕ್ಕಳಿಗೆ ಉತ್ತಮ–ನಿಯಂತ್ರಿತ ದಿನಚರಿಯನ್ನು ಹೊಂದಿರಬೇಕು. ಈ ದಿನಚರಿಯನ್ನು ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಮಗು/ ಮಕ್ಕಳನ್ನು ಒಂದು ದಿನದಲ್ಲಿ ಕನಿಷ್ಠ ಆರು ಗಂಟೆಗಳ ಕಾಲ ಕಾರ್ಯೋನ್ಮುಖರಾಗಿರುವಂತಿರಬೇಕು. ದಿನಚರಿಯನ್ನು ಸೂಚನಾ ಫಲಕದಲ್ಲಿ ಪ್ರದರ್ಶಿಸಬೇಕು:

i. ನಿರ್ಬಂಧಿತ ಹಾಗೂ ಶಿಸ್ತಿನಿಂದ ಕೂಡಿದ ದಿನಚರಿ;
ii. ವೈಯಕ್ತಿಕ ನೈರ್ಮಲ್ಯ ಹಾಗೂ ಸ್ವಚ್ಛತೆ;
iii. ಪಿಟಿ ಹಾಗೂ ಯೋಗ, ಇತ್ಯಾದಿಗಳಂತಹ ಕ್ರಮಬದ್ಧವಾದ ದೈಹಿಕ ವ್ಯಾಯಾಮ;
iv. ಶಾಲೆ;
v. ವೃತ್ತಿಪರ ತರಬೇತಿ;
vi. ಬ್ಯಾಸ್ಕೆಟ್‌ಬಾಲ್, ವಾಲಿಬಾಲ್, ಕ್ರಿಕೆಟ್, ಬ್ಯಾಡ್ಮಿಂಟನ್ ಟೇಬಲ್ ಟೆನ್ನಿಸ್ ಹಾಗೂ ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾದ ಇತರೆ ಕ್ರೀಡೆಗಳು ಹಾಗೂ ಮನರಂಜನೆ;
vii. ಸಂಗೀತ ಹಾಗೂ ಟಿವಿ ನೋಡುವ ಸಮಯ;
viii. ಗುಂಪು ಚಟುವಟಿಕೆಗಳು;
ix. ಪ್ರಾರ್ಥನೆ ಹಾಗೂ ಸಮುದಾಯ ಗಾಯನ; ಹಾಗೂ
x. ಭಾನುವಾರಗಳು ಹಾಗೂ ರಜಾ ದಿನಗಳಂದು ವಿಶೇಷ ಕಾರ್ಯಕ್ರಮಗಳು

ಸಂಸ್ಥೆಯು ಎಲ್ಲಾ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಪ್ರತಿ ತಿಂಗಳು ಹೊರಗೆ ಕರೆದುಕೊಂಡು ಹೋಗುವ ಯೋಜನೆಯನ್ನು ರೂಪಿಸಬೇಕು.

## 4.5. ಶಿಕ್ಷಣ

ಪ್ರತಿ ಸಂಸ್ಥೆಯು ಸಹ ಮಕ್ಕಳಿಗೆ ಅವರ ವಯಸ್ಸು, ಹಾಗೂ ಸಾಮರ್ಥ್ಯಗಳ ಪ್ರಕಾರ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆ ಮಾಡಬೇಕು, ಸಂಸ್ಥೆಯೊಳಗೆ ಅಥವಾ ಹೊರಗೆ ಔಪಚಾರಿಕ ಉತ್ತಮ ಗುಣಮಟ್ಟದ ಶೈಕ್ಷಣಿಕ ವ್ಯವಸ್ಥೆಯ ಮೂಲಕ. ವಿಶೇಷ ಸಂದರ್ಭಗಳಲ್ಲಿ ಸಂಸ್ಥೆಯ ಒಳಗೆ ಅನೌಪಚಾರಿಕ ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಬೇಕು ಹಾಗೂ ಒಟ್ಟಾರೆ ದೃಷ್ಟಿಕೋನವು ಮಕ್ಕಳನ್ನು ಕ್ರಮಬದ್ಧವಾದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಮುಖ್ಯವಾಹಿನಿಗೊಳಿಸುವುದು ಆಗಿರಬೇಕು.

ಪ್ರತಿ ಸಂಸ್ಥೆಯೂ ಸಹ ನಿಯತಕಾಲಿಕವಾಗಿ ಕಿರುಪರೀಕ್ಷೆಗಳನ್ನು ನೀಡುವುದು ಹಾಗೂ ಅನೌಪಚಾರಿಕವಾಗಿ ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಮಗು / ಮಕ್ಕಳೊಡನೆ ಸಂವಾದ ಮಾಡುವ ಮೂಲಕ, ಪೋಷಣೆಯಡಿ ಇರುವ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮ್ಕಕಳ ಶೈಕ್ಷಣಿಕ ಸ್ಥಿತಿಗತಿ ಹಾಗೂ ವೃತ್ತಿಪರ ಕ್ಷಮತೆಯನ್ನು ಅಂದಾಜಿಸುತ್ತಿರಬೇಕು. ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಮೌಲ್ಯವರ್ಧಿತ ಅಗತ್ಯ ಆಧಾರಿತ ಸೇವೆಗಳನ್ನು ಒದಗಿಸುವ ಸಲುವಾಗಿ, ಶಿಕ್ಷಣ ತಜ್ಞರು, ಸಮುದಾಯ ಆಧಾರಿತ ಕಲ್ಯಾಣ ಏಜೆನ್ಸಿಗಳು, ಮನಃಶಾಸ್ತ್ರಜ್ಞರು, ಮನೋವೈದ್ಯರು, ಮಕ್ಕಳ ಮಾರ್ಗಸೂಚಿ ಚಿಕಿತ್ಸಾಲಯಗಳು, ಆಸ್ಪತ್ರೆಗಳು ಹಾಗೂ ಸ್ಥಳೀಯ ವೈದ್ಯರು, ತೆರೆದ ಶಾಲೆಗಳು ಹಾಗೂ ಜನ ಶಿಕ್ಷಣ ಸಂಸ್ಥಾನ, ಇತ್ಯಾದಿಗಳೊಂದಿಗೆ ಅಗತ್ಯ ಸಂಪರ್ಕವನ್ನು ಸ್ಥಾಪಿಸಬೇಕು.

ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಅಗತ್ಯವಿರುವಾಗ ವಿಶೇಷ ತರಬೇತಿ, ಟ್ಯೂಷನ್, ಇತ್ಯಾದಿಗಳನ್ನು ಒದಗಿಸಲು ಎನ್‌ಜಿಓಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳನ್ನು ಆಹ್ವಾನಿಸಬೇಕು.

## 4.6. ವೃತ್ತಿಪರ ತರಬೇತಿ

ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳನ್ನು, ಅವರು ವಯಸ್ಕರಾಗಿ ಸಂಸ್ಥೆಗಳಿಂದ ಹೊರಗೆ ಹೋಗುವಾಗ ಆರ್ಥಿಕವಾಗಿ ಸ್ವತಂತ್ರರನ್ನಾಗಿಸಲು, ಅವರು ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಅಥವಾ ಶಾಲೆಯಿಂದ ಹೊರಗುಳಿದ ಸಂದರ್ಭಗಳಲ್ಲಿ ಅನುಕೂಲವಾಗುವಂತೆ, ಔದ್ಯೋಗಿಕ, ಮಾರುಕಟ್ಟೆ ಚಾಲಿತ, ವೃತ್ತಿಪರ ತರಬೇತಿಯನ್ನು ಒದಗಿಸುವುದು ಪ್ರತಿ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಪ್ರತಿ ಸಂಸ್ಥೆಯೂ ಸಹ ಸಂಸ್ಥೆಯ ಆವರಣದೊಳಗೆ ವೃತ್ತಿಪರ ಸೌಲಭ್ಯವನ್ನು ಒದಗಿಸಲು ಅಥವಾ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳನ್ನು ಅವರ ಆಸಕ್ತಿಯ ಪ್ರಕಾರ ವಿಶೇಷ ವೃತ್ತಿಪರ ತರಬೇತಿಯನ್ನು ಒದಗಿಸುವ ಸಲುವಾಗಿ ಎನ್‌ಜಿಓಗಳು ಹಾಗೂ ಐಟಿಐ ಗಳೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬೇಕು. ಈ ಕೆಳಗೆ ಕೆಲವು ವೃತ್ತಿಪರ ತರಬೇತಿಗಳು ಒಳಗೊಂಡಿರಬೇಕು:

i. ಕಂಪ್ಯೂಟರ್ ಆಪರೇಷನ್
ii. ಕಂಪ್ಯೂಟರ್ ದುರಸ್ತಿ ಹಾಗೂ ನಿರ್ವಹಣೆ
iii. ಡಾಟಾ ಟೈಪಿಂಗ್ ಹಾಗೂ ಪ್ರಾಸೆಸಿಂಗ್
iv. ಕಾರ್ಪೆಂಟರಿ
v. ಫಿಟ್ಟರ್ ತರಬೇತಿ
vi. ವಾಹನ ದುರಸ್ತಿ ಹಾಗೂ ಸರ್ವೀಸಿಂಗ್

vii. ವೆಲ್ಡಿಂಗ್

viii. ಟೆಕ್ಸ್‌ಟೈಲ್ ಪ್ರಿಂಟಿಂಗ್

ix. ಹೊಲಿಗೆ

x. ಬ್ಯೂಟಿಷಿಯನ್

xi. ಎಲೆಕ್ಟ್ರಿಕಲ್ ವೈರಿಂಗ್

xii. ಮೊಬೈಲ್ ರಿಪೇರಿ

xiii. ಮುದ್ರಣ ಹಾಗೂ ಪುಸ್ತಕ ಬೈಂಡಿಂಗ್

xiv. ಸೋಪು ತಯಾರಿಕೆ

xv. ಮೇಣದ ಬತ್ತಿ ತಯಾರಿಕೆ

xvi. ಲೈಟ್ ಎಂಜಿನಿಯರಿಂಗ್

xvii. ತೋಟಗಾರಿಕೆ

xviii. ಔದ್ಯೋಗಿಕ ಸಾಮರ್ಥ್ಯವುಳ್ಳ ಸ್ಥಳೀಯ ಅಗತ್ಯಗಳ ಪ್ರಕಾರ ಮತ್ಯಾವುದಾದರೂ ವೃತ್ತಿಪರ/ ವ್ಯಾಪಾರ ಆಧಾರಿತ ತರಬೇತಿ

xix. ಕೇಟರಿಂಗ್

xx. ಫ್ಯಾಷನ್ ಡಿಸೈನಿಂಗ್

xxi. ಕೇರ್ ಗಿವಿಂಗ್

xxii. ನರ್ಸಿಂಗ್

## 5. ಪುನರ್ವಸತಿ ಹಾಗೂ ಸಾಮಾಜಿಕ ಮರುಏಕೀಕರಣ

ಮಗು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಪುನರ್ವಸತಿ ಹಾಗೂ ಸಾಮಾಜಿಕ ಪುನಃಸ್ಥಾಪನೆಯನ್ನು (ಪುನರ್‌ಸಂಯೋಜನೆ) ವೈಯಕ್ತಿಕ ಸಾಮಾಜಿಕ ಚರಿತ್ರೆಯನ್ನು ಆಧರಿಸಿ ಸಾಧ್ಯವಾದಷ್ಟು ಬೇಗ ಕೈಗೊಳ್ಳಬೇಕು. ಈ ಪ್ರಕ್ರಿಯೆಯ ಗಮನ ಈ ಕೆಳಕಂಡ ಅಂಶಗಳ ಕಡೆ ಕೇಂದ್ರೀಕರಿಸಿರಬೇಕು:

i. ಆಪ್ತಸಮಾಲೋಚನೆ ಹಾಗೂ ಇತರೆ ಬೆಂಬಲ ಸೇವೆಗಳ ಮೂಲಕ ಆತ/ಆಕೆಯನ್ನು ಸ್ವಂತ ಕುಟುಂಬದೊಂದಿಗೆ ಸೇರಿಸುವುದು;

ii. ದತ್ತು ನೀಡುವುದು;

iii. ಅಗತ್ಯವಿರುವ ಸಂದರ್ಭಗಳಲ್ಲಿ ಫಾಸ್ಟರ್ ಕೇರ್ ಸೇವೆ;

iv. ಅಗತ್ಯವಿರುವ ಸಂದರ್ಭದಲ್ಲಿ ಪ್ರಾಯೋಜಕತ್ವದ ಬೆಂಬಲ;

v. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು/ ಮಗುವನ್ನು ಅನುಪಾಲನಾ ಸೇವೆ ಸಂಸ್ಥೆಗಳಿಗೆ ವರ್ಗಾಯಿಸುವುದು.

ಸಂಸ್ಥೆಗಳಲ್ಲಿ ಮಕ್ಕಳು/ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಪುನರ್ವಸತಿ ಹಾಗೂ ಸಾಮಾಜಿಕ ಪುನಃಸ್ಥಾಪನೆಗಾಗಿ (ಪುನರ್‌ಸಂಯೋಜನೆ) ಸಾಂಸ್ಥಿಕೇತರ ಸೇವೆಗಳ ಪ್ರೋತ್ಸಾಹಕ್ಕಾಗಿ ಇರುವ ಪ್ರಾವಧಾನಗಳು, ಮಕ್ಕಳ ನ್ಯಾಯ ಕಾಯ್ದೆ, 2000ರಡಿ ರೂಪಿಸಿರುವ ಕೇಂದ್ರೀಯ ಮಾದರಿ ನಿಯಮಾವಳಿಗಳು/ ರಾಜ್ಯ ನಿಯಮಾವಳಿಗಳ ಪ್ರಕಾರ ಇರಬೇಕು.